ಮಂಗಳವಾರ, ಫೆಬ್ರುವರಿ 11, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಸದಸ್ಯರು ಶಿಕ್ಷಕರ ನೇಮಕಾತಿಗೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

INVEST KARNATAKA

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಎಂ.ಬಿ. ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಉತ್ತರ ಕರ್ನಾಟಕದ ಪ್ರಗತಿಗೆ ಮಹತ್ತರ ಹೆಜ್ಜೆಯಾಗಿ ಏಕಸ್ ಇನ್‌ಫ್ರಾ ಹುಬ್ಬಳ್ಳಿ ಕ್ಲಸ್ಟರ್‌ನಲ್ಲಿ ಎಫ್‌ಎಂಸಿಜಿ ಉತ್ಪಾದನಾ ವ್ಯವಸ್ಥೆಯನ್ನು ಉದ್ಘಾಟಿಸುತ್ತಿರುವುದು

ಇನ್ವೆಸ್ಟ್ ಕರ್ನಾಟಕ 2025

ಪ್ರಗತಿಯ ಮರುಕಲ್ಪನೆ

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ

ಬೆಂಗಳೂರು ಅರಮನೆ ಬೆಂಗಳೂರು
12 ರಿಂದ 14 ಫೆಬ್ರವರಿ 2025

ಪ್ರಗತಿಯ ನೂತನ ಪರ್ವ ಆರಂಭ

ಕರ್ನಾಟಕವು ಪ್ರಗತಿಯ ಮರುಕಲ್ಪನೆಯಲ್ಲಿ ಮುಂಚೂಣಿಯ ಪಾತ್ರ ವಹಿಸಿದೆ. ಇನ್ವೆಸ್ಟ್ ಕರ್ನಾಟಕ 2025 ರಲ್ಲಿ ಜಾಗತಿಕ ಖ್ಯಾತನಾಮರು **ತಂತ್ರಜ್ಞಾನ ಆಧಾರಿತ, ಪರಿಸರ ಸ್ನೇಹಿ, ಸಮಗ್ರ** ಮತ್ತು **ಸದೃಢ** ಪ್ರಗತಿಯ ಬಗ್ಗೆ ತಮ್ಮ ದೃಷ್ಟಿಕೋನವನ್ನು ಹಂಚಿಕೊಳ್ಳಲಿದ್ದಾರೆ

ಉದ್ಘಾಟನೆ: 11 ಫೆಬ್ರವರಿ 2025, ಸಂಜೆ 4 ಗಂಟೆಗೆ

ಪ್ರಗತಿಯ ಮರುಕಲ್ಪನೆ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಳ್ಳಲಿರುವ ಜಾಗತಿಕ ದಾರ್ಶನಿಕರು



ಶ್ರೀ ಜಾರ್ಜ್ ಎ. ಪಪಂದ್ರೆಯೊ
ಗ್ರೀಸ್ ದೇಶದ ಮಾಜಿ ಪ್ರಧಾನಮಂತ್ರಿಗಳು

ಶ್ರೀ ಮಾರ್ಟಿನ್ ಲೂಂಡ್‌ಸ್ಟೆಟ್
ಅಧ್ಯಕ್ಷರು, ಎಬಿ ವೊಲ್ವೋ ಮತ್ತು
ಸಿಇಒ, ವೊಲ್ವೋ ಗ್ರೂಪ್

ಶ್ರೀ ಸೆಬಾಸ್ಟಿಯನ್ ಟ್ರೂನ್
ಸಂಸ್ಥಾಪಕರು, ಗೂಗಲ್ ಎಕ್ಸ್



ಶ್ರೀಮತಿ ಆ್ಯನ್ ಡಂಕಿನ್
ಮಾಜಿ ಮುಖ್ಯ ವಾರ್ತಾಧಿಕಾರಿ
ಯು.ಎಸ್. ಇಂಧನ ಇಲಾಖೆ

ಶ್ರೀ ಮಾಂಟೆಕ್ ಸಿಂಗ್ ಅಹ್ಲುವಾಲಿಯ
ಭಾರತೀಯ ಅರ್ಥಶಾಸ್ತ್ರಜ್ಞರು, ಮಾಜಿ ಉಪಾಧ್ಯಕ್ಷರು
ಭಾರತ ಯೋಜನಾ ಆಯೋಗ

ಶ್ರೀ ಶಶಿ ತರೂರ್
ಮಾನ್ಯ ಲೋಕಸಭಾ ಸದಸ್ಯರು
ತಿರುವನಂತಪುರಂ

ಶ್ರೀ ಆಕಿಸ್ ಎವ್ಯಾಂಜಲಿಡಿಸ್
ಸಹ ಸಂಸ್ಥಾಪಕರು ಮತ್ತು
ಮುಖ್ಯಸ್ಥರು - ಮಾರ್ಕೆಟಿಂಗ್, ನತಿಂಗ್

ಶ್ರೀ ಪ್ರಶಾಂತ್ ಪ್ರಕಾಶ್
ಸ್ಥಾಪಕ ಪಾಲುದಾರರು
ಆಕ್ಸೆಲ್ ಇಂಡಿಯಾ

ಶ್ರೀ ನಿಖಿಲ್ ಕಾಮತ್
ಸಹ ಸಂಸ್ಥಾಪಕರು, ಝೆರೋಧ
ಟ್ರೂ ಬೀಕನ್ ಮತ್ತು ಗೃಹಾಸ್

ಶ್ರೀ ಶೇಖರ್ ಗುಪ್ತ
ಮುಖ್ಯ ಸಂಪಾದಕರು
ದಿ ಪ್ರಿಂಟ್

ಶ್ರೀಮತಿ ಕಿರಣ್ ರಾವ್
ಚಲನಚಿತ್ರ ನಿರ್ದೇಶಕರು,
ನಿರ್ಮಾಪಕರು ಹಾಗೂ ಬರಹಗಾರರು

ಶ್ರೀಮತಿ ಇವಾನ್ ವಾಟ್ಸನ್
ಎಕ್ಸಿಕ್ಯೂಟಿವ್ ಡೀನ್
ಪಾರ್ಸನ್ಸ್ ಸ್ಕೂಲ್ ಆಫ್ ಡಿಸೈನ್

...ಮತ್ತು ಹಲವರು

ಪ್ರಮುಖ ಕಾರ್ಯಕ್ರಮಗಳು

ಭವಿಷ್ಯದ ನಾವೀನ್ಯತೆ ವಸ್ತುಪ್ರದರ್ಶನ
ನಾವೀನ್ಯತೆಗಳ ಅನ್ವೇಷಣೆ

ಎಸ್‌ಎಂಇ ಸಂಪರ್ಕ
ಕರ್ನಾಟಕದ ಎಸ್‌ಎಂಇ ಗಳು ಉತ್ಕೃಷ್ಟಗೊಳ್ಳಲು ಒಂದು ವೇದಿಕೆ

ವೆಂಚುರೈಸ್ - 2ನೇ ಆವೃತ್ತಿ
ಭಾರತದ ಪ್ರಮುಖ ನವೋದ್ಯಮ ಜಾಗತಿಕ ಸ್ಪರ್ಧೆ

ಮುಖ್ಯಾಂಶಗಳು

100+	30+	19+	150+
ಭಾಷಣಕಾರರು	ಗೋಷ್ಠಿಗಳು	ಪಾಲುದಾರ ದೇಶಗಳು	ಪ್ರದರ್ಶಕರು

ಉದ್ಘಾಟನಾ ಸಮಾರಂಭ ಹಾಗೂ ಎಲ್ಲಾ ಗೋಷ್ಠಿಗಳ ನೇರ ಪ್ರಸಾರವನ್ನು ಇಲ್ಲಿ ವೀಕ್ಷಿಸಬಹುದು:
https://www.youtube.com/@InvestKarnataka_KUM

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು.
-ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತಕರ್ತವ್ಯ

ಗುಂಜನ್ ಕೃಷ್ಣ, ಭಾ.ಆ.ಸೇ
ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕಾರ್ಯಕ್ರಮದ ವಿವರಗಳಿಗಾಗಿ

ಅಕ್ರಮ ವಹಿವಾಟಿಗೆ ರಾಜಕಾರಣಿಗಳು, ಅಧಿಕಾರಿಗಳ ಬೆಂಬಲದ ಆರೋಪ • ಸಾಲ ಪಡೆದವರಿಗೆ ತಪ್ಪದ ಸಂಕಷ್ಟ

‘ಸ್ಪೀಡೊ ಮೀಟರ್’ನಂತೆ ಏರುವ ಬಡ್ಡಿ

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಕೊಳೆಗೇರಿ, ತರಕಾರಿ– ಮೀನು-ಮಾಂಸ ಮಾರುಕಟ್ಟೆಗಳೂ ಸೇರಿದಂತೆ ಹಲವೆಡೆ ಮೀಟರ್ ಬಡ್ಡಿ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ.

ರೈತರು, ಬೀದಿಬದಿಯ ವ್ಯಾಪಾರಿಗಳು, ಕೂಲಿ ಕಾರ್ಮಿಕರ ಸಂಕಷ್ಟದ ಪರಿಸ್ಥಿತಿಯನ್ನೇ ಬಂಡವಾಳ ಮಾಡಿಕೊಂಡಿರುವ ಲೇವಾದೇವಿದಾರರು ಹಾಗೂ ಶ್ರೀಮಂತರು, ಅವರಿಗೆ ಸಾಲ ನೀಡುತ್ತಿದ್ದಾರೆ. ಸಾಲದ ಮೇಲಿನ ಬಡ್ಡಿ ಮಾತ್ರ ವಾಹನಗಳ ‘ಸ್ಪೀಡೊ ಮೀಟರ್’ನಂತೆ ಮೇಲೇರುತ್ತಲೇ ಇರುತ್ತದೆ.

ನೋಂದಾಯಿತ ಕಂಪನಿಗಳನ್ನು ಹೊರತುಪಡಿಸಿ, ಹಳ್ಳಿಗಳಲ್ಲಿ ಹಲವರು ಕಾನೂನುಬಾಹಿರವಾಗಿ ಮೀಟರ್ ಬಡ್ಡಿ ದಂಧೆ ನಡೆಸುತ್ತಿದ್ದಾರೆ. ಅಸಲು, ಬಡ್ಡಿ ವಸೂಲಿಗೆ ಲೇವಾದೇವಿದಾರರು ಅನುಸರಿಸುತ್ತಿರುವ ಕ್ರಮವೂ ಮಿತಿಮೀರಿದೆ. ಭಯವನ್ನೂ ಹುಟ್ಟಿಸುತ್ತಿದೆ.

ರಾಜಕಾರಣಿಗಳ ಬೆಂಬಲದಿಂದ ಪ್ರಭಾವಿಗಳು ರಾಜಾರೋಷವಾಗಿ ಮೀಟರ್ ಬಡ್ಡಿ ದಂಧೆಯಲ್ಲಿ ತೊಡಗಿದ್ದಾರೆ. ಜನರು ಮೀಟರ್ ಬಡ್ಡಿ ಸಾಲದ ಉರುಳಿಗೆ ಸಿಲುಕಿ ನರಳುತ್ತಿದ್ದಾರೆ ಎಂದು ಕುಣಿಗಲ್‌ನ ಚಂದ್ರಶೇಖರ್ ಅವರು, ಕರಾಳ ದಂಧೆಯನ್ನು ತೆರೆದಿಟ್ಟರು.

‘ಬ್ಯಾಂಕ್‌ಗಳಿಗೆ ಹೋದರೆ ಸುಲಭವಾಗಿ ಸಾಲ ದೊರೆಯುವುದಿಲ್ಲ. ಹತ್ತಾರು ದಾಖಲೆಗಳನ್ನು ಕೇಳುತ್ತಾರೆ. ಭದ್ರತೆ ನೀಡುವುದಕ್ಕೂ ನಮ್ಮ ಬಳಿ ಯಾವುದೇ ಆಸ್ತಿ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಹಣವುಳ್ಳವರನ್ನು ಕೇಳಿದಾಗ ಸುಲಭವಾಗಿ ಕೈಸಾಲ ನೀಡುತ್ತಾರೆ. ಆದರೆ, ಬಡ್ಡಿ ನೀಡುವುದನ್ನು ಒಂದು ಕ್ಷಣ ಕೂಡ ವಿಳಂಬ ಮಾಡುವಂತಿಲ್ಲ.

ವಿಳಂಬ ಮಾಡಿದರೆ ಮೈಕ್ರೊ ಫೈನಾನ್ಸ್ ಕಂಪನಿಗಳಂತೆಯೇ ಕಿರುಕುಳ ನೀಡುತ್ತಾರೆ. ಮೈಕ್ರೊ ಫೈನಾನ್ಸ್ ಕಂಪನಿಗಳವರು ವಸೂಲಿಗೆ ಪ್ರತಿನಿಧಿಗಳನ್ನು ನೇಮಿಸಿಕೊಂಡಿದ್ದಾರೆ. ಲೇವಾದೇವಿದಾರರು ತಮ್ಮ ಜತೆಗೆ ರೌಡಿಗಳನ್ನು ಇರಿಸಿಕೊಂಡಿದ್ದಾರೆ. ರೌಡಿಗಳು ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಹಲ್ಲೆ ನಡೆಸಿರುವ ಉದಾಹರಣೆಗಳೂ ಇವೆ’ ಎಂದು ಸಾಲ ಪಡೆದವರು ನೋವಿನಿಂದ ನುಡಿಯುತ್ತಾರೆ.

‘ಗಂಟೆ, ದಿನ, ವಾರ ಹಾಗೂ ತಿಂಗಳ ಬಡ್ಡಿ ರೂಪದಲ್ಲಿ ಮೀಟರ್ ಬಡ್ಡಿ ದಂಧೆಕೋರರು ಕೈಸಾಲ ನೀಡುತ್ತಾರೆ. ಮೈಕ್ರೊ ಫೈನಾನ್ಸ್ ಕಂಪನಿಗಳು ಅನುಮತಿ ಪಡೆದು ಸಾಲದ ವ್ಯವಹಾರ ನಡೆಸಿದರೆ, ಮೀಟರ್ ಬಡ್ಡಿ ದಂಧೆ ನಡೆಸುವವರದ್ದು ಅಕ್ರಮ ವ್ಯವಹಾರ. ಇವರಿಗೆ ರಾಜಕಾರಣಿಗಳು, ಪೊಲೀಸರು ಹಾಗೂ ಅಧಿಕಾರಿಗಳು ಶ್ರೀರಕ್ಷೆ ನೀಡುತ್ತಿದ್ದಾರೆ. ಸಾಲ ಪಡೆದವರಿಂದ ಆಸ್ತಿ ಪತ್ರ, ಮನೆಯ ದಾಖಲೆಗಳನ್ನು ವಶಕ್ಕೆ ಪಡೆದು ಚಿತ್ರಹಿಂಸೆ ನೀಡಲಾಗುತ್ತಿದೆ’ ಎನ್ನುತ್ತಾ ಸಾಲಗಾರರು ಕಣ್ಣೀರು ಹಾಕಿದರು.

ಮೀಟರ್ ಬಡ್ಡಿ ದಂಧೆ ಮೈಸೂರು, ಬೆಂಗಳೂರು, ಹಾಸನ, ಬೆಳಗಾವಿ, ಕೋಲಾರ, ಶಿವಮೊಗ್ಗ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿಯಲ್ಲಿ ವ್ಯಾಪಕವಾಗಿ ನಡೆಯುತ್ತಿದೆ.

ದಿನಕ್ಕೆ ಶೇಕಡ 10ರಷ್ಟು ಬಡ್ಡಿ ಪಾವತಿಸಬೇಕು. ಬೆಳಿಗ್ಗೆ ₹1,000 ಸಾಲ ಪಡೆದರೆ, ₹900 ಅಷ್ಟೇ ನೀಡುತ್ತಾರೆ. ರಾತ್ರಿ ₹1,000 ವಾಪಸ್ ನೀಡಬೇಕು. ಅದೇ ರೀತಿ ₹10 ಸಾವಿರ ಪಡೆದರೆ ₹9 ಸಾವಿರ ಕೊಡುತ್ತಾರೆ. ರಾತ್ರಿ ₹10 ಸಾವಿರವನ್ನೇ ಮರುಪಾವತಿ ಮಾಡಬೇಕಿದೆ.

ಮೈಸೂರು ಜಿಲ್ಲೆಯಲ್ಲಿ ತರಕಾರಿ ವ್ಯಾಪಾರಸ್ಥರಿಗೆ ಸಾಲ ನೀಡಿ ಪ್ರತಿದಿನ ಅಥವಾ ವಾರಕ್ಕೊಮ್ಮೆ ವಸೂಲಿ ಮಾಡುತ್ತಾರೆ. ₹10 ಸಾವಿರ ಸಾಲದಲ್ಲಿ ₹1 ಸಾವಿರ ಇಟ್ಟುಕೊಂಡು, ₹9 ಸಾವಿರ ನೀಡುತ್ತಾರೆ. ಸಾಲ ಪಡೆದಾತ 10 ಕಂತುಗಳಲ್ಲಿ ಒಂದು ಸಾವಿರ ರೂಪಾಯಿಯಂತೆ ವಾಪಸ್ ನೀಡಬೇಕು. ಅದೇ ಮಂಡ್ಯದಲ್ಲಿ ದಿನಕ್ಕೆ ಶೇಕಡ 10ರಷ್ಟು ಬಡ್ಡಿ ವಿಧಿಸಲಾಗುತ್ತಿದೆ. ವಾರ್ಷಿಕವಾಗಿ ಕೈಸಾಲ ಸಹ ನೀಡಲಾಗುತ್ತಿದೆ. ವಾರ್ಷಿಕವಾಗಿ ಸಾಲ ಪಡೆದವರಿಗೆ ಶೇ 10ರಿಂದ ಶೇ 25ರವರೆಗೆ ಬಡ್ಡಿ ವಿಧಿಸಲಾಗುತ್ತಿದೆ.

ಹೊರ ಜಿಲ್ಲೆಯವರೂ ಇದ್ದಾರೆ: ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 2,242 ಹಣಕಾಸು ಕಂಪನಿಗಳು ನೋಂದಣಿ ಮಾಡಿಕೊಂಡಿವೆ. 347 ಖಾಸಗಿ ಲೇವಾದೇವಿದಾರರು, 324 ಗಿರವಿದಾರರು, 1,571 ಫೈನಾನ್ಸ್‌ಗಳು ಅಧಿಕೃತವಾಗಿವೆ. ನೋಂದಣಿಯೇ ಇಲ್ಲದ ಫೈನಾನ್ಸ್‌ಗಳೂ ಸಾಕಷ್ಟು ಚಾಲ್ತಿಯಲ್ಲಿವೆ. ಬೆಳಗಾವಿಯ ತಾರಿಹಾಳ, ರಾಯಬಾಗ ತಾಲ್ಲೂಕಿನ ನಾಗನೂರು, ಕಿತ್ತೂರು ತಾಲ್ಲೂಕಿನ ಬೈಲೂರು ಗ್ರಾಮಗಳಲ್ಲಿ ಸಾಲ ಪಡೆದವರ ಮನೆಗಳನ್ನು ಹರಾಜಿಗೆ ಇಡಲಾಗಿದೆ.

ನೆರೆಯ ಮಹಾರಾಷ್ಟ್ರದಿಂದ ಬರುವ ಕೆಲವು ಬಡ್ಡಿ ದಂಧೆಕೋರರು ಬೆಳಗಾವಿ ಗಡಿ ಭಾಗದಲ್ಲಿ ಮೀಟರ್ ಬಡ್ಡಿ, ಚಕ್ರ ಬಡ್ಡಿ ದಂಧೆ ನಡೆಸಿದ್ದಾರೆ. ಬೆಳಗಾವಿ ತಾಲ್ಲೂಕಿನ ಬೆನಕನಹಳ್ಳಿ, ಅಂಬೇವಾಡಿ, ಗಣೇಶಪುರ, ಬೆಳಕುಂದಿ, ಬೆನ್ನಾಳಿ, ಮುತ್ಯಾನಟ್ಟಿ, ಸುಳೇಭಾವಿ, ಕಾಕತಿ, ನಿಪ್ಪಾಣಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲೂ ಈ ಬಡ್ಡಿ ದಂಧೆಗೆ ಮಿತಿಯೇ ಇಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಮಟ್ಕಾ, ಇಸ್ಪೀಟ್, ರಿಯಲ್ ಎಸ್ಟೇಟ್‌ನಲ್ಲಿ ತೊಡಗಿರುವವರು ಮೀಟರ್ ಬಡ್ಡಿಗೆ ಸಾಲ ಪಡೆದುಕೊಳ್ಳುತ್ತಿದ್ದಾರೆ. ಜೂಜಾಟದಲ್ಲಿ ಹಣ ಕಳೆದುಕೊಂಡವರು ಸಾಲ ತೀರಿಸಲು ಸಾಧ್ಯವಾಗದೇ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದು ಸ್ಥಳೀಯರು ತಿಳಿಸಿದರು.

‘ಮೈಕ್ರೊ ಫೈನಾನ್ಸ್’ ವಿಷವರ್ತುಲ 3

ಹಲವೆಡೆ ಪ್ರಕರಣಗಳು ದಾಖಲು

- ‘₹4.23 ಲಕ್ಷ ಸಾಲಕ್ಕೆ ₹42 ಲಕ್ಷಕ್ಕೂ ಹೆಚ್ಚು ಹಣ ವಸೂಲಿ ಮಾಡಿ ದೌರ್ಜನ್ಯ ಎಸಗಿದ್ದಾರೆ’ ಎಂದು ಆರೋಪಿಸಿ ಪವಿತ್ರಾ ಅವರು ಮೀಟರ್ ಬಡ್ಡಿ ದಂಧೆ ನಡೆಸುತ್ತಿದ್ದ ಶಾರದಮ್ಮ ವಿರುದ್ಧ ಬೆಂಗಳೂರಿನ ಆವಲಹಳ್ಳಿ ಪೊಲೀಸ್ ಠಾಣೆಗೆ ಇತ್ತೀಚೆಗೆ ದೂರು ನೀಡಿದ್ದರು
- ₹1.60 ಲಕ್ಷ ಸಾಲಕ್ಕೆ ಬಡ್ಡಿ ರೂಪದಲ್ಲಿ ₹3.80 ಲಕ್ಷ ಪಾವತಿಸಿದ್ದರೂ ಹೆಚ್ಚಿನ ಬಡ್ಡಿ ನೀಡುವಂತೆ ಕಿರುಕುಳ ನೀಡುತ್ತಿದ್ದ ಆರೋಪದಡಿ ಶಶೀಂದ್ರಾ ಮತ್ತು ಅಶೋಕ್ ದಂಪತಿ ವಿರುದ್ಧ ಬೆಂಗಳೂರಿನ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ತನಿಖೆ ಆರಂಭಿಸಿದ್ದಾರೆ
- ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಶೇ 10ರಷ್ಟು ಬಡ್ಡಿ ವಿಧಿಸುತ್ತಿದ್ದ ಬಿಎಂಟಿಸಿ ಮಾಜಿ ನೌಕರನನ್ನು ಪೊಲೀಸರು ಬಂಧಿಸಿದ್ದಾರೆ
- ಬೆಳಗಾವಿಯ ಗಣೇಶಪುರದಲ್ಲಿ ಬಡ್ಡಿ ದಂಧೆ ವಿಚಾರಕ್ಕೆ ವ್ಯಕ್ತಿಯೊಬ್ಬರ ಮೇಲೆ ಗುಂಡಿನ ದಾಳಿ ನಡೆದಿದೆ

ಮುಖ್ಯಾಂಶಗಳು

- ಬಡ್ಡಿ ದಂಧೆಗೆ ಮಿತಿಯೇ ಇಲ್ಲ
- ಸಾಲಗಾರರ ಕಣ್ಣೀರು
- ಮನೆಗಳ ಹರಾಜು

ಮೈಕ್ರೊ ಫೈನಾನ್ಸ್ ‘ಸುಗ್ರೀವಾಜ್ಞೆ’ ಮತ್ತೆ ರಾಜಭವನಕ್ಕೆ

ಬೆಂಗಳೂರು: ಬಲವಂತದ ಸಾಲ ವಸೂಲಿ ಮತ್ತು ಕಿರುಕುಳ ತಪ್ಪಿಸುವ ಉದ್ದೇಶದಿಂದ ರೂಪಿಸಿದ ‘ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಒತ್ತಡ ತಂತ್ರಗಳ ನಿಷೇಧ) ಸುಗ್ರೀವಾಜ್ಞೆ-2025’ನ್ನು ವಿವರವಾದ ಸ್ಪಷ್ಟೀಕರಣಗಳ ಸಹಿತ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಅಂಕಿತಕ್ಕಾಗಿ ರಾಜ್ಯ ಸರ್ಕಾರ ಮತ್ತೆ ರವಾನಿಸಿದೆ.

‘ಸಹಜ ನ್ಯಾಯ ಹಾಗೂ ಸಾಲ ನೀಡುವವರ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿದೆ’ ಎಂಬ ಹಲವು ಆಕ್ಷೇಪಗಳನ್ನು ವ್ಯಕ್ತಪಡಿಸಿ ರಾಜ್ಯಪಾಲರು ಫೆ. 7ರಂದು ಸುಗ್ರೀವಾಜ್ಞೆಯನ್ನು ವಾಪಸ್ ಕಳುಹಿಸಿದ್ದರು. ರಾಜ್ಯಪಾಲರ ಎಲ್ಲ ಆಕ್ಷೇಪಗಳಿಗೆ ಕಾನೂನು ಇಲಾಖೆ ಸಿದ್ಧಪಡಿಸಿದ್ದ ಸಮರ್ಥನೆ, ಸ್ಪಷ್ಟೀಕರಣಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನುಮೋದನೆ ನೀಡಿದರು.

ಅಧಿಕಾರಿಗಳು ನೀಡಿದ್ದ ಸಮಗ್ರ ವಿವರಗಳ ಸಹಿತ ಮುಖ್ಯಮಂತ್ರಿಯವರನ್ನು ಸೋಮವಾರ ಬೆಳಿಗ್ಗೆ ಭೇಟಿ ಮಾಡಿದ್ದ ಕಾನೂನು ಸಚಿವ ಎಚ್‌.ಕೆ. ಪಾಟೀಲ, ಸುಗ್ರೀವಾಜ್ಞೆ ಹೊರಡಿಸಬೇಕಾದ ಅಗತ್ಯ ಮತ್ತು ರಾಜಕೀಯ ನಿರ್ಧಾರದ ಬಗ್ಗೆ ಚರ್ಚೆ ನಡೆಸಿದರು. ಸುಗ್ರೀವಾಜ್ಞೆಯು ಸಾಲದಾತರ ಹಿತಾಸಕ್ತಿಯನ್ನು ನಿರ್ಲಕ್ಷಿಸಿಲ್ಲ ಹಾಗೂ ಸಾಲ ವಸೂಲಾತಿಯನ್ನು ನಿರ್ಬಂಧಿಸುವುದಿಲ್ಲ ಎಂದು ವಿವರಣೆ ನೀಡಿದರು.

ನೋಂದಾಯಿತವಲ್ಲದ ಮತ್ತು ಸಾಲ ನೀಡಲು ಪರವಾನಗಿ ಹೊಂದಿರದ ಯಾವುದೇ ವ್ಯಕ್ತಿಯು ಯಾರಿಗೇ ಸಾಲ ಕೊಡಲು ಮತ್ತು ಹೆಚ್ಚಿನ ಬಡ್ಡಿ ಮತ್ತು ಚಕ್ರಬಡ್ಡಿ ಅಥವಾ ದಂಡದ ಬಡ್ಡಿ ವಿಧಿಸುವ ಅಧಿಕಾರ ಹೊಂದಿರುವುದಿಲ್ಲ. ಪರವಾನಗಿ ಪಡೆಯದೆ ಖಾಸಗಿಯಾಗಿ ಸಾಲವನ್ನು ನೀಡಿ ಹೆಚ್ಚಿನ ಬಡ್ಡಿ ವಸೂಲಿ ಮಾಡಿದರೆ ಅದು ಕಾನೂನಿಗೆ ವಿರೋಧಿಯಾಗುತ್ತದೆ. ಅಂತಹ ಸಾಲವು ವಸೂಲಿಗೆ ಅರ್ಹವೂ ಅಲ್ಲ, ಯೋಗ್ಯವೂ ಅಲ್ಲ ಎಂದೂ ಸ್ಪಷ್ಟೀಕರಣದಲ್ಲಿ ವಿವರಿಸಲಾಗಿದೆ.

ನೋಂದಾಯಿತ ಸಂಸ್ಥೆ ಅಥವಾ ವ್ಯಕ್ತಿಗಳು ನಿಯಮಾನುಸಾರ ವಸೂಲಿ ಮಾಡಬಾರದೆಂದು ಅಥವಾ ಅಂತಹ ಸಾಲಗಳು ವಸೂಲಿಗೆ ಅರ್ಹವಲ್ಲವೆಂದು ಎಲ್ಲಿಯೂ ಹೇಳಿಲ್ಲ. ವಸೂಲಾತಿಗಾಗಿ ಹಿಂಸೆ, ಒತ್ತಡ ತಂತ್ರ ಹಾಗೂ ಕಿರುಕುಳ ನೀಡುವುದನ್ನು ತಡೆಯಲು, ನಿಷೇಧಿಸಲು ಈ ಸುಗ್ರೀವಾಜ್ಞೆಯಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದೂ ರಾಜ್ಯ ಸರ್ಕಾರ ಸಮರ್ಥನೆ ನೀಡಿದೆ.

ಸುದ್ದಿ 2 ನಿಮಿಷ

ಕಾರ್ಮಿಕ ಇಲಾಖೆಯಿಂದ ವಸತಿ ಶಾಲೆ: ಸಚಿವ ಲಾಡ್

ಹಾಸನ: ‘ಕಾರ್ಮಿಕರ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಿಸಲು, ಮೊರಾರ್ಜಿ ವಸತಿ ಶಾಲೆಯ ಮಾದರಿಯಲ್ಲಿಯೇ ಕಾರ್ಮಿಕ ಇಲಾಖೆಯಿಂದಲೂ ವಸತಿ ಶಾಲೆ ತೆರೆಯಲು ತೀರ್ಮಾನಿಸಲಾಗಿದೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಹೊರಗುತ್ತಿಗೆ ನೌಕರರಿಗೆ ಸಮರ್ಪಕ ವೇತನ ನೀಡುವ ಸಲುವಾಗಿ ಪ್ರತಿ ಜಿಲ್ಲೆಯಲ್ಲೂ ಸೊಸೈಟಿ ತೆರೆಯಲಾಗುವುದು. 500 ನೋಂದಾಯಿತ ಕಾರ್ಮಿಕರಿಗೆ ಸೊಸೈಟಿ ತೆರೆಯಲಾಗುವುದು. ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದು, ಹಂತ ಹಂತವಾಗಿ ಕಾರ್ಯಗತವಾಗಲಿದೆ’ ಎಂದರು.

‘2007ರಿಂದ 2025ರವರೆಗೆ ಕಟ್ಟಡ ಹಾಗೂ ಇತರೆ ಕಾರ್ಮಿಕರು ಹೆಚ್ಚಾಗಿದ್ದಾರೆ. ನಾನು ಅಧಿಕಾರ ವಹಿಸಿಕೊಂಡಾಗ 54 ಲಕ್ಷ ಕಾರ್ಮಿಕ ಕಾರ್ಡ್ ನೀಡಲಾಗಿತ್ತು. 20 ಲಕ್ಷ ನಕಲಿ ಕಾರ್ಡ್ ಪತ್ತೆ ಹಚ್ಚಲಾಗಿದೆ. ಸದ್ಯ 34 ಲಕ್ಷ ಅಧಿಕೃತ ಕಾರ್ಡ್‌ಗಳನ್ನು ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ’ ಎಂದರು.

‘ನವೆಂಬರ್ 15ರಂದು ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಡಲಿದ್ದಾರೆ’ ಎಂಬ ಪ್ರತಿಪಕ್ಷದ ನಾಯಕ ಆರ್. ಅಶೋಕ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಮೊದಲು ಅವರ ಪ್ರಧಾನಿಯನ್ನು ಬದಲಿಸಲಿ. ನಿತಿನ್ ಗಡ್ಕರಿ ಅಥವಾ ಬೇರೆ ಯಾರನ್ನಾದರೂ ಮಾಡಲಿ. ಇದರಿಂದ ದೇಶ ಉಳಿಯುತ್ತದೆ’ ಎಂದು ತಿರುಗೇಟು ನೀಡಿದರು.

ಕರಿಘಟ್ಟಕ್ಕೆ ಬೆಂಕಿ: ಅರಣ್ಯ ನಾಶ

ಶ್ರೀರಂಗಪಟ್ಟಣ: ತಾಲ್ಲೂಕಿನ ಕೆ.ಶೆಟ್ಟಹಳ್ಳಿ ಮೀಸಲು ಅರಣ್ಯದ ಕರಿಘಟ್ಟ ಗುಡ್ಡ ಮತ್ತು ಆಸುಪಾಸಿನ ಅರಣ್ಯಕ್ಕೆ ಸೋಮವಾರ ಬೆಂಕಿ ಬಿದ್ದಿದ್ದು, ನೂರಾರು ಎಕರೆ ಭಸ್ಮವಾಗಿದೆ.

ತಾಲ್ಲೂಕಿನ ಚಿನ್ನಾಯಕನಹಳ್ಳಿ ಮತ್ತು ಅಲ್ಲಾಪಟ್ಟಣ –ಎರಡೂ ಕಡೆಯಿಂದ ಏಕ ಕಾಲಕ್ಕೆ ಬೆಂಕಿ ಹೊತ್ತಿಕೊಂಡು ಶರವೇಗದಲ್ಲಿ ವ್ಯಾಪಿಸಿದೆ. ಉರಿ ಬಿಸಿಲಿನೊಂದಿಗೆ ಗಾಳಿಯೂ ಬೀಸುತ್ತಿದ್ದರಿಂದ ಇಡೀ ಕಾಡಿಗೆ ಹರಡಿದೆ.

ಬೆಟ್ಟದ ವಿವಿಧೆಡೆ ಬೆಂಕಿ ಹೊತ್ತಿಕೊಂಡಿದ್ದರಿಂದ ಅಗ್ನಿಶಾಮಕ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಹರಸಾಹಸ ಪಟ್ಟರೂ ಬೆಂಕಿ ನಂದಿಸಲು ಸಾಧ್ಯವಾಗಲಿಲ್ಲ. ನೀಲಗಿರಿ, ಹರ್ಕ್ಯುಲೆಸ್, ತರಗುಣಿ ಸೇರಿ ಹಲವು ಬಗೆಯ ಮರಗಳು ಹಾಗೂ ಕುರುಚಲು ಗಿಡಗಳು ಸುಟ್ಟಿವೆ. ಪಕ್ಷಿಗಳ ಮೊಟ್ಟೆ ಮತ್ತು ಮರಿಗಳು ಗೂಡು ಸಹಿತ ಬೆಂಕಿಗೆ ಆಹುತಿಯಾಗಿವೆ. ಹಾವು, ಮೊಲ, ಉಡ, ಓತಿಕ್ಯಾತ ಸೇರಿ ವನ್ಯಜೀವಿಗಳು ನಾಶವಾಗಿರುವ ಸಾಧ್ಯತೆ ಇದೆ.

‘ಕರಿಘಟ್ಟದ ಶ್ರೀನಿವಾಸ ದೇವಾಲಯದ ಮುಂದಿನ ಟ್ರೀ ಪಾರ್ಕ್ ಬಳಿ ಹಾಗೂ ಗರುಡನ ಉಕ್ಕಡ ಸಮೀಪದ ರಕ್ಷಣಾ ಇಲಾಖೆಯ ಡಿಆರ್‌ಡಿಒ ಕ್ಯಾಂಪ್‌ನತ್ತ ಹರಡುತ್ತಿದ್ದ ಬೆಂಕಿಯನ್ನು ತಡೆದೆವು. ಕುದುರೆ ಕಲ್ಲು ಗುಡ್ಡ ಇತರ ಕಡೆಗೆ ವ್ಯಾಪಿಸಿದ ಬೆಂಕಿ ನಂದಿಸಲು ಸಾಧ್ಯವಾಗಿಲ್ಲ’ ಎಂದು ಆರ್‌ಎಫ್‌ಒ ವಿನೋದಗೌಡ ತಿಳಿಸಿದರು.

‘ಕರಿಘಟ್ಟ ಕಾಡಿಗೆ ಬೆಂಕಿ ಹಚ್ಚಿದರೆ ಮಕ್ಕಳಾಗುತ್ತವೆ ಎಂಬ ಮೂಢನಂಬಿಕೆಯುಳ್ಳವರು ಅಥವಾ ದನಗಾಹಿಗಳು ಬೆಂಕಿ ಹಚ್ಚಿರುವ ಸಾಧ್ಯತೆ ಇದೆ’ ಎಂದು ಹೇಳಿದರು.

ಸಿಟಿಐ ಹುದ್ದೆ: ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ತೆರಿಗೆ ಪರಿವೀಕ್ಷಕರ (ಸಿಟಿಐ) 230 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕೆಪಿಎಸ್‌ಸಿ ಸೋಮವಾರ ರಾತ್ರಿ ಪ್ರಕಟಿಸಿದೆ.

ಈ ಹುದ್ದೆಗಳಿಗೆ ಕಳೆದ ವರ್ಷ ಜ. 20 ಮತ್ತು 21ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆದಿತ್ತು.

ಈ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ತಕ್ಷಣ ಪ್ರಕಟಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗೆ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅವರು ಜ. 24ರಂದು ಪತ್ರ ಬರೆದಿದ್ದರು. ಅಲ್ಲದೆ, ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯನ್ನು ಸೋಮವಾರ ಭೇಟಿ ಮಾಡಿ ಫಲಿತಾಂಶ ಪ್ರಕಟಿಸುವಂತೆ ಒತ್ತಾಯಿಸಿದ್ದರು.

ಪ್ರಶಸ್ತಿ..... ಬಾಗಲಕೋಟೆಯಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿಯ 2021 ರಿಂದ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಕಲಾವಿದರಿಗೆ ಪ್ರದಾನ ಮಾಡಲಾಯಿತು. ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ, ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ.ಕೆ.ಆರ್. ದುರ್ಗಾದಾಸ, ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ವೀರಣ್ಣ ರಾಜೂರ, ಕವಿ ಸತ್ಯಾನಂದ ಪಾತ್ರೋಟ ಪಾಲ್ಗೊಂಡಿದ್ದರು

328 ಸರ್ಕಾರಿ ನೌಕರರ ಆತ್ಮಹತ್ಯೆ

3 ವರ್ಷದ ಅಂಕಿಅಂಶ • ಪೊಲೀಸರ ಆತ್ಮಹತ್ಯೆಯಲ್ಲೂ ರಾಜಧಾನಿ ಮುಂದೆ

• ಕೆ.ನರಸಿಂಹಮೂರ್ತಿ

ಮೈಸೂರು: ರಾಜ್ಯದಲ್ಲಿ 2021ರಿಂದ 2023ರವರೆಗೆ, ಮೂರು ವರ್ಷಗಳ ಅವಧಿಯಲ್ಲಿ 328 ಸರ್ಕಾರಿ ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದೇ ಅವಧಿಯಲ್ಲಿ 54 ಪೊಲೀಸ್ ಸಿಬ್ಬಂದಿಯೂ ಆತ್ಮಹತ್ಯೆ ಮಾಡಿಕೊಂಡಿದ್ದು, ಎರಡೂ ವಿಭಾಗದಲ್ಲಿ ರಾಜ್ಯದ ರಾಜಧಾನಿಯೇ ಮೊದಲ ಸ್ಥಾನದಲ್ಲಿದೆ.

ಬೆಂಗಳೂರು ಹೊರತುಪಡಿಸಿದರೆ, ಮೈಸೂರು ನಗರ, ಬೆಳಗಾವಿ, ಹುಬ್ಬಳ್ಳಿ–ಧಾರವಾಡದಲ್ಲಿ ತಲಾ 16 ಮಂದಿ, ಗದಗ, ಕಲಬುರ್ಗಿ ನಗರ, ಹಾಸನ, ತುಮಕೂರು ಮತ್ತು ಕರ್ನಾಟಕ ರೈಲ್ವೆ ವಿಭಾಗದಲ್ಲಿ ತಲಾ 12 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಾಗಲಕೋಟೆ ಮತ್ತು ಉತ್ತರ ಕನ್ನಡದಲ್ಲಿ ತಲಾ 11 ಮಂದಿ, ಬೆಂಗಳೂರು ನಗರ ಜಿಲ್ಲೆ ಮತ್ತು ಉಡುಪಿಯಲ್ಲಿ ತಲಾ 10 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಪ್ರಮಾಣ ಒಂದಂಕಿಯಷ್ಟಿದೆ.

ನಗರದ ಒಡನಾಡಿ ಸೇವಾ ಸಂಸ್ಥೆಯು ಮಾಹಿತಿ ಹಕ್ಕು ಕಾಯ್ದೆ ಅಡಿ ಸಲ್ಲಿಸಿದ್ದ ಅರ್ಜಿಗೆ ರಾಜ್ಯ ಅಪರಾಧ ದಾಖಲಾತಿ ವಿಭಾಗವು ನೀಡಿರುವ ಅಂಕಿಅಂಶದಲ್ಲಿ ಈ ಮಾಹಿತಿ ಇದೆ. ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ 2022ರಲ್ಲಿ ಎರಡಂಕಿಗೆ ಇಳಿದರೂ, ನಂತರದ ವರ್ಷ 2021ರದ್ದಕ್ಕಿಂತಲೂ ಹೆಚ್ಚಾಗಿದೆ.

ಪೊಲೀಸರ ಆತ್ಮಹತ್ಯೆ: ಇದೇ ಮೂರು ವರ್ಷದ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ 13 ಪೊಲೀಸರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಇಡೀ ರಾಜ್ಯದಲ್ಲೇ ಹೆಚ್ಚು.

ಮೈಸೂರು ನಗರದಲ್ಲಿ 5, ಚಾಮರಾಜ ನಗರದಲ್ಲಿ 4 ಮಂದಿ, ಬೀದರ್, ಗದಗ, ಮಂಗಳೂರು ನಗರದಲ್ಲಿ ತಲಾ 3, ಕಲಬುರ್ಗಿ ನಗರ, ಶಿವಮೊಗ್ಗ, ಉಡುಪಿ ಮತ್ತು ಉತ್ತರ ಕನ್ನಡದಲ್ಲಿ ತಲಾ ಇಬ್ಬರು ಹಾಗೂ ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬ ಪೊಲೀಸರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹೆಚ್ಚುತ್ತಿರುವ ಆತ್ಮಹತ್ಯೆ ಪ್ರಕರಣಗಳ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಒಡನಾಡಿ ಸಂಸ್ಥೆಯ ನಿರ್ದೇಶಕ ಎಂ.ಎಲ್.ಪರಶುರಾಂ, ‘ಅತಿಯಾದ ಕೆಲಸದ ಒತ್ತಡ, ಅಧಿಕಾರಿಗಳಿಂದ ಅವಮಾನ, ಅವರು ಹೇಳಿದ್ದನ್ನೆಲ್ಲಾ ಮಾಡಲೇಬೇಕಾದ ಅಸಹಾಯಕತೆ, ಭ್ರಷ್ಟಾಚಾರದಲ್ಲಿ ಅನಿವಾರ್ಯವಾಗಿ ಸಿಲುಕುವುದು, ತುರ್ತು ಸಂದರ್ಭಗಳಲ್ಲಿ ರಜೆ ದೊರಕದಿರುವುದು –ಈ ಪ್ರಮುಖ ಕಾರಣಗಳೊಂದಿಗೆ, ಕುಡಿತ, ಕೌಟುಂಬಿಕ ಕಲಹದಂಥ ವೈಯಕ್ತಿಕ ಕಾರಣಗಳೂ ಆತ್ಮಹತ್ಯೆಗೆ ಕಾರಣ. ಆತ್ಮಹತ್ಯೆ ಮಾಡಿಕೊಂಡ ಕೆಲವರ ಕುಟುಂಬದೊಂದಿಗೆ ಮಾತನಾಡಿದಾಗ ಈ ಅಂಶಗಳು ಗೊತ್ತಾದವು’ ಎಂದು ತಿಳಿಸಿದರು.

‘ಆತ್ಮಹತ್ಯೆ ಮಾಡಿಕೊಂಡವರಲ್ಲಿ ಗುಮಾಸ್ತರು, ಅಕೌಂಟೆಂಟ್ ರೀತಿಯ ಅಧೀನ ಸಿಬ್ಬಂದಿಯೇ ಹೆಚ್ಚು ಎಂಬುದನ್ನು ಗಮನಿಸಬೇಕು. ಈ ನಿಟ್ಟಿನಲ್ಲಿ ತನಿಖೆಯೊಂದವರ ಪರವಾದ ಅನುಕಂಪದ ನೆಲೆಯಲ್ಲೇ ನಡೆಯಬೇಕು’ ಎಂದು ಪ್ರತಿಪಾದಿಸಿದರು.

ಮುಖ್ಯಾಂಶಗಳು

- ಬೆಂಗಳೂರಿನ ಜೊತೆಗೆ ದೊಡ್ಡ ನಗರಗಳದ್ದೂ ದೊಡ್ಡ ಪಾಲು
- ಗುಮಾಸ್ತರು, ಅಕೌಂಟೆಂಟ್ ರೀತಿಯ ಅಧೀನ ಸಿಬ್ಬಂದಿಯೇ ಹೆಚ್ಚು



ಪ್ರತಿ ವರ್ಷ ಸರಾಸರಿ ನೂರಕ್ಕೂ ಹೆಚ್ಚು ಸರ್ಕಾರಿ ನೌಕರರು ಆತ್ಮಹತ್ಯೆ ಮಾಡಿಕೊಂಡಿರುವುದು ಗಂಭೀರ ಪ್ರಕರಣ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು

ಎಂ.ಎಲ್.ಪರಶುರಾಂ
ಒಡನಾಡಿ ಸಂಸ್ಥೆ ನಿರ್ದೇಶಕ

ಮುಡಾ ನಿವೇಶನಗಳ ಹಂಚಿಕೆ ಪ್ರಕರಣ

ಇ.ಡಿ ಸಮನ್ಸ್‌ಗೆ ತಡೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಮತ್ತು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ಇ.ಡಿ (ಜಾರಿ ನಿರ್ದೇಶನಾಲಯ) ಜಾರಿ ಮಾಡಿರುವ ಸಮನ್ಸ್‌ಗೆ ವಿಧಿಸಲಾಗಿದ್ದ ಮಧ್ಯಂತರ ತಡೆ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ.

ಈ ಸಂಬಂಧ ಪಾರ್ವತಿ ಹಾಗೂ ಬೈರತಿ ಸುರೇಶ್ ಪ್ರತ್ಯೇಕವಾಗಿ ಸಲ್ಲಿಸಿರುವ ರಿಟ್ ಅರ್ಜಿಗಳನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಬೈರತಿ ಸುರೇಶ್ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ಮತ್ತು ಪಾರ್ವತಿ ಅವರ ಪರ ಹಿರಿಯ ವಕೀಲ ಸಂದೇಶ್ ಜೆ.ಚೌಟ ಸುದೀರ್ಘವಾದ ಮಂಡಿಸಿ, ‘ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರಿಗೆ ಇ.ಡಿ ಜಾರಿ ಮಾಡಿದ್ದ ಸಮನ್ಸ್ ಅನ್ನು ಇದೇ ಹೈಕೋರ್ಟ್‌ನ ಸಮನ್ವಯ ಪೀಠ ವಜಾಗೊಳಿಸಿದೆ. ಅದೇ ತೀರ್ಪನ್ನು ಈ ಅರ್ಜಿದಾರರ ಪ್ರಕರಣದಲ್ಲೂ ಪರಿಗಣಿಸಬೇಕು’ ಎಂದು ಕೋರಿದರು.

ಇ.ಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಒಂದು ವಾರದಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿತು.

ಸಿಎಸ್‌ಬಿ ರಚನೆ: ಸರ್ಕಾರಕ್ಕೆ ತರಾಟೆ

ಬೆಂಗಳೂರು: ನಿರ್ದಿಷ್ಟ ಸ್ಥಳ ಮತ್ತು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಐಎಎಸ್ ಅಧಿಕಾರಿಗಳ ಕನಿಷ್ಠ ಸೇವಾವಧಿಯನ್ನು ನಿಗದಿಪಡಿಸುವ ಮತ್ತು ಕರ್ತವ್ಯ ನಿರ್ವಹಣೆಯ ವೇಳೆ ಅವರ ಹಿತಕಾಯುವ ಉದ್ದೇಶ ಹೊಂದಿದ, ‘ನಾಗರಿಕ ಸೇವಾ ಮಂಡಳಿ’ (ಸಿಎಸ್‌ಬಿ) ಕುರಿತು ನಿರ್ಧಾರ ಕೈಗೊಳ್ಳಲು ಯಾವುದೇ ರಾಕೆಟ್ ತಂತ್ರಜ್ಞಾನ ಬೇಕಾಗಿಲ್ಲ’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಚಾಟಿ ಬೀಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ರಿಷಬ್ ಟ್ರಕ್ರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರನ್ನು ಒಳಗೊಂಡ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಸಿಎಸ್‌ಬಿ ರಚಿಸುವುದಕ್ಕೆ ಸಂಬಂಧಿಸಿದಂತೆ 2014ರಲ್ಲಿ ಸಂಪುಟ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಧಾರವನ್ನು ರಾಜ್ಯ ಸರ್ಕಾರ ಅಮಾನತಿಲ್ಲಿಟ್ಟಿದೆ. ನಂತರ ಸಿಎಸ್‌ಬಿ ರಚಿಸುವಂತೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನಿರ್ದೇಶಿಸಿದೆಯಾದರೂ ಈತನಕ ರಚನೆ ಮಾಡಿಲ್ಲ’ ಎಂದು ಆಕ್ಷೇಪಿಸಿದರು.

ಇದಕ್ಕೆ ರಾಜ್ಯ ಸರ್ಕಾರದ ಪರ ವಕೀಲರು, ‘ಈ ವಿಚಾರವನ್ನು ಸಂಪುಟ ಸಮಿತಿಯ ಪರಿಶೀಲನೆಗೆ ಕಳುಹಿಸಲಾಗಿದೆ. ಬೇರೆ ರಾಜ್ಯಗಳಿಂದಲೂ ಈ ಸಂಬಂಧ ಮಾಹಿತಿ ಕೇಳಲಾಗಿದೆ. ಪರಿಣಾಮಕಾರಿಯಲ್ಲದ ನಿರ್ಧಾರ ಕೈಗೊಳ್ಳಬಾರದು ಎಂಬ ಹಿನ್ನೆಲೆಯಲ್ಲಿ ತಡವಾಗಿದ್ದು, ನಾಲ್ಕು ವಾರ ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

‘ಸಿಎಸ್‌ಬಿ ರಚಿಸುವ ನಿಟ್ಟಿನಲ್ಲಿ ಏನಾಗಿದೆ ಎಂಬ ಬಗ್ಗೆ ಮಾಹಿತಿ ಒದಗಿಸಿ’ ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 21ಕ್ಕೆ ಮುಂದೂಡಿತು.

ಸೈಕಲ್ ಪಥದ ಹಗಲುಗನಸು: ಸುಪ್ರೀಂ ಹೇಳಿಕೆ

ನವದೆಹಲಿ (ಪಿಟಿಐ): ‘ಕೈಗೆಟಕುವ ದರದಲ್ಲಿ ಮನೆ ಒದಗಿಸಲು ಸರ್ಕಾರಗಳ ಬಳಿ ಹಣವಿಲ್ಲ, ಜನರಿಗೆ ಕುಡಿಯಲು ಶುದ್ಧ ನೀರು ಸಿಗುತ್ತಿಲ್ಲ... ಹೀಗಿರುವಾಗ ನೀವು ಸೈಕಲ್‌ಗಳಿಗಾಗಿ ಪ್ರತ್ಯೇಕ ಪಥ ಹೊಂದುವ ಹಗಲುಗನಸು ಕಾಣುತ್ತಿದ್ದೀರಿ...’

ಸೈಕ್ಲಿಸ್ಟ್ ದೇವಿಂದರ್ ಸಿಂಗ್ ನಾಗಿ ಅವರು ಸಲ್ಲಿಸಿದ್ದ ಅರ್ಜಿಯೊಂದನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ನಿರಾಕರಿಸುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು ಹೇಳಿದ ಮಾತು ಇದು.

ದೇಶದಲ್ಲಿ ಸೈಕಲ್‌ಗಳಿಗೆ ಪ್ರತ್ಯೇಕವಾದ ಪಥ ಇರಬೇಕು ಎಂಬ ಕೋರಿಕೆ ಇರುವ ಅರ್ಜಿಯು ಪೀಠದ ಎದುರು ಬಂದಿತ್ತು. ಆದ್ಯತೆಗಳನ್ನು ಸರಿಯಾಗಿ ಪಟ್ಟಿ ಮಾಡಿಕೊಳ್ಳಬೇಕು, ಹೆಚ್ಚು ತುರ್ತಿನ ಇತರ ವಿಷಯಗಳಿಗೆ ಗಮನ ನೀಡಬೇಕಾದ ಅಗತ್ಯ ಇದೆ ಎಂದು ಪೀಠ ಹೇಳಿತು.

‘ಕೊಳೆಗೇರಿಗಳಿಗೆ ಭೇಟಿ ಕೊಡಿ, ಅಲ್ಲಿ ಜನ ಯಾವ ಪರಿಸ್ಥಿತಿಯಲ್ಲಿ ವಾಸಿಸುತ್ತಿದ್ದಾರೆ ಎಂಬುದನ್ನು ನೋಡಿ. ಜನರಿಗೆ ಕೈಗೆಟಕುವ ದರದಲ್ಲಿ ಸೂರು ಕೊಡಲು ಸರ್ಕಾರಗಳ ಬಳಿ ಹಣವಿಲ್ಲ, ನಾವಿಲ್ಲಿ ಹಗಲುಗನಸು ಕಾಣುತ್ತಿದ್ದೇವೆ...’ ಎಂದು ಪೀಠವು ಪ್ರತಿಕ್ರಿಯಿಸಿತು.

ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ಉದ್ಘಾಟನೆ

ಭಾರತ ದಾಳಿಕೋರ ರಾಷ್ಟ್ರವಲ್ಲ: ರಾಜನಾಥ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಭಾರತವು ಇಲ್ಲಿಯವರೆಗೆ ಯಾವುದೇ ದೇಶದ ಮೇಲೆ ದಾಳಿ ಮಾಡಿಲ್ಲ. ಯಾವುದೇ ಮಹಾನ್ ಶಕ್ತಿಗಳ ಪೈಪೋಟಿಯಲ್ಲಿ ಭಾಗಿಯಾಗಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಪಾದಿಸಿದರು.

ಯಲಹಂಕ ವಾಯುನೆಲೆಯಲ್ಲಿ ಸೋಮವಾರ ಆರಂಭವಾದ ಏರೊ ಇಂಡಿಯಾ–2025 ವೈಮಾನಿಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

‘ಭಾರತದಲ್ಲಿ ಭದ್ರತೆ ಮತ್ತು ಶಾಂತಿ ಪ್ರತ್ಯೇಕ ವಿಚಾರಗಳಲ್ಲ. ಜಾಗತಿಕವಾಗಿ ಅನಿಶ್ಚಿತತೆ ಹೆಚ್ಚಾಗುತ್ತಿರುವ ಈ ಸಮಯದಲ್ಲಿ ನಮ್ಮ ದೇಶದಲ್ಲಿ ಶಾಂತಿ ಮತ್ತು ಸಮೃದ್ಧಿ ನೆಲೆಯಾಗಿದೆ. ಎಂದರು.

ಪರಸ್ಪರ ಗೌರವ, ಆಸಕ್ತಿ ಮತ್ತು ಪ್ರಯೋಜನದ ಆಧಾರದ ಮೇಲೆ ಸಮಾನ ಮನಸ್ಕ ರಾಷ್ಟ್ರಗಳ ನಡುವಿನ ಸಂಬಂಧವನ್ನು ಇನ್ನಷ್ಟು ಬಲಪಡಿಸಲು ಏರೊ ಇಂಡಿಯಾ–2025 ವೇದಿಕೆಯನ್ನು ಒದಗಿಸುತ್ತಿದೆ. ಸ್ನೇಹಪರ ದೇಶಗಳೊಂದಿಗಿನ ಸಂಬಂಧವನ್ನು ಬಲಪಡಿಸುತ್ತದೆ ಎಂದರು.

ರಕ್ಷಣಾ ಕೈಗಾರಿಕಾ ವಲಯವನ್ನು ಹಿಂದೆ ರಾಷ್ಟ್ರೀಯ ಆರ್ಥಿಕತೆಯ ಒಂದಂಶ ಎಂದು ಕೂಡ ಪರಿಗಣಿಸಿರಲಿಲ್ಲ. ಈಗ ಭಾರತದ ಆರ್ಥಿಕತೆಯ ಎಂಜಿನ್ ಆಗಿದೆ. 2025-26ರ ಕೇಂದ್ರ ಬಜೆಟ್‌ನಲ್ಲಿ ರಕ್ಷಣಾ ಸಚಿವಾಲಯಕ್ಕೆ ₹ 6.81 ಲಕ್ಷ ಕೋಟಿಯಷ್ಟು ದಾಖಲೆ ಮೊತ್ತ ಹಂಚಿಕೆಯಾಗಿದೆ. ರಕ್ಷಣೆಯನ್ನು ಪ್ರಮುಖ ಆದ್ಯತೆಯ ಕ್ಷೇತ್ರವೆಂದು ಸರ್ಕಾರ ಪರಿಗಣಿಸಿರುವುದಕ್ಕೆ ಇದು ಪುರಾವೆ ಎಂದು ಪ್ರತಿಪಾದಿಸಿದರು.

‘ಖಾಸಗಿ ವಲಯವು ಆರ್ಥಿಕ ಮುಖ್ಯವಾಹಿನಿಯಲ್ಲಿ ದೊಡ್ಡ ಪಾತ್ರವನ್ನು ವಹಿಸಲಿದೆ. ಖಾಸಗಿ ಪಾಲುದಾರಿಕೆಯು ದೇಶದಲ್ಲಿ ಸಮೃದ್ಧಿಯ ಹೊಸ ಅಲೆಯನ್ನು ತರಲಿದೆ’ ಎಂದು ಹೇಳಿದರು.

ಉಪಮುಖ್ಯಮಂತ್ರಿ ಶಿವಕುಮಾರ್ ಮಾತನಾಡಿ, ‘ನಾಗರಿಕ ಮತ್ತು ಮಿಲಿಟರಿ ವಾಯುಯಾನ ಎರಡರಲ್ಲೂ ಭಾರತದ ಪ್ರಗತಿಯನ್ನು ಎತ್ತಿ ತೋರಿಸುವ ಕಾರ್ಯಕ್ರಮವಾಗಿದೆ. ಇದು ಕೇವಲ ಪ್ರದರ್ಶನವಲ್ಲ. ಇದು ಬಾಹ್ಯಾಕಾಶ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಭಾರತದ ಸಾಮರ್ಥ್ಯ ಬೆಳೆಯುತ್ತಿರುವುದಕ್ಕೆ ಸಾಕ್ಷಿ ಹಾಗೂ ಅಂತರರಾಷ್ಟ್ರೀಯ ಪಾಲುದಾರಿಕೆಗಳನ್ನು ಬೆಳೆಸುವ ವೇದಿಕೆ’ ಎಂದುಹೇಳಿದರು.

‘ದೇಶದ ಬಾಹ್ಯಾಕಾಶಕ್ಕೆ ಸಂಬಂಧಿಸಿದ ಉತ್ಪಾದನೆ ಮತ್ತು ರಕ್ಷಣಾ ಸಂಶೋಧನೆಯಲ್ಲಿ ಶೇ 60ಕ್ಕಿಂತ ಹೆಚ್ಚು ಕೊಡುಗೆಯನ್ನು ಕರ್ನಾಟಕ ನೀಡುತ್ತಿದೆ. ದೇಶದ ಏರೋಸ್ಪೇಸ್ ರಾಜಧಾನಿಯೇ ಬೆಂಗಳೂರು. ಎಚ್‌ಎಎಲ್, ಇಸ್ರೊ, ಬೋಯಿಂಗ್ ಇಂಡಿಯಾದಂತಹ ಪ್ರಮುಖ ಸಂಸ್ಥೆಗಳು ಕೊಡುಗೆಗಳನ್ನು ನೀಡುತ್ತಿವೆ. ಬೆಂಗಳೂರಿನಲ್ಲಿ ಬಾಹ್ಯಾಕಾಶ ವಲಯದಲ್ಲಿ 1.50 ಲಕ್ಷಕ್ಕೂ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ’ ಎಂದರು.

ಯುದ್ಧವಿಮಾನಗಳ ಸಾಹಸ ಪ್ರದರ್ಶನ ವೀಕ್ಷಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್

ವೈಮಾನಿಕ ಮಹಾಕುಂಭ ಮೇಳ

ಪ್ರಯಾಗ್‌ರಾಜ್‌ನಲ್ಲಿ ಅಧ್ಯಾತ್ಮ ಮಹಾಕುಂಭ ಮೇಳ ನಡೆಯುತ್ತಿದ್ದರೆ, ಇಲ್ಲಿ ವೈಮಾನಿಕ ಮಹಾಕುಂಭ ಮೇಳ ನಡೆಯುತ್ತಿದೆ ಎಂದು ರಾಜನಾಥ್ ಸಿಂಗ್ ಬಣ್ಣಿಸಿದರು. ಅಲ್ಲಿ ಅಂತರಂಗವನ್ನು ಬೆಳಗುವ ಕೆಲಸವಾಗುತ್ತಿದ್ದರೆ, ಇಲ್ಲಿ ಬಹಿರಂಗದ ಸಾಮರ್ಥ್ಯ ವೃದ್ಧಿಯ ಪ್ರದರ್ಶನವಾಗುತ್ತಿದೆ. ಅದು ಆತ್ಮಾವಲೋಕನದ ಕುಂಭವಾದರೆ, ಇದು ಸಂಶೋಧನೆಯ ಕುಂಭ ಎಂದು ತಿಳಿಸಿದರು.

ಎಚ್‌ಎಎಲ್ ಅಭಿವೃದ್ಧಿಪಡಿಸಿದ ಸ್ವದೇಶಿ ಕ್ಯಾಟ್ ವಾರಿಯರ್

ಧ್ವಂಸಕ್ಕೂ ಸಿದ್ಧ; ಆತ್ಮಾಹುತಿಗೂ ಬದ್ಧ

• ಇ.ಎಸ್.ಸುಧೀಂದ್ರ ಪ್ರಸಾದ್

ಬೆಂಗಳೂರು: ಯುದ್ಧದಲ್ಲಿ ಶತ್ರುಗಳ ರಾಡಾರ್, ರನ್‌ವೇಗಳನ್ನು ನಾಶಪಡಿಸಲು ದುಬಾರಿ ಯುದ್ಧವಿಮಾನ ಹಾಗೂ ಪೈಲಟ್‌ಗಳ ಜೀವವನ್ನು ಪಣಕ್ಕಿಡುವುದನ್ನು ತಪ್ಪಿಸುವ ಉದ್ದೇಶದಿಂದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಂಪನಿಯು ‘ಡಾಟಾ ಲಿಂಕ್’ ಎಂಬ ಕಾಂಬಾಕ್ಟ್ ಏರ್ ಟೀಮಿಂಗ್ ಸಿಸ್ಟಂ ‘ವಾರಿಯರ್’ ಅನ್ನು ಅಭಿವೃದ್ಧಿಪಡಿಸಿದೆ.

ಸೋಮವಾರದಿಂದ ಆರಂಭವಾದ ಏರೋ ಇಂಡಿಯಾ 15ನೇ ಆವೃತ್ತಿಯಲ್ಲಿ ಎಚ್‌ಎಎಲ್ ಮಳಿಗೆಯಲ್ಲಿ ಇದು ಪ್ರದರ್ಶನಗೊಂಡಿದೆ.

ಹೈದರಾಬಾದ್‌ನಲ್ಲಿರುವ ಎಚ್‌ಎಎಲ್‌ನ ಎಆರ್‌ಡಿಸಿ ವಿಭಾಗ ಇದನ್ನು ಅಭಿವೃದ್ಧಿಪಡಿಸಿದೆ. ಅಮೆರಿಕ ಸೇನೆಯ ಬಳಿ ಈಗಾಗಲೇ ‘ಬ್ಯಾಟ್’ ಎಂಬ ಮಾನವರಹಿತ ಯುದ್ಧ ವಿಮಾನವಿದೆ. ಇದೀಗ ಎಚ್‌ಎಎಲ್ ಅಭಿವೃದ್ಧಿಪಡಿಸುತ್ತಿರುವ ವಾರಿಯರ್ ದೇಶದ ಮೊದಲ ಮಾನವ ರಹಿತ ಯುದ್ಧ ವಿಮಾನವಾಗಲಿದೆ. ಟೇಕ್ ಆಫ್ ಮತ್ತು ಲ್ಯಾಂಡಿಂಗ್ ಜತೆಗೆ, ಯುದ್ಧದಲ್ಲಿ ಇದರ ಕಾರ್ಯವನ್ನು ಭೂಮಿ ಮೇಲಿರುವ ನಿಯಂತ್ರಣ ಕೊಠಡಿಯಲ್ಲೇ ಕೂತು ನಿರ್ವಹಿಸಬಹುದು.

ಇದರ ವಿನ್ಯಾಸ ಮತ್ತು ನಿರ್ಮಾಣ ಸಂಪೂರ್ಣ ಸ್ವದೇಶಿಯಾಗಿದೆ. ಎರಡು ಕ್ಷಿಪಣಿಗಳನ್ನು ಹೊತ್ತು ಸಾಗುವ ವಾರಿಯರ್, ಶತ್ರುಗಳ ರಾಡಾರ್ ಮತ್ತು ರನ್‌ವೇ ನಾಶಪಡಿಸಿ ಮರಳುವ ಸಾಮರ್ಥ್ಯ ಹೊಂದಿದೆ. ಒಂದೊಮ್ಮೆ ತನ್ನ ವ್ಯಾಪ್ತಿ ಮೀರಿ ಮುಂದೆ ಸಾಗಿದರೆ, ಆತ್ಮಾಹುತಿ ಬಾಂಬರ್ ಆಗಿಯೂ ಇದು ತನ್ನ ಕೆಲಸವನ್ನು ಪೂರೈಸಿ ನಾಶವಾಗಲಿದೆ ಎಂದು ಇದರ ತಂತ್ರಜ್ಞರು ವಿವರಿಸಿದರು.

ಇದರ ಇಂಧನ ಟ್ಯಾಂಕ್ 630 ಲೀಟರ್ ಸಾಮರ್ಥ್ಯದ್ದಾಗಿದೆ. ಆದರೆ, ಸದ್ಯ 430 ಲೀ. ಇಂಧನವನ್ನಷ್ಟೇ ಭರಿಸಿ ಪ್ರಯೋಗ ನಡೆಸಲಾಗುತ್ತಿದೆ. ನಿಯಂತ್ರಣ ಕೇಂದ್ರದಿಂದ 300 ಕಿ.ಮೀ. ವ್ಯಾಪ್ತಿಯಲ್ಲಿ ಇದು ಸಂಚರಿಸಲಿದೆ. ‘ಮದರ್ ಫ್ಲೈಟ್’ನಲ್ಲಿರುವ ಪೈಲಟ್‌ಗಳು ಇದನ್ನು ನಿಯಂತ್ರಿಸುತ್ತಾರೆ ಎಂದು ಮಾಹಿತಿ ನೀಡಿದರು.

ಪರೀಕ್ಷಾ ಹಂತದಲ್ಲಿರುವ ವಾರಿಯರ್ ಅನ್ನು ಸದ್ಯ ಕಡಿಮೆ ವೇಗದಲ್ಲಿ ಹಾಗೂ ಕಡಿಮೆ ಎತ್ತರದಲ್ಲಿ ಹಾರಾಟ ನಡೆಸಲಾಗುತ್ತಿದೆ. ಆರು ತಿಂಗಳ ಪರೀಕ್ಷೆಯ ನಂತರ, ಇದರ ಬಳಕೆಗೆ ಅನುಮತಿ ದೊರೆತಲ್ಲಿ 2026ರಲ್ಲಿ ಇದು ಭಾರತೀಯ ವಾಯುಸೇನೆಯನ್ನು ಸೇರುವ ಸಾಧ್ಯತೆ ಇದೆ. ಮಾನವಸಹಿತ ವಿಮಾನಗಳ ಬೆಲೆಗೆ ಹೋಲಿಸಿದಲ್ಲಿ ಇದು ನಾಲ್ಕನೇ ಒಂದರಷ್ಟು ಬೆಲೆಗೆ ಲಭ್ಯ. ಹೀಗಾಗಿ ಇದನ್ನು ಭವಿಷ್ಯದ ಯುದ್ಧದಲ್ಲಿ ವ್ಯಾಪಕವಾಗಿ ಬಳಸುವ ಸಾಧ್ಯತೆ ಇದೆ ಎನ್ನುವುದು ತಂತ್ರಜ್ಞರ ಮಾತು.

ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಸೋಮವಾರ ಆರಂಭವಾದ ಏರೋ ಇಂಡಿಯಾ 2025ರಲ್ಲಿ ಪ್ರದರ್ಶಿಸಲಾದ ಎಚ್‌ಎಎಲ್ ನಿರ್ಮಿತ ಕ್ಯಾಟ್ಸ್ ಯುದ್ಧವಿಮಾನ ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್

ಮಂಗಳವಾರ, ಫೆಬ್ರುವರಿ 11, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 42 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಬದುಕಿನ ಸವಾಲುಗಳನ್ನು ದಿಟ್ಟವಾಗಿ ಎದುರಿಸಲು ಎಲ್ಲ ಕಾಲಕ್ಕೂ ಉತ್ಸಾಹವನ್ನು ಉಳಿಸಿಕೊಳ್ಳುವುದು ಮುಖ್ಯ

ಆಳ-ಅಗಲ

ಘನತೆಯ ಸಾವಿನ ಹಕ್ಕು ಕರ್ನಾಟಕದ ದಿಟ್ಟ ಹೆಜ್ಜೆ

ಮುಂಬೈ ನೆರವಿಗೆ ಸೂರ್ಯ, ಅಜಿಂಕ್ಯ 10

ಮಹಾಕುಂಭ: 300 ಕಿ.ಮೀ. ಸಂಚಾರ ದಟ್ಟಣೆ 9

ಸೆನ್ಸೆಕ್ಸ್	ನಿಫ್ಟಿ	₹/$
77,311	23,381	87.45

ಭಾರತದ ‘ಶಕ್ತಿ’ಯ ದರ್ಶನ

ರೆಕ್ಕೆ ಬಡಿಯದ ಬಾನಾಡಿಗಳ ಬೃಹತ್ ವ್ಯಾಪಾರ ಸಂತೆ • 14ರವರೆಗೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಲಿಯ ಬಾನಲಿ ಓಲಾಡಿ-ತೇಲಾಡಿ ಸಾಗುತ್ತಾ, ಕಸರತ್ತಿನೊಂದಿಗೆ ಆಗಸದಲ್ಲಿ ಧೂಮದ ಚಿತ್ತಾರ ಬಿಡಿಸುತ್ತಾ ಪುಳಕಗೊಳಿಸುವ ಲೋಹದ ಹಕ್ಕಿಗಳು, ಆರ್ಭಟಿಸುತ್ತಾ ಶರವೇಗದಲ್ಲಿ ಸಾಗಿಬಂದು ಮುಗಿಲೆತ್ತರಕ್ಕೇರಿ ಕಣ್ಣಳತೆಯಿಂದ ಮರೆಯಾಗುತ್ತಿದ್ದ ಯುದ್ಧ ವಿಮಾನಗಳು... ಇಂಥ ಒಂದಲ್ಲ, ಎರಡಲ್ಲ, ಹತ್ತಾರು ಮೈನವಿರೇಳಿಸುವ ದೃಶ್ಯಗಳ ಬೃಹತ್ ಬಿಂಬವೇ ಅಲ್ಲಿ ಮೂಡಿತ್ತು.

ವೈಮಾನಿಕ ಕಸರತ್ತು, ವೈಮಾನಿಕ ಮತ್ತು ಬಾಹ್ಯಾಕಾಶ ಉದ್ಯಮಿಗಳ ಮುಖಾಮುಖಿ-ಮಾತುಕತೆ, ವಿಚಾರ ಸಂಕಿರಣಗಳ ಸಮ್ಮಿಲನವಾಗಿರುವ ‘ಏರೊ ಇಂಡಿಯಾ’ ವೈಮಾನಿಕ ಪ್ರದರ್ಶನದಲ್ಲಿ ಭಾರತದ ಯುದ್ಧ ವಿಮಾನಗಳ ಶಕ್ತಿ, ಬಾಹ್ಯಾಕಾಶದ ಸಾಧನೆಯ ವಿರಾಟ ರೂಪವೇ ಅಲ್ಲಿ ಅವತರಿಸಿತ್ತು.

9ನೇ ಪುಟ ನೋಡಿ

ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಸೋಮವಾರ ಆರಂಭವಾದ ಏರೊ ಇಂಡಿಯಾ 2025 ವೈಮಾನಿಕ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಸುಖೋಯ್ 30 ಯುದ್ಧವಿಮಾನಗಳು ಸಾಹಸ ಪ್ರದರ್ಶನ ನೀಡಿದವುಚಿತ್ರ:ಕೃಷ್ಣಕುಮಾರ್‌ಪಿ.ಎಸ್‌

> **ರಕ್ಷಣಾ ವ್ಯವಸ್ಥೆ ದುರ್ಬಲವಾಗಿದ್ದರೆ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ. ರಾಷ್ಟ್ರೀಯ ಗಡಿಗಳನ್ನು ಮೀರಿ ಭದ್ರತೆ, ಸ್ಥಿರತೆ ಮತ್ತು ಶಾಂತಿ ನೆಲೆಗೊಳ್ಳಬೇಕು ಎಂಬುದು ನಮ್ಮ ಪ್ರತಿಪಾದನೆ**
> **ರಾಜನಾಥ್ ಸಿಂಗ್**, ರಕ್ಷಣಾ ಸಚಿವ

> **ಏರೋಸ್ಪೇಸ್ ಉದ್ಯಮ ಸ್ಥಾಪಿಸಲು, ವಿಮಾನ ಮತ್ತು ಹೆಲಿಕಾಪ್ಟರ್‌ಗಳ ತಯಾರಕರನ್ನು ಬೆಂಗಳೂರಿನ ಕಡೆಗೆ ಗಮನ ಹರಿಸುವಂತೆ ಮಾಡಲು ರಕ್ಷಣಾ ಸಚಿವರು ಪ್ರೋತ್ಸಾಹ ನೀಡಬೇಕು**
> **ಡಿ.ಕೆ. ಶಿವಕುಮಾರ್**, ಉಪ ಮುಖ್ಯಮಂತ್ರಿ

‘ಅಪರಾಧ ಎಸಗಿದವರ ಸಂಸತ್ ಪ್ರವೇಶ ಎಷ್ಟು ಸರಿ?’

ನವದೆಹಲಿ (ಪಿಟಿಐ): ರಾಜಕೀಯದ ಅಪರಾಧೀಕರಣವು ಬಹಳ ಗಂಭೀರವಾದ ವಿಚಾರ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಕ್ರಿಮಿನಲ್ ಪ್ರಕರಣದಲ್ಲಿ ಅಪರಾಧಿ ಎಂದು ಘೋಷಿತನಾದ ವ್ಯಕ್ತಿಯು ಸಂಸತ್ತಿಗೆ ಮರಳುವುದು ಹೇಗೆ ಸರಿ ಎಂದು ಪ್ರಶ್ನಿಸಿದೆ. ಈ ವಿಚಾರದಲ್ಲಿ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರ ನೆರವು ಬೇಕು ಎಂದು ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತ ಮತ್ತು ಮನಮೋಹನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ. 9

72 ಗಂಟೆಗಳಲ್ಲಿಯೇ ಸಮಜಾಯಿಷಿ ನೀಡುವಂತೆ ತಾಕೀತು

ಯತ್ನಾಳಗೆ ಮತ್ತೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷದ ಶಿಸ್ತನ್ನು ಉಲ್ಲಂಘಿಸಿದ ಕಾರಣಕ್ಕೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ಸೋಮವಾರ ಷೋಕಾಸ್ ನೋಟಿಸ್ ನೀಡಿದ್ದು, 72 ಗಂಟೆಗಳಲ್ಲಿ ಸಮಜಾಯಿಷಿ ನೀಡುವಂತೆ ತಾಕೀತು ಮಾಡಿದೆ.

ಪಕ್ಷದ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಕುಟುಂಬ ರಾಜಕಾರಣ, ಹೊಂದಾಣಿಕೆ ಹಾಗೂ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿ ಯತ್ನಾಳ ಅವರು ನಿರಂತರ ವಾಗ್ದಾಳಿ ನಡೆಸುತ್ತಾ ಬಂದಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕಿತ್ತೊಗೆಯಬೇಕು ಎಂದು ಯತ್ನಾಳ ಬಣ ಪಟ್ಟು ಹಿಡಿದಿದೆ. ಕಳೆದೊಂದು ವರ್ಷದಲ್ಲಿ ಯತ್ನಾಳ ಅವರಿಗೆ ಶಿಸ್ತು ಸಮಿತಿ ನೀಡುತ್ತಿರುವ ಮೂರನೇ ನೋಟಿಸ್ ಇದು.

5ನೇ ಪುಟ ನೋಡಿ

ಸಂದೀಪ್ ರೆಡ್ಡಿ ನೇಮಕಕ್ಕೆ ತಡೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಂದೀಪ್ ರೆಡ್ಡಿ ನೇಮಕವನ್ನು ತಡೆ ಹಿಡಿಯುವಂತೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸೂಚಿಸಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕೂ ಸಂದೀಪ್ ರೆಡ್ಡಿ ಅವರಿಗೆ ತಡೆ ನೀಡಲಾಗಿದೆ.

‘ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಸೂಚನೆಯ ಮೇರೆಗೆ ಮುಂದಿನ ಮಾಹಿತಿ ಬರುವವರೆಗೂ ಚಿಕ್ಕಬಳ್ಳಾಪುರ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಂದೀಪ್ ರೆಡ್ಡಿ ಅವರ ಆಯ್ಕೆಯನ್ನು ತಡೆ ಹಿಡಿಯಿರಿ’ ಎಂದು ಪಕ್ಷದ ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರವಾಲ್ ಪತ್ರದ ಮೂಲಕ ವಿಜಯೇಂದ್ರಗೆ ತಿಳಿಸಿದ್ದಾರೆ.

5ನೇ ಪುಟ ನೋಡಿ

> ಬಿಜೆಪಿ ಕೇಂದ್ರ ಶಿಸ್ತು ಸಮಿತಿಯಿಂದ ಜಾರಿಯಾಗಿದೆ ಎನ್ನಲಾದ ನೋಟಿಸ್ ಕುರಿತು ಮಾಧ್ಯಮಗಳು ಸಂತಸಗೊಂಡಿರಬೇಕು. ಆದರೆ, ಈವರೆಗೆ ನಾನು ಯಾವುದೇ ಅಧಿಕೃತ ನೋಟಿಸ್ ಸ್ವೀಕರಿಸಿಲ್ಲ. ಒಮ್ಮೆ ನೋಟಿಸ್ ಸ್ವೀಕರಿಸಿದ ಬಳಿಕ ಕರ್ನಾಟಕದಲ್ಲಿ ಪಕ್ಷದ ಸ್ಥಿತಿಗತಿ, ಕಾಂಗ್ರೆಸ್ ಸರ್ಕಾರದ ವೈಫಲ್ಯವನ್ನು ಎತ್ತಿ ಹಿಡಿದು ಪ್ರಬಲ ಹೋರಾಟ ಮಾಡುವಲ್ಲಿ ಹಿನ್ನಡೆ ಮತ್ತು ಹೊಂದಾಣಿಕೆ ರಾಜಕಾರಣದ ಬಗ್ಗೆ ಎಲ್ಲ ಮಾಹಿತಿ ನೀಡುತ್ತೇನೆ
> **ಬಸನಗೌಡ ಪಾಟೀಲ ಯತ್ನಾಳ**, ಶಾಸಕ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಇಂದಿನಿಂದ ಹೂಡಿಕೆ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಬಂಡವಾಳ ಹೂಡಿಕೆಯ ಶಕ್ತಿ ಕೇಂದ್ರವನ್ನಾಗಿ ಕರ್ನಾಟಕವನ್ನು ಅಭಿವೃದ್ಧಿಪಡಿಸಲು ನೆರವಾಗುವ, ನಾವೀನ್ಯ, ಕೈಗಾರಿಕಾ ಪ್ರಗತಿ ಮತ್ತು ಜಾಗತಿಕ ಪಾಲುದಾರಿಕೆಗೆ ರಾಜ್ಯದಲ್ಲಿನ ಸೌಲಭ್ಯಗಳನ್ನು ಇಡೀ ವಿಶ್ವಕ್ಕೆ ಪರಿಚಯಿಸುವ ಆಶಯದ ‘ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ (ಇನ್‌ವೆಸ್ಟ್ ಕರ್ನಾಟಕ-2025)’ ಮಂಗಳವಾರ (ಫೆ.11) ಆರಂಭವಾಗಲಿದೆ.

19 ದೇಶಗಳ ಹೆಸರಾಂತ ಉದ್ಯಮಿಗಳು, ಅವರ ಪ್ರತಿನಿಧಿಗಳು ಭಾಗವಹಿಸುವ ಮೂಲಕ ₹10 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ನಿರೀಕ್ಷೆ ಮೂಡಿಸಿದೆ. ಉದ್ದಿಮೆ, ನೀತಿ ನಿರೂಪಣೆ ಹಾಗೂ ನಾವೀನ್ಯತೆ ಕ್ಷೇತ್ರದ ದಿಗ್ಗಜರ ಸಮಾಗಮಕ್ಕೆ, ಚಿಂತನ ಮಂಥನಕ್ಕೆ ಸಮಾವೇಶ ವೇದಿಕೆ ಒದಗಿಸಲಿದೆ.

ಮುಖ್ಯಾಂಶಗಳು

- 2025-30ನೇ ಸಾಲಿನ ನೂತನ ಕೈಗಾರಿಕಾ ನೀತಿ ಬಿಡುಗಡೆ
- ತ್ವರಿತ ಅನುಮೋದನೆಗಾಗಿ ಏಕಗವಾಕ್ಷಿ ಪೋರ್ಟಲ್ ಆರಂಭ
- 60ಕ್ಕೂ ಹೆಚ್ಚು ಕಂಪನಿಗಳಿಂದ ಅತ್ಯಾಧುನಿಕ ತಂತ್ರಜ್ಞಾನ ಪ್ರದರ್ಶನ

8ನೇ ಪುಟ ನೋಡಿ

ತ್ರಿವೇಣಿ ಸಂಗಮದಲ್ಲಿ ಕುಂಭಮೇಳ ಆರಂಭ

• ಮೋಹನ್ ಕುಮಾರ ಸಿ.

ತಿ.ನರಸೀಪುರ (ಮೈಸೂರು ಜಿಲ್ಲೆ): ‘ದಕ್ಷಿಣ ಪ್ರಯಾಗ’ ಎಂದೇ ಖ್ಯಾತಿ ಪಡೆದ ಇಲ್ಲಿನ ತ್ರಿವೇಣಿ ಸಂಗಮದಲ್ಲಿ ಸೋಮವಾರ ಆರಂಭವಾದ ಕುಂಭಮೇಳಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು.

ಕಾವೇರಿ, ಕಪಿಲಾ ಹಾಗೂ ಗುಪ್ತಗಾಮಿನಿ ಸ್ಫಟಿಕ ನದಿ ಸಂಗಮದಲ್ಲಿ ಕುಟುಂಬ ಸಮೇತರಾಗಿ ಬಂದಿದ್ದ ಸಾವಿರಾರು ಭಕ್ತರು ಪುಣ್ಯಸ್ನಾನ ಮಾಡಿದರು. ಅಗಸ್ತ್ಯೇಶ್ವರ ದೇಗುಲ ಸನ್ನಿಧಿ, ಗುಂಜಾನರಸಿಂಹ ಸ್ವಾಮಿ, ಚೌಡೇಶ್ವರಿ, ಹನುಮಂತೇಶ್ವರ ದೇಗುಲಗಳಲ್ಲಿ ಪೂಜೆ ಸಲ್ಲಿಸಿದರು.

ಇದು ತಿರುಮಕೂಡಲಿನಲ್ಲಿ ನಡೆಯುತ್ತಿರುವ 13ನೇ ಕುಂಭಮೇಳ. ಸೋಮವಾರ ಬೆಳಿಗ್ಗೆ 9ಕ್ಕೆ ಅಗಸ್ತ್ಯೇಶ್ವರ ಸ್ವಾಮಿ ದೇಗುಲದಲ್ಲಿ ಅನುಜ್ಞೆ, ಪುಣ್ಯಾಹ, ಗಣಹೋಮ, ಪೂರ್ಣಾಹುತಿ, ಅಭಿಷೇಕ, ಮಹಾಮಂಗಳಾರತಿ ನೆರವೇರಿದವು.

ಸಂಗಮದ ಮಧ್ಯಭಾಗದಲ್ಲಿರುವ ನಡುಹೊಳೆ ಬಸಪ್ಪನ ಸನ್ನಿಧಿಗೆ ದೋಣಿಗಳಲ್ಲಿ ವಿವಿಧ ಮಠಗಳ ಸ್ವಾಮೀಜಿಗಳನ್ನು ಕರೆತರಲಾಯಿತು.

8ನೇ ಪುಟ ನೋಡಿ

ಮೈಸೂರು ಜಿಲ್ಲೆಯ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಸೋಮವಾರ ಆರಂಭವಾದ 13ನೇ ಕುಂಭಮೇಳದಲ್ಲಿ ಭಕ್ತರು ಪುಣ್ಯಸ್ನಾನ ಮಾಡಿದರು ಚಿತ್ರ: ಅನೂಪ್ ರಾಘ.ಟಿ.



ಬಿಬಿಎಂಪಿ: ಫೆ.13ರಂದು ಐದು ವಲಯಗಳಲ್ಲಿ 379 ಆಸ್ತಿಗಳ ಹರಾಜು

ಆಸ್ತಿ ಹರಾಜಿಗೆ ಬಾರದ ಬಿಡ್ಡುದಾರರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀರ್ಘಕಾಲದಿಂದ ತೆರಿಗೆ ಪಾವತಿಸದ ಆಸ್ತಿಗಳನ್ನು ಹರಾಜು ಮಾಡುವ ಬಿಬಿಎಂಪಿ ಪ್ರಕ್ರಿಯೆಗೆ ಪ್ರಾರಂಭಿಕ ಹಿನ್ನಡೆ ಆಗಿದೆ. ರಾಜರಾಜೇಶ್ವರಿ ನಗರದಲ್ಲಿ ಸೋಮವಾರ ಬಿಬಿಎಂಪಿ ನಡೆಸಿದ ಹರಾಜಿನಲ್ಲಿ ಯಾರೂ ಭಾಗವಹಿಸಲಿಲ್ಲ.

ಆರ್.ಆರ್. ನಗರ ವಲಯ ವ್ಯಾಪ್ತಿಯ ಲಗ್ಗೆರೆ, ಆರ್.ಆರ್. ನಗರ, ಲಕ್ಷ್ಮಿದೇವಿನಗರ, ಯಶವಂತಪುರ ಉಪ ವಿಭಾಗಗಳಲ್ಲಿ ತಲಾ 10, ಕೆಂಗೇರಿ ಹಾಗೂ ಹೇರೋಹಳ್ಳಿ ಉಪ ವಿಭಾಗಗಳಲ್ಲಿ ತಲಾ ಐದು ಆಸ್ತಿಗಳನ್ನು ಫೆಬ್ರುವರಿ 10ರಂದು ಹರಾಜು ಮಾಡಲು ನಿರ್ಧರಿಸಲಾಗಿತ್ತು.

ಬಿಬಿಎಂಪಿ ಸುದ್ದಿ

'ಸೋಮವಾರ ಸುಮಾರು 15 ಆಸ್ತಿಗಳನ್ನು ಹರಾಜು ಮಾಡಲು 'ಮ್ಯಾನ್ಯುಯಲ್' ಆಗಿ ಆಸಕ್ತಿದಾರರನ್ನು ಆಹ್ವಾನಿಸಲಾಗಿತ್ತು. ಆದರೆ, ಸೋಮವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಯಾವುದೇ ಬಿಡ್‌ದಾರರು ಬರಲಿಲ್ಲ' ಎಂದು ಆರ್.ಆರ್. ನಗರ ವಲಯ ಆಯುಕ್ತ ಸತೀಶ್ ತಿಳಿಸಿದರು.

'ವಲಯದಲ್ಲಿ 50 ಆಸ್ತಿಗಳನ್ನು ಹರಾಜು ಮಾಡಲು ಗುರುತಿಸಲಾಗಿದೆ. ಅದರಲ್ಲಿ ಶೇಕಡ 30ರಷ್ಟು ಮಾಲೀಕರು ತೆರಿಗೆ ಪಾವತಿಸಿದ್ದಾರೆ. ಉಳಿದ ಆಸ್ತಿಗಳ ಹರಾಜು ಪ್ರಕ್ರಿಯೆ ಫೆ.13ರಂದು ನಡೆಯಲಿದೆ' ಎಂದು ಮಾಹಿತಿ ನೀಡಿದರು.

'ಹರಾಜು ಪ್ರಕ್ರಿಯೆ ಎಲ್ಲವೂ 'ಮ್ಯಾನ್ಯುಯಲ್' ಆಗಿದೆ. ಹೀಗಾಗಿ, ಆಸಕ್ತರು ಕಡಿಮೆಯಾಗಿರಬಹುದು. ಮುಂದಿನ ದಿನಗಳಲ್ಲಿ ಆನ್‌ಲೈನ್ ಮೂಲಕ ಇ–ಹರಾಜು ನಡೆಸುವ ಯೋಜನೆ ಇದೆ. ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ನಿರಂತರ ಪ್ರಕ್ರಿಯೆಯಾಗಿರುತ್ತದೆ' ಎಂದರು.

ಪಾಲಿಕೆಯ ಎಂಟು ವಲಯಗಳಲ್ಲಿ ದೀರ್ಘಕಾಲದಿಂದ ಆಸ್ತಿ ತೆರಿಗೆ ಪಾವತಿಸದಿರುವ 608 ಆಸ್ತಿಗಳನ್ನು ಹರಾಜು ಹಾಕಲಾಗುತ್ತಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಜನವರಿ 31ರಂದು ಪ್ರಕಟಿಸಿದ್ದರು. ಅದರಂತೆ ವಲಯಗಳಲ್ಲಿ ಪ್ರಕ್ರಿಯೆ ಆರಂಭವಾಗಿದೆ. ಆರ್.ಆರ್. ನಗರ ವಲಯದಲ್ಲಿ ಮೊದಲ ಹರಾಜು ಪ್ರಕ್ರಿಯೆ ಸೋಮವಾರ ನಡೆಯಿತು.

ಪೂರ್ವ ವಲಯದಲ್ಲಿ 118 ಆಸ್ತಿಗಳು, ಪಶ್ಚಿಮ ವಲಯದಲ್ಲಿ 120, ಮಹದೇವಪುರ ವಲಯದಲ್ಲಿ 60, ಯಲಹಂಕ ವಲಯದಲ್ಲಿ 40, ದಾಸರಹಳ್ಳಿಯಲ್ಲಿ 41 ಆಸ್ತಿಗಳ ಹರಾಜು ಪ್ರಕ್ರಿಯೆ ಫೆ.13ರಂದು (ಗುರುವಾರ) ನಡೆಯಲಿದೆ. ದಕ್ಷಿಣ ವಲಯದಲ್ಲಿ 109, ಬೊಮ್ಮನಹಳ್ಳಿ ವಲಯದಲ್ಲಿ 70 ಆಸ್ತಿಗಳ ಹರಾಜು ಪ್ರಕ್ರಿಯೆ ಫೆ.14ರಂದು ನಡೆಯಲಿದೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ₹2 ಲಕ್ಷಕ್ಕಿಂತ ಹೆಚ್ಚು ಆಸ್ತಿ ತೆರಿಗೆ ಬಾಕಿ ಇರಿಸಿಕೊಂಡಿರುವವರಿಂದ ಸುಮಾರು ₹390 ಕೋಟಿ ಪಾವತಿಯಾಗಬೇಕಿದೆ. ಹರಾಜಿನಂತಹ ಬಲವಂತದ ವಸೂಲಾತಿ ಕ್ರಮವನ್ನು ತಪ್ಪಿಸಲು ಆಸ್ತಿ ತೆರಿಗೆದಾರರು ಬಾಕಿ ಪಾವತಿಸಬೇಕು' ಎಂದು ಮುನೀಶ್ ಮೌದ್ಗಿಲ್ ಮನವಿ ಮಾಡಿದ್ದಾರೆ.

'ಕಿತ್ತಾಡುವವರನ್ನು ಅಶೋಕ ಕೂಡಿಸಲಿ'

ಬೆಂಗಳೂರು: 'ಪಕ್ಷದಲ್ಲಿ ನಾವು ನಾವೇ ಕಿತ್ತಾಡೋದು ಸರಿಯಲ್ಲ. ಆದ್ದರಿಂದ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ತಟಸ್ಥವಾಗಿರದೇ ಎಲ್ಲರನ್ನು ಒಟ್ಟಿಗೆ ಕರೆದುಕೊಂಡು ಹೋಗುವ ಜವಾಬ್ದಾರಿ ವಹಿಸಬೇಕು' ಎಂದು ಬಿಜೆಪಿ ಶಾಸಕ ಮುನಿರತ್ನ ಸಲಹೆ ನೀಡಿದರು.

ರಾಜ್ಯಾಧ್ಯಕ್ಷರು ಯಾರು ಆಗಬೇಕು ಎನ್ನುವುದನ್ನು ವರಿಷ್ಠರು ತೀರ್ಮಾನ ಮಾಡುತ್ತಾರೆ ಎಂದರು.

ಶಾಸಕರಿಂದ ಬೆದರಿಕೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮಾಲೀಕತ್ವದ ಕಟ್ಟಡಗಳಲ್ಲಿ ಚುನಾಯಿತ ಪ್ರತಿನಿಧಿಗಳ ಭಾವಚಿತ್ರ ಪ್ರಕಟಿಸುವುದನ್ನು ಆಕ್ಷೇಪಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿರುವ ಅರ್ಜಿದಾರರಿಗೆ ಇಬ್ಬರು ಶಾಸಕರು ನಿರಂತರ ಬೆದರಿಕೆ ಹಾಕುತ್ತಿದ್ದಾರೆ' ಎಂದು ಅರ್ಜಿದಾರರ ಪರ ವಕೀಲರು ಹೈಕೋರ್ಟ್‌ಗೆ ಅರುಹಿದ್ದಾರೆ.

ಈ ಸಂಬಂಧ ಮೂಡಲಪಾಳ್ಯದ ಶಿವಾನಂದ ನಗರದಲ್ಲಿರುವ ಎಚ್.ಎಂ.ಆರ್.ಬಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ಈ ವಿಚಾರವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ರಾಷ್ಟ್ರಪತಿ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ, ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಮತ್ತು ಇಲಾಖಾ ಸಚಿವರ ಚಿತ್ರಗಳನ್ನು ಹೊರತುಪಡಿಸಿ, ಸಂಸದರು, ಶಾಸಕರು ಸೇರಿದಂತೆ ಬೇರೆ ಯಾರ ಚಿತ್ರಗಳನ್ನೂ ಸರ್ಕಾರಿ ಕಟ್ಟಡಗಳಲ್ಲಿ ಪ್ರದರ್ಶಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಆದರೂ, ಪ್ರಿಯಕೃಷ್ಣ ಮತ್ತು ಕೃಷ್ಣಪ್ಪ ಅವರ ಚಿತ್ರಗಳನ್ನು ಬಿಬಿಎಂಪಿ ವ್ಯಾಪ್ತಿಯ ಕಟ್ಟಡಗಳಲ್ಲಿ ಹಾಕಲಾಗಿದೆ. ಅದೂ ಬಿಬಿಎಂಪಿಯ ಹಣದಲ್ಲಿ' ಎಂದು ಆಕ್ಷೇಪಿಸಿದರು.

ಇದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಪರ ವಕೀಲರು, 'ಈ ವಿಚಾರದಲ್ಲಿ ಈಗಾಗಲೇ ಸುತ್ತೋಲೆಯೊಂದನ್ನು ಹೊರಡಿಸಲಾಗಿದೆ. ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಸರ್ಕಾರಿ ಕಟ್ಟಡಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ರಾಜಕೀಯ ನಾಯಕರ ಫೋಟೊಗಳನ್ನು ಹಾಕುವುದು, 'ಕರ್ನಾಟಕ ಸಾರ್ವಜನಿಕ ಸ್ಥಳ ವಿರೂಪ ತಡೆ ಕಾಯ್ದೆ' ವ್ಯಾಪ್ತಿಗೆ ಬರಲಿದೆಯೇ ಎಂಬ ಬಗ್ಗೆ ವಿವರಣೆ ನೀಡಿ ಪ್ರಮಾಣಪತ್ರ ಸಲ್ಲಿಸಿ' ಎಂದು ಬಿಬಿಎಂಪಿಗೆ ನಿರ್ದೇಶಿಸಿ ವಿಚಾರಣೆಯನ್ನು ಮಾರ್ಚ್ 21ಕ್ಕೆ ಮುಂದೂಡಿತು.

ಮೈಕ್ರೊಚಿಪ್ ಪ್ರಸ್ತಾವ: ತಡೆಗೆ ನಕಾರ

ಬೆಂಗಳೂರು: ಬೀದಿ ನಾಯಿಗಳ ದೇಹದಲ್ಲಿ ಮೈಕ್ರೊಚಿಪ್ ರೀಡರ್ ಅಳವಡಿಸುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಪ್ರಸ್ತಾವಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

'ಬೀದಿ ನಾಯಿಗಳಿಗೆ ಮೈಕ್ರೊಚಿಪ್ ಅಳವಡಿಕೆ ಮಾಡುತ್ತಿರುವುದು ಕಾನೂನು ಬಾಹಿರ ಕ್ರಿಯೆ' ಎಂದು ಆಕ್ಷೇಪಿಸಿ, 'ಸೇವ್ ಅವರ್ ಅನಿಮಲ್ ಚಾರಿಟಬಲ್ ಟ್ರಸ್ಟ್' ಪ್ರತಿನಿಧಿ ಸುಜಯಾ ಜಗದೀಶ್ ಮತ್ತು ಕೋರಮಂಗಲದ ನವೀನ್ ಕಾಮತ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 20ಕ್ಕೆ ಮುಂದೂಡಿತು.

ಮಹೀಂದ್ರ ಆ್ಯಂಡ್ ಮಹೀಂದ್ರ ಹೊಸ ವಿದ್ಯುತ್‌ಚಾಲಿತ ವಾಹನಗಳನ್ನು ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಯಿತು. ಈ ವೇಳೆ ಕಂಪನಿಯ ಅಧಿಕಾರಿಗಳಾದ ಆರುಣಾಂಗ್ಷು ರಾಯ್ ಮತ್ತು ಪ್ರತ್ಯೂಷ್ ಬೋಸ್ ಇದ್ದರು

ಮಹೀಂದ್ರ: 14ರಿಂದ ಬುಕಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ತಯಾರಿಕಾ ಕಂಪನಿ ಮಹೀಂದ್ರ ಆ್ಯಂಡ್ ಮಹೀಂದ್ರ ಹೊಸ ವಿದ್ಯುತ್‌ಚಾಲಿತ ವಾಹನಗಳ ಬುಕಿಂಗ್ ಫೆಬ್ರುವರಿ 14ರಿಂದ ಆರಂಭವಾಗಲಿದೆ.

ಎಕ್ಸ್‌ಇವಿ 9ಇ ಮತ್ತು ಬಿಇ6 ಹೊಸ ಮಾದರಿಯ ವಾಹನಗಳಾಗಿವೆ ಎಂದು ಕಂಪನಿ ತಿಳಿಸಿದೆ.

59 ಕೆಡಬ್ಲ್ಯುಎಚ್ ಮತ್ತು 79 ಕೆಡಬ್ಲ್ಯುಎಚ್ ಬ್ಯಾಟರಿಗಳನ್ನು ಹೊಂದಿದೆ. ಬಿಇ6 ಬೆಲೆ ₹18.90 ಲಕ್ಷ ಮತ್ತು ಎಕ್ಸ್‌ಇವಿ 9ಇ ₹21.90 ಲಕ್ಷದಿಂದ ಆರಂಭವಾಗುತ್ತದೆ. ಗ್ರಾಹಕರು ತಮಗೆ ಬೇಕಾದ ಕಾರಿನ ಮಾದರಿಯನ್ನು ಕಂಪನಿಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಮಹೀಂದ್ರದ ಎಲೆಕ್ಟ್ರಿಕ್ ಒರಿಜಿನ್ ಎಸ್‌ಯುವಿಗಳು ಸುರಕ್ಷತಾ ಮಾನದಂಡ, ತಂತ್ರಜ್ಞಾನ, ವೈಶಿಷ್ಟ್ಯವನ್ನು ಒಳಗೊಂಡಿದೆ. ಗ್ರಾಹಕರ ಆದ್ಯತೆಗೆ ತಕ್ಕಂತೆ ವಾಹನಗಳನ್ನು ತಯಾರಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಮಾಯಾದಲ್ಲಿ ಪ್ರೇಮಿಗಳ ದಿನಾಚರಣೆ

ಬೆಂಗಳೂರು: ದಕ್ಷಿಣ ಭಾರತದ ರುಚಿಯಾದ ತಿನಿಸುಗಳನ್ನು ಸವಿಯುವುದರೊಂದಿಗೆ ಈ ಬಾರಿಯ ಪ್ರೇಮಿಗಳ ದಿನ ಆಚರಿಸುವ ಅವಕಾಶವನ್ನು ಮಾಯಾ ಸೌತ್ ಇಂಡಿಯನ್ ರೆಸ್ಟೋರೆಂಟ್ ಕಲ್ಪಿಸಿದೆ.

ರೆಸ್ಟೋರೆಂಟ್‌ನಲ್ಲಿನ ಉತ್ತಮ ವಾತಾವರಣದಲ್ಲಿ ತಮ್ಮ ಪ್ರೀತಿ ಪಾತ್ರರ ಜತೆ ಕುಳಿತು ವಿವಿಧ ಖಾದ್ಯ ಸವಿಯಬಹುದು. ಕುಟುಂಬದವರು, ಸ್ನೇಹಿತರು ಹಾಗೂ ಜೋಡಿಗಳು ಸಹ ಭೇಟಿ ನೀಡಬಹುದು.

ಮಾಯಾ ರೆಸ್ಟೋರೆಂಟ್ ನಿರ್ದೇಶಕಿ ಉಜ್ಮಾ ಇರ್ಫಾನ್ ಮಾತನಾಡಿ, 'ಶುಚಿ–ರುಚಿಯಾದ ಹಾಗೂ ಹೊಸತನದಿಂದ ಕೂಡಿದ ತಿನಿಸುಗಳನ್ನು ಸವಿಯುವ ಮೂಲಕ ಪ್ರೇಮಿಗಳ ದಿನ ಆಚರಿಸಬಹುದು' ಎಂದು ಹೇಳಿದರು.

ಹೆಬ್ಬಾಳ: ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿರುವ ಕಾರಣ, ಹೆಬ್ಬಾಳದ ಸಿ–4 ಉಪ ವಿಭಾಗ ವ್ಯಾಪ್ತಿ ಪ್ರದೇಶಗಳಲ್ಲಿ ಮಂಗಳವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಗಂಗಾನಗರ, ಲಕ್ಷ್ಮಯ್ಯ ಬ್ಲಾಕ್, ವೀವರ್ ಕಾಲೊನಿ, ಸಿ.ಬಿ.ಐ ವಸತಿಗೃಹಗಳು, ಆರ್.ಬಿ.ಐ ಕಾಲೊನಿ, ಸಿ.ಪಿ.ಯು ಬ್ಲಾಕ್, ಮುನಿರಾಮಯ್ಯ ಬ್ಲಾಕ್, ಯು.ಎ.ಎಸ್ ಕ್ಯಾಂಪಸ್, ದಿಣ್ಣೂರು ಮುಖ್ಯ ರಸ್ತೆ, ಆರ್.ಟಿ. ನಗರ ಪಂಜಾಬ್ ನ್ಯಾಷನಲ್ ಬ್ಯಾಂಕ್, ಎಚ್.ಎಂ.ಟಿ. ಬ್ಲಾಕ್, ಚಾಮುಂಡಿನಗರ, ಮಾಜಿ ಸೈನಿಕರ ಕಾಲೊನಿ, ಆರ್.ಟಿ. ನಗರ ಪೊಲೀಸ್ ಠಾಣಾ ಪ್ರದೇಶ, ಅಶ್ವತ್ಥ ನಗರ, ಡಾಲರ್ಸ್ ಕಾಲೊನಿ, ಎಂಎಲ್‌ಎ ಲೇಔಟ್, ರತನ್ ಅಪಾರ್ಟ್‌ಮೆಂಟ್, ಗಾಯತ್ರಿ ಅಪಾರ್ಟ್‌ಮೆಂಟ್, ಫುಡ್‌ವರ್ಲ್ಡ್ ಆರ್.ಟಿ ನಗರ, ನೃಪತುಂಗ ಬಡಾವಣೆ, ಕೃಷ್ಣಪ್ಪ ಬ್ಲಾಕ್, ಸಿಬಿಐ ಮುಖ್ಯರಸ್ತೆ, ಶಾಂತಿಸಾಗರ ಮುಖ್ಯ ರಸ್ತೆ, ಆರ್.ಟಿ.ನಗರ, ವೇಣುಗೋಪಾಲ ಲೇಔಟ್, ಜಡ್ಜಸ್ ಕಾಲೊನಿ, 80 ಅಡಿ ರಸ್ತೆ, ವಿಶ್ವೇಶ್ವರ ಬ್ಲಾಕ್, ಕುವೆಂಪು ಲೇಔಟ್, ಗಂಗಾನಗರ ಮಾರುಕಟ್ಟೆ, ಚೋಳನಾಯಕನಹಳ್ಳಿ, ಎಜಿಎಸ್ ಕಾಲೊನಿ, ಎಸ್‌ಬಿಎಂ ಕಾಲೊನಿ, ಪೊಲೀಸ್ ವಸತಿ ಗೃಹಗಳು, ಕೆಂಪಣ್ಣ ಲೇಔಟ್, ಗುಡ್ಡದಹಳ್ಳಿ ರಸ್ತೆ, ಸುಬ್ರಮಣಿ ಕಾಲೊನಿ, ಗೆದ್ದಲಹಳ್ಳಿ, ಭೂಪಸಂದ್ರ, ಸೆಂಟ್ರಲ್ ಎಕ್ಸೈಸ್ ಲೇಔಟ್, 60 ಅಡಿ ರಸ್ತೆ, ಕಲ್ಪನಾ ಚಾವ್ಲಾ ರಸ್ತೆ, ಅಮರಜ್ಯೋತಿ ಲೇ ಔಟ್ ಸುತ್ತಮುತ್ತಲಿನ ಪ್ರದೇಶಗಳು.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಸೋಲದೇವನಹಳ್ಳಿ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಕಾರಣ, ಜಾಲಹಳ್ಳಿ ವಿಭಾಗದ ಎನ್-9 ಉಪ ವಿಭಾಗ ವ್ಯಾಪ್ತಿಯ ಪ್ರದೇಶಗಳಲ್ಲಿ ಮಂಗಳವಾರ ಮತ್ತು ಬುಧವಾರದಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ತರಬನಹಳ್ಳಿ, ಹುರುಳಿಚಿಕ್ಕನಹಳ್ಳಿ, ಟಿ.ಬಿ. ಕ್ರಾಸ್, ಹೆಸರಘಟ್ಟ, ಬಿಳಿಜಾಜಿ, ದ್ವಾರಕಾನಗರ, ಚಿಕ್ಕಬಾಣಾವರ, ಮಾರುತಿ ನಗರ, ಗಣಪತಿ ನಗರ, ಶಾಂತಿನಗರ, ಬ್ರದರ್ಸ್ ಕಾಲೊನಿ, ಕೃಷ್ಣಾ ಕಾಲೇಜು ರಸ್ತೆ, ರಾಘವೇಂದ್ರ ಲೇಔಟ್, ಸಾಸುವೆಘಟ್ಟ, ಬಜ್ಜಪ್ಪ ಲೇಔಟ್, ಶಿವಕುಮಾರ ಸ್ವಾಮೀಜಿ ಲೇಔಟ್, ಗುಡ್ಡದಹಳ್ಳಿ, ದಾಸೇನಹಳ್ಳಿ, ತೋಟಗೆರೆ ಬಸವಣ್ಣ ದೇವಸ್ಥಾನ, ಹೊಸಹಳ್ಳಿ ಪಾಳ್ಯ, ಸಿಡಿಪಿಒ, ಡ್ಯಾನಿಶ್ ಫಾರ್ಮ್, ಕೆಎಂಎಫ್ ಪಶುಸಂಗೋಪನೆ ಕಚೇರಿ, ಗಾಣಿಗರಹಳ್ಳಿ, ಕೆ.ಟಿ.ಪುರ, ಐಐಎಚ್‌ಆರ್, ಮಠಕೂರ್, ಐವರಕಂಡಪುರ, ಸೀತಕೆಂಪನಹಳ್ಳಿ, ಲಿಂಗನಹಳ್ಳಿ, ಮಾದಪ್ಪನಹಳ್ಳಿ, ಕಾಳೇನಹಳ್ಳಿ ಶಿವಕೋಟೆ, ಮಾವಳ್ಳಿಪುರ, ಕೊಂಡಶೆಟ್ಟಿಹಳ್ಳಿ, ಮಧುಗಿರಿಹಳ್ಳಿ, ಕುರುಬರಹಳ್ಳಿ, ಪಾಕೇಗೌಡನಪಾಳ್ಯ, ರಾಘವೇಂದ್ರ ಧಾಮ, ಬೈಲಕೆರೆ, ಆಚಾರ್ಯ ಕಾಲೇಜು ಮುಖ್ಯ ರಸ್ತೆ, ಅಚ್ಯುತ ನಗರ, ಸೋಲದೇವನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳು.

ನಗರದಲ್ಲಿ ಇಂದು

'ಡಾ. ಬಂಜಗೆರೆ ಜಯಪ್ರಕಾಶ್ ಅವರ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೊಡುಗೆ' ರಾಜ್ಯಮಟ್ಟದ ವಿಚಾರಸಂಕಿರಣ ಹಾಗೂ ಅಭಿನಂದನಾ ಸಮಾರಂಭ: ಬೆಳಿಗ್ಗೆ 10.30ಕ್ಕೆ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಕೆ. ಮರುಳಸಿದ್ಧಪ್ಪ, ಅತಿಥಿಗಳು: ಎಲ್.ಎನ್. ಮುಕುಂದರಾಜ್, ಪುರುಷೋತ್ತಮ ಬಿಳಿಮಲೆ, ಬೆಳಿಗ್ಗೆ 11.30ಕ್ಕೆ 'ಬಂಜಗೆರೆಯವರ ಬದುಕು–ಒಡನಾಟ': ಮಂಜುನಾಥ ಅದ್ದೆ, ಸ್ವಾಮಿ ಆನಂದ್ ಆರ್., 'ಅನುವಾದಿತ ವೈಚಾರಿಕ ಕೃತಿಗಳು': ತಾರಿಣಿ ಶುಭದಾಯಿನಿ, 'ಅನುವಾದಿತ ಕಾದಂಬರಿಗಳು': ವಿ.ಎಲ್. ನರಸಿಂಹಮೂರ್ತಿ, 'ಸಾಹಿತ್ಯ ವಿಮರ್ಶೆ': ಮಹೇಶ್ ಹರವೆ, ಅಧ್ಯಕ್ಷತೆ: ಎಚ್.ಎಸ್. ರಾಘವೇಂದ್ರರಾವ್, ಮಧ್ಯಾಹ್ನ 2ರಿಂದ 'ಬಂಜಗೆರೆಯವರ ಸಂಶೋಧನೆ': ರಾಜಪ್ಪ ದಳವಾಯಿ, 'ಸೃಜನಶೀಲ ಕಾವ್ಯ': ಕೆ.ವೈ. ನಾರಾಯಣಸ್ವಾಮಿ, 'ಸಂಸ್ಕೃತಿ ಚಿಂತನೆ': ರವಿಕುಮಾರ್ ಬಾಗಿ, 'ಅನುವಾದಿತ ಕಾವ್ಯ': ಡಿ.ಆರ್. ದೇವರಾಜ್, ಅಧ್ಯಕ್ಷತೆ: ಅಗ್ರಹಾರ ಕೃಷ್ಣಮೂರ್ತಿ, ಸಂಜೆ 4ಕ್ಕೆ ಲೇಖಕರೊಂದಿಗೆ ಸಂವಾದ: ಭಾಗವಹಿಸುವವರು: ಪ್ರಕಾಶ್ ಮಂಟೇದ, ಹುಲಿಕುಂಟೆ ಮೂರ್ತಿ, ಟಿ.ಎಚ್. ಲವಕುಮಾರ್, ರೇಣುಕಾರಾಧ್ಯ, ಪವಿತ್ರಾ ಎಸ್., ಮಂಜುನಾಥ್ ಎಸ್., ಕಿರಣ್ ಕುಮಾರಿ, ಕರಿಸ್ವಾಮಿ, ಸಮಾರೋಪ ಸಮಾರಂಭ ಸಂಜೆ 5.30ಕ್ಕೆ ಬಂಜಗೆರೆ ಜಯಪ್ರಕಾಶ್ ದಂಪತಿಗೆ ಅಭಿನಂದನೆ, ಸಮಾರೋಪ ನುಡಿ: ಸಿದ್ಧನಗೌಡ ಪಾಟೀಲ, ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿ: ಕೆ.ಎ. ದಯಾನಂದ, ಆಯೋಜನೆ: ಪದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ



ಬಂಜಗೆರೆ ಜಯಪ್ರಕಾಶ್

ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವ: ಬೆಳಿಗ್ಗೆ 10.30ಕ್ಕೆ ಅಭಿಷೇಕ, ಉತ್ಸವ, ಸಂಜೆ 6.30ಕ್ಕೆ ರಾವಣೇಶ್ವರ ವಾಹನೋತ್ಸವ, ಆಯೋಜನೆ ಮತ್ತು ಸ್ಥಳ: ಗವಿಗಂಗಾಧರೇಶ್ವರ ದೇವಸ್ಥಾನ, ಗವಿಪುರ, ಗುಟ್ಟಹಳ್ಳಿ, ಹನುಮಂತನಗರ

'ಎಸ್.ಪಿ. ವರದರಾಜು' ಪ್ರಶಸ್ತಿ ಪ್ರದಾನ: ಉಮಾಶ್ರೀ, ಪ್ರಶಸ್ತಿ ಸ್ವೀಕರಿಸುವವರು: ಶಾಂತಾಬಾಯಿ ಬೀಳಗಿ, 'ಪ್ರಗತಿ' ಅಶ್ವತ್ಥನಾರಾಯಣ, ಅತಿಥಿ: ಪಿ. ಶೇಷಾದ್ರಿ, ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಆಯೋಜನೆ: ಎಸ್.ಪಿ. ವರದರಾಜು ಆತ್ಮೀಯ ಬಳಗ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಇವೋಕಿಂಗ್ ದಿ ಅನ್‌ಸೇಯಬಲ್: ಭಾಗವಹಿಸುವವರು: ಜಯಂತ ಕಾಯ್ಕಿಣಿ, ಪ್ರತಿಭಾ ನಂದಕುಮಾರ್, ಸ್ಥಳ: ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ, ಕಸ್ತೂರ ಬಾ ರಸ್ತೆ, ಸಂಜೆ 5.30

60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ವೀಣೆ: ಸುಮಾ ಸುಧೀಂದ್ರ, ಪಿಟೀಲು: ಪ್ರದೇಶಾಚಾರ್, ಮೃದಂಗ: ಅನಿರುದ್ಧ ಭಟ್, ಘಟ: ಬಿ.ಆರ್. ರವಿಕುಮಾರ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6ರಿಂದ

ಸುಧಾ ಓದಿರಿ...

PUBLIC NOTICE

Publics are hereby informed that my client M/s DS-Max Properties Pvt. Ltd., Rep; by its Authorized Signatory Mr. Shivashankar Chikkeri, having its office at No. 1854, 17th Main, 30th 'B' Cross, HBR Layout, 1st Stage, 5th Block, Bangalore- 43 and intend to enter into Absolute Sale Deed with Owner's Sri.D.K.Krishnamurthy s/o Late Dyavarappa is the absolute owner of Agricultural land property bearing old Sy.No. 117/1, New Sy. No. 117/2, which measuring 10 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No. 116, West by: Land of Sy.No. 117/1, North by: Land of Sy.No. 118/1,2,3 & 118/4, South by: Land of Sy.No. 117/3 and referred to as schedule property of Item.No.I.

WHEREAS Sri.D.K.Krishnamurthy s/o Late Dyavarappa is the absolute owner Agricultural land property bearing old Sy.No. 117/2, New Sy. No. 117/6, which measuring 08 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No.117/2, West by: Land of Sy.No. 117/7, North by: Land of Sy.No. 118 Hissa, South by: Land of Sy.No. 117/3 and referred to as schedule property of Item.No.II.

WHEREAS Sri.D.K.Krishnamurthy s/o Late Dyavarappa is the absolute owner Agricultural land property bearing old Sy.No. 117/3, New Sy. No. 117/7, which measuring 23 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No.117/8, West by: Land of Sy.No. 117/6, North by: Land of Sy.No. 118 Hissa, South by: Land of Sy.No. 117/3 and referred to as schedule property of Item.No.III.

WHEREAS Sri.D.K.Krishnamurthy s/o Late Dyavarappa is the absolute owner Agricultural land property bearing old Sy.No. 117/4, New Sy. No. 117/8, which measuring 21 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No.117/9, West by: Land of Sy.No. 117/7, North by: Land of Sy.No. 118 Hissa, South by: Land of Sy.No. 117/3 and referred to as schedule property of Item.No.IV.

WHEREAS Sri.D.K.Krishnamurthy s/o Late Dyavarappa is the absolute owner Agricultural land property bearing old Sy.No. 117/5, New Sy. No. 117/9, which measuring 21 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No.116, West by: Land of Sy.No. 117/8, North by: Land of Sy.No. 118 Hissa, South by: Land of Sy.No. 117/3, and referred to as schedule property of Item.No.V

WHEREAS Sri.Uday George Zakaria s/o Late Zakaria is the absolute owner Agricultural land property bearing Sy. No. 118/3, which measuring 16 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No. 118/2, West by: Land of Sy.No. 118/4, North by: Land of Sy.No. 118/6, South by: Land of Sy.No. 117/2 and referred to as schedule property of Item.No.VI.

WHEREAS Sri.Uday George Zakaria s/o Late Zakaria is the absolute owner Agricultural land property bearing Sy. No. 118/4, which measuring 18 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No. 118/3, West by: Land of Sy.No. 118/5, North by: Land of Sy.No. 118/6, South by: Land of Sy.No. 117/2 and referred to as schedule property of Item.No.VII.

WHEREAS Sri.Uday George Zakaria s/o Late Zakaria is the absolute owner Agricultural land property bearing Sy. No. 118/5, which measuring 3 acre 21 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No. 118/3,4,6, West by: Land of Sy.No. 26/1,2,3,4,5, North by: Land of Sy.No. 119/1, South by: Land of Sy.No. 117/1 & 117/5 and referred to as schedule property of Item.No.VIII.

WHEREAS Sri.Uday George Zakaria s/o Late Zakaria is the absolute owner Agricultural land property bearing Sy. No. 118/6, which measuring 37 guntas, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No. 118/2, West by: Land of Sy.No. 118/5, North by: Land of Sy.No. 119/1, South by: Land of Sy.No. 118/3 & 4 and referred to as schedule property of Item.No.IX.

WHEREAS Sri.Uday George Zakaria s/o Late Zakaria is the absolute owner Agricultural land property bearing Sy. No. 119/1, which measuring 2 acre 04 guntas and exclusive of 03 guntas 'B' Kharab, situated at Kodihalli Village, Madure Hobli, Doddaballapura Taluk, Bangalore Rural District and bounded on East by: Land of Sy.No. 125/2 & 3, West by: Land of Sy.No. 25/9, North by: Land of Sy.No. 119 Hissa, South by: Land of Sy.No. 118 Hissa and referred to as schedule property of Item.No.X.

which total measuring of Item.No. I to X = 9 Acre 19 Guntas and exclusive of 03 guntas 'B' Kharab and commonly bounded on East by: Road & Land of Sy.No. 116, West by: Private Lands, North by: Land of Sy.No. 119/2,3,4,5,6,7,8, South by: Private Lands and referred to as "composite schedule property".

Any person or Any Authority or Any promoters having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within 10 days from the date of this notice, if any objections fails to comply, my client shall take steps for entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಲ್ಲಿ ಪಾರ್ಸಲ್ ಸ್ಥಳ, ಪಾರ್ಕಿಂಗ್ & ಜಾಹೀರಾತುಮತ್ತು ವಿವಿಧ ಗುತ್ತಿಗೆಗಳಿಗಾಗಿ ಇ–ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ–ಹರಾಜಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ:

1. ರೈಲ್ ಕೋಚ್ ರೆಸ್ಟೋರೆಂಟ್: 12.02.2025, 24.02.2025
2. ಕ್ಯಾಟರಿಂಗ್ & ಎಂಪಿಎಸ್ ಅಂಗಡಿಗಳು: 12.02.2025, 13.02.2025, 17.02.2025, 19.02.2025
3. ಪಾರ್ಕಿಂಗ್ & ಪಾವತಿ ಮತ್ತು ಬಳಕೆ: 12.02.2025, 13.02.2025,
4. ಪಾರ್ಸಲ್: 12.02.2025, 28.02.2025
5. ಜಾಹೀರಾತು, ಎಟಿಎಂ & ವಿವಿಧ: 17.02.2025, 18.02.2025, 19.02.2025, 20.02.2025, 21.02.2025, 24.02.2025, 25.02.2025, 26.02.2025, 27.02.2025, 28.02.2025

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು
PUB/773/AAMO/PRB/SWR/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: SG-SWR-PROJ-UBL-PSS ದಿನಾಂಕ: 04.02.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ, ಸಿಎಸ್‌ಟಿಇ/ಯೋಜನೆ/ಹುಬ್ಬಳ್ಳಿ ಮತ್ತು ಸಿಎಸ್‌ಟಿಇ/ಯೋಜನೆ/ಬೆಂಗಳೂರು ವ್ಯಾಪ್ತಿಯಲ್ಲಿ ವಿವಿಧ ನಿರ್ಮಾಣ ಸ್ಥಳಗಳಲ್ಲಿ /ವಿಭಾಗಗಳಲ್ಲಿ ಯೋಜನಾ ಮೇಲ್ವಿಚಾರಣಾ ಸೇವೆಗಳನ್ನು (ಪಿಎಸ್‌ಎಸ್) ಒದಗಿಸುವ ಸಲುವಾಗಿ ಪ್ರಸ್ತಾವನೆಗಾಗಿ ಬೇಡಿಕೆ (ಆರ್‌ಎಫ್‌ಪಿ)	ರೂ. 13,80,09,261.96

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.02.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಯೋಜನೆ/ಹುಬ್ಬಳ್ಳಿ
PUB/774/AAF/PRB/SWR/2024-25
South Western Railway - SWR | @SWRRLY | SWRRLY

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರು ಸೂಚನೆ ಸಂ.: Y/E.29/2024-25/85 ದಿನಾಂಕ: 31.01.2025

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ – ಚಿಕ್ಕಜಾಜೂರು ಜಂ. (ಯುಬಿಎಲ್–ಜೆಆರ್‌ಯು) ದ್ವಿಪಥೀಕರಣ ಯೋಜನೆಯಡಿಯಲ್ಲಿ ಪ್ರಸ್ತಾವಿತ ಕಚೇರಿ ಮತ್ತು ಸರ್ವೀಸ್ ಬಿಲ್ಡಿಂಗ್‌ಗಳ ನಿರ್ಮಾಣ. (ಉಪ ಕಾಮಗಾರಿ–1: ರಾಣೆಬೆನ್ನೂರಿನಲ್ಲಿ ವರಿಷ್ಠ ಸೆಕ್ಷನಲ್ ಇಂಜಿನಿಯರ್/ಪಿವೇ ಅವರ ಕಚೇರಿ ಮತ್ತು ಉಗ್ರಾಣ ನಿರ್ಮಾಣದ ಜೊತೆಗೆ ಕಾಂಪೌಂಡ್ ಗೋಡೆಯ ವ್ಯವಸ್ಥಾ ಕಾಮಗಾರಿಗಳು)	ರೂ. 7,51,482/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.02.2025, 11:00 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: Y/E.29/2024-25/86 ದಿನಾಂಕ: 31.01.2025

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು ವಿಭಾಗದಲ್ಲಿ ಓಹೆಚ್ ಎಸಿಎಸ್‌ಆರ್ ಕಂಡಕ್ಟರ್‌ಗಳನ್ನು ಯುಜಿ ಕೇಬಲ್‌ಗಳಿಂದ ಬದಲಾವಣೆ ಮಾಡುವುದು (ಹಂತ–3).	ರೂ. 1,26,05,936/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.02.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಮೈಸೂರು
PUB/767/AAMO/PRB/SWR/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಓಪನ್ ಟೆಂಡರು ಸೂಚನೆ ಸಂ.: BE-29-2024-25-OT-29

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಛಾವಣಿಗಳ ಮೇಲಿನ ಸೌರೀಕರಣದ ಅಡಿಯಲ್ಲಿ ಸಿಬ್ಬಂದಿ ವಸತಿ ಗೃಹಗಳು ಮತ್ತು ಎಲ್‌ಸಿ ಗೇಟುಗಳಿಗೆ ಸೋಲಾರ್ ರೂಫ್ ಟಾಪ್ ಪವರ್ ಸ್ಥಾವರಗಳ ವ್ಯವಸ್ಥೆ.	ರೂ. 21,97,57,278

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.02.2025, 15:00 ಗಂಟೆಯವರೆಗೆ

ಓಪನ್ ಟೆಂಡರು ಸೂಚನೆ ಸಂ.: BE-29-2024-25-OT-28

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಛಾವಣಿಗಳ ಮೇಲಿನ ಸೌರೀಕರಣದ ಅಡಿಯಲ್ಲಿ ನಿಲ್ದಾಣಗಳು ಮತ್ತು ಸರ್ವೀಸ್ ಬಿಲ್ಡಿಂಗ್‌ಗಳಿಗೆ ಸೋಲಾರ್ ರೂಫ್ ಟಾಪ್ ಪವರ್ ಸ್ಥಾವರಗಳ ವ್ಯವಸ್ಥೆ.	ರೂ. 34,90,34,504

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.02.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು
PUB/766/AAMO/PRB/SWR/2024-25
South Western Railway - SWR | SWRRLY | SWRRLY

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಬೆಂ.ಮ.ಪ್ರಪ್ರಾ. ಎಲ್.ಆರ್.ಡಿ.ಇ. ಕಟ್ಟಡ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052.

ಸಂಖ್ಯೆ: ಎಸ್‌ಟಿಆರ್‌ಆರ್‌ಪಿಎ/ಲೆ.ಶಾ/11/2024–25 ದಿನಾಂಕ: 07–02–2025

ಪ್ರಕಟಣೆ

ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ (STRRPA) ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ–ಹರಾಜು ಪ್ರಕಟಣೆಯನ್ನು ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: **www.kppp.karnataka.gov.in** ಗೆ ಭೇಟಿ ನೀಡಬಹುದಾಗಿದೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRRPA) ಯೋಜನಾ ಪ್ರಾಧಿಕಾರ, ಬೆಂಗಳೂರು.
ವಾಸಾಸಂಇ/ವಾ.ಪ್ರ/4954/ಅಡ್ವರ್ಟೋರ್/2024–25

ಕರ್ನಾಟಕ ಸರ್ಕಾರ
ಅಪರ ನಿರ್ದೇಶಕರು, ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆ
ವಿಶ್ವೇಶ್ವರಯ್ಯ ಗೋಪುರ, ಪೋಡಿಯಂ ಬ್ಲಾಕ್, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–01

ಸಂ.ಖ.ಅ.ನಿ/ತಾ.ಪಿಂ.ಪಾ&ನಿ/ಆಶಾ/29/2024–25 ದಿನಾಂಕ: 10.02.2025

ಅಲ್ಪಾವಧಿ ಇ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999–2000ದ ನಿಯಮದಂತೆ 2025–26ರ ಸಾಲಿಗೆ ಹೊರಗುತ್ತಿಗೆ ಆಧಾರದಲ್ಲಿ ಬಾಡಿಗೆ ಮೇಲೆ ಈ ಕೆಳಕಂಡ ಸೇವೆಯನ್ನು ನೀಡಲು ಅರ್ಹತೆ/ಮಾನ್ಯತೆ ಪಡೆದಿರುವ ಬಿಡ್ಡುದಾರರಿಂದ/ಸಂಸ್ಥೆಗಳಿಂದ ದ್ವಿ–ಲಕೋಟೆಯ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

◆ ವಾಹನ ಚಾಲಕರನ್ನು ಒಳಗೊಂಡ ಹವಾ ನಿಯಂತ್ರಿತ ಕಾರು.

ನಿಬಂಧನೆಗಳು ಹಾಗೂ ಷರತ್ತುಗಳಿಗೆ ಗಣಕ ಜಾಲತಾಣ https://www.kppp.karnataka.gov.in website ನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 080–22132031

ಸಹಿ/– ಉಪ ನಿರ್ದೇಶಕರು,
ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆ
ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/4935/ಆಕಾರ್/2024–25

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,
ಕೋಲಾರ–563101. e-mail: eepwdkolar07@gmail.com, website: www.kpwd.gov.in, e-portal : http://kppp.karnataka.gov.in
ದೂರವಾಣಿ ಸಂಖ್ಯೆ: 08152-222022

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು –1
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–39/2024–25 ದಿನಾಂಕ: 07.02.2025

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 3054–03–337–0–05–200–ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ಅಡಿಯಲ್ಲಿ ರಸ್ತೆ ಸಂಚಾರ ಗಣತಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳಿಗೆ **ಟೆಂಡರ್‌ಗಿಟ್ಟ ಮೊತ್ತ: ಕನಿಷ್ಠ ರೂ. 3.00 ಲಕ್ಷಗಳು ಗರಿಷ್ಟ: ರೂ. 12.00 ಲಕ್ಷಗಳು ಇ.ಎಂ.ಡಿ ಮೊತ್ತ : ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ ಕಾಲಾವಧಿ :07 ದಿನಗಳು ನಿರ್ವಹಿಸಲು ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ.** ಗುತ್ತಿಗೆದಾರರು ಕೆಡಬ್ಲ್ಯು– 1 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka. gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 15.2.2025 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 16.2.2025 ರಂದು ಸಂಜೆ 16.30 ಗಂಟೆಯ ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು.** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)**ನಲ್ಲಿ ಸಂಪರ್ಕಿಸ ಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿ ಪೋರ್ಟಲ್ ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:455/ಕೆಎಸ್‌ಎಂಸಿಎ/2024–25

ಸುಶ್ರುತ ವಿಶ್ರಾಂತಿ ಧಾಮ ಲಿಮಿಟೆಡ್

ಸುಶ್ರುತ ವಿಶ್ರಾಂತಿ ಧಾಮ ಲಿಮಿಟೆಡ್ ತನ್ನ ಸದಸ್ಯರ ವಿಶೇಷ ಸಭೆಯನ್ನು 02/03/2025 ರಂದು 10:30 AM IST ಕ್ಕೆ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ನಡೆಸುತ್ತಿದೆ. ಈ ಸಭೆಯು ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳು ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ. 14/2020, 17/2020, 20/2020 ಮತ್ತು MCA ಮತ್ತು ಭಾರತ ಸರ್ಕಾರದಿಂದ ಇತರ ಸಂಬಂಧಿತ ಸುತ್ತೋಲೆಗಳಿಗೆ ಅನುಗುಣವಾಗಿದೆ.

ಈ ಸೂಚನೆಯನ್ನು ಕಳಿಸಿದ ನಂತರ ಸಂಸ್ಥೆಯ ಷೇರುಗಳನ್ನು ಪಡೆದಿರುವ ಮತ್ತು ಸಂಸ್ಥೆಯ ಸದಸ್ಯರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಕಂಪನಿಯ ಕಾರ್ಯ ದರ್ಶಿಯನ್ನು cs@suvidha.co.in ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಸದಸ್ಯರು ಇ–ವೋಟಿಂಗ್ ಮೂಲಕ ತಮ್ಮ ಮತ ಚಲಾಯಿಸಬಹುದು. ಇ–ವೋಟಿಂಗ್ **26/02/2025 ರಂದು 09:00 AM IST ಕ್ಕೆ ಪ್ರಾರಂಭವಾಗುತ್ತದೆ ಮತ್ತು 01/03/2025 ರಂದು 05:00 PM IST** ಕ್ಕೆ ಕೊನೆಗೊಳ್ಳುತ್ತದೆ. ಮತ್ತು ಸದಸ್ಯರ ವಿಶೇಷ ಸಭೆ ಕೊನೆಗೊಳ್ಳುವವರೆಗು ಇ–ವೋಟಿಂಗ್ ಚಾಲ್ತಿಯಲ್ಲಿರುತ್ತದೆ. 21–02–2025 ರಂದು ಸಂಸ್ಥೆಯ ಷೇರುದಾರರಾಗಿರುವವರು ಮಾತ್ರ ಮತದಾನದ ಹಕ್ಕುಗಳನ್ನು ಚಲಾಯಿಸಲು ಅರ್ಹರಾಗಿರುತ್ತಾರೆ.

ಮಂಡಳಿಯ ಸದಸ್ಯರ ಪರವಾಗಿ,
ಡಾ.ನೀಲಿಮಾ,
ನಿರ್ದೇಶಕರು,
ಸುಶ್ರುತ ವಿಶ್ರಾಂತಿ ಧಾಮ ಲಿಮಿಟೆಡ್
DIN: 01553825
ದಿನಾಂಕ:10.02.2025
ಸ್ಥಳ: ಬೆಂಗಳೂರು

ನ್ಯಾಷನಲ್ ಲ್ಯಾಂಡ್ ಮಾನೆಟೈಜೇಶನ್ ಕಾರ್ಪೋರೇಶನ್
(100% ಭಾರತ ಸರ್ಕಾರದ ಮಾಲೀಕತ್ವ ಅಡಿಯಲ್ಲಿನ ಕಂಪನಿ)

ಎಂಪಾನೆಲ್‌ಮೆಂಟ್‌ಗಾಗಿ ಮನವಿ (ಆರ್‌ಎಫ್‌ಇ)

ಸಿಪಿಎಸ್‌ಇಎಸ್/ಪಿಎಸ್‌ಯುಎಸ್ ಮತ್ತು ಇನ್ನಿತರ ಸರ್ಕಾರಿ ಏಜನ್ಸಿಗಳ ವಿವಿಧ ನಾನ್–ಕೋರ್ ಸ್ವತ್ತುಗಳಿಗಾಗಿ ಪ್ರಾಪರ್ಟಿ ಕನ್ಸಲ್ಟಂಟ್ ಸಂಸ್ಥೆಗಳ ಎಂಪಾನೆಲ್‌ಮೆಂಟ್‌ಗಾಗಿ ಮನವಿ

ನ್ಯಾಷನಲ್ ಲ್ಯಾಂಡ್ ಮಾನೆಟೈಜೇಶನ್ ಕಾರ್ಪೋರೇಶನ್ (ಎನ್‌ಎಲ್‌ಎಂಸಿ) ಸಂಸ್ಥೆಯು, ಸಂಪೂರ್ಣ ಭಾರತ ಸರ್ಕಾರದ ಮಾಲೀಕತ್ವದ ಅಡಿಯಲ್ಲಿನ ಕಂಪನಿಯಾಗಿದ್ದು, ಸಿಪಿಎಸ್‌ಇ'ಗಳ ಮತ್ತು ಇನ್ನಿತರ ಸರ್ಕಾರಿ ಏಜನ್ಸಿಗಳ ನಾನ್–ಕೋರ್ ಸ್ವತ್ತುಗಳ ಮಾನೆಟೈಜೇಶನ್‌ಗಾಗಿ ಸ್ಥಾಪನೆಗೊಂಡಿರುತ್ತದೆ.
ಸಂಪರ್ಕಿಸಬೇಕಾದ ವ್ಯಕ್ತಿಯ ವಿವರಗಳು ಮತ್ತು ಕಾರ್ಯಸೂಚಿ ದಿನಾಂಕಗಳು ಕೆಳಗಿನಂತಿರುತ್ತವೆ:

ಶುಲ್ಕ	ಕೊನೆಯ ದಿನಾಂಕ ಮತ್ತು ಸಮಯ	ಸಂಪರ್ಕಿಸಬೇಕಾದ ವ್ಯಕ್ತಿ
ಭದ್ರತಾ ಠೇವಣಿ ಮೊತ್ತ (ಇಎಂಡಿ): ರೂ. 75,000.	1) ಬಿಡ್‌ಪೂರ್ವ ಸಭೆ: 17.02.2025 ರಂದು 12:00 ಗಂಟೆ 2) ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 24.03.2025 ರಂದು 17:00 ಗಂಟೆ	ಶ್ರೀ. ಶಶಿಕಾಂತ ಸಿಂಗ್, ಎನ್‌ಎಲ್‌ಎಂಸಿ ಫೋನ್: 011–24360671 ಇಮೇಲ್: am-nlmc@gov.in ವಿಳಾಸ: ಕೊಠಡಿ ಸಂ. 006, ನೆಲಮಹಡಿ, ಬ್ಲಾಕ್–14, ಸಿಜಿಒ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ–110003

• ಈ ಮೇಲ್ಕಂಡ ಆರ್‌ಎಫ್‌ಇ'ಗೆ ಸಂಬಂಧಿತ ಎಲ್ಲಾ ತಿದ್ದುಪಡಿ, ಮಾರ್ಪಾಡು ಇತ್ಯಾದಿಗಳನ್ನು ಡಿಪಿಇ'ರವರ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
• ವಿವರವಾದ ಜಾಹೀರಾತಿಗಾಗಿ, ದಯವಿಟ್ಟು ಡಿಪಿಇ'ರವರ www.dpe.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ವಿವರವಾದ ಆರ್‌ಎಫ್‌ಇ

CBC 15229/12/0004/2425

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, ಫ್ಯಾಕ್ಸ್: (080)–28392310]

ಇಸರೋ isro

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಅಡ್ಮಿನ್ ಬ್ಲಾಕ್, ಎಲ್‌ಇಒಎಸ್, ಪೀಣ್ಯ, ಬೆಂಗಳೂರು–560058ನಲ್ಲಿ ಸಮ್ಮೇಳನ ಸಭಾಂಗಣದ ಪ್ರಸ್ತಾವಿತ ವಿಸ್ತರಣೆಗೆ ಎಸಿ ಕೆಲಸಗಳು, ಎನ್‌ಐಇಟಿ: LEOS/C&MG/Conference Hall Extension / AC /ETN-01A/2024-25/R1, ದಿನಾಂಕ: 03.02.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ. 14.21 ಲಕ್ಷಗಳು, ಇಎಂಡಿ: ರೂ. 28,420/–; ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 05 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 06.02.2025; **ಮುಕ್ತಾಯವಾಗುವ ದಿನಾಂಕ :** 25.02.2025

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಈಗಿರುವ ನಿವೃತ್ತ ರೂಮ್‌ಗಳ ಎರಡನೇ ಮಹಡಿ–ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರಿನಲ್ಲಿರುವ ಪ್ರಸ್ತಾವಿತ ಲಂಬ ವಿಸ್ತರಣೆಗಾಗಿ ಎಸಿ ಕೆಲಸಗಳು. ಎನ್‌ಐಇಟಿ: LEOS/C&MG/ Retiring Rooms/AC/ETN-01A/2024-25, ದಿನಾಂಕ: 03.02.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ. 17.80 ಲಕ್ಷಗಳು, ಇಎಂಡಿ: ರೂ. 35,600/–; ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 03 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 06.02.2025; **ಮುಕ್ತಾಯವಾಗುವ ದಿನಾಂಕ :** 25.02.2025

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–560058ನಲ್ಲಿರುವ ನಿವೃತ್ತಿ ಕೊಠಡಿಗಳಿಗೆ 6 ಪ್ರಯಾಣಿಕರ ಲಿಫ್ಟ್‌ಗಳ ಪೂರೈಕೆ ಮತ್ತು ನಿರ್ಮಾಣ, ಎನ್‌ಐಇಟಿ: LEOS/C&MG/Retiring Rooms Extension/Mech/ETN-01M/2024-25, ದಿನಾಂಕ: 03.02.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ. 15.83 ಲಕ್ಷಗಳು, ಇಎಂಡಿ: ರೂ. 31,660/–; ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 04 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 06.02.2025; **ಮುಕ್ತಾಯವಾಗುವ ದಿನಾಂಕ :** 25.02.2025

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ಗೆ ಸಾರ್ವಜನಿಕರಿಂದ ಸಲಹೆ ಸ್ವೀಕಾರ

‘ಸಂವಿಧಾನಕ್ಕೆ ವಿರುದ್ಧವಾದುದು ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಥಳೀಯ ಆಡಳಿತಕ್ಕೆ ಅಧಿಕಾರ ನೀಡುವ ಸಂವಿಧಾನದ ಆಶಯಕ್ಕೆ ವಿರುದ್ಧವಾದ ಕಾನೂನು ಬೇಡ, ಬೆಂಗಳೂರನ್ನು ವಿಭಜಿಸಿ ಹಲವು ಪಾಲಿಕೆಗಳನ್ನು ಮಾಡುವುದರಿಂದ ಸಮಸ್ಯೆಗಳು ಸೃಷ್ಟಿಯಾಗಲಿವೆ. ಮುಖ್ಯಮಂತ್ರಿ ಬದಲು ಮೇಯರ್ ಅವರನ್ನೇ ಪ್ರಾಧಿಕಾರದ ಮುಖ್ಯಸ್ಥರನ್ನಾಗಿ ಮಾಡಿ, ಕಾರ್ಪೊರೇಟರ್‌ಗಳು ಇಲ್ಲದಿರುವ ಸಂದರ್ಭದಲ್ಲಿ ಹೊಸ ಕಾಯ್ದೆ ತರುವುದು ಸರಿಯಲ್ಲ, ನಾಲ್ಕು ವರ್ಷದಿಂದ ಚುನಾವಣೆ ಆಗಿಲ್ಲ, ಕೂಡಲೇ ಬಿಬಿಎಂಪಿಗೆ ಚುನಾವಣೆ ನಡೆಸಿ....’

‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024’ ಅನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ ‘ಸಾರ್ವಜನಿಕರು, ಸಂಘ–ಸಂಸ್ಥೆಗಳಿಂದ ಸಲಹೆ ಸ್ವೀಕಾರ’ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳಿವು.

ಸಮಿತಿ ಅಧ್ಯಕ್ಷ ರಿಜ್ವಾನ್ ಅರ್ಷದ್ ಅವರ ನೇತೃತ್ವದಲ್ಲಿ ಬಿಬಿಎಂಪಿಯ ಪಶ್ಚಿಮ ಹಾಗೂ ಮಹದೇವಪುರ ವಲಯದಲ್ಲಿ ನಾಗರಿಕರಿಂದ ಸಲಹೆಗಳನ್ನು ಸ್ವೀಕರಿಸಲಾಯಿತು.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ವನ್ನು ರೂಪಿಸುವುದೇ ಆದರೆ, ಅದನ್ನು ತ್ವರಿತವಾಗಿ ಜಾರಿಗೆ ತನ್ನಿ. ಈಗಾಗಲೇ ಪಾಲಿಕೆಗೆ ಚುನಾಯಿತ ಸದಸ್ಯರಿಲ್ಲದೇ ನಗರದಲ್ಲಿ ಯಾವ ಸಮಸ್ಯೆಗಳಿಗೂ ಪರಿಹಾರ ಸಿಗುತ್ತಿಲ್ಲ. ಇನ್ನೂ ವಿಳಂಬವಾದರೆ, ನಾಗರಿಕರಿಗೆ ಸಂಕಷ್ಟ ಹೆಚ್ಚಾಗಲಿದೆ’ ಎಂದು ಮೋಹನ್‌ರಾಜ್ ಹೇಳಿದರು.

‘ಬಿಬಿಎಂಪಿಗೆ ಈಗಾಗಲೇ 110 ಹಳ್ಳಿಗಳನ್ನು ಸೇರಿಸಲಾಗಿದೆ. ಅವುಗಳಿಗೆ ಅಗತ್ಯವಾದ ಅನುದಾನ ನೀಡಿ, ಮೂಲಸೌಕರ್ಯಗಳನ್ನು ಒದಗಿಸಿಲ್ಲ. ಹೊಸ ಮಸೂದೆ ತಂದು, ಇನ್ನಷ್ಟು ಪ್ರದೇಶಗಳನ್ನು ಸೇರಿಸಿದರೆ ಅಲ್ಲಿನ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗಲಿವೆ’ ಎಂದು ರಾಜೇಶ್ ಅಭಿಪ್ರಾಯಪಟ್ಟರು.

‘ಬೆಂಗಳೂರು ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು, ಈಗಾಗಲೇ 870 ಚದರ ಕಿ.ಮೀ ವ್ಯಾಪ್ತಿಯಲ್ಲಿ ಬೆಳೆದಿದೆ. ಒಬ್ಬರೇ ಮೇಯರ್, ಒಬ್ಬರೇ ಆಯುಕ್ತರಿಂದ ಏನೂ ಮಾಡಲು ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ಆಡಳಿತದಲ್ಲಿ ಬದಲಾವಣೆ, ಎಲ್ಲ ಇಲಾಖೆಗಳನ್ನು ಒಂದೇ ವೇದಿಕೆಯಲ್ಲಿ ತಂದು ನಗರದ ಆಡಳಿತವನ್ನು ಪುನರ್ ರಚನೆ ಮಾಡಿದಾಗ ಸಮಸ್ಯೆಗಳನ್ನು ಸಲಭವಾಗಿ ಬಗೆಹರಿಸಬಹುದು’ ಎಂದು ರಿಜ್ವಾನ್ ಅರ್ಷದ್ ಪ್ರತಿಕ್ರಿಯಿಸಿದರು.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–(ಜಿಬಿಎ) 2024’ ಕುರಿತ ಪ್ರಾತ್ಯಕ್ಷಿಕೆಯನ್ನು ಪ್ರಸ್ತುತಪಡಿಸಿದರು.

ಶಾಸಕರಾದ ಎಸ್‌.ಟಿ ಸೋಮಶೇಖರ್, ಎ.ಸಿ ಶ್ರೀನಿವಾಸ್, ಪ್ರಿಯಕೃಷ್ಣ, ಬೈರತಿ ಬಸವರಾಜ್, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಬಿಬಿಎಂಪಿ ವಲಯ ಆಯುಕ್ತರಾದ ಸ್ನೇಹಲ್, ರಮೇಶ್, ಜಂಟಿ ಆಯುಕ್ತರಾದ ಸರೋಜಾ, ಕೆ. ದಾಕ್ಷಾಯಿಣಿ ಉಪಸ್ಥಿತರಿದ್ದರು.

ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿ ಅಧ್ಯಕ್ಷ ರಿಜ್ವಾನ್ ಅರ್ಷದ್ ಅವರಿಗೆ ಬಿಬಿಎಂಪಿ ಮಾಜಿ ಆಡಳಿತ ಪಕ್ಷದ ನಾಯಕ ಪದ್ಮನಾಭರೆಡ್ಡಿ ಸಲಹೆಗಳನ್ನು ಒಳಗೊಂಡ ಪತ್ರ ನೀಡಿದರು. ಶಾಸಕರಾದ ಎಸ್‌.ಟಿ. ಸೋಮಶೇಖರ್, ಪ್ರಿಯಕೃಷ್ಣ, ಮಾಜಿ ಮೇಯರ್ ಎಂ. ಗೌತಮ್ ಕುಮಾರ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

‘ರೋಬೊ ವ್ಯವಸ್ಥೆ’ಗಾಗಿ ಮಸೂದೆ: ರಿಜ್ವಾನ್

‘ನಗರದಲ್ಲಿ ಮೂಲಸೌಕರ್ಯ, ಭವಿಷ್ಯದ ಕಾರ್ಯಕ್ರಮಗಳಲ್ಲಿ ‘ರೋಬೊ ವ್ಯವಸ್ಥೆ’ ತಯಾರಾಗಬೇಕು. ಈ ನಿಟ್ಟನಲ್ಲಿ ರಾಜ್ಯ ಸರ್ಕಾರ ಹೊಸದಾಗಿ ‘ಗೇಟ್ರರ್ ಬೆಂಗಳೂರು ಆಡಳಿತ ಮಸೂದೆ’ಯನ್ನು ತಂದಿದೆ’ ಎಂದು ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ದ ಕುರಿತು ಸೋಮವಾರ ನಾಗರಿಕರಿಂದ ಸಲಹೆ ಪಡೆದ ನಂತರ ಮಾತನಾಡಿದ ಅವರು, ‘ಮಸೂದೆಗೆ ಸಂಬಂಧಿಸಿದಂತೆ ನಾಗರಿಕರು ನೀಡಿರುವ ಸಲಹೆಗಳನ್ನು ಪರಿಶೀಲಿಸಿ, ಕಾನೂನಿನಲ್ಲಿ ಅವಕಾಶವಿರುವ ಅಂಶಗಳನ್ನು ಅಳವಡಿಸಿಕೊಳ್ಳಲಾಗುತ್ತದೆ’ ಎಂದು ಭರವಸೆ ನೀಡಿದರು.

ಶಾಸಕರು, ಸಂಸದರ ನಿಯಂತ್ರಣ: ಕಾತ್ಯಾಯಿನಿ

‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಯಿಂದ ಸ್ಥಳೀಯ ಆಡಳಿತವನ್ನು ರಾಜ್ಯ ಸರ್ಕಾರ, ಸಂಸದ, ಶಾಸಕರು ನಿಯಂತ್ರಣಕ್ಕೆ ತೆಗೆದುಕೊಳ್ಳಲಿದ್ದಾರೆ. ಸ್ಥಳೀಯವಾಗಿ ಅಗತ್ಯವಿರುವ ಯೋಜನೆಗಳನ್ನು ಪೂರೈಸುವ ಮೆಟ್ರೊಪಾಲಿಟನ್, ಜಿಲ್ಲಾ ಯೋಜನೆ ಸಮಿತಿಗಳಿರುವುದಿಲ್ಲ. ಇದರಿಂದ ಸ್ಥಳೀಯ ಆಡಳಿತದಲ್ಲಿ ಸಮಸ್ಯೆಗಳು ಹೆಚ್ಚಾಗಲಿವೆ’ ಎಂದು ಸಿವಿಕ್ ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ಹೇಳಿದರು.

‘ಬಿಬಿಎಂಪಿ ಹಾಗೂ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಏಕರೂಪದ ಕಾಯ್ದೆ ತರುವುದು ಅಗತ್ಯವಾಗಿದೆ. ಇದರಿಂದ, ‘ಜನರಿಗೆ ಅಧಿಕಾರ’ ನೀಡುವ ಸಂವಿಧಾನದ 74ನೇ ತಿದ್ದುಪಡಿಯ ಆಶಯ ಜಾರಿಯಾಗಬೇಕಾಗಿದೆ. ಇದಕ್ಕಾಗಿ ನಮ್ಮ ಸಂಸ್ಥೆಯಿಂದ ಕೆಲವು ಶಿಫಾರಸುಗಳನ್ನು ನೀಡಲಾಗುತ್ತಿದೆ’ ಎಂದರು.

ಇ-ಮೇಲ್ ಮೂಲಕ ಸಲಹೆ ನೀಡಿ

‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ ಕುರಿತು ಸಾರ್ವಜನಿಕರು, ಸಂಘ ಸಂಸ್ಥೆಗಳು ತಮ್ಮ ಸಲಹೆ ಮತ್ತು ಅಭಿಪ್ರಾಯಗಳನ್ನು ಇ-ಮೇಲ್ gbasuggestion@gmail.com ಮೂಲಕ ಕಳುಹಿಸಬಹುದು ಎಂದು ಸಭೆಯಲ್ಲಿ ತಿಳಿಸಲಾಯಿತು.

ನಾಗರಿಕರ ಮಾತು...

- ಕಾರ್ಪೊರೇಟರ್‌ಗಳಿಲ್ಲದೆ ಐದು ವರ್ಷಗಳಾಗುತ್ತಿದೆ. ಚುನಾವಣೆ ನಡೆಸದೆ ಜಿಬಿಎ ತರಲು ಮುಂದಾಗಿರುವುದು ಸರಿಯಲ್ಲ
- ಮಸೂದೆಯನ್ನು 100ಕ್ಕೆ 100ರಷ್ಟು ಜಾರಿಗೆ ತರಬೇಕು. ಬೆಳೆಯುತ್ತಿರುವ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಹೊಸ ಹೊಸ ವಿಧೇಯಕಗಳನ್ನು ತರಬೇಕಿದೆ
- ಬೆಂಗಳೂರನ್ನು ವಿಭಜಿಸಿ ಹಲವು ನಗರ ಪಾಲಿಕೆಗಳನ್ನು ಮಾಡುವುದರಿಂದ ಸಮಸ್ಯೆಗಳು ಹೆಚ್ಚಲಿವೆ
- ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೂಲಕವಾದರೂ ಪಾರದರ್ಶಕವಾದ ಉತ್ತಮ ಆಡಳಿತ ನೀಡಬೇಕು
- ಬಿಬಿಎಂಪಿಯಲ್ಲಿ ಚುನಾಯಿತ ಪ್ರತಿನಿಧಿಗಳ ಆಡಳಿತ ವ್ಯವಸ್ಥೆಯೇ ಇಲ್ಲ. ತ್ವರಿತವಾಗಿ ಚುನಾವಣೆ ನಡೆಸಿ
- ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಸೂದೆ ಜಾರಿಗೆ ತಂದು ಐದು ನಗರ ಪಾಲಿಕೆಗಳನ್ನು ಮಾಡಿದ ನಂತರ ಚುನಾವಣೆ ನಡೆಸಿ
- ಕೆಂಪೇಗೌಡರು ಕಟ್ಟಿದ ನಗರವನ್ನು ಹಾಗೆಯೇ ಉಳಿಸಿಕೊಳ್ಳಬೇಕು. ಗ್ರೇಟರ್ ಬೆಂಗಳೂರು ಮಾಡಬೇಡಿ
- ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳು ವಾರ್ಡ್ ಸಮಿತಿ ಸಭೆಯಲ್ಲಿ ಇರಬೇಕು

ಸಂವಿಧಾನ ಬಾಹಿರ: ಪದ್ಮನಾಭರೆಡ್ಡಿ

‘ರಾಜ್ಯ ಸರ್ಕಾರ ಹಾಗೂ ಪಾಲಿಕೆ ನಡುವೆ ಮತ್ತೊಂದು ಪ್ರಾಧಿಕಾರ ರಚನೆ ಮಾಡುವಂತೆ ತರಲಾಗಿರುವ ಮಸೂದೆ ಸಂವಿಧಾನ ಬಾಹಿರ. ಸ್ಥಳೀಯ ಆಡಳಿತಕ್ಕೆ ಅಧಿಕಾರ ನೀಡಬೇಕೆಂಬುದು ಸಂವಿಧಾನದ ಆಶಯವಾಗಿದೆ. ಮುಖ್ಯಮಂತ್ರಿ ಅಥವಾ ಸಚಿವರ ನೇತೃತ್ವದಲ್ಲಿ ಪ್ರಾಧಿಕಾರ ರಚನೆಯಾಗಿ, ಅದರ ಮೂಲಕ ಪಾಲಿಕೆ ಆಡಳಿತ ನಡೆಸುವ ಉದ್ದೇಶ ಹೊಂದಿರುವ ಮಸೂದೆ ಕಾನೂನುಬಾಹಿರ’ ಎಂದು ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ಪದ್ಮನಾಭರೆಡ್ಡಿ ಅಭಿಪ್ರಾಯಪಟ್ಟರು.

ಸುಪ್ರೀಂಕೋರ್ಟ್‌ನ ಹಲವು ಆದೇಶಗಳನ್ನು ಉಲ್ಲೇಖಿಸಿದ ಅವರು, ‘ಮುಖ್ಯಮಂತ್ರಿ ನೇತೃತ್ವದ ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಸಚಿವರು, ಶಾಸಕರು ಇರುತ್ತಾರೆ. 12 ಮಂದಿ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಮೇಯರ್‌ಗಳು ಹಾಗೂ ನಾಮನಿರ್ದೇಶಿತ ಸದಸ್ಯರಿಗೆ ಮಾತ್ರ ಮತದಾನ ಹಕ್ಕು ಇರುತ್ತದೆ ಎಂದು ಹೇಳಲಾಗಿದೆ. ಪಾಲಿಕೆ ವ್ಯಾಪ್ತಿಯ ಸಂಸದರು, ಶಾಸಕರಿಗೆ ಮತದಾನ ಹಕ್ಕಿಲ್ಲ ಎಂದಿರುವುದು ಸಂವಿಧಾನ ಬಾಹಿರ. ಸ್ಥಳೀಯ ಸಂಸ್ಥೆಗಳ ಈ ಅಧಿಕಾರವನ್ನು ಸರ್ಕಾರ ಮೊಟಕುಗೊಳಿಸಲು ಮುಂದಾಗಿರುವುದು ಸರಿಯಲ್ಲ’ ಎಂದರು.

ಮಯೂರ ಓದಿರಿ

14 ವರ್ಷಗಳ ಬಳಿಕ ಕೊಲೆ ಆರೋಪಿ ಸೆರೆ

ಬೆಂಗಳೂರು: ವ್ಯಕ್ತಿಯನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಕೃತ್ಯ ನಡೆದ 14 ವರ್ಷಗಳ ಬಳಿಕ ಬಂಧಿಸಲು ಆರ್‌.ಟಿ. ನಗರ ಠಾಣೆಯ ಪೊಲೀಸರು ಯಶಸ್ವಿ ಆಗಿದ್ದಾರೆ.

ಆರ್‌.ಜಾನ್(34) ಬಂಧಿತ ಆರೋಪಿ.

ಚೇತನ್ ಕುಮಾರ್ ಎಂಬಾತನನ್ನು ಕೊಲೆ ಮಾಡಿದ್ದ ಆರೋಪಿ, ಪೊಲೀಸರ ಕೈಗೆ ಸಿಗದೇ ತಲೆಮರೆಸಿಕೊಂಡಿದ್ದ. ವಿಶೇಷ ತಂಡ ರಚಿಸಿ ಹುಡುಕಾಟ ನಡೆಸಿದ್ದರೂ ಆರೋಪಿಯನ್ನು ಬಂಧಿಸಲು ಸಾಧ್ಯವಾಗಿರಲಿಲ್ಲ.

2011ರ ಆಗಸ್ಟ್ 22ರಂದು ಆರ್‌.ಟಿ. ನಗರದಲ್ಲಿ ಚೇತನ್ ಕುಮಾರ್ ಎಂಬಾತನನ್ನು ಜಾನ್ ಸೇರಿದಂತೆ ನಾಲ್ವರು ಆರೋಪಿಗಳು ಚಾಕುವಿನಿಂದ ಇರಿದು ಕೊಲೆ ಮಾಡಿದ್ದರು. ಪ್ರಕರಣದ ಸಂಬಂಧ ಇಬ್ಬರನ್ನು ಬಂಧಿಸಲಾಗಿತ್ತು. ಪ್ರಮುಖ ಆರೋಪಿಗಳಾದ ಜಾನ್ ಹಾಗೂ ರಾಜ ತಲೆಮರೆಸಿಕೊಂಡಿದ್ದರು. ಜಾನ್ ಮೊಬೈಲ್ ಬಳಸುತ್ತಿರಲಿಲ್ಲ. ಇದರಿಂದ ಆರೋಪಿಯ ಪತ್ತೆ ಸಾಧ್ಯವಾಗಿರಲಿಲ್ಲ. ಈ ಮಧ್ಯೆ ಇಬ್ಬರ ವಿರುದ್ಧ ತನಿಖೆ ನಡೆಸಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಚೇತನ್ ಮತ್ತು ಜಾನ್ ನಡುವೆ ಬಾರ್‌ನಲ್ಲಿ ಗಲಾಟೆ ನಡೆದಿತ್ತು. ಜಾನ್, ಮಣಿಕಂಠ, ಅರುಣ್ ಕುಮಾರ್ ಮತ್ತು ರಾಜ ಅಲಿಯಾಸ್ ಚಾಟಿ ರಾಜ ಸೇರಿಕೊಂಡು ಚೇತನ್‌ನನ್ನು ಕೊಲೆ ಮಾಡಿದ್ದರು. ಮಣಿಕಂಠ ಹಾಗೂ ಅರುಣ್‌ಕುಮಾರ್ ಎಂಬವರನ್ನು ಪೊಲೀಸರು ಬಂಧಿಸಿದ್ದರು. ಅರುಣ್ ಕುಮಾರ್ ಅನಾರೋಗ್ಯದಿಂದ ಮೃತಪಟ್ಟಿದ್ದರೆ, ಮಣಿಕಂಠ ವಿಚಾರಣೆ ಎದುರಿಸುತ್ತಿದ್ದಾನೆ.

ಗೆಜೆಟೆಡ್ ಪ್ರೊಬೇಷನರಿ: ಪೂರ್ವಭಾವಿ ಪರೀಕ್ಷೆಯ ಫಲಿತಾಂಶ ಪ್ರಕಟ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿಯ ಒಟ್ಟು 384 ಹುದ್ದೆಗಳ ಭರ್ತಿಗೆ ಡಿ.29ರಂದು ನಡೆದಿದ್ದ ಪೂರ್ವಭಾವಿ ಮರುಪರೀಕ್ಷೆಯ ಫಲಿತಾಂಶವನ್ನು ಕೆಪಿಎಸ್‌ಸಿ ಸೋಮವಾರ ರಾತ್ರಿ ಪ್ರಕಟಿಸಿದೆ.

ಪೂರ್ವಭಾವಿ ಪರೀಕ್ಷೆಯಿಂದ 1:15 ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಕೆಪಿಎಸ್‌ಸಿ ತನ್ನ ವೆಬ್‌ಸೈಟ್ ನಲ್ಲಿ ಪ್ರಕಟಿಸಿದೆ.

ಪೂರ್ವಭಾವಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಪೈಕಿ 5,760 ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದಿದ್ದಾರೆ. ಮುಖ್ಯ ಪರೀಕ್ಷೆಯನ್ನು ಮಾರ್ಚ್ 28, 29, ಏಪ್ರಿಲ್ 1 ಮತ್ತು 2ರಂದು ನಡೆಸಲಾಗುವುದು ಎಂದು ಕೆಪಿಎಸ್‌ಸಿ ಈಗಾಗಲೇ ತಾತ್ಕಾಲಿಕ ದಿನಾಂಕವನ್ನು ಪ್ರಕಟಿಸಿದೆ.

ಕಂಡಕಂಡಲ್ಲಿ ನಾಲ್ವರಿಗೆ ಚಾಕುವಿನಿಂದ ಇರಿದ ರೌಡಿ

ಪ್ರಜಾವಾಣಿ ವಾರ್ತೆ

ಕದಂಬ

ಬೆಂಗಳೂರು: ಇಲ್ಲಿನ ಇಂದಿರಾ ನಗರ ಪೊಲೀಸ್ ಠಾಣಾ ವ್ಯಾಪ್ತಿಯ 100 ಅಡಿ ರಸ್ತೆಯಲ್ಲಿ ರೌಡಿಯೊಬ್ಬ ಇಬ್ಬರು ಪಾನಿಪೂರಿ ವ್ಯಾಪಾರಿಗಳೂ ಸೇರಿದಂತೆ ನಾಲ್ವರಿಗೆ ಚಾಕುವಿನಿಂದ ಇರಿದು ತಲೆಮರೆಸಿಕೊಂಡಿದ್ದಾನೆ. ಆತನ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಇಂದಿರಾನಗರದ ಮೂರನೇ ಅಡ್ಡ ರಸ್ತೆಯ ನಿವಾಸಿ ಪಿ.ಜಸ್ವಂತ್(19), ಅಪ್ಪಾರೆಡ್ಡಿ ಪಾಳ್ಯದ ನಿವಾಸಿ ತಮ್ಮಯ್ಯ (44), ಹಳೇ ಭಿನ್ನಮಂಗಲದ ಎಸ್. ಮಹೇಶ್ ಸೀತಾಪತಿ(23), ಮೋಟಪ್ಪ ಪಾಳ್ಯದ ನಿವಾಸಿ ದೀಪಕ್‌ಕುಮಾರ್ ವರ್ಮ (24) ಅವರಿಗೆ ಆರೋಪಿ ಚಾಕುವಿನಿಂದ ಇರಿದಿದ್ದಾನೆ. ಶನಿವಾರ ರಾತ್ರಿ 9.30ರಿಂದ 9.50ರ ನಡುವೆ ಕೃತ್ಯ ಎಸಗಿ ಆರೋಪಿ ಪರಾರಿ ಆಗಿದ್ದಾನೆ.

ಕೃತ್ಯ ಎಸಗಿದ ಆರೋಪಿ, ಇಂದಿರಾ ನಗರದ ಕದಂಬ ಎಂದು ಗುರುತಿಸಲಾಗಿದೆ.

ಇರಿತಕ್ಕೆ ಒಳಗಾದ ನಾಲ್ವರ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆರೋಪಿ ವಿರುದ್ಧ ಈ ಹಿಂದೆ ವಿವಿಧ ಠಾಣೆಗಳಲ್ಲಿ ಮನೆ ಕಳ್ಳತನ, ಹಲ್ಲೆ, ದರೋಡೆ ಸೇರಿದಂತೆ ಒಟ್ಟು ಆರು ಪ್ರಕರಣಗಳು ದಾಖಲಾಗಿದ್ದವು. ಕಳೆದ ವರ್ಷ ಆರೋಪಿಯನ್ನು ರೌಡಿ ಪಟ್ಟಿಗೆ ಸೇರಿಸಲಾಗಿತ್ತು.

‘ಜಸ್ವಂತ್ ಅವರು ರಾತ್ರಿ 9.30ರ ಸುಮಾರಿಗೆ ಶುದ್ಧ ನೀರಿನ ಘಟಕದಿಂದ ನೀರು ತರಲು ದ್ವಿಚಕ್ರ ವಾಹನದಲ್ಲಿ ಇಂದಿರಾನಗರದ ಆರನೇ ಮುಖ್ಯ ರಸ್ತೆಯಲ್ಲಿ ತೆರಳುತ್ತಿದ್ದರು. ಮಾರ್ಗ ಮಧ್ಯದಲ್ಲಿ ಅವರನ್ನು ತಡೆದಿದ್ದ ಆರೋಪಿ, ದ್ವಿಚಕ್ರ ವಾಹನದ ಹಿಂದೆ ಕುಳಿತು ವಾಹನವನ್ನು ಮುಂದಕ್ಕೆ ಚಲಿಸುವಂತೆ ಸೂಚಿಸಿದ್ದ. ಆರೋಪಿ ಕೈಯಲ್ಲಿ ಚಾಕು ಇರುವುದನ್ನು ಕಂಡು, ಜಸ್ವಂತ್ ಹೆದರಿ ವಾಹನವನ್ನು ಮುಂದಕ್ಕೆ ಚಲಾಯಿಸಿಕೊಂಡು ತೆರಳಿದ್ದರು. ನಾಲ್ಕನೇ ಅಡ್ಡ ರಸ್ತೆಯಲ್ಲಿ ಸಾಗುತ್ತಿದ್ದಾಗ, ಸವಾರನಿಗೆ ಚಾಕುವಿನಿಂದ ಕುತ್ತಿಗೆಯ ಭಾಗಕ್ಕೆ ಇರಿದು ಕೊಲೆಗೆ ಪ್ರಯತ್ನಿಸಿದ್ದಾನೆ’ ಎಂದು ಮೂಲಗಳು ಹೇಳಿವೆ.

‘ಮಹೇಶ್ ಸೀತಾಪತಿ ಅವರು ಮಗಳಿಗೆ ಡೈಪರ್ ತರಲು ಕೆ.ಟಿ. ರಸ್ತೆಯ ಐದನೇ ಮುಖ್ಯ ರಸ್ತೆಯ ಒಂದನೇ ಅಡ್ಡ ರಸ್ತೆಯಲ್ಲಿರುವ ಅಂಗಡಿ ಬಳಿ ರಾತ್ರಿ 9.35ರ ಸುಮಾರಿಗೆ ನಿಂತಿದ್ದರು. ಅಲ್ಲಿಗೆ ಬಂದಿದ್ದ ಆರೋಪಿ, ಚಿಕನ್ ಅಂಗಡಿಯ ಬಾಗಿಲು ಮುಚ್ಚಿದೆಯೇ ಎಂದು ಮಹೇಶ್ ಅವರನ್ನು ಕೇಳಿದ್ದ. ಅಂಗಡಿ ಬಂದ್ ಆಗಿರುವುದಾಗಿ ಮಹೇಶ್ ಪ್ರತಿಕ್ರಿಯಿಸಿದ್ದರು. ಜೇಬಿನಿಂದ ಚಾಕು ತೆಗೆದು ಮಹೇಶ್‌ಗೆ ಇರಿದಿದ್ದಾನೆ’ ಎಂದು ಮೂಲಗಳು ಹೇಳಿವೆ.

‘ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನ ದೀಪಕ್ ಅವರು ಮೋಟಪ್ಪನ ಪಾಳ್ಯದಲ್ಲಿ ನೆಲಸಿದ್ದಾರೆ. ಇಂದಿರಾ ನಗರದ 100 ಅಡಿ ರಸ್ತೆಯಲ್ಲಿ ಪಾನಿ ಪೂರಿ ಅಂಗಡಿ ನಡೆಸುತ್ತಿದ್ದಾರೆ. ಅದೇ ದಿನ ರಾತ್ರಿ 9.45ರ ಸುಮಾರಿಗೆ ಬಂದಿದ್ದ ಆರೋಪಿ, ಒಂದು ಪ್ಲೇಟ್ ಪಾನಿಪೂರಿ ನೀಡುವಂತೆ ಕೇಳಿದ್ದ. ‘ಪಾನಿಪೂರಿಯ ಮಸಾಲೆ ಖಾಲಿಯಾಗಿದೆ’ ಎಂದು ದೀಪಕ್ ಹೇಳಿದ್ದರು. ಗ್ರಾಹಕರು ಹೋದ ಬಳಿಕ ದೀಪಕ್ ಅವರ ಕುತ್ತಿಗೆಗೆ ಇರಿದಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಎಂ.ಐ. ಶೋರೂಂ ಬಳಿ ತಮ್ಮಯ್ಯ ಅವರು ಪಾನಿಪೂರಿ ಅಂಗಡಿ ನಡೆಸುತ್ತಿದ್ದಾರೆ. ರಾತ್ರಿ 9.50ರ ಸುಮಾರಿಗೆ ಬಂದಿದ್ದ ಆರೋಪಿ, ಪಾನಿ ಪೂರಿ ಕೊಡುವಂತೆ ಕೇಳಿದ್ದ. ‘ಹಣ ನೀಡಲು ಸ್ಕ್ಯಾನರ್ ಎಲ್ಲಿದೆ’ ಎಂದು ಆರೋಪಿ ಕೇಳಿದ್ದ. ಸ್ಕ್ಯಾನರ್ ಕೊಟ್ಟ ಬಳಿಕ, ಸುಮ್ಮನೆ ಹಿಡಿದುಕೊಂಡಿದ್ದ. ಪಾನಿ ಪೂರಿ ತಿಂದ ಬಳಿಕವೇ ಹಣ ನೀಡುವಂತೆ ತಮ್ಮಯ್ಯ ಹೇಳಿದ್ದರು. ಈ ಮಾತಿನಿಂದ ಕುಪಿತಗೊಂಡಿದ್ದ ಆರೋಪಿ, ‘ನಾನೇನು ಸುಮ್ಮನೇ ಪಾನಿಪೂರಿ ತಿನ್ನಲು ಬಂದಿಲ್ಲ’ ಎಂದು ಹೇಳಿ ಚಾಕುವಿನಿಂದ ಇರಿದು ಪರಾರಿ ಆಗಿದ್ದಾನೆ’ ಎಂದು ಮೂಲಗಳು ಹೇಳಿವೆ.

‘ಆರೋಪಿಯು ಯಾವ ಉದ್ದೇಶದಿಂದ ನಾಲ್ವರಿಗೆ ಇರಿದಿದ್ದಾನೆ ಎಂಬುದು ಖಚಿತವಾಗಿಲ್ಲ. ಮದ್ಯದ ಅಮಲಿನಲ್ಲಿ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ಆತನ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

ಕಾಣೆಯಾಗಿದ್ದಾರೆ

ಹೆಸರು: ಗದ್ದಂ ನಾಗಲಕ್ಷ್ಮಮ್ಮ

ವಯಸ್ಸು: 65, ಭಾಷೆ: ತೆಲುಗು ಮಾತ್ರ, ಆದರೆ ಸ್ಪಷ್ಟವಾಗಿ ಮಾತನಾಡಲಾರರು.
ಮೈಬಣ್ಣ: ತಿಳಿ ಕಂದು ಬಣ್ಣ, ಆರೋಗ್ಯ ಪರಿಸ್ಥಿತಿ: ಮಾನಸಿಕ ಅಸ್ವಸ್ಥೆ.
ಉಡುಪು: ಹಳದಿ ಬಣ್ಣದ ಸೀರೆ ಮತ್ತು ಹಳದಿ ಬಣ್ಣದ ಬ್ಲೌಸ್
ಈ ಮಹಿಳೆಯು ಎ. ನಾರಾಯಣಪುರ, ಎಸ್‌ಬಿಐ ಬ್ಯಾಂಕ್, ಅಶೋಕ ನಗರದ ಸಮೀಪ ದಿನಾಂಕ: 04.02.2025 ರಂದು ಬೆಳಗ್ಗೆ 10:45 ಗಂಟೆಯಿಂದ ಕಾಣೆಯಾಗಿರುತ್ತಾರೆ.
ಎಫ್‌ಐಆರ್ ನಂ.: 0082/2025, ಮಹದೇವಪುರ ಪೊಲೀಸ್ ಠಾಣೆ.
ಇವರು ಯಾರಿಗಾದರೂ ಸಿಕ್ಕಿದ್ದಲ್ಲಿ, ದಯವಿಟ್ಟು ಕೂಡಲೇ ಕೆಳಗಿನ ಸಂಖ್ಯೆಗಳಿಗೆ (ಮಧು) ಮಾಹಿತಿ ನೀಡಿರಿ.

9440999318 / 9986700292
7795005377 / 9591627475

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AEROSPACE EXCELLENCE, ENGINEERED FOR TOMORROW

HALAMANEE AEROSPACE IS A LEADING COMPANY IN THE AEROSPACE AND DEFENCE SECTORS, FOCUSED ON PROVIDING CUTTING-EDGE SOLUTIONS, PRECISION ENGINEERING, AND EXCEPTIONAL CUSTOMER SERVICE. HALAMANEE AEROSPACE PRIVATE LIMITED IS A PRIVATELY OWNED ENTITY HEAD QUARTERED IN BANGALORE. KARNATAKA, INDIA, AND IS RECOGNISED AS A LEADING END-TO-END SOLUTIONS PROVIDER.

At Halamanee Group, we are driven by a passion for innovation and a commitment to excellence. Our journey in Aerospace began 8 years ago.
Halamanee Aerospace was founded by a team of dedicated professionals with over 27 years of experience in the Aerospace domain, with the goal of establishing itself as a prominent global Aerospace and Defence manufacturing company, committed to delivering high-quality products to top-tier companies and OEMs.
Our journey began with a tool room-based setup under the name Halamanee Precisions. Over time, we expanded into the Aerospace sector as Halamanee Aerospace Pvt Ltd, establishing two state-of-the-art entities equipped with cutting-edge technology and machinery, with capabilities up to the 5th axis. Building on this growth, we have recently entered the sheet metal components sector with the launch of Halamanee Aerostructures Pvt Ltd. Currently we have 50-plus machines and a staff strength of 172 members.
Guided by a clear vision, we are now poised to venture into special processes and treatments, positioning ourselves as a leading provider of end-to-end Aerospace and Defence solutions. We strive to meet every customer need with a comprehensive, one-stop solution, ensuring unmatched quality and timely delivery. Our commitment to excellence has earned us the trust and recognition of a wide range of satisfied customers.
Over the years, we have evolved from a small team into a global player in the Aerospace and Defence industry.

HALAMANEE AEROSTRUCTURES PRIVATE LIMITED
An AS 9100 D, ISMS- ISO 27001:2022, EHS-ISO 14001:2015 & ISO 45001 :2018 Certified Company
HALAMANEE AEROSPACE PRIVATE LIMITED
An AS 9100 D, ISMS- ISO 27001:2022, EHS-ISO 14001:2015 & ISO 45001 :2018 Certified Company
Unit - I & Unit - II
HALAMANEE PRECISIONS
An ISO 9001-2015 Certified Company

Call-to-Action (CTA)
Dayananda K G, Managing Director 9900008736
Ravi Kumar SG, Managing Director 9900008738
Nisarga H D, General Manager 9900008890
Email: director@haplindia.in
Website: https: // haplindia.in/

RENTAL PROPERTIES
Accommodation Available
General
SOCIETY FOR Space Education Research&Development leading philanthropic organization spreading awareness about space science seeks through philanthropy vintage/old buildings above 10000sqft in Bengaluru for experience centre. Leave lasting legacy contributing to meaningful cause make positive impact.Your generosity will be ack'd 9845985164 info@sserd.org

REAL ESTATE SELLING
Industrial & Factory
Peenya
BUYING, SELLING, RENTING. Industrial Land, Building, shed. Peenya, Yeshwanthpur, Dabespet, Nelamangala, Doddaballapur. 9590909945 9844083019

TRAVEL CORNER

INDIA'S BIGGEST TRAVEL SHOW NETWORK
India's Biggest Travel Show Network
TTF TRAVEL & TOURISM FAIR
13 14 15 February 2025
Tripura Vasini, Palace Grounds (Gate 2 & 3), Bengaluru
02 DAYS TO GO

Reserved for Travel Trade
13 Feb: 11:00 am - 6:00 pm | 14 Feb: 11:00 am - 2:00 pm
Open to all
14 Feb: 2:00 pm - 6:00 pm | 15 Feb: 11:00 am - 6:00 pm
Meet hundreds of exhibitors from all over India and abroad.
Find the best deals in travel and packages for great destinations!
Partner Country: Nepal Tourism Board | Host State: Karnataka One state. Many worlds. | Partner State: Goa | Feature States: Tamil Nadu, Telangana, Gujarat, Meghalaya
Supported by: Incredible India
Official Publication: travel News Digest | Organised by: FAIRFEST MEDIA LIMITED
Free entry for all visitors* • 080 2676 1598 • www.ttfotm.com
For stall booking contact Kiran.M - 9880600946 | Email - kiran@fairfest.in

Grand Flea Market Presents
ಬೆಂಗಳೂರು ಉತ್ಸವ
Bengaluru Utsava
(Art, Craft, Handlooms & Lifestyle Exhibition)
Ugadi Shopping Carnival
Date: 7th February to 23rd February 2025
Timing: 10:30 AM - 7:00 PM
Venue: Karnataka Chitrakala Parishath
Kumara Krupa Road, Near Shivananda Circle
Bengaluru
Contact: 6364685716 / 9036658774
17 Days Exhibition Entry Free
100+ Shopping Stalls | Live Performance & More

Dollukunitha Live 15th February 2025 5.00 PM to 6.30 PM
Magic Show Live 16th February 2025 5.00 PM to 6.30 PM
Hulivesha Live 22nd February 2025 5.00 PM to 6.30 PM
HANDLOOMS | HOME DECOR | HANDICRAFTS | CLOTHING | JEWELLERS

ದರ ಏರಿಕೆ: ಭುಗಿಲೆದ್ದ ಆಕ್ರೋಶ

'ನಮ್ಮ ಮೆಟ್ರೊ' ಪ್ರಯಾಣ ದರವನ್ನು ಎಷ್ಟು ಹೆಚ್ಚಳ ಮಾಡಿದೆ ಎಂಬ ಬಗ್ಗೆ ಲೆಕ್ಕಾಚಾರ ಇಲ್ಲದೇ ಮೆಟ್ರೊದಲ್ಲಿ ಪ್ರಯಾಣಿಸಿದಾಗ ಬೆಲೆ ದುಪ್ಪಟ್ಟಾಗಿರುವುದನ್ನು ಕಂಡು ಪ್ರಯಾಣಿಕರು ಅವಕ್ಕಾಗಿದ್ದಾರೆ. ದುಬಾರಿ ದರ ನಿಗದಿ ಮಾಡಿರುವುದನ್ನು ಖಂಡಿಸಿದ್ದಾರೆ. ಈ ಬಗ್ಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ನಮ್ಮ ಮೆಟ್ರೊ ಪ್ರಯಾಣ ದರವನ್ನು ಶೇಕಡ 70ರಷ್ಟು ಹೆಚ್ಚಿಸುವ ಮೂಲಕ ಎಲ್ಲ ದಾಖಲೆಗಳನ್ನು ಮುರಿದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನಸಾಮಾನ್ಯರ ಹಿತಾಸಕ್ತಿಗಳ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಮೆಟ್ರೊ ಪ್ರಯಾಣ ದರ ಹೆಚ್ಚಿಸುವ ಮೂಲಕ ಜನರ ಜೇಬಿಗೆ ಕತ್ತರಿ ಹಾಕಲಾಗುತ್ತಿದೆ. ಮೆಟ್ರೊ ಪ್ರಯಾಣವನ್ನು ಜನಸ್ನೇಹಿ ಮಾಡುವ ಬದಲು ಖಾಸಗಿ ಸಂಸ್ಥೆಗಳನ್ನು ಆಕರ್ಷಿಸಲು ಸರ್ಕಾರಗಳು ಸಜ್ಜಾಗಿವೆ. ಮೆಟ್ರೊ ಪ್ರಯಾಣ ದರ ಏರಿಕೆ ಆದೇಶವನ್ನು ಕೂಡಲೇ ಹಿಂಪಡೆಯಬೇಕು.

ಎಂ.ಎನ್. ಶ್ರೀರಾಮ್, ಸೋಷಿಯಲಿಸ್ಟ್ ಯೂನಿಟಿ ಆಫ್ ಇಂಡಿಯಾ (ಕಮ್ಯೂನಿಸ್ಟ್) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಸಾರ್ವಜನಿಕ ಸಾರಿಗೆಯಾಗಿರುವ ಮೆಟ್ರೊ ಪ್ರಯಾಣ ದರ ಏರಿಕೆ ಮಾಡುವ ಅಗತ್ಯವಿತ್ತೇ? ಬೆಂಗಳೂರಿಗರ ನಾಡಿಮಿಡಿತವಾಗಿರುವ ಮೆಟ್ರೊದಲ್ಲಿ ಪ್ರತಿನಿತ್ಯ ಲಕ್ಷಾಂತರ ಪ್ರಯಾಣಿಕರು ಸಂಚರಿಸುತ್ತಾರೆ. ದರ ಏರಿಕೆ ಮಾಡಿರುವುದರಿಂದ ವಿದ್ಯಾರ್ಥಿಗಳೂ ಸೇರಿದಂತೆ ಸಾರ್ವಜನಿಕರಿಗೆ ಹೊರೆಯಾಗಿದೆ. ಕೆಲ ಮಾರ್ಗಗಳಲ್ಲಿ ಶೇಕಡ 80ಕ್ಕಿಂತ ಹೆಚ್ಚು ದರ ಏರಿಕೆಯಾಗಿದೆ. ಟೋಕನ್ ಮೂಲಕ ಪ್ರಯಾಣಿಸುವವರಿಗೆ ಶೇ 50ರಷ್ಟು ಅಧಿಕವಾದರೆ, ಸ್ಮಾರ್ಟ್ ಕಾರ್ಡ್ ಮೂಲಕ ಪ್ರಯಾಣಿಸುವವರಿಗೆ ಶೇ 45ರಷ್ಟು ದರ ಹೆಚ್ಚಾಗಿದೆ. ಕೂಡಲೇ ಈ ದರಗಳನ್ನು ಪರಿಷ್ಕರಿಸಬೇಕು.

ಅರ್ಚನಾ ಆರ್., ಸಹಾಯಕ ಪ್ರಾಧ್ಯಾಪಕಿ

ನಮ್ಮ ಮೆಟ್ರೊ 'ನಿಮ್ಮ' ಮೆಟ್ರೊ ಎನ್ನುವಂತಾಗಿದೆ. ಇಷ್ಟೊಂದು ದರ ಏರಿಸಲು ಕಾರಣವೇನೆಂದು ಸರ್ಕಾರ ಜನಸಾಮಾನ್ಯರಿಗೆ ತಿಳಿಸಬೇಕು. ಮೆಟ್ರೊ ಪ್ರಯಾಣಿಕರೆಲ್ಲ ಇದರ ವಿರುದ್ಧ ಬೃಹತ್ ವಿರೋಧ ದಾಖಲಿಸಬೇಕು. ಒಂದು ಕಡೆ ಗ್ಯಾರಂಟಿ ಯೋಜನೆಗಳನ್ನು ನೀಡುತ್ತೇವೆಂದು ಪ್ರಚಾರ ಗಿಟ್ಟಿಸಿಕೊಳ್ಳುವ ಸರ್ಕಾರಗಳು, ಇನ್ನೊಂದೆಡೆ ಜನಸಾಮಾನ್ಯರನ್ನು ಹಗಲು ದರೋಡೆ ಮಾಡುತ್ತಿವೆ. ಪ್ರತಿದಿನ ಮೆಟ್ರೊ ಅವಲಂಬಿಸಿರುವ ದುಡಿಯುವ ವರ್ಗಕ್ಕೆ ಇದು ಅತಿ ದೊಡ್ಡ ಹೊಡೆತವಾಗಿದೆ.

ಅಣೇಕಟ್ಟೆ ವಿಶ್ವನಾಥ್, ಚಿಕ್ಕಬಾಣಾವರ

ಸಾರ್ವಜನಿಕ ಸಾರಿಗೆ ಲಾಭಗಳಿಸುವ ಉದ್ದೇಶದಿಂದ ಸೇವೆ ನೀಡುವುದಲ್ಲ. ವಾಹನಗಳ ಸಂಖ್ಯೆ ಏರಿಕೆಯಿಂದ ಬೆಂಗಳೂರಿನ ಸಂಚಾರ ದಟ್ಟಣೆ ಹೆಚ್ಚಾಗಿದೆ. ಇದೀಗ ಮೆಟ್ರೊ ತುಟ್ಟಿಯಾಗಿದ್ದು, ಈ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳಲಿದೆ. ರಾಜರಾಜೇಶ್ವರಿ ನಗರದಿಂದ ಮಹಾತ್ಮ ಗಾಂಧಿ ರಸ್ತೆವರೆಗಿನ ಪ್ರಯಾಣ ದರ ಬಹುತೇಕ ದುಪ್ಪಟ್ಟಾಗಿದೆ. ತಿಂಗಳ ಬಜೆಟ್‌ನಲ್ಲಿ ಮೆಟ್ರೊ ಟಿಕೆಟ್‌ಗೆ ಹಣ ಎತ್ತಿಡುವುದು ಈಗ ದೊಡ್ಡ ತಲೆನೋವಾಗಿದೆ. ಈ ಪ್ರಮಾಣದ ದರ ಏರಿಕೆ ನಿಜಕ್ಕೂ ಅಮಾನವೀಯ.

ಆಶಿಕಾ ಬಿ. ರಾಜರಾಜೇಶ್ವರಿ ನಗರ

ನಾನು ನಿತ್ಯ ಕಬ್ಬನ್ ಉದ್ಯಾನ ಮೆಟ್ರೊ ನಿಲ್ದಾಣದಿಂದ ಜಯನಗರಕ್ಕೆ ಪ್ರಯಾಣಿಸುತ್ತೇನೆ.₹ 30 ಇದ್ದ ಪ್ರಯಾಣ ದರ ಈಗ ₹ 50ಕ್ಕೆ ಏರಿಕೆಯಾಗಿದೆ. ಈ ಪ್ರಮಾಣದ ದರ ಹೆಚ್ಚಳ ನಿಜಕ್ಕೂ ಅಚ್ಚರಿಯಾಗಿದೆ. ಇದು ಸಾರ್ವಜನಿಕ ಸಾರಿಗೆ ಬಳಕೆಯನ್ನು ನಿರುತ್ಸಾಹಗೊಳಿಸುತ್ತದೆ. ಇದರಿಂದ ಸಂಚಾರ ಸಮಸ್ಯೆ ಇನ್ನಷ್ಟು ಹೆಚ್ಚಳವಾಗುತ್ತದೆ. ಹಣದುಬ್ಬರದ ಜೊತೆಗೆ ಈ ದರ ಏರಿಕೆಯನ್ನೂ ಸಹಿಸಿಕೊಳ್ಳಬೇಕಾಗಿದೆ. ನಮ್ಮಂತಹ ಮಧ್ಯಮ ವರ್ಗಕ್ಕೆ ಇದು ದೊಡ್ಡ ಬರೆ. ಈಗ ಮೆಟ್ರೊಗಿಂತ ದ್ವಿಚಕ್ರ ವಾಹನವೇ ಉತ್ತಮ.

ರಾಶಿದ್ ಅಹ್ಮದ್, ಆರ್.ಟಿ. ನಗರ

ಮೆಟ್ರೊ ದರ ಹೆಚ್ಚಳ ಮಾಡುವ ಅಗತ್ಯವಿರಲಿಲ್ಲ. ಮೆಟ್ರೊ ದರವನ್ನು ₹5 ಅಥವಾ ₹10 ಹೆಚ್ಚಿಸದೇ ಶೇಕಡ 50ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ದರ ಹೆಚ್ಚಳ ಮಾಡಲಾಗಿದೆ. ಕೆಲ ಭಾಗಗಳಲ್ಲಿ ಶೇ 100ರಷ್ಟು ಹೆಚ್ಚಳವಾಗಿದೆ. ಸಮಯ ಉಳಿಸಲು ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದೇವೆ. ಈಗ ದರ ಏರಿಕೆ ಮಾಡಿರುವುದು ನಮಗೆ ಬಹಳ ಬೇಸರ ತಂದಿದೆ. ಈಗ ಮೆಟ್ರೊ ಪ್ರಯಾಣ ಬಿಟ್ಟು ಆಟೊದಲ್ಲಿ ಓಡಾಡುವ ಪರಿಸ್ಥಿತಿ ಎದುರಾಗಿದೆ.

ಸುಷ್ಮಾ, ಆರ್.ಟಿ. ನಗರ

ಮೆಟ್ರೊ ಪ್ರಯಾಣ ದರದಲ್ಲಿ ಶೇಕಡ 10 ರಿಂದ 15ರಷ್ಟು ಹೆಚ್ಚಳ ಮಾಡಿದ್ದರೆ ಯಾವುದೇ ಸಮಸ್ಯೆ ಆಗುತ್ತಿರಲಿಲ್ಲ. ಆದರೆ ನಮ್ಮ ಮೆಟ್ರೊದವರು ಅತಿಹೆಚ್ಚು ಪ್ರಮಾಣದ ಪ್ರಯಾಣ ದರ ಏರಿಕೆ ಮಾಡಿದ್ದರಿಂದ ಮಧ್ಯಮ ವರ್ಗದವರಿಗೆ ಹೊರೆ ಆಗಲಿದೆ. ಸಂಬಳದಲ್ಲಿ ಮೆಟ್ರೊ ಪ್ರಯಾಣಕ್ಕೆ ಎಂದು ಇಂತಿಷ್ಟು ಹಣ ಎತ್ತಿ ಇಡಲಾಗುತ್ತಿತ್ತು. ದಿಢೀರನೆ ದರ ಏರಿಕೆ ಮಾಡಿರುವುದು ಸರಿಯಲ್ಲ.

ಹರಿಪ್ರಸಾದ್, ಎಲೆಕ್ಟ್ರಾನಿಕ್ ಸಿಟಿ

ದಾಸರಹಳ್ಳಿ ಮೆಟ್ರೊ ನಿಲ್ದಾಣದಿಂದ ಮಹಾತ್ಮ ಗಾಂಧಿ ರಸ್ತೆ ಮೆಟ್ರೊ ನಿಲ್ದಾಣಕ್ಕೆ ಈ ಹಿಂದೆ ₹42.72 ಪ್ರಯಾಣ ದರ ಇತ್ತು. ಈಗ ₹ 70 ನೀಡುತ್ತಿದ್ದೇನೆ. ನನಗೆ ಬರುವ ಸಂಬಳದ ಅರ್ಧ ಭಾಗ ಮೆಟ್ರೊ ಪ್ರಯಾಣಕ್ಕೆ ವ್ಯಯಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಈ ಹಿಂದೆ ಮೆಟ್ರೊ ಪ್ರಯಾಣಕ್ಕೆ ತಿಂಗಳಿಗೆ ₹3 ಸಾವಿರ ಖರ್ಚಾಗುತ್ತಿತ್ತು. ಈಗ ₹5 ಸಾವಿರಕ್ಕೂ ಹೆಚ್ಚು ಖರ್ಚಾಗಲಿದೆ. ನಾವು ದುಡಿಯುವ ಹಣ ಮೆಟ್ರೊ ಪ್ರಯಾಣಕ್ಕೆ ಖರ್ಚಾಗಿ ಉಳಿತಾಯವೇ ಇಲ್ಲದಂತಾಗಲಿದೆ.

ಲಕ್ಷ್ಮಿ, ದಾಸರಹಳ್ಳಿ

ಮೆಟ್ರೊ ಶೇಕಡ 50ರಷ್ಟು ದರ ಹೆಚ್ಚಳ ಮಾಡುವ ಮೂಲಕ ಪ್ರಯಾಣಿಕರಿಗೆ ಅನ್ಯಾಯ ಮಾಡಿದೆ. ಕೆಲ ದಿನಗಳ ಹಿಂದೆ ಬಸ್ ಪ್ರಯಾಣ ದರ ಏರಿಸಲಾಗಿತ್ತು. ಮಧ್ಯಮ ವರ್ಗದವರು ಹೆಚ್ಚಾಗಿ ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದು, ಮತ್ತೊಂದು ಆರ್ಥಿಕ ಹೊರೆ ನಿಭಾಯಿಸುವ ಸವಾಲು ಎದುರಾಗಿದೆ. ಜೀವನ ವೆಚ್ಚ ಅಧಿಕವಾಗುತ್ತಿದೆ.

ಅರುಣಕುಮಾರ್, ವಿಜಯನಗರ

ನಮ್ಮ ಮೆಟ್ರೊ ದರ ಹೆಚ್ಚಳ ದೆಹಲಿ ರಾಜ್ಯದ ಚುನಾವಣೆಯ ನಂತರ ಕೇಂದ್ರ ಸರ್ಕಾರ ಬೆಂಗಳೂರಿಗರಿಗೆ ನೀಡುತ್ತಿರುವ ಕೊಡುಗೆ. ಮೋದಿ ಸರ್ಕಾರದ ಜನ ವಿರೋಧಿ ನಿಲುವುಗಳನ್ನು ಸ್ಪಷ್ಟಪಡಿಸುತ್ತಿದೆ. ಬಿಎಂಆರ್‌ಸಿಎಲ್ ತನ್ನ ಹೇಳಿಕೆಯಲ್ಲಿ ದೆಹಲಿ ಚುನಾವಣೆಯ ನಿಮಿತ್ತ ದರ ಏರಿಕೆ ಮಾಡಿಲ್ಲವೆಂದು ಹೇಳಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ.

ಜಗದೀಶ್ ವಿ. ಸದಂ, ಆಮ್ ಆದ್ಮಿ ಪಕ್ಷದ ಮಾಧ್ಯಮ ಸಂಚಾಲಕ

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: **96060 38256**

'ದರ ಹೆಚ್ಚಳ ಹಿಂಪಡೆಯದಿದ್ದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಪ್ರಯಾಣ ದರ ಏರಿಕೆಯನ್ನು ರಾಜ್ಯ ಸರ್ಕಾರ ಹಿಂಪಡೆಯದೇ ಇದ್ದರೆ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಬಿಜೆಪಿ ಎಚ್ಚರಿಕೆ ನೀಡಿದೆ.

ಮೆಟ್ರೊ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರರಾವ್ ಅವರಿಗೆ ಬಿಜೆಪಿ ಶಾಸಕರಾದ ರವಿಸುಬ್ರಹ್ಮಣ್ಯ ಮತ್ತು ಸಿ.ಕೆ.ರಾಮಮೂರ್ತಿ ನೇತೃತ್ವದ ನಿಯೋಗ ಸೋಮವಾರ ಮನವಿ ಪತ್ರ ಸಲ್ಲಿಸಿತು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರವಿಸುಬ್ರಹ್ಮಣ್ಯ ,'ಮೆಟ್ರೊ ಪ್ರಯಾಣ ದರ ಏರಿಕೆ ಮೂಲಕ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ನಗರದ ಜನತೆಗೆ ಬಹುದೊಡ್ಡ ಆಘಾತ ನೀಡಿದೆ. ಆದರೆ, ಯಾವುದೇ ಸೇವೆಯಲ್ಲಿ ಸುಧಾರಣೆ ಮಾತ್ರ ಆಗಿಲ್ಲ. ಒಮ್ಮೆಲೆ ಶೇಕಡ 46 ರಿಂದ ಶೇ 50 ರಷ್ಟು ಏರಿಕೆ ಮಾಡಿದೆ. ಈ ಮೂಲಕ ದೇಶದಲ್ಲೇ ಅತ್ಯಂತ ದುಬಾರಿ ಮೆಟ್ರೊ ಸೇವೆ ಎನಿಸಿದೆ' ಎಂದು ತಿಳಿಸಿದರು.

ಮೆಟ್ರೊ ಯೋಜನೆಗಳನ್ನು ಕಾಲಮಿತಿಯಲ್ಲಿ ಜಾರಿಗೊಳಿಸಲು ವಿಫಲವಾದ ಕಾರಣ ಯೋಜನಾ ವೆಚ್ಚವು ದುಪ್ಪಟ್ಟಾಗಿದೆ. 18 ಕಿ.ಮೀ ಹಳದಿ ಮಾರ್ಗವು ಸಿದ್ಧವಾಗಿದ್ದರೂ ರೈಲು ಬೋಗಿಗಳು ಇಲ್ಲದೇ ಸೇವೆ ನೀಡಲು ಸಾಧ್ಯವಾಗುತ್ತಿಲ್ಲ. ಮುಂದಾಲೋಚನೆ ಇಲ್ಲದೆ, ಸೂಕ್ತ ತಯಾರಿ ಇಲ್ಲದ ಕಾರಣ ಕೋಟ್ಯಂತರ ರೂಪಾಯಿ ನಷ್ಟ ಅನುಭವಿಸುವಂತಾಗಿದೆ. ಅಧಿಕಾರಿಗಳ ಅದಕ್ಷತೆಗೆ ನಾಗರಿಕರು ದಂಡ ತೆರುವಂತಾಗಿದೆ ಎಂದು ಅವರು ತಿಳಿಸಿದರು.

ಬಿಜೆಪಿ ಕಾರ್ಯಕರ್ತರು ಮೆಟ್ರೊ ನಿಲ್ದಾಣದ ಬಳಿ ಪ್ರತಿಭಟನೆ ನಡೆಸಿದರು.

ಸಿ.ಕೆ.ರಾಮಮೂರ್ತಿ ಮಾತನಾಡಿ, 'ನಗರದ ನಾಗರಿಕರನ್ನು ಸುಲಿಗೆ ಮಾಡಲು ಬಿಡುವುದಿಲ್ಲ. ದರ ಏರಿಕೆ ಹಿಂದಕ್ಕೆ ಪಡೆಯದೇ ಇದ್ದರೆ, ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಮೆಟ್ರೊ ಕೇಂದ್ರ ಮತ್ತು ರಾಜ್ಯದ ಸಹಭಾಗಿತ್ವದ ಯೋಜನೆ. ಆದರೆ, ಮೆಟ್ರೊ ನಿರ್ಮಾಣ, ಕಾರ್ಯನಿರ್ವಹಣೆ ಮತ್ತು ಜಾಲದ ವಿಸ್ತರಣೆಯ ಏಜೆನ್ಸಿ ರಾಜ್ಯ ಸರ್ಕಾರವೇ ಆಗಿದೆ. ಮೆಟ್ರೊ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯೂ ರಾಜ್ಯ ಸರ್ಕಾರದ್ದಾಗಿದೆ. ದರ ಪರಿಷ್ಕರಣೆ ಸಮಿತಿಯನ್ನು ರಚಿಸುವುದೂ ಕೂಡ ರಾಜ್ಯ ಸರ್ಕಾರ. ರಾಜ್ಯಕ್ಕೆ ನಿರ್ವಹಣೆ ಮಾಡಲು ಆಗದಿದ್ದರೆ ಅದರ ನಿಯಂತ್ರಣವನ್ನು ಕೇಂದ್ರ ಸರ್ಕಾರಕ್ಕೆ ನೀಡಲಿ ಎಂದು ಬಿಜೆಪಿ ವಕ್ತಾರ ಎಸ್.ಪ್ರಕಾಶ್ ಆಗ್ರಹಿಸಿದರು.

ನಿಯೋಗದಲ್ಲಿ ಬಿಜೆಪಿ ರಾಜ್ಯ ಘಟಕದ ಮುಖ್ಯ ವಕ್ತಾರ ಅಶ್ವಥ್ ನಾರಾಯಣ್, ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಹರೀಶ್, ಮಾಜಿ ಮೇಯರ್ ಗೌತಮ್ ಮತ್ತು ಇತರರು ಇದ್ದರು.

ದರ ಏರಿಕೆ ವಿರೋಧಿಸಿ ನಗರದ ವಿವಿಧ ಮೆಟ್ರೊ ನಿಲ್ದಾಣಗಳ ಬಳಿ ಬಿಜೆಪಿ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

'ದಮ್ ಇದ್ದರೆ ಬಿಜೆಪಿ ಸಂಸದರು ಮೆಟ್ರೊ ಪ್ರಯಾಣ ದರ ಕಡಿಮೆ ಮಾಡಿಸಲಿ'

ಬೆಂಗಳೂರು: 'ರಾಜ್ಯವನ್ನು ಪ್ರತಿನಿಧಿಸುವ ಬಿಜೆಪಿ ಸಂಸದರಿಗೆ ದಮ್ ಇದ್ದರೆ 'ನಮ್ಮ ಮೆಟ್ರೊ' ಪ್ರಯಾಣ ದರ ಕಡಿಮೆ ಮಾಡಿಸಲಿ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಮೆಟ್ರೊ ಪ್ರಯಾಣ ದರ ಹೆಚ್ಚು ಮಾಡಿದಾಗ ರಾಜ್ಯ ಸರ್ಕಾರದ ವಿರುದ್ಧ ಗೂಬೆ ಕೂರಿಸುವುದು, ಕಡಿಮೆ ಮಾಡಿದಾಗ ಕೇಂದ್ರ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುವುದು ಸರಿಯಲ್ಲ' ಎಂದರು.

'ಮೆಟ್ರೊ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಈ ಹಿಂದೆ ಮೆಟ್ರೊ ಪ್ರಯಾಣ ದರ ಏರಿಕೆ ಮಾಡುವುದಿಲ್ಲ ಎಂದಾಗ ಬಿಜೆಪಿ ಸಂಸದರು ಕೇಂದ್ರ ಸರ್ಕಾರಕ್ಕೆ ಧನ್ಯವಾದ ಹೇಳಿದ್ದರು. ಆದರೆ, ಈಗ ದರ ಏರಿಕೆ ಮಾಡಿದಾಗ ನಾವು (ರಾಜ್ಯ ಸರ್ಕಾರ) ಜವಾಬ್ದಾರಿಯೇ? ಈಗಲೂ ಕೇಂದ್ರ ಸರ್ಕಾರವನ್ನು ಹೋಗಿ ಕೇಳಲಿ' ಎಂದರು.

'ನಾವು ಬಸ್ ಪ್ರಯಾಣ ದರ ಏರಿಕೆ ಮಾಡಿದಾಗ ಬಿಜೆಪಿ ನಾಯಕರು ಗುಲಾಬಿ ಹೂ ಹಿಡಿದುಕೊಂಡು ಬಸ್ ನಿಲ್ದಾಣಕ್ಕೆ ಹೋಗಿ ಪ್ರಯಾಣಿಕರ ಬಳಿ ಕ್ಷಮೆ ಕೇಳಿದ್ದರು. ಈಗಲೂ ಬಿಜೆಪಿ ನಾಯಕರು ಮೆಟ್ರೊ ನಿಲ್ದಾಣಕ್ಕೆ ಹೋಗಿ ಪ್ರಧಾನಿ ನರೇಂದ್ರ ಮೋದಿ ಪರವಾಗಿ ಕ್ಷಮೆ ಕೇಳಲಿ. ಬೇಕಿದ್ದರೆ ಗುಲಾಬಿ ಹೂ ನಾವೇ ಖರೀದಿಸಿ ಕೊಡುತ್ತೇವೆ' ಎಂದೂ ಹೇಳಿದರು.

ವೈದ್ಯರ ಸಮಯ ಪ್ರಜ್ಞೆಯಿಂದ ಕ್ಯಾಬ್ ಚಾಲಕನ ಜೀವ ರಕ್ಷಣೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಉಬರ್ ಚಾಲಕನೊಬ್ಬ ಕಾರು ಚಲಾಯಿಸುವ ವೇಳೆ ಮೂರ್ಛೆತಪ್ಪಿ ನಿಯಂತ್ರಣ ತಪ್ಪಿದ್ದ ವೇಳೆ ಅದೇ ಕ್ಯಾಬ್‌ನಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರು ವೈದ್ಯರ ಸಮಯ ಪ್ರಜ್ಞೆಯಿಂದ ಕ್ಯಾಬ್ ಚಾಲಕನ ಪ್ರಾಣ ಉಳಿದಿದೆ.

ಡಾ. ರಾಜಸೆಲ್ವ ರಾಜನ್ ಹಾಗೂ ಡಾ. ರವೀಂದ್ರ ವೈಟ್‌ಫೀಲ್ಡ್ ಬಳಿಯ ಮೆಡಿಕವರ್ ಆಸ್ಪತ್ರೆಗೆ ತೆರಳಲು ಗರುಡಾಚಾರಪಾಳ್ಯದಿಂದ ಉಬರ್ ಕಾರ್ ಬುಕ್ ಮಾಡಿದ್ದರು. ಕಾರು ಸ್ವಲ್ಪ ಮುಂದೆ ಸಾಗಿದಾಗ ಚಾಲಕ ಮೂರ್ಛೆ ತಪ್ಪಿದರು. ಆಗ ಕಾರು ನಿಯಂತ್ರಣ ತಪ್ಪಿ, ಮುಂದೆ ಇದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆಯುತ್ತಿತ್ತು. ಅಷ್ಟರಲ್ಲಿ ಹಿಂದೆ ಕುಳಿತಿದ್ದ ಈ ಇಬ್ಬರು ವೈದ್ಯರು, ಕಾರಿನ ಹ್ಯಾಂಡ್ ಬ್ರೇಕ್ ಹಾಕಿದರು. ಕಾರು ನಿಂತಿತು. ತಕ್ಷಣ ಚಾಲಕನಿಗೆ ಪ್ರಾಥಮಿಕಚಿಕಿತ್ಸೆ ನೀಡಿ ಆತನನ್ನು ಪ್ರಾಣಪಾಯ ದಿಂದ ಪಾರು ಮಾಡಿದರು.

ಬಿಲ್ ಪಾವತಿ ಮಾಡುವಂತೆ ವೆಂಡರ್ಸ್‌ಗಳ ಆಗ್ರಹ

ಕಿಯೋನಿಕ್ಸ್ ಕಚೇರಿ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿಯಿರುವ ಬಿಲ್ ಪಾವತಿ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ವಿದ್ಯುನ್ಮಾನ ನಿಗಮದ (ಕಿಯೋನಿಕ್ಸ್) ಶೇಷಾದ್ರಿಪುರದ ಕಚೇರಿ ಎದುರು ವೆಂಡರ್ಸ್‌ಗಳು ಸೋಮವಾರ ಪ್ರತಿಭಟನೆ ನಡೆಸಿದರು.

ಕಿಯೋನಿಕ್ಸ್ ಎಂಪ್ಯಾನಲ್ಡ್ ವೆಂಡರ್ಸ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ವಸಂತ ಕೆ. ಬಂಗೇರ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

'ಸುಮಾರು 500 ಮಂದಿಯ ಬಿಲ್ ಬಾಕಿ ಉಳಿದಿದೆ. 20 ತಿಂಗಳಿಂದ ಹೋರಾಟ ನಡೆಸಿದ್ದರೂ ಬಿಲ್ ಪಾವತಿ ಆಗಿಲ್ಲ' ಎಂದು ಆಕ್ರೋಶ ಹೊರಹಾಕಿದರು.

'ಬಿಲ್ ಪಾವತಿಸಬೇಕಾದರೆ ಶೇ 12ರಷ್ಟು ಕಮಿಷನ್ ನೀಡಬೇಕು. ಕಮಿಷನ್ ನೀಡಿದರೆ ಹಣ ಬಿಡುಗಡೆ ಮಾಡಲಾಗುವುದು ಎಂದು ಅಧಿಕಾರಿಯೊಬ್ಬರು ಹೇಳಿದ್ದರು. ದೂರು ನೀಡಿದ ಮೇಲೆ ಆ ಅಧಿಕಾರಿಯನ್ನು ವರ್ಗಾವಣೆ ಮಾಡಿ ಬೇರೆ ಅಧಿಕಾರಿಯನ್ನು ನೇಮಿಸಲಾಗಿದೆ. ತನಿಖೆ ನೆಪದಲ್ಲಿ ವೆಂಡರ್ಸ್‌ಗಳಿಗೆ ಕಿರುಕುಳ ಆರಂಭವಾಗಿದೆ' ಎಂದು ಪ್ರತಿಭಟನಕಾರರು ದೂರಿದರು.

ದಯಾಮರಣ ಕೋರಿ ರಾಷ್ಟ್ರಪತಿ, ಪ್ರಧಾನಿಯವರಿಗೆ ಪತ್ರ ಬರೆದಿದ್ದರೂ ನ್ಯಾಯ ಸಿಕ್ಕಿಲ್ಲ ಎಂದು ಹೇಳಿದರು.

ಕಿಯೋನಿಕ್ಸ್ ಕಚೇರಿ ಎದುರು ವಿಷ ಸೇವಿಸಿ ಪ್ರತಿಭಟನೆ ನಡೆಸುವುದಾಗಿ ವೆಂಡರ್ಸ್‌ಗಳು ಪ್ರಕಟಣೆ ನೀಡಿದ್ದರು. ಇದರಿಂದ ಕಿಯೋನಿಕ್ಸ್ ಕಚೇರಿಯ ಎದುರು ಭದ್ರತೆ ಹೆಚ್ಚಿಸಲಾಗಿತ್ತು. ಪ್ರತಿಭಟನಕಾರರು ಬಂದು ಘೋಷಣೆ ಕೂಗುತ್ತಿದ್ದಂತೆಯೇ ಪೊಲೀಸರು ವಶಕ್ಕೆ ಪಡೆದುಕೊಂಡರು. ನಂತರ ಬಿಡುಗಡೆ ಮಾಡಿದರು.

ಶೇಷಾದ್ರಿಪುರದ ಕಿಯೋನಿಕ್ಸ್ ಕಚೇರಿ ಎದುರು ಕಿಯೋನಿಕ್ಸ್ ಎಂಪ್ಯಾನಲ್ಡ್ ವೆಂಡರ್ಸ್ ವೆಲ್ಫೇರ್ ಅಸೋಸಿಯೇಷನ್ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು

‘ಮಿನಿ ಚಿತ್ರಮಂದಿರಕ್ಕೆ ಸಮ್ಮತಿ’

‘ಚಿಣ್ಣರ ಚಂದ್ರ’ ಮಕ್ಕಳ ಚಿತ್ರಯಾತ್ರೆಯಲ್ಲಿ ಸಾಹಿತಿ ಬರಗೂರು ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಜಿಲ್ಲೆಗೂ ಒಂದು ಮಿನಿ ಚಿತ್ರಮಂದಿರ ನಿರ್ಮಾಣ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿಸಿದ್ದು, ಈ ಬಾರಿಯ ಬಜೆಟ್‌ನಲ್ಲಿ ಘೋಷಣೆ ಮಾಡುವ ವಿಶ್ವಾಸವಿದೆ ಎಂದು ಸಾಹಿತಿ, ಚಿತ್ರ ನಿರ್ದೇಶಕ ಬರಗೂರು ರಾಮಚಂದ್ರಪ್ಪ ಹೇಳಿದರು.

ಬದಲಾವಣೆಯತ್ತ ಬಳಗ ಆಯೋಜಿಸಿದ್ದ ‘ಚಿಣ್ಣರ ಚಂದ್ರ’ ಕನ್ನಡ ಮಕ್ಕಳ ಚಿತ್ರಯಾತ್ರೆಯ (ಶಾಲೆಯಿಂದ ಶಾಲೆಗೆ) ಉದ್ಘಾಟನಾ ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಬದಲಾದ ಕಾಲಘಟ್ಟದಲ್ಲಿ ಸವಾಲುಗಳನ್ನು ಮೆಟ್ಟಿನಿಂತು ಕಲಾತ್ಮಕ ಚಿತ್ರಗಳನ್ನು ನಿರ್ಮಾಣ ಮಾಡಿದರೂ, ಅಂತಹ ಚಿತ್ರಗಳಿಗೆ ಚಿತ್ರಮಂದಿರಗಳೇ ಸಿಗುತ್ತಿಲ್ಲ. ಸರ್ಕಾರ ಪ್ರತಿ ಜಿಲ್ಲೆಯಲ್ಲೂ 100–150 ಆಸನಗಳಿರುವ ಮಿನಿ ಚಿತ್ರಮಂದಿರಗಳನ್ನು ನಿರ್ಮಾಣ ಮಾಡಿದರೆ ಚಿತ್ರ ಬಿಡುಗಡೆ ಮಾಡಲು ಅನುಕೂಲ ಆಗುತ್ತದೆ. ಈ ಕೋರಿಕೆಯನ್ನು ಸಿದ್ದರಾಮಯ್ಯ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು.

ನಟ ಕುಮಾರ್ ಗೋವಿಂದ್ ‘ಚಿಣ್ಣರ ಚಂದ್ರ’ ಚಿತ್ರದ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಶಾಲೆಯಿಂದ ಶಾಲೆಗೆ ಚಿತ್ರಯಾತ್ರೆಗೆ ಚಾಲನೆ ನೀಡಿದರು. ಬಾಲನಟ ನಿಕ್ಷೇಪ್, ಬರಗೂರು ರಾಮಚಂದ್ರಪ್ಪ, ಆಕಾಂಕ್ಷ್ ಬರಗೂರು, ಶಮಿತಾ ಮಲ್ನಾಡ್, ಬಿ.ಎನ್. ಗೋವಿಂದರಾಜು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸಿನಿಮಾಗಳನ್ನು ಜನರಿಗೆ ತಲುಪಿಸುವ ಪರ್ಯಾಯ ಮಾರ್ಗವೂ ಇದೆ. ತಮ್ಮ ನಿರ್ದೇಶನದ ‘ಶಾಂತಿ’ ಚಿತ್ರವನ್ನು ಬೆಂಗಳೂರಿನಿಂದ ಬೆಳಗಾವಿಯವರೆಗೆ 108 ಪ್ರದರ್ಶನಗಳಿಗೆ ಸಮಾನ ಮನಸ್ಕರು ವ್ಯವಸ್ಥೆ ಮಾಡಿದ್ದರು. ಈ ಚಿತ್ರ ಗಿನ್ನೆಸ್ ದಾಖಲೆಗೂ ಸೇರಿತು. ‘ಏಕಲವ್ಯ’ ಮಕ್ಕಳ ಚಿತ್ರದ ನಂತರ ‘ಚಿಣ್ಣರ ಚಂದ್ರ’ ಎರಡನೇ ಪ್ರಯತ್ನ. ಪ್ರತಿ ಶಾಲೆಗಳಲ್ಲೂ ಪ್ರದರ್ಶನ ನಡೆಯಲಿದೆ ಎಂದರು.

ನಟ ಕುಮಾರ್ ಗೋವಿಂದ್ ಚಿತ್ರಯಾತ್ರೆಗೆ ಚಾಲನೆ ನೀಡಿದರು. ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘದ ಗೌರವಾಧ್ಯಕ್ಷ ತಿಮ್ಮಯ್ಯ ಪುರ್ಲೆ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನಾಗೇಶ್, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ನುಗ್ಲಿ, ಸಾಹಿತಿ ರಾಜಪ್ಪ ದಳವಾಯಿ, ಡಿಡಿಪಿಐ ಕೆ.ಜಿ. ಆಂಜನಪ್ಪ, ನಿರ್ಮಾಪಕ ಬಿ.ಎನ್. ಗೋವಿಂದರಾಜು ಉಪಸ್ಥಿತರಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆ

ಹೂಡಿಕೆದಾರರ ಸಮಾವೇಶಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಹೂಡಿಕೆದಾರರ ಸಮಾವೇಶ ವಿರೋಧಿಸಿ, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ್ಮಿಕರ ಸಂಘದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ರೈತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಗರ್ ಹುಕುಂ, ಅರಣ್ಯ ಸಾಗುವಳಿದಾರರ ಹಕ್ಕುಗಳನ್ನು ಸರ್ಕಾರ ರಕ್ಷಣೆ ಮಾಡಬೇಕು. ಬಲವಂತದ ಭೂಸ್ವಾಧೀನ ಕೈಬಿಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರೈತರ ಸಾಲ ಮನ್ನಾ ಮಾಡಬೇಕು. ರೈತರು ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು. ಜನಪರ ಭೂಸ್ವಾಧೀನ ನೀತಿಯನ್ನು ಜಾರಿಗೆ ತರಬೇಕು. ಗ್ರಾಮೀಣ ಪ್ರದೇಶದಲ್ಲಿರುವ ವಸತಿ ರಹಿತರಿಗೆ ನಿವೇಶನ ಒದಗಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರವು ಕಾರ್ಪೊರೇಟ್ ಸಂಸ್ಥೆಗಳಿಗೆ ಲೂಟಿಗೆ ಅವಕಾಶ ಕಲ್ಪಿಸುತ್ತಿದೆ. ಹೂಡಿಕೆದಾರರ ಸಮಾವೇಶ ನಡೆಸಿ ರಾಜ್ಯದ ರೈತ–ಕೂಲಿ ಕಾರ್ಮಿಕರ ಭೂಮಿ ಹಕ್ಕಿಗೆ ಆತಂಕವನ್ನು ತಂದೊಡ್ಡುತ್ತಿದೆ. ಕಾರ್ಪೊರೇಟ್ ಸಂಸ್ಥೆಗಳ ಭೂ–ಕಬಳಿಕೆಗೆ ಬೆಂಬಲ ನೀಡುವಂತಹ ಭೂಸ್ವಾಧೀನ ಕಾಯ್ದೆಗಳನ್ನು ರಾಜ್ಯ ಸರ್ಕಾರ ಮುಂದುವರೆಸುತ್ತಿದೆ. ಇಂತಹ ಕಾಯ್ದೆಗಳನ್ನು ತಕ್ಷಣವೇ ವಾಪಸ್ ಪಡೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಯು.ಬಸವರಾಜು, ಎಂ.ಪುಟ್ಟರಾಜು, ಟಿ.ಯಶವಂತ, ಚಂದ್ರಪ್ಪ ಹೊಸ್ಕೇರಾ ಸೇರಿದಂತೆ ಹಲವರು ಭಾಗವಹಿಸಿದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು —ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಅಂಬೇಡ್ಕರ್ ಕುರಿತ ರಸಪ್ರಶ್ನೆ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಹಿರಿಯ ಚಿಂತಕ ಶಿವಶಂಕರ್, ವೂಡೇ ಪಿ ಕೃಷ್ಣ, ಸುರೇಶ್ ಗೌತಮ್, ಕಾಲೇಜು ಪ್ರಾಂಶುಪಾಲ ಜಯರಾಮ್, ಮಂಜುನಾಥ್ ಮತ್ತಿತರರು ಇದ್ದಾರೆ

‘ಮನುಜ ಮತದ ನಿಜ ಪ್ರವರ್ತಕ ಅಂಬೇಡ್ಕರ್’

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಮನುಷ್ಯರು ಪರಸ್ಪರ ಪ್ರೀತಿಯಿಂದ ಬದುಕಬೇಕು. ತಾವು ಸ್ವತಂತ್ರವಾಗಿ ಬದುಕಿ ಮತ್ತೊಬ್ಬರಿಗೂ ಬದುಕುವ ಪರಿಸರವನ್ನು ಸೃಷ್ಟಿಸಿ-ಕೊಡಬೇಕು. ಅದುವೇ ಅಂಬೇಡ್ಕರ್ ವಾದ’ ಎಂದು ಹಿರಿಯ ಚಿಂತಕ ಶಿವಶಂಕರ್ ಅಭಿಪ್ರಾಯಪಟ್ಟರು.

ಕೆಂಗೇರಿ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಅಂಬೇಡ್ಕರ್ ಓದು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಬೇಡ್ಕರ್ ಯಾವುದೇ ಜನಾಂಗಕ್ಕೆ, ವಿಚಾರಕ್ಕೆ ಸೀಮಿತವಾದ ವ್ಯಕ್ತಿಯಲ್ಲ. ಮಾನವೀಯ ಮೌಲ್ಯಗಳನ್ನು ಬಿತ್ತಿದ್ದ ಮನುಜಧರ್ಮ ಪ್ರವರ್ತಕರಾಗಿದ್ದರು. ಜನಸಂಸ್ಕೃತಿಯ ನಿಜ ವಾರಸುದಾರರಾದ ಅಂಬೇಡ್ಕರರ ಬದುಕು ಬರಹಗಳನ್ನು ಯುವಜನಾಂಗಕ್ಕೆ ದಾಟಿಸಬೇಕಿದೆ ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ ಕೃಷ್ಣ ಮಾತನಾಡಿ, ‘ಹಿಂದೂ ಕೋಡ್ ಬಿಲ್ ಮೂಲಕ ಸಮಸ್ತ ಸ್ತ್ರೀಕುಲದ ಅಭ್ಯುದಯಕ್ಕೆ ಶ್ರಮಿಸಿದ ಅಂಬೇಡ್ಕರ್ ಅವರನ್ನು ಕೇವಲ ದಲಿತರೆಂದು ಅರ್ಥೈಸಬಾರದು’ ಎಂದು ಹೇಳಿದರು.

ಯುವ ಜನಾಂಗಕ್ಕೆ ಈ ದೇಶದ ಇತಿಹಾಸ, ಸಂವಿಧಾನದ ಬಗ್ಗೆ ಅರಿವು ಇರಬೇಕು. ಈ ನಿಟ್ಟಿನಲ್ಲಿ ‘ಅಂಬೇಡ್ಕರ್ ಓದು’ವಿನಂತಹ ಕಾರ್ಯಕ್ರಮಗಳು ಅತ್ಯಂತ ಅವಶ್ಯವಾಗಿವೆ ಎಂದು ಹೇಳಿದರು.

ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಸುರೇಶ್ ಗೌತಮ್ ಮಾತನಾಡಿದರು.

ಸಿದ್ದರಾಮಯ್ಯ 660 ಕೆವಿ ಕರೆಂಟ್ ಇದ್ದಂತೆ: ಮುನಿರತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಟ್ಟುವುದು ಸುಲಭ ಅಲ್ಲ. ಮುಟ್ಟಿದರೆ ಕಾಂಗ್ರೆಸ್‌ಗೆ ಸಂಕಷ್ಟ ತಪ್ಪಿದ್ದಲ್ಲ’ ಎಂದು ಬಿಜೆಪಿ ಶಾಸಕ ಮುನಿರತ್ನ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಿದ್ದರಾಮಯ್ಯ 11 ಕೆವಿ ಕರೆಂಟಲ್ಲ. ಅದು 660 ಕೆವಿ ಕರೆಂಟ್. ಅದನ್ನು ಮುಟ್ಟುವುದು ಅಷ್ಟು ಸುಲಭ ಅಲ್ಲ. ಅದನ್ನು ಮುಟ್ಟಿ ಗೆಲ್ಲುತ್ತೇವೆ. ಚಲಾವಣೆ ಆಗ್ತೀವಿ ಅಂದುಕೊಂಡರೆ ಅದು ಭ್ರಮೆ’ ಎಂದರು.

ಮುನಿರತ್ನ

‘ಸಿದ್ದರಾಮಯ್ಯ ಕಾಂಗ್ರೆಸ್‌ನಿಂದ ಆಚೆ ಹೋದರೆ ಪರಿಣಾಮ ಏನಾಗುತ್ತದೆ ಅನ್ನುವುದು ಅವರ ನಾಯಕರಿಗೇ ಗೊತ್ತಿಲ್ಲ. ಅವರ ಜತೆ ಐದು ವರ್ಷ ಕೆಲಸ ಮಾಡಿದ್ದೇನೆ. ಅವರ ಒಡನಾಟ ಇಟ್ಟುಕೊಂಡಿದ್ದೇನೆ. ಅವರ ಮನಸ್ಥಿತಿ ಗೊತ್ತಿದೆ. ಅವರ ಶಕ್ತಿಯನ್ನೂ ನೋಡಿದ್ದೇನೆ’ ಎಂದರು.

‘ಇವತ್ತು ಅವರು 2 ಗಂಟೆಗೆ ಭಾಷಣಕ್ಕೆ ಬರುತ್ತಾರೆ. ಅಂದರೆ 6 ಗಂಟೆಯವರೆಗೆ ಜನ ಕಾಯುತ್ತಾರೆ. ಅವರ ಒಂದು ಕರೆಗೆ 10 ಲಕ್ಷ ಜನ ಸೇರುತ್ತಾರೆ. ಅಂತಹ ಶಕ್ತಿ ಇರುವವರು ಕಾಂಗ್ರೆಸ್‌ನಲ್ಲಿ ಬೇರೆ ಯಾರಿದ್ದಾರೆ’ ಎಂದೂ ಪ್ರಶ್ನಿಸಿದರು.

‘ಸಿದ್ದರಾಮಯ್ಯ ಹೊರತಾಗಿ ಕಾಂಗ್ರೆಸ್ ಶೂನ್ಯ. ರಾಜಕಾರಣದಲ್ಲಿ ಯಾವುದೇ ಕ್ಷಣದಲ್ಲಿ ಏನು ಬೇಕಾದರೂ ಆಗಬಹುದು. ಮುಡಾ ಹಗರಣವನ್ನು ಸಿಬಿಐಗೆ ಕೊಟ್ಟರೆ ಸಾಕು, ಸಿದ್ದರಾಮಯ್ಯ ಅವರನ್ನು ಸಿಲುಕಿಸಿದರೆ ಸಾಕು, ಅಂತಾ ಕಾಯ್ತಾ ಇರುವವರು ಕಾಂಗ್ರೆಸ್‌ನಲ್ಲಿ ಇದ್ದಾರೆ. ಕೇಜ್ರಿವಾಲ್ ರೀತಿ ಸಿದ್ದರಾಮಯ್ಯ ಬಂಧನಕ್ಕೆ ಒಳಗಾದರೆ, ತಾವು ಮುಖ್ಯಮಂತ್ರಿ ಆಗಬಹುದು ಎಂದು ಕೆಲವರು ಕಾಯ್ತಾ ಕುಳಿತ್ತಿದ್ದಾರೆ’ ಎಂದರು.

‘ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದರೆ 6 ತಿಂಗಳಲ್ಲೇ ಚುನಾವಣೆ ಬರುತ್ತದೆ. ಅದಕ್ಕೆ ನಾವು(ಬಿಜೆಪಿ) ಸಿದ್ಧವಾಗಬೇಕಿದೆ’ ಎಂದರು.

‘ಮೌಢ್ಯದಿಂದ ದೂರವಿರಿ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಸಮಾಜದಲ್ಲಿರುವ ಭಯದ ಭಕ್ತಿ, ಮೌಢ್ಯದಿಂದ ದೂರವಿರಬೇಕು. ಜ್ಞಾನದ ಜೊತೆಗೆ ಸಂಸ್ಕಾರವಿದ್ದಾಗ ಮಾತ್ರ ದೇವರು ಎಲ್ಲರಲ್ಲಿಯೂ ನೆಲಸುತ್ತಾನೆ’ ಎಂದು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಪೀಠಾಧ್ಯಕ್ಷ ನಿಶ್ಚಲಾನಂದಸ್ವಾಮಿ ಅವರು ಹೇಳಿದರು.

ಕೆಂಗುಂಟೆಯಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ 16ನೇ ವರ್ಷದ ಧರ್ಮಸ್ಥಳ ಪಾದಯಾತ್ರಾ ಸಮಿತಿ ಹಮ್ಮಿಕೊಂಡಿದ್ದ ವಿವಿಧ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ದೀನದಲಿತರು, ಬಡವರು, ಹೆಣ್ಣುಮಕ್ಕಳು, ರೈತರು, ಕಾರ್ಮಿಕರಿಗೆ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ನಿಜವಾಗಿ ಭಗವಂತನನ್ನು ಎಲ್ಲರಲ್ಲಿಯೂ ಕಾಣಬಹುದು’ ಎಂದರು.

ಆರ್.ವಿ.ಎಸ್ ಆಯುರ್ವೇದ ಮಹಾ ವಿದ್ಯಾಲಯ ಆಸ್ಪತ್ರೆ, ಕಿಮ್ಸ್ ಸೇರಿದಂತೆ ವಿವಿಧ ಆಸ್ಪತ್ರೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಕೆಪಿಸಿಸಿ ವಕ್ತಾರೆ ಎಚ್. ಕುಸುಮಾ ಉದ್ಘಾಟಿಸಿದರು. ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಅನ್ನದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಖಂಡ ಎಚ್. ತುಕಾರಾಂ, ಕೆಪಿಸಿಸಿ ಹಿಂದುಳಿದ ವಿಭಾಗದ ಪ್ರಧಾನ ಕಾರ್ಯದರ್ಶಿ ಡಿ.ಹೇಮಾಲತಾ ಇಂದ್ರೇಶ್, ಮಂಜುಳ, ಜಿ.ವಿ.ಮುನಿರಾಜು, ವೈದ್ಯೆ ಡಿ.ರಾಧ, ಜಿ.ಗಂಗರಾಜು, ಚಂದ್ರಶೇಖರ್, ರಾಮಲಿಂಗಯ್ಯ, ರಾಂಪುರ ನಾಗೇಶ್, ವಾರ್ಡ್ ಅಧ್ಯಕ್ಷ ನವೀನ್, ಶ್ರೀನಿವಾಸ್ ಮಾತನಾಡಿದರು.

ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಸೋಮವಾರ ಆರಂಭವಾದ ಏರೊ ಇಂಡಿಯಾ 2025 ಉದ್ಘಾಟನಾ ಸಮಾರಂಭದಲ್ಲಿ ಆಕಾಶ್ ಗಂಗಾ ತಂಡದ ಸದಸ್ಯರು ಪ್ಯಾರಾಚೂಟ್ ಜಿಗಿತ ನಡೆಸಿದರು – ಪ್ರಜಾವಾಣಿ ಚಿತ್ರ

ದೇಶದ ರಕ್ಷಣಾ ಉಪಕರಣಗಳ ಸಾಮರ್ಥ್ಯ ಅನಾವರಣ

ರಾಡಾರ್‌ಗೂ ಸಿಗದ ಯುದ್ಧ ವಿಮಾನ

ಐಎಎಫ್‌ನ ಎಂಐ–17 ಹೆಲಿಕಾಪ್ಟರ್‌ಗಳು ಪ್ರದರ್ಶನ ನೀಡಿದವು – ಎಎಫ್‌ಪಿ ಚಿತ್ರ

• ಕೆ.ಎಸ್.ಸುನಿಲ್

ಬೆಂಗಳೂರು: ಯಲಹಂಕದ ವಾಯುನೆಲೆಯಲ್ಲಿ ಸೋಮವಾರದಿಂದ ಆರಂಭಗೊಂಡಿರುವ ಏರೊ ಇಂಡಿಯಾ ವೈಮಾನಿಕ ಪ್ರದರ್ಶನದಲ್ಲಿ ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎಡಿಎ) ತಯಾರಿಸಿರುವ ಐದನೇ ತಲೆಮಾರಿನ ಯುದ್ಧ ವಿಮಾನ (ಅಡ್ವಾನ್ಸ್ಡ್ ಮೀಡಿಯಂ ಕಾಂಬಾಟ್ ಏರ್ ಕ್ರಾಫ್ಟ್) ಗಮನ ಸೆಳೆಯುತ್ತಿದೆ.

ವಿವಿಧ ದೇಶಗಳ ರಕ್ಷಣಾ ಇಲಾಖೆ ಅಧಿಕಾರಿಗಳು, ಗಣ್ಯರು ಈ ಯುದ್ದ ವಿಮಾನ ವೀಕ್ಷಣೆ ಮಾಡಿದರು. ಇದರ ತಯಾರಿಕೆ ಮತ್ತು ಸಾಮರ್ಥ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಭಾರತೀಯ ರಕ್ಷಣಾ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಂಡರು.

ನಾಲ್ಕನೇ ಪೀಳಿಗೆಯ ಎಲ್‌ಎಲ್‌ಎಎಫ್ ಎಂಕೆ-2 ಯುದ್ಧ ವಿಮಾನದ ನಂತರ ಐದನೇ ಪೀಳಿಗೆಯ ಈ ವಿಮಾನ ತಯಾರಾಗಿದೆ. 25 ಟನ್ ತೂಕವಿರುವ ಎಎಂಸಿಎ ಎರಡು ಎಂಜಿನ್‌ಗಳನ್ನು ಹೊಂದಿದ್ದು, 1.5 ಟನ್ ತೂಕದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದೆ ಎಂದು ರಕ್ಷಣಾ ಸಿಬ್ಬಂದಿ ತಿಳಿಸಿದರು.

ರಾಡಾರ್‌ನಿಂದ ತಪ್ಪಿಸಿಕೊಳ್ಳುವ ಸಾಮರ್ಥ್ಯ ಸಹ ಇದೆ. ತುರ್ತು ಹಾಗೂ ಯುದ್ಧದ ಸಂದರ್ಭದಲ್ಲಿ ವಿಶ್ವದ ಯಾವುದೇ ದೇಶದ ರಾಡಾರ್‌ಗೂ ಇದನ್ನು ಪತ್ತೆ ಹಚ್ಚಲು ಸಾಧ್ಯವಿಲ್ಲ. ಶತ್ರು ದೇಶಗಳ ವಿಮಾನ, ಶಸ್ತ್ರಾಸ್ತ್ರಗಳ ಮೇಲೆ ನಿಖರವಾಗಿ ದಾಳಿ ಮಾಡಿ, ನಾಶಪಡಿಸುವ ಸಾಮರ್ಥ್ಯ ಹೊಂದಿದೆ. ಅದರಲ್ಲೂ, ಬಹಳ ಕ್ಷಿಪ್ರವಾಗಿ ದಾಳಿ ಮಾಡುವ ಸಾಮರ್ಥ್ಯ ಹೊಂದಿರುವುದು ಗಮನಾರ್ಹ.

ರಾಕೆಟ್ ದಾಳಿಗೆ ಬಳಸುವ ವಾಹನ, ಬಾಂಬ್ ಪತ್ತೆ ಮಾಡುವ ರೋಬೊ, ರಾತ್ರಿ ವೇಳೆಯೂ ಬಳಸುವ ಡ್ರೋನ್, ರಕ್ಷಣಾ ಪರಿಕರ, ಉಪಕರಣಗಳನ್ನು ಪ್ರದರ್ಶನದಲ್ಲಿ ಇಡಲಾಗಿದೆ.

ಹಲವು ರಾಷ್ಟ್ರಗಳ ರಕ್ಷಣಾ ಉಪಕರಣಗಳ ಮಾದರಿಗಳು ಪ್ರದರ್ಶನ ಮಳಿಗೆಯಲ್ಲಿವೆ. ಐದು ದಿನ ನಡೆಯುವ ಪ್ರದರ್ಶನದಲ್ಲಿ ಮೊದಲ ದಿನ ಸೋಮವಾರ 500ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿದೆ.

ಕೇಂದ್ರ ಸರ್ಕಾರದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಯುದ್ಧ ಸಂದರ್ಭದಲ್ಲಿ ರಾಕೆಟ್ ದಾಳಿಗೆ ಬಳಸುವ ವಾಹನ ತಯಾರಿಸಿದ್ದು, 44 ಸೆಕೆಂಡ್‌ಗಳಲ್ಲಿ 12 ರಾಕೆಟ್‌ಗಳನ್ನು ದಾಳಿಗೆ ಬಳಸಬಹುದು. ಈಗಾಗಲೇ ದೇಶದ 88 ಸೇನಾ ಘಟಕಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದು, 120 ವಾಹನಗಳು ಉತ್ಪಾದನೆ ಹಂತದಲ್ಲಿವೆ.

ಫಾಲ್ಕೊ ರೋಬಾಟಿಕ್ಸ್ ಸಂಸ್ಥೆ ತಯಾರಿಸಿರುವ ಥರ್ಮಲ್ ಡ್ರೋನ್ ಅನ್ನು ರಾತ್ರಿ ವೇಳೆಯೂ ಬಳಸಬಹುದು. 40 ನಿಮಿಷ ಹಾರಾಟ ನಡೆಸುವ ಸಾಮರ್ಥ್ಯ ಇದ್ದು, 20 ಕಿ.ಮೀ. ವರೆಗೂ ಸಂಚರಿಸಲಿದೆ. ಈ ಡ್ರೋನ್ ಬೆಲೆ ₹9.5 ಲಕ್ಷ. ಈಗಾಗಲೇ ಭಾರತೀಯ ಸೇನೆಯಲ್ಲಿ ಇದನ್ನು ಬಳಸಲಾಗುತ್ತಿದೆ.

ಪ್ರಾಜೆಕ್ಟ್ ಕುಶಾ ಹೆಸರಿನ ದೀರ್ಘ-ಶ್ರೇಣಿಯ ವಾಯು ರಕ್ಷಣಾ ಕ್ಷಿಪಣಿ ಸಹ ನೋಡಬಹುದಾಗಿದ್ದು, ಈ ಕ್ಷಿಪಣಿ ಸುಮಾರು 400 ಕಿ.ಮೀ. ದೂರದ ವೈಮಾನಿಕ ಗುರಿಗಳನ್ನು ಸುಲಭವಾಗಿ ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ. ಸೋಲಾರ್ ಇಂಡಸ್ಟ್ರೀಸ್ ಮತ್ತು ಭಾರತ್ ಡೈನಾಮಿಕ್ಸ್ ಲಿಮಿಟೆಡ್ ಸಹಭಾಗಿತ್ವದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ಈ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿದೆ ಎಂದು ತಂತ್ರಜ್ಞರು ವಿವರಿಸಿದರು.

ಬಿಗಿ ಪೊಲೀಸ್ ಬಂದೋಬಸ್ತ್

ದೇಶ, ವಿದೇಶದ ಗಣ್ಯರು, ವಾಯುಪಡೆ ಅಧಿಕಾರಿಗಳು ಬಂದಿದ್ದರಿಂದ ವಾಯು ನೆಲೆಯ ಸುತ್ತಲೂ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಮೂರು ಹಂತದಲ್ಲಿ ಪ್ರೇಕ್ಷಕರನ್ನು ತಪಾಸಣೆ ನಡೆಸಿ, ವೈಮಾನಿಕ ಪ್ರದರ್ಶನ ಸ್ಥಳಕ್ಕೆ ಬಿಡಲಾಯಿತು.



ಎಲ್ಲೆಲ್ಲೂ ಮೋದಿ ಭಾವಚಿತ್ರ

ಏರೊ ಇಂಡಿಯಾದ 15ನೇ ಆವೃತ್ತಿಯಲ್ಲಿ ಎಲ್ಲೆಡೆ ಸ್ವದೇಶಿ ನಿರ್ಮಿತ ಯುದ್ಧ ವಿಮಾನ ಹಾಗೂ ಹೆಲಿಕಾಪ್ಟರ್‌ಗಳ ಪೋಸ್ಟರ್‌ಗಳನ್ನು ಹಾಕಲಾಗಿದೆ. ಇವುಗಳೊಂದಿಗೆ ಭಾರತೀಯ ವಾಯು ಸೇನೆಯ ಪೈಲಟ್ ಪೋಷಾಕಿನಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರ ಪೋಸ್ಟರ್‌ಗಳು ರಾರಾಜಿಸುತ್ತಿವೆ. ಹಲವು ವಿದೇಶಿ ಪ್ರತಿನಿಧಿಗಳು ಇವುಗಳ ಮುಂದೆ ನಿಂತು ಭಾವಚಿತ್ರಗಳನ್ನು ತೆಗೆಸಿಕೊಳ್ಳುತ್ತಿದ್ದ ದೃಶ್ಯಗಳು ಕಂಡುಬಂದವು.

ವಸ್ತು ಪ್ರದರ್ಶನ: ಮಾಹಿತಿ ಪಡೆದ ಪ್ರೇಕ್ಷಕರು

ಬೆಂಗಳೂರು: ದೇಶ, ವಿದೇಶದ ಸೇನಾಪಡೆ ಮುಖ್ಯಸ್ಥರು, ಕೈಗಾರಿಕೋದ್ಯಮಿಗಳು, ಗಣ್ಯರು ವೈಮಾನಿಕ ವಸ್ತು ಪ್ರದರ್ಶನದ ಮಳಿಗೆಗಳಿಗೆ ನೀಡಿ ಸೇನಾ ವಾಹನಗಳು, ದೇಶಿ ಮತ್ತು ವಿದೇಶಿ ಯುದ್ಧ ವಿಮಾನಗಳು, ಅವುಗಳ ತಯಾರಿಕ ವಿಧಾನ, ಸಾಮರ್ಥ್ಯದ ಬಗ್ಗೆ ಮಾಹಿತಿ ಪಡೆದುಕೊಂಡರು.

ವೈಮಾನಿಕ ಪ್ರದರ್ಶನದ ವೀಕ್ಷಣೆಗೆ ಸಾರ್ವಜನಿಕರಿಗೆ ಸೋಮವಾರ ಅವಕಾಶ ಇರಲಿಲ್ಲ. ದೇಶ ಹಾಗೂ ವಿದೇಶದ ಲಘು ಯುದ್ದ ವಿಮಾನ (ಎಲ್‌ಸಿಎ), ಹೆಲಿಕಾಪ್ಟರ್, ಯುದ್ದ ಟ್ಯಾಂಕರ್ ಮಾದರಿಗಳನ್ನು ಪ್ರೇಕ್ಷಕರು ವೀಕ್ಷಿಸಿದರು. ಅವುಗಳ ಕಾರ್ಯಕ್ಷಮತೆ, ವೇಗ, ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆದುಕೊಂಡರು. ಕೆಲವರು ಮಾದರಿಗಳ ಬಳಿ ನಿಂತು ಮೊಬೈಲ್‌ನಲ್ಲಿ ಸೆಲ್ಫಿ ತೆಗೆದುಕೊಂಡರು.

‘ವೈಮಾನಿಕ ಪ್ರದರ್ಶನದ 15ನೇ ಆವೃತ್ತಿಯಲ್ಲಿ ಹತ್ತು ಪೆವಿಲಿಯನ್‌ಗಳಲ್ಲಿ ಮಳಿಗೆಗಳನ್ನು ತೆರೆಯಲಾಗಿದ್ದು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ, ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರತವು ಸ್ವಾಲಂಬನೆ ಸಾಧಿಸುತ್ತಿರುವುದರ ಪ್ರತೀಕವಾಗಿ ಈ ಪ್ರದರ್ಶನ ನಿಲ್ಲಲಿದೆ. ವೈಮಾನಿಕ, ಬಾಹ್ಯಾಕಾಶ ಸಂಶೋಧನೆ, ನವೋದ್ಯಮಗಳ ಕೇಂದ್ರದಲ್ಲಿ ಹೂಡಿಕೆ ಸಾಧ್ಯತೆಗಳ ಬಗ್ಗೆ ಮಾತುಕತೆಗಳಿಗೆ ಇದು ವೇದಿಕೆಯಾಗಲಿದೆ’ ಎಂದು ಆಯೋಜಕರು ತಿಳಿಸಿದರು.

ಹೆಲಿಕಾಪ್ಟರ್‌ನಲ್ಲಿ ಕುಳಿತು ಫೋಟೊ ತೆಗೆಸಿಕೊಂಡ ಪ್ರೇಕ್ಷಕರು

ಪ್ರದರ್ಶನದ ಮಳಿಗೆ ಬಳಿ ಇರಿಸಲಾಗಿದ್ದ ಎಚ್‌ಎಎಲ್‌ನ ಧ್ರುವ–ಎನ್.ಜಿ. ಹೆಲಿಕಾಪ್ಟರ್ ನೋಡಲು ಪ್ರೇಕ್ಷಕರು ಮುಗಿಬಿದ್ದರು. ಈ ಹೆಲಿಕಾಪ್ಟರ್‌ನಲ್ಲಿ ಜನರನ್ನು ಕರೆದೊಯ್ಯಬಹುದು ಹಾಗೂ ಏರ್ ಆಂಬುಲೆನ್ಸ್ ಆಗಿಯೂ ಬಳಸಬಹುದು. 11 ಮಂದಿ ಪ್ರಯಾಣಿಸಬಹುದಾಗಿದ್ದು, ಮೊದಲ ಹೆಲಿಕಾಪ್ಟರ್ ಅನ್ನು ಪವನ್ ಹನ್ಸ್ ಸಂಸ್ಥೆಗೆ ಮಾರಾಟ ಮಾಡಲಾಗಿದೆ ಎಂದು ಎಚ್‌ಎಎಲ್ ಅಧಿಕಾರಿಗಳು ತಿಳಿಸಿದರು. ಆತ್ಮನಿರ್ಭರ್ ಯೋಜನೆಯಡಿ ನಿರ್ಮಿಸಿರುವ ಹೆಲಿಕಾಪ್ಟರ್ ಎದುರು ಪ್ರೇಕ್ಷಕರು ನಿಂತು ಫೋಟೊ ತೆಗೆಸಿಕೊಂಡರು. ಕೆಲವರಿಗೆ ಹೆಲಿಕಾಪ್ಟರ್ ಹತ್ತಿ ಕುಳಿತು ಫೋಟೊ ತೆಗೆಸಿಕೊಳ್ಳುವ ಅವಕಾಶವೂ ದೊರೆಯಿತು.

ವೈಮಾನಿಕ ಪ್ರದರ್ಶನದಲ್ಲಿ ಎಚ್‌ಎಎಲ್ ನಿರ್ಮಿತ ಧ್ರುವ–ಎನ್‌ಜಿ ಹೆಲಿಕ್ಯಾಪ್ಟರ್‌ನ ಫೋಟೊವನ್ನು ಮೊಬೈಲ್‌ನಲ್ಲಿ ಪ್ರೇಕ್ಷಕರು ಸೆರೆಹಿಡಿದರು – ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಸಂಚಾರ ದಟ್ಟಣೆ: ಸವಾರರ ಪರದಾಟ

ಬೆಂಗಳೂರು: ಯಲಹಂಕ ವಾಯುನೆಲೆಯಲ್ಲಿ ಏರೊ ಇಂಡಿಯಾ ವೈಮಾನಿಕ ಪ್ರದರ್ಶನ ನಡೆಯುತ್ತಿರುವುದರಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಸೋಮವಾರ ವಿಪರೀತ ಸಂಚಾರ ದಟ್ಟಣೆ ಉಂಟಾಗಿ, ಸವಾರರು ಪರದಾಡಿದರು.

ವೈಮಾನಿಕ ಪ್ರದರ್ಶನದ ಸುತ್ತಮುತ್ತಲ ಪ್ರದೇಶಗಳಲ್ಲಿ ಶಾಲಾ ವಾಹನಗಳು, ಕಾರುಗಳು, ದ್ವಿಚಕ್ರ ವಾಹನಗಳು, ಬಸ್‌ಗಳ ಸಂಖ್ಯೆ ಹೆಚ್ಚಾಗಿತ್ತು. ಬೆಳಿಗ್ಗೆಯಿಂದಲೇ ಹೆಬ್ಬಾಳ, ಬಳ್ಳಾರಿ ರಸ್ತೆ, ಕೊಡಿಗೆಹಳ್ಳಿ, ಜಕ್ಕೂರು ಸೇರಿ ಹಲವೆಡೆ ಸಂಚಾರ ದಟ್ಟಣೆ ಉಂಟಾಗಿತ್ತು.

ಕಿಲೋ ಮೀಟರ್‌ಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಹಾಗಾಗಿ ವಾಹನ ಸವಾರರು ನಿಗದಿತ ಸಮಯಕ್ಕೆ ಸ್ಥಳ ತಲುಪಲು ಆಗಲಿಲ್ಲ. ಕೆಲಸಕ್ಕೆ ಹೋಗುವವರು, ಶಾಲಾ, ಕಾಲೇಜು ವಿದ್ಯಾರ್ಥಿಗಳು ಪರದಾಡಿದರು. ವಿಮಾನ ನಿಲ್ದಾಣ ಕಡೆಗೆ ಸಾಗುವ ವಾಹನಗಳೂ ದಟ್ಟಣೆಯಲ್ಲಿ ಸಿಲುಕಿ ಪರದಾಡಿದವು.

ಸಂಜೆಯೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ವಾಹನಗಳು ತಾಸುಗಟ್ಟಲೆ ಕಿಲೋ ಮೀಟರ್‌ಗಟ್ಟಲೇ ಸಾಲಿನಲ್ಲಿ ನಿಂತಿದ್ದವು. ಸಂಚಾರ ಸಹಜ ಸ್ಥಿತಿಗೆ ತರಲು ಪೊಲೀಸರು ಹರಸಾಹಸ ಪಟ್ಟರು.

ಶುಕ್ರವಾರದವರೆಗೂ ಇದೇ ಪರಿಸ್ಥಿತಿ ಮುಂದುವರಿಯಲಿದೆ. ವೈಮಾನಿಕ ಪ್ರದರ್ಶನ ನಡೆಯುವ ಸ್ಥಳ ಹಾಗೂ ಸುತ್ತಮುತ್ತಲಿನ ಹಲವು ರಸ್ತೆಗಳಲ್ಲಿ ಸಂಚಾರ ಮಾರ್ಪಾಡು ಮಾಡಿದ್ದಾರೆ.

ಆಹಾರದಲ್ಲಿ ಜಿರಳೆ: ಗುತ್ತಿಗೆ ರದ್ದು

ಬೆಂಗಳೂರು: ಏರೊ ಇಂಡಿಯಾದ ಭದ್ರತೆಗೆ ನಿಯೋಜಿಸಿದ್ದ ಪೊಲೀಸರಿಗೆ ಕಳಪೆ ಆಹಾರ ಪೂರೈಕೆ ಮಾಡಿದ್ದ ಆರೋಪದಡಿ ಆಹಾರ ಪೂರೈಸುವ ಗುತ್ತಿಗೆ ಪಡೆದಿದ್ದ ಸಂಸ್ಥೆಯ ವಿರುದ್ಧ ಯಲಹಂಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಲ್ಲದೇ ಕಾರ್ಯಾದೇಶವನ್ನೂ ರದ್ದುಪಡಿಸಲಾಗಿದೆ.

ಪೊಲೀಸರಿಗೆ ಭಾನುವಾರ ನೀಡಿದ್ದ ಊಟದಲ್ಲಿ ಜಿರಳೆ ಪತ್ತೆ ಆಗಿತ್ತು. ‘ಕರ್ತವ್ಯಕ್ಕೆ ನಿಯೋಜಿಸಿರುವ ಪೊಲೀಸರಿಗೆ ಆಹಾರ ಪೂರೈಸಲು ಇಸ್ಕಾನ್ ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಭಾನುವಾರ ಮಧ್ಯಾಹ್ನ ಪಾರ್ಸೆಲ್ ಪೊಟ್ಟಣ ತೆರೆದು ನೋಡಿದಾಗ ಪೊಲೀಸ್ ಅಧಿಕಾರಿಯೊಬ್ಬರಿಗೆ ಊಟದಲ್ಲಿ ಜಿರಳೆ ಸಿಕ್ಕಿತ್ತು. ಸೋಮವಾರ ಕೂಡ ಆಹಾರದಲ್ಲಿ ಜಿರಳೆ ಸಿಕ್ಕಿತ್ತು ಎಂದು ಮೂಲಗಳು ತಿಳಿಸಿವೆ.

ಹೂಡಿಕೆದಾರರ ಸಮಾವೇಶ ಸುಗಮ ಸಂಚಾರಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದಲ್ಲಿ ಫೆಬ್ರುವರಿ 11ರಿಂದ 14ರ ವರೆಗೆ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯಲಿದ್ದು, ಮೈದಾನದ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಸಮಾವೇಶಕ್ಕೆ ಉದ್ದಿಮೆದಾರರು, ವಿದೇಶಿ ಗಣ್ಯರು ಹಾಗೂ ಸಾರ್ವಜನಿಕರು ಬರುವುದರಿಂದ ಕಾರ್ಯಕ್ರಮದ ಸ್ಥಳ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ಹೆಚ್ಚಿನ ಬಂದೋಬಸ್ತ್ ಕೈಗೊಳ್ಳಲಾಗಿದೆ. ಅಲ್ಲದೇ ವಾಹನಗಳ ನಿಲುಗಡೆಗೂ ವ್ಯವಸ್ಥೆ ಮಾಡಲಾಗಿದೆ.

ನಗರದ ಒಳಭಾಗದಿಂದ ಕಾರ್ಯಕ್ರಮಕ್ಕೆ ಬರುವ ವಾಹನಗಳು: ಬಸವೇಶ್ವರ ವೃತ್ತ – ಹಳೆಯ ಹೈಗ್ರೌಂಡ್ಸ್ ಜಂಕ್ಷನ್– ಕಲ್ಪನಾ– ಎಂ.ಸಿ.ಸಿ ಮೂಲಕ ಸಾಗಿಬಂದು ವಸಂತನಗರದ ಕೆಳ ಸೇತುವೆ ಬಳಿ ಬಲಕ್ಕೆ ತಿರುವು ಪಡೆದು, ಅರಮನೆ ಮೈದಾನದ ಮಾವಿನಕಾಯಿ ಮಂಡಿಯಲ್ಲಿ ವಾಹನಗಳನ್ನು ನಿಲುಗಡೆ ಮಾಡಬಹುದು. ನಂತರ, ಕಾಲ್ನಡಿಗೆಯಲ್ಲಿ ಕಾರ್ಯಕ್ರಮದ ಸ್ಥಳ ತಲುಪಬಹುದು.

ಹೆಬ್ಬಾಳ ಕಡೆಯಿಂದ ಬರುವ ವಾಹನಗಳು: ಮೇಕ್ರಿ ವೃತ್ತದ ಕೆಳಸೇತುವೆ ಮೂಲಕ ಸಾಗಿ ಕಾವೇರಿ ಜಂಕ್ಷನ್, ಪಿ.ಜಿ. ಹಳ್ಳಿ ಸರ್ವಿಸ್ ರಸ್ತೆಯಲ್ಲಿ ಚಲಿಸಿ, ಪ್ಯಾಲೇಸ್ ಕ್ರಾಸ್‌ನಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಚಕ್ರವರ್ತಿ ಲೇಔಟ್‌ನಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಸರ್ವಿಸ್ ರಸ್ತೆಯಲ್ಲಿ ಎಡಕ್ಕೆ ತಿರುವು ಪಡೆದು, ಮಾವಿನಕಾಯಿ ಮಂಡಿಯಲ್ಲಿ ವಾಹನಗಳನ್ನು ನಿಲುಗಡೆ ಮಾಡಬೇಕು. ಕಾಲ್ನಡಿಗೆಯಲ್ಲಿ ಕಾರ್ಯಕ್ರಮದ ಸ್ಥಳ ತಲುಪಬಹುದು.

ನಿರ್ಗಮನ

ಅರಮನೆ ಮೈದಾನದ ಮಾವಿನಕಾಯಿ ಮಂಡಿಯಲ್ಲಿ ವಾಹನ ನಿಲುಗಡೆ ಮಾಡಿರುವವರು ಸ್ನೋವರ್ಡ್ ಗೇಟ್ ಮೂಲಕ ಜಯಮಹಲ್ ರಸ್ತೆಯಲ್ಲಿ ಹೊರಬಂದು ಮೇಕ್ರಿ ವೃತ್ತದ ಮೂಲಕ ಸಂಚರಿಸಬಹುದು.

ಅದೇ ರೀತಿ ಯಶವಂತಪುರ ಹಾಗೂ ಕಂಟೋನ್‌ಮೆಂಟ್ (ದಂಡು) ರೈಲು ನಿಲ್ದಾಣದ ಕಡೆಯಿಂದ ಬರುವ ವಾಹನಗಳಿಗೆ ನಿಲುಗಡೆ ಹಾಗೂ ಹೊರಕ್ಕೆ ತೆರಳುವುದಕ್ಕೆ ಪರ್ಯಾಯ ವ್ಯವಸ್ಥೆ ಕೈಗೊಳ್ಳಲಾಗಿದೆ.

ವಾಹನ ನಿಲುಗಡೆ ನಿಷೇಧಿಸಿರುವ ರಸ್ತೆಗಳು

ಅರಮನೆ ರಸ್ತೆ, ಎಂ.ವಿ.ಜಯರಾಮ ರಸ್ತೆ, ಜಯಮಹಲ್ ರಸ್ತೆ, ಸರ್.ಸಿ.ವಿ. ರಾಮನ್ ರಸ್ತೆ, ಬಳ್ಳಾರಿ ರಸ್ತೆ, ರಮಣ ಮಹರ್ಷಿ ರಸ್ತೆ, ನಂದಿದುರ್ಗ ರಸ್ತೆ, ತರಳಬಾಳು ರಸ್ತೆ.

ಹಾಲಿನ ಖರೀದಿ ದರ ಏರಿಕೆಗೆ ಒತ್ತಾಯ • ಸಚಿವರೊಂದಿಗೆ ಮಾತುಕತೆ ಬಳಿಕ ಪ್ರತಿಭಟನೆ ವಾಪಸ್

ರೈತ ಸಂಘದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿನ ಖರೀದಿ ದರವನ್ನು ಪ್ರತಿ ಲೀಟರ್‌ಗೆ ₹50 ನಿಗದಿ ಮಾಡಬೇಕು. ಹಾಲಿನ ದರದ ಆಧಾರದ ಮೇಲೆ ಪಶು ಆಹಾರದ ಬೆಲೆ ನಿಗದಿಪಡಿಸಬೇಕು ಎಂಬುದೂ ಸೇರಿದಂತೆ ಹೈನುಗಾರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೇತೃತ್ವದಲ್ಲಿ ನೂರಾರು ರೈತರು ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಕೇಂದ್ರ ಕಚೇರಿಯ ಆವರಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ರೈತರು, ರೈತ ಮಹಿಳೆಯರು ಪಾಲ್ಗೊಂಡಿದ್ದರು.

‘ಹಾಲನ್ನು ಕನಿಷ್ಠ ಬೆಂಬಲ ಬೆಲೆ ವ್ಯಾಪ್ತಿಗೆ (ಎಂಎಸ್‌ಪಿ) ತರುವವರೆಗೆ ಪ್ರೋತ್ಸಾಹಧನವನ್ನು ಪ್ರತಿ ಲೀಟರ್‌ಗೆ ₹10 ನಿಗದಿಪಡಿಸಬೇಕು. ಸ್ಥಳೀಯ ಹಾಲು ಮಾರಾಟಕ್ಕೆ ನಿಗದಿಪಡಿಸುವ ಲೆವಿಯನ್ನು ರದ್ದುಗೊಳಿಸಬೇಕು. ಪಶು ಆಹಾರಕ್ಕೆ ಬಳಸುವ ಮೆಕ್ಕೆಜೋಳವನ್ನು ರೈತರಿಂದಲೇ ನೇರವಾಗಿ ಖರೀದಿಸಬೇಕು’ ಎಂದು ಒತ್ತಾಯಿಸಲಾಯಿತು.

‘ಹಾಲಿನ ದರ ನಿಗದಿ ವಿಚಾರದಲ್ಲಿ ಒಕ್ಕೂಟಗಳು ಸ್ವತಂತ್ರವಾಗಿರಬೇಕು. ಕೆಎಂಎಫ್ ನೇಮಕಾತಿ ಹಾಲು ಉತ್ಪಾದಕರ ಮಕ್ಕಳಿಗೆ ಸೀಮಿತವಾಗಿರಬೇಕು’ ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಬಂದ ಕೆಎಂಎಫ್‌ನ ನಿರ್ದೇಶಕರು ಪ್ರತಿಭಟನಾಕಾರರ ಮನವೊಲಿಸಲು ಪ್ರಯತ್ನಿಸಿದರು. ಇದಕ್ಕೆ ಒಪ್ಪದ ರೈತರು, ಹಾಲಿನ ಖರೀದಿ ದರ ಹೆಚ್ಚಿಸುವ ಕುರಿತು ಮುಖ್ಯಮಂತ್ರಿಯವರ ಕಚೇರಿ ಅಥವಾ ಪಶು ಸಂಗೋಪನಾ ಸಚಿವರಿಂದ ಲಿಖಿತ ಭರವಸೆ ಸಿಗುವವರೆಗೂ ಪ್ರತಿಭಟನೆ ನಡೆಸುವುದಾಗಿ ಹೇಳಿದರು.

ಸಂಜೆ ಹೊತ್ತಿಗೆ ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ಅವರು ಕೋಡಿಹಳ್ಳಿ ಚಂದ್ರಶೇಖರ್ ಅರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ‘ಹಾಲಿನ ಖರೀದಿ ದರ ಏರಿಸುವ ಕುರಿತು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿದ್ದೇನೆ. ಈ ಬಾರಿಯ ಬಜೆಟ್‌ನಲ್ಲಿ ಈ ಕುರಿತು ಆದ್ಯತೆ ನೀಡಲಾಗುತ್ತದೆ’ ಎಂದು ಭರವಸೆ ನೀಡಿದರು.

ಸಂಜೆ 6 ಗಂಟೆಗೆ ರೈತರು ಪ್ರತಿಭಟನೆಯನ್ನು ಹಿಂಪಡೆದರು.

ಹಾಲಿನ ಬಾಕಿ ಹಣ ನೀಡಬೇಕು ಮತ್ತು ಹಾಲಿನ ಖರೀದಿ ದರ ಹೆಚ್ಚಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ನಗರದ ಕೆಎಂಎಫ್ ಕೇಂದ್ರ ಕಚೇರಿ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

‘ಭರವಸೆ ಬೇಕು’

‘ಕಾಂಗ್ರೆಸ್ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಹಾಲು ಖರೀದಿಗೆ ₹7 ಪ್ರೋತ್ಸಾಹ ಧನ ನೀಡುವುದಾಗಿ ಹೇಳಿತ್ತು. ಈ ಭರವಸೆ ನೀಡಿ ಎರಡು ವರ್ಷಗಳಾಗುತ್ತಿವೆ. ಪ್ರೋತ್ಸಾಹ ಧನ ನೀಡುವುದಕ್ಕಾಗಿ ಈ ಬಜೆಟ್‌ನಲ್ಲಿ ಹಣ ಒದಗಿಸಬೇಕು. ಅದನ್ನು ಜಾರಿಗೊಳಿಸುವ ಕುರಿತು ಖಚಿತ ಭರವಸೆ ನೀಡಬೇಕು. ಅಲ್ಲಿಯವರೆಗೂ ನಾವು ಪ್ರತಿಭಟನೆ ಮುಂದುವರಿಸುತ್ತೇವೆ’ ಎಂದು ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

‘ಮಹದೇವಪ್ಪ ಭ್ರಷ್ಟಾಚಾರದ ಬಗ್ಗೆ ಮಾತನಾಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ವಾಲ್ಮೀಕಿ ರಾಮನ ಬಗ್ಗೆ ಚರ್ಚೆ ಮಾಡುವುದಕ್ಕಿಂತ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆಗಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ, ಅದರಿಂದ ಸಮಾಜಕ್ಕೆ ಆಗಿರುವ ಅನ್ಯಾಯದ ಬಗ್ಗೆ ಚರ್ಚೆ ಮಾಡಲಿ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ವಾಲ್ಮೀಕಿ ರಾಮ ಬೇರೆ, ಅಯೋಧ್ಯೆ ರಾಮ ಬೇರೆ ಎಂಬ ಮಹದೇವಪ್ಪ ಅವರ ಹೇಳಿಕೆ ಕುರಿತು ಅವರು ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದಾರೆ.

‘ಬುದ್ಧ, ಬಸವ, ಅಂಬೇಡ್ಕರರ ಹೆಸರು ಹೇಳಿಕೊಂಡು ರಾಜಕೀಯ ಮಾಡಿ ಅಧಿಕಾರ ಅನುಭವಿಸುವುದು ದೊಡ್ಡದಲ್ಲ. ಅಧಿಕಾರವಿದ್ದಾಗ ಆ ಮಹನೀಯರ ಹಾದಿಯಲ್ಲಿ ನಡೆದು ಜನ ಸೇವೆ ಮಾಡುವುದು ಅವರಿಗೆ ಸಲ್ಲಿಸುವ ನಿಜವಾದ ಗೌರವ’ ಎಂದು ಹೇಳಿದ್ದಾರೆ.

ರಾಜಾನುಕುಂಟೆ- ಬೆಟ್ಟಹಲಸೂರು ರೈಲು ನಿಲ್ದಾಣಗಳ ನಡುವೆ ಮಾರ್ಗ

‘ನೂತನ ರೈಲ್ವೆ ಮಾರ್ಗ ಯೋಜನೆ ಕೈಬಿಡಿ’

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜಾನುಕುಂಟೆ– ಬೆಟ್ಟಹಲಸೂರು ರೈಲು ನಿಲ್ದಾಣಗಳ ನಡುವೆ ನೂತನ ರೈಲ್ವೆ ಮಾರ್ಗ ಅಳವಡಿಸುವ ಯೋಜನೆಯನ್ನು ಕೈಬಿಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತಸಂಘ ಮತ್ತು ಹಸಿರುಸೇನೆ ಕಾರ್ಯಕರ್ತರು ಹಾಗೂ ಸುತ್ತಮುತ್ತಲ ಗ್ರಾಮಗಳ ರೈತರು, ಬೆಟ್ಟಹಲಸೂರು ರೈಲ್ವೆ ನಿಲ್ದಾಣದ ಸಮೀಪದಲ್ಲಿ ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯಘಟಕದ ಅಧ್ಯಕ್ಷ ಅರಳಾಪುರ ಮಂಜುನಾಥ್ ಮಾತನಾಡಿ, ‘ಉದ್ದೇಶಿತ ಯೋಜನೆಗಾಗಿ ಸಣ್ಣ ಹಿಡುವಳಿದಾರರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಈ ಜಮೀನುಗಳನ್ನೇ ಅವಲಂಬಿಸಿರುವ ರೈತರಿಗೆ ನಷ್ಟವಾಗುತ್ತದೆ’ ಎಂದರು.

‘ಸಣ್ಣ ಹಿಡುವಳಿಗಳನ್ನೇ ನಂಬಿಕೊಂಡು ಜಾನುವಾರು ಸಾಕಣೆ, ಹೈನುಗಾರಿಕೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಕೋಟ್ಯಂತರ ಬೆಲೆ ಬಾಳುವ ಈ ಜಮೀನುಗಳಿಗೆ ಸರ್ಕಾರ, ಅಲ್ಪಪ್ರಮಾಣದ ಪರಿಹಾರ ನೀಡುತ್ತದೆ. ಇದರಿಂದ ರೈತ ಕುಟುಂಬಗಳಿಗೆ ಅನ್ಯಾಯವಾಗುತ್ತದೆ’ ಎಂದರು.

‘ಯೋಜನೆ ಬಗ್ಗೆ ರೈತರೊಂದಿಗೆ ಚರ್ಚಿಸದೇ ಏಕಪಕ್ಷೀಯವಾಗಿ ಯೋಜನೆ ಅನುಷ್ಠಾನಗೊಳಿಸಲು ಮುಂದಾಗಿರುವುದು ರೈತ ಸಮೂಹಕ್ಕೆ ಮಾಡುತ್ತಿರುವ ಅನ್ಯಾಯವಾಗಿದೆ’ ಎಂದರು.

ರಾಜ್ಯ ಕಾರ್ಯದರ್ಶಿ ನಂಜುಂಡಪ್ಪ ಕಡತನಮಲೆ, ‘ರೈಲ್ವೆ ಮಾರ್ಗದಿಂದ ಉಂಟಾಗುವ ಸಮಸ್ಯೆಗಳ ಕುರಿತು ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಹಲವು ಬಾರಿ ಪ್ರತಿಭಟನೆಗಳನ್ನೂ ಮಾಡಲಾಗಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಯೋಜನೆಯನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದು’ ಎಂದು ಎಚ್ಚರಿಸಿದರು.

ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ನಾಗರತ್ನಮ್ಮ, ರಾಜ್ಯ ಸಂಚಾಲಕ ಧನರಾಜ್.ಬಿ, ರೈತ ಮುಖಂಡರಾದ ಟಿ.ಪಿ. ಪ್ರಕಾಶ್, ನಾಗರಾಜ್ ಬಾಬು, ಅಂಬರೀಷ್.ಟಿ.ಡಿ, ಮೋಹನ್ ತಿಮ್ಮಸಂದ್ರ ಮತ್ತಿತರರು ಉಪಸ್ಥಿತರಿದ್ದರು.

ರಾಜಾನುಕುಂಟೆ–ಬೆಟ್ಟಹಲಸೂರು ರೈಲು ನಿಲ್ದಾಣಗಳ ನಡುವೆ ನೂತನ ರೈಲ್ವೆ ಮಾರ್ಗ ಅಳವಡಿಸುವ ಯೋಜನೆಯನ್ನು ಕೇಂದ್ರ ಕೈಬಿಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತಸಂಘ ಮತ್ತು ಹಸಿರುಸೇನೆ ಕಾರ್ಯಕರ್ತರು ಹಾಗೂ ಸುತ್ತಮುತ್ತಲ ಗ್ರಾಮಗಳ ರೈತರು, ಬೆಟ್ಟಹಲಸೂರು ರೈಲ್ವೆ ನಿಲ್ದಾಣದ ಸಮೀಪದಲ್ಲಿ ಪ್ರತಿಭಟನೆ ನಡೆಸಿದರು.

‘ಶರಣರ ಹೆಸರಿನಲ್ಲಿ ಪ್ರಶಸ್ತಿ ಘೋಷಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ವರ್ಷದಿಂದ ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಹಾಗೂ ಉರಿಲಿಂಗಪೆದ್ದಿ ಶರಣರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುವುದು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಘೋಷಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ಆಯೋಜಿಸಿದ್ದ ಕಾಯಕ ಶರಣರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಯಕ ಶರಣರ ಹೆಸರಿನಲ್ಲಿ ಪ್ರಶಸ್ತಿ ನೀಡಬೇಕೆಂಬ ವೇದಿಕೆ ಮೇಲಿದ್ದ ಅತಿಥಿಗಳ ಮನವಿಗೆ ಸ್ಪಂದಿಸಿದ ಶಿವರಾಜ ತಂಗಡಗಿ, ‘ಕಾಯಕ ಶರಣರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಕುರಿತು ಸಮಿತಿ ರಚಿಸಿ, ಮುಂದಿನ ವರ್ಷದಿಂದ ಪ್ರಶಸ್ತಿಯನ್ನು ನೀಡಲಾಗುವುದು. ಬೀದರ್‌ನಲ್ಲಿ ಡೋಹರ ಕಕ್ಕಯ್ಯ ಸ್ಮಾರಕ ನಿರ್ಮಿಸಲು ಇಲಾಖೆ ವತಿಯಿಂದ ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಸಮಾರಂಭದಲ್ಲಿ ಅಖಿಲ ಕರ್ನಾಟಕ ಡೋಹರ ಕಕ್ಕಯ್ಯ ಸಮಾಜದ ಅಧ್ಯಕ್ಷ ಸಂತೋಷ್ ಸುರೇಂದ್ರ ಸವಣೂರು, ಮಾದಿಗ ಸಮುದಾಯದ ಎಂ. ಗುರುಮೂರ್ತಿ, ಆದಿಜಾಂಬವ ಸಮಾಜದ ಕಾರ್ಯಾಧ್ಯಕ್ಷ ಸಿದ್ದರಾಜು, ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಉಪಸ್ಥಿತರಿದ್ದರು.

ಕಾಯಕ ಶರಣರ ಜಯಂತಿ ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಶಿವಶರಣ ಹರಳಯ್ಯ ಗುರುಪೀಠದ ಬಸವ ಹರಳಯ್ಯ ಸ್ವಾಮೀಜಿ, ಕೆ. ಧರಣಿದೇವಿ ಮಾಲಗತ್ತಿ, ಶಿವರಾಜ ತಂಗಡಗಿ ಅವರು ಕಾಯಕ ಶರಣರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಶಾಸಕರೊಬ್ಬರ ಪುತ್ರನೆಂದು ಹೇಳಿಕೊಂಡ ವ್ಯಕ್ತಿ • ಜಾಲತಾಣದಲ್ಲಿ ವಿಡಿಯೊ

ಭದ್ರಾವತಿ: ಮಹಿಳಾ ಅಧಿಕಾರಿಗೆ ನಿಂದನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಸೀಗೆಬಾಗಿ– ಬಾಬಳ್ಳಿ ಬಳಿ ಭಾನುವಾರ ತಡರಾತ್ರಿ ಭದ್ರಾ ನದಿಯಲ್ಲಿ ಅಕ್ರಮ ಮರಳುಗಾರಿಕೆ ತಡೆಯಲು ತೆರಳಿದ್ದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮಹಿಳಾ ಅಧಿಕಾರಿಯನ್ನು ಶಾಸಕರೊಬ್ಬರ ಪುತ್ರ ಎಂದು ಹೇಳಿಕೊಂಡ ವ್ಯಕ್ತಿ, ಮೊಬೈಲ್‌ನಲ್ಲಿ ಅವಾಚ್ಯವಾಗಿ ನಿಂದಿಸಿ ಬೆದರಿಕೆ ಹಾಕಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸೀಗೆಬಾಗಿ– ಬಾಬಳ್ಳಿ ಬಳಿ ಭದ್ರಾ ನದಿಯಲ್ಲಿ ಅಕ್ರಮವಾಗಿ ಮರಳು ತೆಗೆದು ಟ್ರ್ಯಾಕ್ಟರ್‌ನಲ್ಲಿ ಸಾಗಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದ ಹಿನ್ನೆಲೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಭದ್ರಾವತಿ ವಿಭಾಗದ ಭೂವಿಜ್ಞಾನಿ ಕೆ.ಕೆ. ಜ್ಯೋತಿ ಹಾಗೂ ಶಿವಮೊಗ್ಗ ವಿಭಾಗದ ಭೂ ವಿಜ್ಞಾನಿ ಪ್ರೀತಿ ದೊಡ್ಡಗೌಡರ್ ಮೂವರು ಸಿಬ್ಬಂದಿಯೊಂದಿಗೆ ರಾತ್ರಿ ಸ್ಥಳಕ್ಕೆ ತೆರಳಿದ್ದಾರೆ.

ಈ ವೇಳೆ ಅಕ್ರಮವಾಗಿ ಮರಳು ತೆಗೆಯುತ್ತಿದ್ದ ವ್ಯಕ್ತಿಯೊಬ್ಬ ಜ್ಯೋತಿ ಅವರ ಬಳಿ ಬಂದು ಮೊಬೈಲ್ ಕೊಟ್ಟು 'ಅಣ್ಣಾ ಮಾತಾಡುತ್ತಾರೆ' ಎಂದು ಹೇಳುತ್ತಾನೆ. ಫೋನ್ ಸ್ವೀಕರಿಸಲು ನಿರಾಕರಿಸುವ ಅಧಿಕಾರಿ, 'ಅವರಿಗೆ ನನ್ನ ಫೋನ್‌ಗೆ ಕರೆ ಮಾಡಲು ಹೇಳಿ' ಎಂದು ತಿಳಿಸುತ್ತಾರೆ.

'ಅಧಿಕಾರಿಯ ಫೋನ್‌ಗೆ ಕರೆ ಮಾಡಬೇಕಂತೆ ಅಣ್ಣಾ' ಎಂದು ಮರಳು ಸಾಗಿಸುತ್ತಿದ್ದ ವ್ಯಕ್ತಿ ಹೇಳುತ್ತಾನೆ. 'ಹೌದಾ?' ಎನ್ನುವ ಆಚೆಕಡೆಯ ವ್ಯಕ್ತಿ, 'ಲೌಡ್ ಸ್ಪೀಕರ್ ಆನ್ ಮಾಡು' ಎಂದು ಹೇಳಿ ಅತ್ಯಂತ ಅವಾಚ್ಯವಾಗಿ ಅಧಿಕಾರಿಗೆ ನಿಂದಿಸುತ್ತಾನೆ. 'ನೆಟ್ಟಗೆ ಮಾತನಾಡಿ, ಯಾರಿಗೆ ಮಾತಾಡುತ್ತೀರಿ. ಒಬ್ಬ ಅಧಿಕಾರಿಗೆ ಮಾತಾಡುತ್ತಿದ್ದೀರಿ. ಬೆಲೆ ಕೊಟ್ಟು ಮಾತನಾಡಿ' ಎಂದು ಮಹಿಳಾ ಅಧಿಕಾರಿ ಹೇಳಿದರೂ ಹೀನಾಯವಾಗಿ ನಿಂದಿಸುವುದು ಮುಂದುವರಿಸುತ್ತಾನೆ.

'ಐದು ನಿಮಿಷ ಅಣ್ಣಾ, ಸ್ಥಳಕ್ಕೆ ಡಿವೈಎಸ್‌ಪಿ ಬರುತ್ತಾರೆ. ನೀನೇ ಇಲ್ಲಿಗೆ ಬಂದು ಬಿಡು' ಎಂದು ಫೋನ್ ಹಿಡಿದ ವ್ಯಕ್ತಿ ಹೇಳಿದಾಗ, 'ಆಯ್ತು ಬರುವೆ' ಎನ್ನುತ್ತಾ ಆ ವ್ಯಕ್ತಿ ಕರೆ ಕಡಿತಗೊಳಿಸುವುದು ವಿಡಿಯೊದಲ್ಲಿದೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು 'ಪ್ರಜಾವಾಣಿ'ಯು ಭೂ ವಿಜ್ಞಾನಿ ಜ್ಯೋತಿ ಅವರ ಸಂಪರ್ಕಕ್ಕೆ ಯತ್ನಿಸಿದರೂ ಅವರು ಸಿಗಲಿಲ್ಲ.

ಜಿಲ್ಲಾಧಿಕಾರಿಗೆ ಮಾಹಿತಿ: 'ಫೋನ್ ಮೂಲಕ ಕರೆ ಮಾಡಿ ನಿಂದಿಸಿದವರು ಯಾರು ಎಂಬುದು ಗೊತ್ತಾಗಲಿಲ್ಲ. ಆ ಬಗ್ಗೆ ಜಿಲ್ಲಾಧಿಕಾರಿಗೆ ಮಾಹಿತಿ ಕೊಟ್ಟಿದ್ದೇವೆ' ಎಂದು ಇನ್ನೊಬ್ಬ ಅಧಿಕಾರಿ ಪ್ರೀತಿ ದೊಡ್ಡಗೌಡರ್ ಪ್ರತಿಕ್ರಿಯಿಸಿದರು.

ಘಟನೆಯ ವೇಳೆ ರಕ್ಷಣೆಗೆ ಮಹಿಳಾ ಅಧಿಕಾರಿಗಳು ಸಂಪರ್ಕಿಸಿದರೂ ಸ್ಥಳೀಯ ಪೊಲೀಸರು ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದರು. 112ಕ್ಕೆ ಕರೆ ಮಾಡಿದರೂ ಅದು ಸಂಪರ್ಕಕ್ಕೆ ಸಿಗಲಿಲ್ಲ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿಗಳು ಫೋನ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದರು ಎಂಬ ಆರೋಪ ಕೇಳಿಬಂದಿದೆ.

> ಯಾರೋ ಕೆಲವರು ಕೆಲಸಕ್ಕೆ ಅಡ್ಡಿಪಡಿಸಿದ್ದಾಗಿ ಅಧಿಕಾರಿಗಳು ಹೇಳಿದ್ದರು. ನಿಂದಿಸಿರುವುದನ್ನು ಹೇಳಿರಲಿಲ್ಲ. ಪೊಲೀಸರಿಗೆ ಕ್ರಮಕ್ಕೆ ಸೂಚಿಸುವೆ
>
> **ಗುರುದತ್ತ ಹೆಗಡೆ,** ಜಿಲ್ಲಾಧಿಕಾರಿ, ಶಿವಮೊಗ್ಗ

> ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳಿಂದ ದೂರು ಪಡೆದು ಕ್ರಮಕ್ಕೆ ಭದ್ರಾವತಿ ಪೊಲೀಸರಿಗೆ ಸೂಚಿಸಿರುವೆ
>
> **ಜಿ.ಕೆ.ಮಿಥುನ್‌ಕುಮಾರ್**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶಿವಮೊಗ್ಗ

'ನನಗೂ ಅದಕ್ಕೂ ಸಂಬಂಧವಿಲ್ಲ'

'ನನಗೂ ಆ ವಿಡಿಯೊಗೂ ಸಂಬಂಧವಿಲ್ಲ. ಬೆದರಿಕೆ ಕುರಿತು ನನಗೆ ಏನೂ ಗೊತ್ತಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿರುವ ಆ ವಿಡಿಯೊ ನೋಡಿ ನನಗೂ ಬಹಳಷ್ಟು ಮಂದಿ ಕರೆ ಮಾಡಿ ಕೇಳುತ್ತಿದ್ದಾರೆ. ನನಗೂ ವಿಡಿಯೊ ಲಿಂಕ್ ಹಾಕಿದ್ದಾರೆ. ಈ ವಿಚಾರದಲ್ಲಿ ನನ್ನ ಹೆಸರು ಏಕೆ ಎಳೆದು ತಂದಿದ್ದಾರೆ ಅನ್ನೋದು ಗೊತ್ತಿಲ್ಲ. ಅದು ನನಗೂ ಅಚ್ಚರಿ ಅನ್ನಿಸಿದೆ. ನಗು ಬರುತ್ತಿದೆ' ಎಂದು ಭದ್ರಾವತಿ ಶಾಸಕ ಸಂಗಮೇಶ್ವರ ಅವರ ಪುತ್ರ ಬಸವೇಶ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ರಾತ್ರಿ ನಾನು ಯಾರಿಗೂ ಕರೆ ಮಾಡಿಲ್ಲ. ನನಗೂ ಯಾರೂ ಕರೆ ಮಾಡಿಲ್ಲ. ಅಲ್ಲಿ ಮರಳು ತೆಗೆಯುತ್ತಿದ್ದಾರೆ ಎಂಬುದೇ ಗೊತ್ತಿಲ್ಲ. ಆ ಅಧಿಕಾರಿಗಳ ಮುಖವನ್ನು ಜೀವನದಲ್ಲಿಯೇ ನೋಡಿಲ್ಲ' ಎಂದು ಪ್ರತಿಕ್ರಿಯಿಸಿದರು.

ಸ್ವಯಂಪ್ರೇರಿತ ದೂರಿಗೆ ಆಗ್ರಹ

ಈ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ ರವಿಕೃಷ್ಣಾ ರೆಡ್ಡಿ, ಅಕ್ರಮ ಗಣಿಗಾರಿಕೆಯನ್ನು ತಡೆಯಲು ಬಂದ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗೆ ಅತ್ತ ಕಡೆಯಿಂದ ಫೋನ್‌ನಲ್ಲಿ ಶಾಸಕರೊಬ್ಬರ ಪುತ್ರನ ಹೆಸರಲ್ಲಿ ಬೈದು ಬೆದರಿಕೆ ಹಾಕಿದ ವ್ಯಕ್ತಿಯ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಕ್ರಮ ಕೈಗೊಳ್ಳುವಂತೆ, ತೊಂದರೆಗೀಡಾದ ಅಧಿಕಾರಿಗಳಿಗೆ ರಕ್ಷಣೆ ಕೊಡುವಂತೆ ಶಿವಮೊಗ್ಗ ಜಿಲ್ಲಾಡಳಿತಕ್ಕೆ ಆಗ್ರಹಿಸಿದ್ದಾರೆ.

'ಸಂಗಮೇಶ್ವರ ಶಾಸಕರೋ, ಪಾಳೆಗಾರರೋ'

ಬೆಂಗಳೂರು: ಅಕ್ರಮ ಮರಳು ಗಣಿಗಾರಿಕೆ ತಡೆಯುತ್ತಿದ್ದ ಶಿವಮೊಗ್ಗ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮಹಿಳಾ ಅಧಿಕಾರಿಗೆ ಭದ್ರಾವತಿಯ ಕಾಂಗ್ರೆಸ್ ಶಾಸಕ ಬಿ.ಕೆ.ಸಂಗಮೇಶ್ವರ ಪುತ್ರ ಅವಾಚ್ಯ ಪದಗಳಿಂದ ನಿಂದಿಸಿರುವುದನ್ನು ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಸಂಗಮೇಶ್ವರ ಅವರ ಪುತ್ರ, ಕಾಂಗ್ರೆಸ್ ಪಕ್ಷದ ನೀಚ ಸಂಸ್ಕೃತಿ ಎಂಥದ್ದು, ಮಹಿಳೆಯರ ಮೇಲೆ ಕಾಂಗ್ರೆಸ್ ಪಕ್ಷಕ್ಕೆ ಇರುವ ಧೋರಣೆ ಎಂಥದ್ದು ಎನ್ನುವುದನ್ನು ಮತ್ತೊಮ್ಮೆ ಪ್ರದರ್ಶನ ಮಾಡಿದ್ದಾರೆ ಎಂದರು.

ಶಾಸಕರ ಪುತ್ರನಿಗೆ ಅಧಿಕಾರಿಯೊಂದಿಗೆ ಮಾತನಾಡಲು ಯಾವ ಹಕ್ಕಿದೆ? ಸಂಗಮೇಶ್ವರ ಶಾಸಕರೋ, ಪಾಳೆಗಾರರೋ? ಮಹಿಳೆಯರ ಮೇಲೆ ಕಾಂಗ್ರೆಸ್ ಪಕ್ಷದ ದಬ್ಬಾಳಿಕೆ, ದೌರ್ಜನ್ಯವನ್ನು ಜನ ಗಮನಿಸುತ್ತಿದ್ದು, ಉತ್ತರ ಕೊಡುವ ಕಾಲ ದೂರವಿಲ್ಲ ಎಂದರು.

ಚಕ್ಕಡಿ ಸಾಲು... ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಮೈಲಾರದಲ್ಲಿ ಮೈಲಾರಲಿಂಗೇಶ್ವರ ಜಾತ್ರೆ ಆರಂಭವಾಗುತ್ತಿದ್ದು, ಹಾವೇರಿ ಜಿಲ್ಲೆಯಿಂದ ಜನರು ಚಕ್ಕಡಿಗಳ ಮೂಲಕ ಸೋಮವಾರ ತೆರಳಿದರು – ಪ್ರಜಾವಾಣಿ ಚಿತ್ರ/ ಮಾಲತೇಶ ಇಚ್ಚಂಗಿ

ತಳಿರು ತೋರಣಗಳಿಂದ ದೇವಸ್ಥಾನ ಸಿಂಗಾರ

ರೇಣುಕಾ ಯಲ್ಲಮ್ಮ ದೇವಿ ಜಾತ್ರೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮದ್ದೂರು: ಪಟ್ಟಣದ ಹೊಳೆಬೀದಿಯಲ್ಲಿ ಚಿಕ್ಕಸವದತ್ತಿ ಎಂದೇ ಪ್ರಸಿದ್ಧಿಯಾಗಿರುವ ಶ್ರೀರೇಣುಕಾ ಯಲ್ಲಮ್ಮದೇವಿ 53ನೇ ವರ್ಷದ ಜಾತ್ರಾ ಮಹೋತ್ಸವವು ಫೆ.11ರಿಂದ ನಡೆಯಲಿದೆ.

ಎಲ್ಲೆಡೆ ತಳಿರು ತೋರಣಗಳಿಂದ ಸಿಂಗರಿಸಿದ್ದು, ಪೇಟೆ ಬೀದಿ, ಹೊಳೇಬೀದಿ ಸಂಪರ್ಕಿಸುವ ಮಾರ್ಗಗಳಲ್ಲಿ ಹಾಗೂ ದೇವಸ್ಥಾನದ ಮಹಾದ್ವಾರದ ಬಳಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ.

11ರಂದು ಸಂಜೆ 6.30ಕ್ಕೆ ಮೂಲ ದೇವರಿಗೆ ಅನುಜ್ಞೆ ಹಾಗೂ ಗಣಪತಿ ಪೂಜೆ ಸಲ್ಲಿಸಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುವುದು. ಕಳಸ ಪ್ರತಿಷ್ಠಾಪನೆ ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮವು ಜರುಗಲಿದೆ.

12ರಂದು ಬೆಳಿಗ್ಗೆ 8.30ಕ್ಕೆ 26ನೇ ವರ್ಷದ ಮಹಾಚಂಡಿಕಾಯಾಗ ನಡೆಯಲಿದೆ. ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಹಾಗೂ ಮುತ್ತೈದೆಯರಿಂದ ತಂಬಿಟ್ಟಿನ ಆರತಿ, ಮಧ್ಯಾಹ್ನ 1ರಿಂದ 4ರವರೆಗೆ ಅನ್ನಸಂತರ್ಪಣೆ ನಡೆಯಲಿದೆ.

4.15ರಿಂದ ಸಂಜೆ 5.30ರವರೆಗೆ ನಿಂಬೆಹಣ್ಣಿನ ದೀಪದ ಆರತಿ ಮತ್ತು ಉಯ್ಯಾಲೋತ್ಸವವನ್ನು ದೇವಸ್ಥಾನದ ಟ್ರಸ್ಟ್ ವತಿಯಿಂದ ಏರ್ಪಡಿಸಲಾಗಿದೆ. ರಾತ್ರಿ 7ಕ್ಕೆ ಹೊಳೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭಿಸಿ ದೇವಿಯ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಲಿದ್ದು, ವಿವಿಧ ವಿಶೇಷ ಹೂವುಗಳಿಂದ ಹಾಗೂ ದೀಪಾಲಂಕಾರದಿಂದ ಪಲ್ಲಕ್ಕಿ ಉತ್ಸವ ಕಂಗೊಳಿಸಲಿದೆ.

ತಿರುಪತಿ ತಿರುಮಲ ದೇವಸ್ಥಾನದ ಮಂಜು ಬಾಲಾಜಿ ಅವರ ವಾದ್ಯಗೋಷ್ಠಿ, ಮಂಗಳೂರಿನ ಯಕ್ಷಗಾನ, ಕೇರಳದ ಚಂಡೆ ಮೇಳ, ತಮಿಳುನಾಡಿನ ಬ್ಯಾಂಡ್ ಸೆಟ್ ಸೇರಿದಂತೆ ಮದ್ದೂರಮ್ಮನವರ ಪೂಜಾ ಕುಣಿತ, ದಂಡಿನಮಾರಮ್ಮನವರ ಪೂಜಾ ಕುಣಿತ, ಕಲಾವಿದರಿಂದ ತಮಟೆ, ನಗಾರಿ, ಜಾನಪದ ಮೇಳಗಳು ಮೆರವಣಿಗೆಯಲ್ಲಿ ಸಾಗಲಿವೆ. ರಾತ್ರಿ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ಸಾಗಿ ಭಾನುವಾರ ಬೆಳಿಗ್ಗೆ 6ಕ್ಕೆ ದೇವಸ್ಥಾನದ ಮೂಲಸ್ಥಾನ ತಲುಪಲಿದೆ ಎಂದು ದೇವಸ್ಥಾನದ ಧರ್ಮದರ್ಶಿ, ಕಾರ್ಯದರ್ಶಿ ಶ್ರೀನಿವಾಸ್ ಕೋರಿದ್ದಾರೆ.

ಮುಖ್ಯಾಂಶಗಳು

- ನಿಂಬೆಹಣ್ಣಿನ ದೀಪದ ಆರತಿ, ಉಯ್ಯಾಲೋತ್ಸವ
- ದೇವಿಯ ಮುತ್ತಿನ ಪಲ್ಲಕ್ಕಿ ಉತ್ಸವ ಮೆರವಣಿಗೆ
- ಮುತ್ತೈದೆಯರಿಂದ ತಂಬಿಟ್ಟಿನ ಆರತಿ

ಮದ್ದೂರಿನ ರೇಣುಕಾ ಯಲ್ಲಮ್ಮದೇವಿ

'ಭದ್ರಾ ಮೇಲ್ದಂಡೆ ರಾಷ್ಟ್ರೀಯ ಯೋಜನೆ ಅಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸದಸ್ಯ ಜಿ.ಸಿ.ಚಂದ್ರಶೇಖರ್ ಸೋಮವಾರ ಕೇಳಿದ ಪ್ರಶ್ನೆಗೆ ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ ಈ ಬಗ್ಗೆ ಉತ್ತರ ನೀಡಿದ್ದಾರೆ.

ಮೇಕೆದಾಟು ಯೋಜನೆಗೆ ವನ ಸಂರಕ್ಷಣಾ ಅಧಿನಿಯಮ–1980ರಲ್ಲಿ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ಒಪ್ಪಿಗೆ ನೀಡಿಲ್ಲ. ಈ ಯೋಜನೆಯ ಕುರಿತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ನಡೆದಿತ್ತು. ಯೋಜನೆಯ ಕಾರ್ಯಸಾಧ್ಯತೆ ಕುರಿತು ತಾಂತ್ರಿಕ/ಆರ್ಥಿಕ ಅಂಶಗಳ ಪರಿಶೀಲನೆಗೆ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲು 2024ರ ಫೆ. 2ರಂದು ತೀರ್ಮಾನಿಸಲಾಗಿತ್ತು. ಜಲ ಆಯೋಗ ಈ ವರೆಗೆ ತೀರ್ಮಾನ ತೆಗೆದುಕೊಂಡಿಲ್ಲ ಎಂದೂ ತಿಳಿಸಿದ್ದಾರೆ.

80 ಸಾವಿರ ಶಿಕ್ಷಕರ ನೇಮಕಾತಿಗೆ ಆಗ್ರಹ

ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದಿಂದ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರು ಹಾಗೂ ಉಪನ್ಯಾಸಕರ ನೇಮಕಾತಿಗೆ ಆಗ್ರಹಿಸಿ, ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ಉದ್ಯೋಗಾಕಾಂಕ್ಷಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಪ್ರತಿವರ್ಷ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪದವಿ ಪೂರೈಸಿ, ಹೊರ ಬರುತ್ತಿದ್ದರೂ ಸರ್ಕಾರವು ನೇಮಕಾತಿಗೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಉದ್ಯೋಗ ಆಕಾಂಕ್ಷಿಗಳು ಆಕ್ರೋಶ ಹೊರಹಾಕಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಪ್ರಾಥಮಿಕ, ಪ್ರೌಢಶಾಲೆ, ಪಿಯು ಕಾಲೇಜುಗಳಲ್ಲಿ ಹತ್ತು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ನೇಮಕಾತಿಯನ್ನು ತಕ್ಷಣವೇ ಆರಂಭಿಸಬೇಕು ಎಂದು ಆಗ್ರಹಿಸಿದರು.

80 ಸಾವಿರ ಶಿಕ್ಷಕರ ನೇಮಕಾತಿಯನ್ನು ತಕ್ಷಣವೇ ಆರಂಭಿಸಬೇಕು. ಎಲ್ಲ ವರ್ಗದ ಶಿಕ್ಷಕ ಹುದ್ದೆಯ ಆಕಾಂಕ್ಷಿಗಳಿಗೆ ಮೂರು ವರ್ಷ ವಯೋಮಿತಿ ಸಡಿಲಿಕೆ ಮಾಡಬೇಕು. ವರ್ಷಕ್ಕೆ ಎರಡು ಬಾರಿ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ನಡೆಸಬೇಕು ಎಂದು ಒತ್ತಾಯಿಸಿದರು.

ಬಿ.ಕಾಂ ಹಾಗೂ ಬಿ.ಇಡಿ ಪದವೀಧರರಿಗೂ ಸಿಇಟಿ ಬರೆಯಲು ಅವಕಾಶ ಕಲ್ಪಿಸಬೇಕು. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ದೈಹಿಕ ಶಿಕ್ಷಣ ಶಿಕ್ಷಕರನ್ನು ತಕ್ಷಣವೇ ನೇಮಿಸಬೇಕು. ಸಂಗೀತ ಹಾಗೂ ಚಿತ್ರಕಲಾ ವಿಭಾಗಕ್ಕೂ ಶಿಕ್ಷಕರನ್ನು ನೇಮಿಸಬೇಕು. 2022ರ ಶಿಕ್ಷಕರ ನೇಮಕಾತಿಯ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಪಿಯು ಉಪನ್ಯಾಸಕರ ಹುದ್ದೆಗಳನ್ನು ಹೆಚ್ಚಿಸಬೇಕು. ಸಮಾನ ಹುದ್ದೆಗಳಿಗೆ ನಿರಾಪೇಕ್ಷಣಾ ಪತ್ರವನ್ನು ನೀಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಎಎಪಿ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಭೇಟಿ ನೀಡಿ ಪ್ರತಿಭಟನಕಾರರ ಅಹವಾಲು ಆಲಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಸಂಘದ ಅಧ್ಯಕ್ಷ ಲಕ್ಷ್ಮೀಕಾಂತ್, ಸಂಘದ ಸದಸ್ಯರಾದ ಕಾಂತಕುಮಾರ್, ಮಲ್ಲಿಕಾರ್ಜುನ್ ವಹಿಸಿದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಪಾಲ್ಗೊಂಡು ಪ್ರತಿಭಟನೆಗೆ ಬೆಂಬಲ ಸೂಚಿಸಿದರು – ಪ್ರಜಾವಾಣಿ ಚಿತ್ರ

'ನಾಯಕರ ಮನೆಗೆ ಹೋದರೆ ಮನಃಶಾಂತಿ'

ಬೆಂಗಳೂರು: 'ಯಾರಿಗೆ ಎಲ್ಲಿ ಮನಃಶಾಂತಿ ಸಿಗುತ್ತದೆಯೊ ಅಲ್ಲಿಗೆ ಹೋದರೆ ತಪ್ಪೇನಿಲ್ಲ. ಅವರಿಗೆ (ಡಿ.ಕೆ. ಶಿವಕುಮಾರ್) ಅಲ್ಲಿಗೆ ಹೋದರೆ ಮನಃಶಾಂತಿ ಸಿಗುತ್ತದೆ. ನಮಗೆ ನಮ್ಮ ನಾಯಕರ ಮನೆಗೆ ಹೋದರೆ ಮನಃಶಾಂತಿ ಸಿಗುತ್ತದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಉತ್ತರಪ್ರದೇಶದ ಪ್ರಯಾಗ್ ರಾಜ್ ಕುಂಭಮೇಳದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುಣ್ಯಸ್ನಾನ ಮಾಡಿದ ಬಗ್ಗೆ ಪ್ರತಿಕ್ರಿಯಿಸಿ, 'ಅದು ಅವರಿಗೆ ಬಿಟ್ಟ ವಿಚಾರ' ಎಂದರು.

'ಅಯೋಧ್ಯೆಯಲ್ಲಿ ಸ್ವಾಮೀಜಿಗಳು ಪ್ರಾಣ ಪ್ರತಿಷ್ಠಾಪನೆ ಮಾಡಬೇಕಿತ್ತು. ರಾಜಕೀಯ ಕಾರಣಕ್ಕೆ ಯಾರು ಮಾಡಿದರು? ಇದು ಕಾಂಗ್ರೆಸ್ ಆರೋಪ ಅಲ್ಲ, ಶಂಕರಾಚಾರ್ಯ ಶ್ರೀಗಳ ಆಕ್ಷೇಪ' ಎಂದರು.

'ಭಕ್ತಿಯನ್ನು ರಾಜಕೀಯಕ್ಕೆ ಬಳಸಬೇಡಿ. ಎಲ್ಲದಕ್ಕೂ ಸಂವಿಧಾನದಿಂದ ಪರಿಹಾರ ಸಿಗುತ್ತದೆ ಎಂಬುದು ಮಲ್ಲಿಕಾರ್ಜುನ ಖರ್ಗೆಯವರ ಮಾತಿನ ಅರ್ಥ' ಎಂದರು.

'ಆಂತರಿಕ ಕಲಹದಿಂದ ಪಕ್ಷ ಹೈರಾಣ'

ಬೆಂಗಳೂರು: ದೆಹಲಿಯಲ್ಲಿ ಪಕ್ಷದ ಒಗ್ಗಟ್ಟು, ನಿಷ್ಠೆ, ಕಾರ್ಯತತ್ಪರತೆಯಿಂದ ಚುನಾವಣೆಯಲ್ಲಿ ಗೆಲುವು ಸಾಧ್ಯವಾಗಿದೆ. ಆದರೆ, ಇದಕ್ಕೆ ವಿರುದ್ಧವಾಗಿ ರಾಜ್ಯದಲ್ಲಿ ಇನ್ನೂ ಆಂತರಿಕ ಕಲಹ ಮತ್ತು ಸಂಘಟನಾ ದೌರ್ಬಲ್ಯದಿಂದ ಪಕ್ಷ ಬಳಲುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಬೇಸರ ವ್ಯಕ್ತಪಡಿಸಿದ್ದಾರೆ.

'ದೆಹಲಿಯ ಗೆಲುವು ನಮಗೆ ಪಾಠವಾಗಬೇಕು. ಒಳ ಜಗಳ ಮುಗಿದು, ಕಾರ್ಯಪದ್ಧತಿಯಲ್ಲಿ ಸ್ಪಷ್ಟತೆ ಮತ್ತು ಶಿಸ್ತು ಬರಬೇಕು. ಕರ್ನಾಟಕದ ಜನತೆ ಬಿಜೆಪಿಗೆ ಬೆಂಬಲ ನೀಡಲು ಸಿದ್ಧರಿದ್ದಾರೆ. ಆದರೆ ಅವರ ವಿಶ್ವಾಸ ಗಳಿಸಲು ಪಕ್ಷದ ಒಳಾಂಗಣವನ್ನು ಶುದ್ಧಗೊಳಿಸಿ, ಬಲಿಷ್ಠಗೊಳಿಸಬೇಕಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪಕ್ಷದಲ್ಲಿ ಉದ್ಭವಿಸಿರುವ ಭಿನ್ನಾಭಿಪ್ರಾಯಗಳು ಮತ್ತು ಗುಂಪು ರಾಜಕಾರಣದಿಂದ ಕಾರ್ಯಕರ್ತರಲ್ಲಿ ಅಸಮಾಧಾನ ಮೂಡಿದೆ. ದೆಹಲಿಯಲ್ಲಿ ಪಕ್ಷದ ನಾಯಕರು ಏಕತೆ ಮತ್ತು ಶಿಸ್ತನ್ನು ಅನುಸರಿಸಿದರೆ, ಕರ್ನಾಟಕದ ಕೆಲವು ನಾಯಕರು ತಮ್ಮ ಸ್ವಂತ ರಾಜಕೀಯ ಲಾಭಕ್ಕಾಗಿ ಒಡಕು ಹುಟ್ಟಿಸಿರುವುದರಿಂದ ಸಮಸ್ಯೆ ಗಂಭೀರವಾಗಿದೆ. ಇದರಿಂದ ಕಾರ್ಯಕರ್ತರು ಮತ್ತು ಮತದಾರರಲ್ಲಿ ಅಸ್ಥಿರತೆ ಉಂಟಾಗಿದೆ. ಇದನ್ನು ಸರಿಪಡಿಸದೇ ಇದ್ದರೆ, ಮುಂಬರುವ ಚುನಾವಣೆಯಲ್ಲಿ ಕಠಿಣ ಸವಾಲು ಎದುರಿಸಬೇಕಾಗುತ್ತದೆ' ಎಂದರು.

'ಪಕ್ಷದ ಯಶಸ್ಸು ಯಾವುದೇ ಒಬ್ಬ ವ್ಯಕ್ತಿಯ ಸಾಧನೆ ಅಲ್ಲ. ಇದು ಶ್ರದ್ಧೆ, ಶ್ರಮ ಮತ್ತು ಸಮೂಹ ಶಕ್ತಿಯ ಪ್ರತೀಕ. ರಾಜ್ಯದಲ್ಲಿ ಪಕ್ಷ ಮತ್ತಷ್ಟು ಬಲಿಷ್ಠಗೊಳ್ಳಬೇಕಾದರೆ ಎಲ್ಲಾ ನಾಯಕರು ಒಗ್ಗೂಡಬೇಕು. ಸಂಘಟನಾ ಶಕ್ತಿಯನ್ನು ಪುನರ್ ನಿರ್ಮಿಸಬೇಕು' ಎಂದಿದ್ದಾರೆ.

'ಖರ್ಗೆ ಜತೆ ರಾಜಕೀಯ ಮಾತನಾಡಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ರಾಜಕೀಯ ವಿಷಯ ಚರ್ಚೆ ಮಾಡಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಖರ್ಗೆ ಅವರ ಕುಟುಂಬ ಮತ್ತು ನಮ್ಮ ಕುಟುಂಬ ಒಂದೇ. ರಾಜಕೀಯ ಹೊರತುಪಡಿಸಿ, ನನಗೆ ಅವರು ಹಿರಿಯಣ್ಣನಂತೆ. ಭೇಟಿ ಮಾಡಿದಾಗ ಕುಟುಂಬದ ವಿಚಾರಗಳನ್ನು ಮಾತನಾಡುತ್ತೇವೆ' ಎಂದರು.

'ಪಕ್ಷದ ವರಿಷ್ಠರನ್ನು ಭೇಟಿ ಮಾಡುತ್ತೀರಾ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ದೆಹಲಿಗೆ ಹೋಗಿ ಪಕ್ಷದ ನಾಯಕರನ್ನು ಭೇಟಿ ಮಾಡುತ್ತೇನೆ. ಅದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ' ಎಂದರು.

ಗೋಯಲ್‌ಗೆ ನಾಚಿಕೆ ಆಗಬೇಕು: 'ರಾಜ್ಯದ ತೆರಿಗೆ ಪಾಲು ಕೇಳಿದರೆ ಸಣ್ಣತನ ಎಂದಿರುವ ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರಿಗೆ ನಾಚಿಕೆ ಆಗಬೇಕು. ಹೆಚ್ಚು ತೆರಿಗೆ ಕಟ್ಟುತ್ತಿರುವ ಕರ್ನಾಟಕದವರಿಗೆ ಹೆಚ್ಚು ಪಾಲು ನೀಡುವಂತೆ ಕೇಳುತ್ತಿದ್ದೇವೆ. ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಿರುವ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕ ದಿವಾಳಿಯಾಗಿದೆ ಎಂದು ಹೇಳುತ್ತಾರೆ. ಜವಾಬ್ದಾರಿ ಸ್ಥಾನದಲ್ಲಿರುವವರು ಈ ರೀತಿ ಮಾತನಾಡಬಾರದು' ಎಂದರು.

ಜಾತಿ ಗಣತಿ ವರದಿ ಜಾರಿಗೆ ಯಾರೂ ಅಡ್ಡಿಪಡಿಸಿಲ್ಲ: 'ಜಾತಿ ಗಣತಿ ವರದಿ ಜಾರಿಗೆ ಯಾರೂ ಅಡ್ಡಿಪಡಿಸಿಲ್ಲ. ಆದರೆ, ಈ ವರದಿಗೆ ಸಂಬಂಧಿಸಿದಂತೆ ಆಂತರಿಕವಾಗಿ ಇನ್ನೂ ಚರ್ಚೆ ಆಗಬೇಕಿದೆ. ನಂತರ ಬಹಿರಂಗಪಡಿಸಬೇಕು. ಮುಖ್ಯಮಂತ್ರಿಯವರು ತಮ್ಮ ಆರೋಗ್ಯದ ದೃಷ್ಟಿಯಿಂದ ಸಚಿವ ಸಂಪುಟ ಸಭೆಯನ್ನು ಮುಂದೂಡಿದ್ದಾರೆ. ಇದೇ 17ರಂದು ಮಲೆಮಾದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಲು ನಿರ್ಧರಿಸಿದ್ದಾರೆ' ಎಂದರು.

'ಹೈಕಮಾಂಡ್ ಭೇಟಿ ಇಂದು'

ನವದೆಹಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಂಗಳವಾರ ಭೇಟಿ ಮಾಡಿ ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ಖರ್ಗೆ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ್ದ ಗೃಹ ಸಚಿವ ಜಿ. ಪರಮೇಶ್ವರ ಸುಮಾರು 45 ನಿಮಿಷ ಚರ್ಚೆ ನಡೆಸಿದ್ದರು. ಅದರ ಬೆನ್ನಲ್ಲೇ, ಸತೀಶ ಅವರು ಖರ್ಗೆ ಅವರನ್ನು ಭೇಟಿ ಮಾಡಲು ಮುಂದಾಗಿರುವುದು ಚರ್ಚೆಗೆ ಗ್ರಾಸವಾಗಿದೆ. ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಜಾರಕಿಹೊಳಿ, 'ದೆಹಲಿಗೆ ಬಂದಾಗ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದು ಸಹಜ. ಅದರಲ್ಲಿ ವಿಶೇಷವೇನಿಲ್ಲ. ಉಳಿದ ಸಚಿವರು ಇಲಾಖೆಗಳ ಕೆಲಸದ ಮೇಲೆ ದೆಹಲಿಗೆ ಬರಬಹುದು' ಎಂದರು.

ಎಸ್‌ಸಿ ಪಟ್ಟಿಯಿಂದ ಆದಿ ಕರ್ನಾಟಕ ಹೆಸರು ತೆಗೆಯಲು ಒತ್ತಾಯ

ಪ್ರಮಾಣ ಪತ್ರ: ಜಾತಿಗಳ ವರ್ಗೀಕರಣಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಪರಿಶಿಷ್ಟ ಜಾತಿ ಪಟ್ಟಿಯಿಂದ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಹೆಸರನ್ನು ತೆಗೆದುಹಾಕಬೇಕು' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ಒತ್ತಾಯಿಸಿದರು.

'ಹಳೇ ಮೈಸೂರು ಭಾಗದ ಮಾದಿಗರು, ಛಲವಾದಿಗಳು ಆದಿ ಕರ್ನಾಟಕ (ಎಕೆ), ಆದಿ ದ್ರಾವಿಡ (ಎಡಿ) ಹಾಗೂ ಆದಿ ಆಂಧ್ರ ಹೆಸರಿನಲ್ಲಿ ಪ್ರಮಾಣಪತ್ರ ಪಡೆಯುತ್ತಿದ್ದಾರೆ. ಇದು ಒಳಮೀಸಲಾತಿ ಜಾರಿಗಾಗಿ ನಡೆಯುತ್ತಿರುವ ಜಾತಿ ವರ್ಗೀಕರಣಕ್ಕೆ ಅಡ್ಡಿಯುಂಟಾಗಿದೆ. ಬಲಗೈ ಜಾತಿಗಳೂ ಎಕೆ, ಎಡಿ ಎಂದು ಗುರುತಿಸಿಕೊಳ್ಳುತ್ತಿರುವ ಕಾರಣ ಗೊಂದಲ ಉಂಟಾಗಿದೆ. ಈ ಸಮಸ್ಯೆ ನಿವಾರಣೆಗಾಗಿ ಪಟ್ಟಿಯಿಂದ ಹೆಸರು ಕೈಬಿಡಬೇಕು' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಆಂಜನೇಯ

'ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ನೇತೃತ್ವದ ವಿಚಾರಣಾ ಆಯೋಗ ಮೀಸಲಾತಿ ಹಂಚಿಕೆ ಕುರಿತ ಅಂಕಿ–ಅಂಶ ಸಂಗ್ರಹಿಸುತ್ತಿದೆ. ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ ಬೆಂಗಳೂರು, ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ ಜಿಲ್ಲೆಗಳಲ್ಲಿ ಮಾದಿಗರು, ಛಲವಾದಿಗಳು ಆದಿಕರ್ನಾಟಕ ಒಂದೇ ಹೆಸರಿನಲ್ಲಿ ಜಾತಿ ಸೂಚಕ ಪ್ರಮಾಣಪತ್ರ ಪಡೆಯುತ್ತಿರುವುದು ಗೊಂದಲ ಸೃಷ್ಟಿಸಿದೆ' ಎಂದು ದೂರಿದರು.

'ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳಿವೆ. ಇವುಗಳಲ್ಲಿ 1,000ದಿಂದ 1 ಲಕ್ಷ ಜನಸಂಖ್ಯೆ ಹೊಂದಿದ ಸಣ್ಣ–ಪುಟ್ಟ ಜಾತಿಗಳೂ ಇವೆ. ಮಾದಿಗ, ಛಲವಾದಿ, ಲಂಬಾಣಿ, ಭೋವಿ ಸಮುದಾಯಗಳು ಬಹುಸಂಖ್ಯಾತರಾಗಿದ್ದು ಕೊರಚ, ಕೊರಮ ಸಮುದಾಯಗಳು ಕಡಿಮೆ ಸಂಖ್ಯೆ ಹೊಂದಿವೆ. ಈ ಸಮುದಾಯಗಳು ಮೂಲ ಜಾತಿ ಹೆಸರಿನಲ್ಲಿ ಜಾತಿ ಸೂಚಕ ಪ್ರಮಾಣಪತ್ರ ಪಡೆಯದೇ ಆದಿ ಕರ್ನಾಟಕ ಎಂದು ಗುರುತಿಸಿಕೊಳ್ಳುತ್ತಿರುವುದು ಸಮಸ್ಯೆಯಾಗಿದೆ' ಎಂದರು.

'ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಆಯಾ ಜಾತಿಗಳ ಹೆಸರಿನಲ್ಲಿ ಜಾತಿ ಸೂಚಕ ಪ್ರಮಾಣ ಪತ್ರ ಪಡೆಯುತ್ತಿರುವ ಕಾರಣ ಯಾವುದೇ ಗೊಂದಲಗಳಿಲ್ಲ. ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಮನೆಮನೆ ಸಮೀಕ್ಷೆ ನಡೆಸಿ ಆಯಾ ಜಾತಿಗಳ ಜನಸಂಖ್ಯೆ, ಹಿಂದುಳಿದಿರುವಿಕೆ, ಒಳಮೀಸಲಾತಿ ವರ್ಗೀಕರಣ ವರದಿಯನ್ನು ಸಿದ್ಧಪಡಿಸಿದೆ. ನಾಗಮೋಹನ ದಾಸ್ ಆಯೋಗವು ಇದನ್ನೇ ಆಧಾರವನ್ನಾಗಿ ಇಟ್ಟುಕೊಂಡು ವರದಿ ನೀಡಬೇಕು' ಎಂದು ಒತ್ತಾಯಿಸಿದರು.

ಫೆ.13ಕ್ಕೆ ಸಭೆ: 'ಸಮಗಾರ, ಚಮ್ಮಾರ, ಮೋಚಿ, ಡೋರ್, ದಕ್ಕಲಿಗ ಮತ್ತಿತರರು ಮಾದಿಗ ಸಂಬಂಧಿತ ಎಡಗುಂಪಿನ ಜಾತಿಗಳಾಗಿವೆ. ಇವರಲ್ಲಿ ಸಾಮರಸ್ಯ ಮೂಡಿಸಿ ಒಳಮೀಸಲಾತಿ ಹಕ್ಕೊತ್ತಾಯ ಮಂಡಿಸಲು ಫೆ.13ರಂದು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಮಾದಿಗ ಮತ್ತು ಸಂಬಂಧಿತ ಜಾತಿಗಳ ಸಮನ್ವಯ ಸಭೆ ನಡೆಯಲಿದೆ. ಸಭೆಯಲ್ಲಿ ಎಚ್.ಎನ್.ನಾಗಮೋಹನದಾಸ್ ಅವರೂ ಭಾಗವಹಿಸುತ್ತಿದ್ದು, ಎಲ್ಲರ ಮನವಿ ಆಲಿಸಲಿದ್ದಾರೆ' ಎಂದು ಹೇಳಿದರು.

ಎಸ್‌ಟಿಎಸ್, ಹೆಬ್ಬಾರ ವಿರುದ್ಧ ಕ್ರಮವಿಲ್ಲ!

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪದ ಮೇಲೆ ಬೆಂಗಳೂರಿನ ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್ ಮತ್ತು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ ಅವರನ್ನು ಪಕ್ಷದಿಂದ ಉಚ್ಚಾಟಿಸುವಂತೆ ಬಿಜೆಪಿ ಕೇಂದ್ರ ಸಮಿತಿಗೆ ರಾಜ್ಯ ಬಿಜೆಪಿ ಶಿಸ್ತು ಸಮಿತಿ ಮೂರು ಬಾರಿ ವರದಿ ನೀಡಿದ್ದರೂ ಯಾವುದೇ ಕ್ರಮವಾಗಿಲ್ಲ.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ಕಾರಣ ಕೇಳಿ ನೋಟಿಸ್ ನೀಡಿದ ಹಿನ್ನೆಲೆಯಲ್ಲಿ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ ಅವರ ಭವಿಷ್ಯದ ಬಗ್ಗೆಯೂ ಬಿಜೆಪಿ ವಲಯದಲ್ಲಿ ಚರ್ಚೆ ನಡೆದಿದೆ. ಇವರಿಬ್ಬರೂ ನಾಯಕರು ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಯಿಂದ ಗೆಲುವು ಸಾಧಿಸಿದ್ದರೂ ಕಾಂಗ್ರೆಸ್ ಮುಖಂಡರ ಜೊತೆ ಬಹಿರಂಗವಾಗಿ ಕಾಣಿಸಿಕೊಳ್ಳುತ್ತಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ನಿಕಟ ಸಂಪರ್ಕದಲ್ಲಿ ಇದ್ದಾರೆ.

ಕಳೆದ ವರ್ಷ ರಾಜ್ಯಸಭಾ ಚುನಾವಣೆಯಲ್ಲಿ ಸೋಮಶೇಖರ್ ವಿಪ್ ಉಲ್ಲಂಘಿಸಿ, ಅಡ್ಡಮತದಾನ ಮಾಡಿದ್ದರು. ಕಾಂಗ್ರೆಸ್ ಅಭ್ಯರ್ಥಿ ಪರ ಮತ ಚಲಾಯಿಸಿದ್ದರು. ಶಿವರಾಮ ಹೆಬ್ಬಾರ ಬಿಜೆಪಿಯ ಕಾರ್ಯವೈಖರಿ ಬಗ್ಗೆ ಆಗಾಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾರೆ.

'ಎಸ್.ಟಿ.ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ ವಿರುದ್ಧ ಕ್ರಮಕೈಗೊಳ್ಳುವಂತೆ ಕೇಂದ್ರ ಸಮಿತಿಗೆ ಮೂರು ಸಲ ವರದಿ ನೀಡಿದ್ದೇನೆ. ಶಿಸ್ತು ಕ್ರಮಕೈಗೊಳ್ಳುವ ಬಗ್ಗೆ ರಾಜ್ಯ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲೂ ಚರ್ಚೆಯಾಗಿತ್ತು. ಆದರೆ, ಈವರೆಗೆ ಯಾವುದೇ ಕ್ರಮವಾಗಿಲ್ಲ' ಎಂದು ರಾಜ್ಯ ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

ಬದುಕಿದ್ದವರು ಸತ್ತರೆಂದು ಶ್ರದ್ಧಾಂಜಲಿ ಬ್ಯಾನರ್!

ಹಾವೇರಿ: ಆಸ್ಪತ್ರೆಗೆ ದಾಖಲಾಗಿದ್ದ ಬಿಷ್ಟಪ್ಪ ಎಂಬುವರು ಅಲ್ಲಿಂದ ಮರಳುವಾಗಲೇ ಮೃತಪಟ್ಟಿದ್ದಾಗಿ ಸುದ್ದಿ ಹರಿದಾಡಿ ಊರಿನಲ್ಲಿ ಶ್ರದ್ಧಾಂಜಲಿ ಬ್ಯಾನರ್ ಅಳವಡಿಸಿ ಅಂತ್ಯಕ್ರಿಯೆಗೂ ಸಿದ್ಧತೆ ನಡೆದಿತ್ತು. ಆದರೆ 'ಅವರು ಬದುಕಿದ್ದಾರೆ' ಎಂದು ಖಚಿತ ಆದ ತಕ್ಷಣವೇ, ಸಂಬಂಧಿಕರು ಬ್ಯಾನರ್ ಸೇರಿಸಿ ಎಲ್ಲವನ್ನೂ ತೆರವು ಗೊಳಿಸಿದರು.

ಶಿಗ್ಗಾವಿ ತಾಲ್ಲೂಕಿನ ಬಂಕಾಪುರದ ಕಿರಾಣಿ ವ್ಯಾಪಾರಿ ಬಿಷ್ಟಪ್ಪ (ಮಾಸ್ತರ್) ಅಶೋಕ ಗುಡಿಮನಿ (48) ಅವರನ್ನು ಅನಾರೋಗ್ಯ ಕಾರಣ ಧಾರವಾಡ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೆಂಟಿಲೇಟರ್ ನೆರವಿನಿಂದ ಉಸಿರಾಡುತ್ತಿದ್ದ ಅವರು ಕೋಮಾ ಸ್ಥಿತಿ ತಲುಪಿದ್ದರು.

'ವೆಂಟಿಲೇಟರ್ ತೆಗೆದರೆ ಬಿಷ್ಟಪ್ಪ ಬದುಕುವುದು ಕಷ್ಟ' ಎಂದು ವೈದ್ಯರು ಹೇಳಿದ್ದರಿಂದ ಅವರನ್ನು ಕಾರಿನಲ್ಲಿ ಸಂಬಂಧಿಕರು ವಾಪಸ್ ಮನೆಗೆ ಕರೆತರುತ್ತಿದ್ದರು. ಬಂಕಾಪುರ ವೃತ್ತದಲ್ಲಿ ಅವರು ಕಣ್ಣು ತೆರೆದು, ಜೋರಾಗಿ ಉಸಿರಾಡತೊಡಗಿದರು. ಅವರಿಗೆ ತಕ್ಷಣವೇ ಶಿಗ್ಗಾವಿ ತಾಲ್ಲೂಕು ಆಸ್ಪತ್ರೆ ಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದರು. ನಂತರ ಹುಬ್ಬಳ್ಳಿಯ ಕೆಎಂಸಿ–ಆರ್‌ಐ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದರು. ಸಾವು–ಬದುಕಿನ ನಡುವೆ ಅವರು ಹೋರಾಟ ನಡೆಸಿದ್ದಾರೆ.

'ಬಿಷ್ಟಪ್ಪ ಆಸ್ಪತ್ರೆಯಲ್ಲಿ ಮೃತಪಟ್ಟಿರಲಿಲ್ಲ' ಎಂದು ಖಾಸಗಿ ಆಸ್ಪತ್ರೆ ಮೂಲಗಳು ಹೇಳಿವೆ.

ಅರ್ಜಿ ಆಹ್ವಾನ

ಬೆಂಗಳೂರು: ಬಹುವಚನ ಪ್ರಕಾಶನ ಮತ್ತು ನಾಟಕ ಕಂಪನಿ ತಮಾಶಾ ಸ್ಟುಡಿಯೊ ಫೌಂಡೇಶನ್ ನಾಟಕ ಅನುವಾದ ಫೆಲೋಶಿಪ್‌ಗೆ ಅರ್ಜಿ ಆಹ್ವಾನಿಸಿದೆ. ಮರಾಠಿ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಈ ಯೋಜನೆಗೆ ಅನುವಾದಕರು ಎರಡೂ ಭಾಷೆಗಳ ಜ್ಞಾನವನ್ನು ಹೊಂದಿರಬೇಕು. ಆಸಕ್ತರು ಫೆ. 28ರೊಳಗೆ ಅರ್ಜಿಗಳನ್ನು bahuvachanatamaasha@gmail.comಗೆ ಕಳುಹಿಸಬಹುದು.

ಚಿನ್ನಾಭರಣ ಪಡೆದಿದ್ದವನ ಬಂಧನ

ಮದುವೆ ಆಮಿಷ: 12 ಮಹಿಳೆಯರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮ್ಯಾಟ್ರಿಮೊನಿ ಆ್ಯಪ್‌ನಲ್ಲಿ ಸರ್ಕಾರಿ ನೌಕರ ಎಂದು ಪರಿಚಯಿಸಿಕೊಂಡು, ಮದುವೆಯಾಗುವುದಾಗಿ ನಂಬಿಸಿ ರಾಜ್ಯದ ವಿವಿಧೆಡೆ 12 ಮಹಿಳೆಯರಿಗೆ ವಂಚಿಸಿ ಚಿನ್ನಾಭರಣ, ಹಣ ಪಡೆದು ಪರಾರಿಯಾಗಿದ್ದ ವಿಜಯಪುರ ಜಿಲ್ಲೆ ಹಿಟ್ಟಿನಹಳ್ಳಿ ಗ್ರಾಮದ ಜೈಭೀಮ್ ಪಡಕೋಟಿ ಅಲಿಯಾಸ್ ಭೀಮರಾವ್‌ನನ್ನು (38) ಕೊಪ್ಪಳ ಪೊಲೀಸರು ಬಂಧಿಸಿದ್ದಾರೆ.

ಜೈಭೀಮ್ ಪಡಕೋಟಿ

'ಭದ್ರಾವತಿಯ ಮಹಿಳೆಯೊಬ್ಬರಿಂದ ₹ 9.70 ಲಕ್ಷ ಮೌಲ್ಯದ ನಗದು ಹಾಗೂ ಚಿನ್ನಾಭರಣ ಪಡೆದು ವಂಚಿಸಿದ ಪ್ರಕರಣದಲ್ಲಿ ಆರೋಪಿಯನ್ನು ಬಾಡಿ ವಾರೆಂಟ್ ಮೇಲೆ ಕರೆತರಲು ಸಿದ್ಧತೆ ನಡೆಸಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್ ತಿಳಿಸಿದ್ದಾರೆ.

ವಿಜಯಪುರ ಜಿಲ್ಲೆ ತಿಕೋಟಾ ಗ್ರಾಮೀಣ ಪೊಲೀಸ್ ಠಾಣೆ, ಹೊರ್ತಿ, ಮುದ್ದೇಬಿಹಾಳ, ಬಬಲೇಶ್ವರ, ಬಾಗಲಕೋಟೆ ನಗರ ಠಾಣೆ, ದೊಡ್ಡಬಳ್ಳಾಪುರ ಗ್ರಾಮೀಣ ಠಾಣೆ, ಶಿವಮೊಗ್ಗ ಜಿಲ್ಲೆ ಹೊಸನಗರ, ಬೆಂಗಳೂರು ನಗರ ಸಿಇಎನ್ ಠಾಣೆ ಹಾಗೂ ಕೊಪ್ಪಳ ಮಹಿಳಾ ಠಾಣೆಯಲ್ಲಿ ಜೈಭೀಮ್ ಪಡಕೋಟಿ ವಿರುದ್ಧ 12 ಪ್ರಕರಣ ದಾಖಲಾಗಿವೆ. ನಾಲ್ವರನ್ನು ಮದುವೆಯಾಗಿರುವುದು ತನಿಖೆಯ ವೇಳೆ ಬಯಲಾಗಿದೆ.

ಮ್ಯಾಟ್ರಿಮೊನಿಯಲ್ಲಿ ಮದುವೆ ವಯಸ್ಸು ಮೀರಿದವರು ಹಾಗೂ ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರನ್ನು ಸಂಪರ್ಕಿಸುತ್ತಿದ್ದ ಜೈಭೀಮ್ ಪಡಕೋಟಿ, ತಾನು ದಾವಣಗೆರೆಯಲ್ಲಿ ಮಹಾನಗರ ಪಾಲಿಕೆ ಉದ್ಯೋಗಿ ಎಂದು ಎರಡು ತಿಂಗಳ ಹಿಂದೆ ಭದ್ರಾವತಿಯ ಮಹಿಳೆಯನ್ನು ಪರಿಚಯಿಸಿಕೊಂಡಿದ್ದ. ಸರ್ಕಾರಿ ಉದ್ಯೋಗಿಯಾದ ಆಕೆಯನ್ನು ಮದುವೆಯಾಗುವುದಾಗಿ ನಂಬಿಸಿದ್ದ. ತನ್ನ ತಾಯಿಗೆ ಚಿಕಿತ್ಸೆಗೆ ₹ 8 ಲಕ್ಷ ಅವಶ್ಯಕತೆ ಇದೆ ಎಂದು ಹೇಳಿ, ಅವರಿಂದ ₹ 7.43 ಲಕ್ಷ ಹಣ ಪಡೆದಿದ್ದ. ನಂತರ ಆಕೆಯಿಂದ ₹ 2.25 ಲಕ್ಷ ಮೌಲ್ಯದ 30 ಗ್ರಾಂ ತೂಕದ ಚಿನ್ನಾಭರಣ ಪಡೆದು ಪರಾರಿಯಾಗಿದ್ದ ಎಂದು ಅವರು ಹೇಳಿದ್ದಾರೆ.

> ಆರೋಪಿಯನ್ನು ಕೊಪ್ಪಳದಿಂದ ಬಾಡಿ ವಾರೆಂಟ್ ಮೇಲೆ ಕರೆತಂದು ವಿಚಾರಣೆಗೆ ಒಳಪಡಿಸಲಾಗುವುದು. ವಂಚನೆಗೆ ಒಳಗಾದವರು ದೂರು ಕೊಟ್ಟರೆ ಕ್ರಮ ಕೈಗೊಳ್ಳಲಾಗುವುದು
>
> **ಜಿ.ಕೆ.ಮಿಥುನ್‌ಕುಮಾರ್**
> ಎಸ್‌ಪಿ, ಶಿವಮೊಗ್ಗ

ಸದಾ ಠಾಕು ಠೀಕಾಗಿರುತ್ತಿದ್ದ...

'ಐಟಿಐ ಓದಿರುವ ಭೀಮರಾವ್ ದುಬಾರಿ ಬೆಲೆಯ ಬಟ್ಟೆ ಧರಿಸಿ ಸದಾ ಠಾಕುಠೀಕಾಗಿರುತ್ತಿದ್ದ. ಶೂ ಧರಿಸಿ, ಕೋಟ್ ಹಾಕಿಕೊಂಡು ಅಧಿಕಾರಿ ರೀತಿಯೇ ವರ್ತಿಸುತ್ತಿದ್ದ. ಮಾತಿನಲ್ಲಿಯೇ ಮಹಿಳೆಯರನ್ನು ಮರುಳು ಮಾಡುತ್ತಿದ್ದ. ಶಿವಮೊಗ್ಗದಲ್ಲಿ ಸಂಬಂಧಿಯೊಬ್ಬರ ಮದುವೆ ಇದೆ. ಚಿನ್ನದ ಒಡವೆ ಧರಿಸದಿದ್ದರೆ ಸರ್ಕಾರಿ ಅಧಿಕಾರಿ ಆದ ನನ್ನ ಸ್ಟೇಟಸ್‌ಗೆ ಕುಂದು ಎಂದು ಹೇಳಿ ಭದ್ರಾವತಿ ಮಹಿಳೆಯ ಚಿನ್ನಾಭರಣ ಪಡೆದು ವಂಚಿಸಿದ್ದ. ತಾಯಿಗೆ ಚಿಕಿತ್ಸೆಗೆಂದು ಭದ್ರಾವತಿ ಮಹಿಳೆಯಿಂದ ಅತ್ತೂ ಕರೆದು ಹಣ ಪಡೆದಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಕ್ಷೇಮ ಕುಶಲ

ಮೂತ್ರಪಿಂಡದಲ್ಲಿ ಕಲ್ಲು ಹೊಟ್ಟೆಯಲ್ಲಿ ಅಲರಾಂ ಬೆಲ್ಲು

ಡಾ. ಕುಶ್ವಂತ್ ಕೋಳಿಬೈಲು

ಪ್ರಪಂಚದಾದ್ಯಂತ ಶೇ 10ರಷ್ಟು ಜನರು ತಮ್ಮ ಜೀವಮಾನದ ಒಂದಲ್ಲ ಒಂದು ಕಾಲಘಟ್ಟದಲ್ಲಿ ಮೂತ್ರಪಿಂಡದ ಕಲ್ಲುಗಳ ಸಮಸ್ಯೆಯಿಂದ ತೊಂದರೆಯನ್ನು ಅನುಭವಿಸುತ್ತಾರೆ. ಸಾಮಾನ್ಯವಾಗಿ ನೂರರಲ್ಲಿ ಒಬ್ಬರು ಆಸ್ಪತ್ರೆಗೆ ದಾಖಲಾಗಲು ಮೂತ್ರಪಿಂಡದ ಕಲ್ಲುಗಳ ಕಾರಣದಿಂದ ಬರುವ ಹೊಟ್ಟೆಯ ನೋವು ಕಾರಣವಾಗಿರುತ್ತದೆ. ಪುರುಷರಲ್ಲಿ ಮತ್ತು ಮಹಿಳೆಯರಲ್ಲಿ ಸಮಾನ ಪ್ರಮಾಣದಲ್ಲಿ ಕಂಡುಬರುವ ಈ ಕಾಯಿಲೆಯು ಭಾರತದಂತಹ ಉಷ್ಣ ತಾಪಮಾನವಿರುವ ದೇಶದ ಜನರನ್ನು ಹೆಚ್ಚಿನ ಪ್ರಮಾಣದಲ್ಲಿ ಬಾಧಿಸುತ್ತದೆ. ಬದಲಾಗುತ್ತಿರುವ ಜೀವನಶೈಲಿಯಿಂದ ಹೆಚ್ಚಾಗುತ್ತಿರುವ ಕಾಯಿಲೆಗಳಾದ ರಕ್ತದೊತ್ತಡ, ಸಕ್ಕರೆಕಾಯಿಲೆ ಮತ್ತು ಬೊಜ್ಜಿನ ಸಾಲಿಗೆ ಮೂತ್ರಪಿಂಡದ ಕಲ್ಲುಗಳ ಸಮಸ್ಯೆಯನ್ನೂ ಸೇರಿಸಬಹುದು. ನೀರಿನ ಬದಲಿಗೆ ತಂಪುಪಾನೀಯಗಳನ್ನು ಹೆಚ್ಚು ಸೇವಿಸುವವರಲ್ಲಿ ಮತ್ತು ಹಣ್ಣು ಮತ್ತು ಹಸಿರು ತರಕಾರಿಗಳ ಬದಲಿಗೆ ಸಂಸ್ಕರಿಸಿದ ಅಹಾರ ಪದಾರ್ಥಗಳನ್ನು ಸೇವಿಸುವವರಲ್ಲಿ ಮೂತ್ರಪಿಂಡಗಳ ಕಲ್ಲುಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತವೆ. ಅಗತ್ಯಕ್ಕಿಂತ ಹೆಚ್ಚು ಉಪ್ಪನ್ನು ಸೇವಿಸುವವರಲ್ಲಿ ಮತ್ತು ಮಾಂಸಾಹಾರಪ್ರಿಯರಲ್ಲಿಯೂ ಮೂತ್ರಪಿಂಡದ ಕಲ್ಲುಗಳು ಹೆಚ್ಚಾಗಿ ಕಂಡುಬರುತ್ತವೆ.

ಹೆಣ್ಣುಮಕ್ಕಳು ಹೆರಿಗೆಯ ಸಂದರ್ಭದಲ್ಲಿ ಅನುಭವಿಸುವ ನೋವಿನ ತೀವ್ರತೆ ಪುರುಷರಿಗೂ ಗೊತ್ತಾಗಲಿ ಎಂದು ದೇವರು ಕಿಡ್ನಿಸ್ಟೋನ್ ಸಮಸ್ಯೆಯನ್ನು ಸೃಷ್ಟಿ ಮಾಡಿದ್ದಾನೆಂದು ಈ ನೋವನ್ನು ಅನುಭವಿಸಿ ಬಲ್ಲವರು ತಮಾಷೆಗೆ ನುಡಿಯುತ್ತಾರೆ. ಮೂತ್ರಪಿಂಡದ ಕಲ್ಲುಗಳು ಕೆಳಜಾರಿ ಮೂತ್ರದ ಚಲನೆಗೆ ಅಡ್ಡಿಯುಂಟುಮಾಡಿದಾಗ ಉಂಟಾಗುವ ನೋವು ಇತರ ಕಾರಣಗಳಿಂದ ಬರುವ ಹೊಟ್ಟೆನೋವುಗಳಿಗಿಂತ ತೀವ್ರವಾಗಿರುತ್ತದೆ. ಹೇಳದೆ ಕೇಳದೆ ಬರುವ ಈ ತೀವ್ರವಾದ ಹೊಟ್ಟೆನೋವು ಕಾಣಿಸಿಕೊಳ್ಳುವ ಹಲವು ತಿಂಗಳುಗಳ ಮೊದಲೇ ಇಂಥ ರೋಗಿಗಳ ಮೂತ್ರಪಿಂಡದ ಕಾರ್ಯಶೈಲಿಯಲ್ಲಿ ಮತ್ತು ಮೂತ್ರದ ಲಕ್ಷಣದಲ್ಲಿ ಕೆಲವು ಬದಲಾವಣೆಗಳು ಉಂಟಾಗಿರುತ್ತವೆ.

ಅಂಥ ಬದಲಾವಣೆಗಳಿಂದಾಗಿ ಮೂತ್ರದಲ್ಲಿ ಕಲ್ಲುಗಳ ಹುಟ್ಟಿಕೊಳ್ಳಲು ಪ್ರಾರಂಭವಾಗಿರುತ್ತದೆ. ತಮ್ಮ ಮೂತ್ರಪಿಂಡದಲ್ಲಿ ಕಲ್ಲುಗಳಿವೆಯೆಂಬ ಸಮಸ್ಯೆ ರೋಗಿಗೆ ಅರಿವಾಗುವುದು ಕಲ್ಲೊಂದು ಕೆಳಜಾರಿ ಮೂತ್ರದ ಹರಿವಿಗೆ ಅಡ್ಡಿಯುಂಟು ಮಾಡಿದಾಗ ಮಾತ್ರ. ಬಹಳಷ್ಟು ಜನರು ಬೇರೆ ಯಾವುದೋ ಸಮಸ್ಯೆಗೆ ತಮ್ಮ ದೇಹದ ಸ್ಕ್ಯಾನಿಂಗ್ ಮಾಡಿಸಿದಾಗ ಮೂತ್ರಪಿಂಡದಲ್ಲಿ ಕಲ್ಲುಗಳಿರುವುದು ಗೋಚರವಾಗಬಹುದು. ಮೂತ್ರಪಿಂಡದ ಕಲ್ಲುಗಳಿಂದ ಮೂತ್ರದ ಹರಿವಿಗೆ ದೀರ್ಘಕಾಲದ ಅಡ್ಡಿಯುಂಟಾದಾಗ ಮೂತ್ರಪಿಂಡದ ಸೋಂಕು ಮತ್ತು ಮೂತ್ರಪಿಂಡದ ವೈಫಲ್ಯವೂ ಕಾಣಿಸಿಕೊಳ್ಳಬಹುದು.



ಮೂತ್ರಪಿಂಡವು ಮಾನವದೇಹದಲ್ಲಿ ಮೂತ್ರದ ಮೂಲಕ ದೇಹಕ್ಕೆ ಅಗತ್ಯವಿಲ್ಲದ ವಸ್ತುಗಳನ್ನು ಹೊರಗೆ ಹಾಕುತ್ತದೆ ಮಾತ್ರವಲ್ಲ, ದೇಹದಲ್ಲಿ ಇರಬೇಕಾದ ತೇವಾಂಶ ಮತ್ತು ವಿವಿಧ ಲವಣಗಳ ಪ್ರಮಾಣಗಳನ್ನೂ ಅದು ನಿಯಂತ್ರಿಸುತ್ತದೆ. ನಮ್ಮ ದೇಹದೊಳಗೆ ಪ್ರವೇಶಿಸುವ ಹೆಚ್ಚಿನ ಔಷಧಗಳು ತಮ್ಮ ಕೆಲಸವನ್ನು ಮುಗಿಸಿದ ನಂತರ ಮೂತ್ರಪಿಂಡಗಳ ಮೂಲಕ ಮೂತ್ರದಲ್ಲಿ ದೇಹದಿಂದ ಹೊರಗಡೆ ಹೋಗುತ್ತದೆ. ದೇಹದಲ್ಲಿ ನೀರಿನ ಪ್ರಮಾಣ ಮತ್ತು ಕ್ಯಾಲ್ಸಿಯಂ, ಪಾಸ್ಫರಸ್, ಆಕ್ಸಲೇಟ್ ಮುಂತಾದ ಲವಣಗಳ ಪ್ರಮಾಣವು ಹೆಚ್ಚು ಕಡಿಮೆಯಾದಾಗ ಮೂತ್ರದಲ್ಲಿ ಕಲ್ಲುಗಳು ಹುಟ್ಟಿಕೊಳ್ಳುತ್ತವೆ.

ನೀರನ್ನು ಕಡಿಮೆ ಕುಡಿಯುವವರಲ್ಲಿ ಮೂತ್ರದ ಸಾಂದ್ರತೆಯು ಹೆಚ್ಚಾಗುತ್ತದೆ; ಜೊತೆಗೆ ಮೂತ್ರದ ಚಲನೆಯೂ ನಿಧಾನಗತಿಯಲ್ಲಿ ಸಾಗುತ್ತದೆ. ಈ ಬದಲಾವಣೆಗಳು ಕಲ್ಲುಗಳು ಹುಟ್ಟಿಕೊಳ್ಳಬಹುದಾದ ವಾತಾವರಣವನ್ನು ನಿರ್ಮಾಣ ಮಾಡುತ್ತದೆ. ಮಾಂಸಾಹಾರಿಗಳಲ್ಲಿ ಆಕ್ಸಲೇಟ್, ಯೂರಿಕ್ ಅಮ್ಲ ಮತ್ತು ಅಮೈನೊ ಅಮ್ಲದ ಕಲ್ಲುಗಳು ಕಾಣಿಸಿಕೊಂಡರೆ, ಹೆಚ್ಚು ಉಪ್ಪನ್ನು ಸೇವಿಸುವವರಲ್ಲಿ ಮತ್ತು ಕ್ಯಾಲ್ಸಿಯಂ ಅಂಶಗಳನ್ನು ನಿಯಂತ್ರಿಸುವ ಹಾರ್ಮೋನುಗಳ ಸಮಸ್ಯೆಯಿರುವವರಲ್ಲಿ ಕ್ಯಾಲ್ಸಿಯಂ ಕಲ್ಲುಗಳು ಕಾಣಿಸಿಕೊಳ್ಳುತ್ತವೆ. ಮೊದಲು ಒಂದು ಮಿಲಿಮೀಟರ್ ಗಾತ್ರಕ್ಕೂ ಚಿಕ್ಕ ಆಕಾರದಲ್ಲಿ ಹುಟ್ಟುವ ಈ ಕಲ್ಲುಗಳು, ಅನಂತರದಲ್ಲಿ ಕೆಲವು ಸೆಂಟಿಮೀಟರ್‌ಗಳ ಗಾತ್ರದ ತನಕ ಬೆಳೆಯಬಲ್ಲವು. ಕಲ್ಲಿನ ಗಾತ್ರ ಮತ್ತು ಅವು ಸಿಕ್ಕಿ ಹಾಕಿಕೊಂಡ ಜಾಗದ ಆಧಾರದಮೇಲೆ ವ್ಯಕ್ತಿಯಲ್ಲಿ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಎಕ್ಸ್-ರೇ ಮತ್ತು ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಮೂಲಕ ಎಲ್ಲ ಮಾದರಿಯ ಕಲ್ಲುಗಳನ್ನೂ ಪತ್ತೆ ಹಚ್ಚಲಾಗುವುದಿಲ್ಲ. ಕೆಲವು ಕಲ್ಲುಗಳನ್ನು ಸಿಟಿ ಸ್ಕ್ಯಾನ್ ಮೂಲಕವೇ ಪತ್ತೆ ಹಚ್ಚಬಹುದು. ಮೂತ್ರಪಿಂಡದಲ್ಲಿ ಉಂಟಾದ ಕಲ್ಲುಗಳಲ್ಲಿ ಇರುವ ಲವಣಾಂಶವನ್ನು ಕಂಡುಹಿಡಿದ ನಂತರ ಮೂತ್ರವನ್ನು ವಿವಿಧ ಪರೀಕ್ಷೆಗೆ ಒಳಪಡಿಸಬೇಕು. ರಕ್ತದಲ್ಲಿ ಮತ್ತು ಮೂತ್ರದಲ್ಲಿ ವಿವಿಧ ಲವಣಾಂಶದ ಏರುಪೇರುಗಳು ಗೊತ್ತಾದಲ್ಲಿ ಮಾತ್ರ ಕಲ್ಲುಗಳು ಹುಟ್ಟಿಕೊಳ್ಳಲು ಇಲ್ಲಿ ಇರುವ ಮೂಲಕಾರಣವನ್ನು ಪತ್ತೆ ಹಚ್ಚಬಹುದು. ಕಲ್ಲುಗಳು ಇವೆ ಎಂದು ಗೊತ್ತಾದ ಬಳಿಕವಾದರೂ ಆಹಾರಸೇವನೆಯೂ ಸೇರಿದಂತೆ ವ್ಯಕ್ತಿಯ ಜೀವನಶೈಲಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಐದು ಮಿಲಿಮೀಟರ್ ಗಾತ್ರಕ್ಕಿಂತ ಸಣ್ಣದಿರುವ ಕಲ್ಲುಗಳು ಮೂತ್ರವನ್ನು ವಿಸರ್ಜನೆ ಮಾಡುವಾಗ ದೇಹದ ಹೊರಗಡೆ ಹೋಗಬಲ್ಲವು. ಹತ್ತು ಮಿಲಿಮೀಟರ್ ಗಾತ್ರಕ್ಕಿಂತ ದೊಡ್ಡದಿರುವ ಕಲ್ಲುಗಳನ್ನು ದೇಹದಿಂದ ಹೊರಹಾಕಲು ಶಸ್ತ್ರಚಿಕಿತ್ಸೆ ಅಥವಾ ಲೇಸರ್ ಚಿಕಿತ್ಸೆಯ ಅಗತ್ಯ ಉಂಟಾಗಬಹುದು.

ದಿನಕ್ಕೆ ಕನಿಷ್ಠ ಪಕ್ಷ ಎರಡು ಲೀಟರ್ ನೀರನ್ನು ಕುಡಿಯುವ ಮೂಲಕ ಮತ್ತು ಹಣ್ಣು-ತರಕಾರಿಗಳನ್ನು ಹೆಚ್ಚು ಸೇವಿಸುವ ಮೂಲಕ ಮೂತ್ರಪಿಂಡದಲ್ಲಿ ಕಲ್ಲುಗಳು ಹುಟ್ಟಿಕೊಳ್ಳದಂತೆ ಮುನ್ನೆಚ್ಚರಿಕೆಯನ್ನು ವಹಿಸಬಹುದು.

❖

ಬತ್ತದಿರಲಿ ಉತ್ಸಾಹದ ಹೊಳೆ

ರಘು ವಿ.

ಮಿತ್ರರೊಬ್ಬರಿಗೆ ದೂರವಾಣಿ ಕರೆ ಮಾಡಿದ್ದೆ. ಉಭಯ ಕುಶಲೋಪರಿಯ ಬಳಿಕ ತಾವೇನು ಮಾಡುತ್ತಿದ್ದೀರಿ ಎಂದು ವಿಚಾರಿಸಿದೆ. ಕಾಫಿ ಸಿದ್ಧಪಡಿಸುತ್ತಿದ್ದೇನೆ, ಕುದಿಸಿದ ನೀರನ್ನು ಸುರಿದು ನಿಮ್ಮೊಂದಿಗೆ ಮಾತನಾಡುತ್ತಿದ್ದೇನೆ ಎಂದರು. ಎರಡು ನಿಮಿಷದ ಬಳಿಕ, 'ಅಚಾತುರ್ಯವಾಗಿದೆ, ಶೋಧಿಸಲು ಉಪಯೋಗಿಸಿದ ಬಟ್ಟೆಯ ಎಳೆಯೆಲ್ಲ ಕೊಳವೆಯಾಗಿ ಅಡುಗೆ ಕಟ್ಟೆ ನೀರಿನ ಕಟ್ಟೆಯಾಗಿದೆ' ಎಂದು ನಗುತ್ತಲೇ ತಿಳಿಸಿದರು.

ಎಳೆಯೊಂದು ಹೊಳೆಯಾಗಿ ಹರಿದು ಹೋಗಿದ್ದರಿಂದ ಮಿತ್ರರಿಗೆ ಕಟ್ಟೆಯನ್ನು ಶುದ್ಧಗೊಳಿಸುವ ಕಾಯಕ ಒದಗಿದರೂ ವಿಷಾದಿಸದೆ ನಗುತ್ತಲೇ ಉತ್ತರಿಸಿದ್ದು ನನ್ನ ಲೇಖನಕ್ಕೆ ಆಶಯವನ್ನು ಸೂಚಿಸಿಬಿಟ್ಟಿತು. ಎಳೆಯ ಹೊಳೆ! ಹೌದಲ್ಲ, ಎಳೆಯಾಗಿ ಹರಿದ ನೀರ ಝರಿಗಳು ಸೇರಿ ಹೊಳೆಯಾಗಿ ನದಿಯಾಗಿ ಹರಿದು ಕಡಲನ್ನು ಸೇರುತ್ತದೆ. ಬದುಕು ಕೂಡ ಉತ್ಸಾಹದ ಎಳೆಯಾಗಿ ಹುಟ್ಟಿನಿಂದ ಪುಟಿದು ಬಾಲ್ಯದ ತುಂಟತನವಾಗಿ, ಕೌಮಾರ್ಯದ ಸಾಹಸವಾಗಿ, ಪ್ರೌಢಾವಸ್ಥೆಯ ಕುಶಲತೆಯಾಗಿ ವಾರ್ಧಕ್ಯದ ಅನುಭವವಾಗಿ ಕೊನೆಗೆ ಸಾವಸಾಗರದಲ್ಲಿ ಮುಕ್ತಾಯಗೊಳ್ಳುವುದು. ಹಾಗಾಗಿ ಜೀವನದುದ್ದಕ್ಕೂ ಉತ್ಸಾಹವನ್ನು ಉಳಿಸಿಕೊಳ್ಳುವುದು ಮುಖ್ಯ.

ಬದುಕಿನ ಎಲ್ಲ ಸವಾಲುಗಳೂ ಉತ್ಸಾಹದ ಹೊಳೆಯನ್ನು ಬತ್ತಿಸುವ ಪ್ರಯತ್ನವೇ ಆಗಿದೆ. ಅನೇಕ ಅಡೆತಡೆಗಳನ್ನು ಎದುರಿಸಿಯೇ ನಾವು ಗೆಲ್ಲಬೇಕು. ಚಳಿ, ಮಳೆ, ಗಾಳಿಗಳನ್ನು ಎದುರಿಸಿದ ಸಸಿ ಮಾತ್ರವೇ ಹೆಮ್ಮರವಾಗಿ ಬೆಳೆಯಬಲ್ಲದು. ಬಹಳ ಸುರಕ್ಷಿತವಾಗಿ ಒಳಾಂಗಣದಲ್ಲಿ ಬೆಳೆದ ಸಸಿಯೊಂದು ಪ್ರಾಕೃತಿಕ ವಿಕೋಪಗಳನ್ನು ಎದುರಿಸಲಾಗದೆ ಮುದುರಿಕೊಳ್ಳುತ್ತದೆ. ಜೀವನದ ಸ್ಫೂರ್ತಿಯನ್ನು, ಬದುಕಬೇಕೆಂಬ ಉತ್ಸಾಹವನ್ನು ತಡೆಯುವ ಅಂಶಗಳು ಮುಖ್ಯವಾಗಿ ಐದು.

ಮೊದಲನೆಯದು ಸೋಲಿನ ಭಯ. ಈ ಸೋಲಿನ ಭಯದಿಂದಲೇ ಜಗತ್ತಿನ ಎಷ್ಟೋ ಕೆಲಸಗಳು ಆರಂಭವಾಗುವುದೇ ಇಲ್ಲ. ಸೋಲು ಗೆಲುವು ಮುಖ್ಯವಲ್ಲ, ಪ್ರಯತ್ನವನ್ನು ಮುಂದುವರಿಸುವುದು ಮುಖ್ಯ. ಸೋಲಿನಿಂದಲೂ ಪಾಠಗಳನ್ನು ಕಲಿಯುತ್ತಾ ಮುಂದೆ ಸಾಗುತ್ತೇವೆ.

ಎರಡನೆಯದು, ಬದುಕಿನ ಸ್ಫೂರ್ತಿಯನ್ನು ಮಟ್ಟ ಹಾಕುವ ವೈರಾಣುಗಳಂತೆ ನಕಾರಾತ್ಮಕ ಚಿಂತನೆಗಳು ಮನಸ್ಸನ್ನು ಮುತ್ತಿಕೊಳ್ಳುತ್ತವೆ. ಜತೆಗೆ ಇಂಥ ನಕಾರಾತ್ಮಕ ಚಿಂತನೆಗಳನ್ನು ಬಿತ್ತುವ ಜನರು ನಮ್ಮ ಸುತ್ತ ಆವರಿಸಿಕೊಳ್ಳದಂತೆ ಎಚ್ಚರಿಕೆ ವಹಿಸಬೇಕು. 'ಇದನ್ನು ಮಾಡಬೇಡ', 'ನಿನ್ನ ಕೈಲಿ ಇದನ್ನು ಸಾಧಿಸಲಾಗುವುದಿಲ್ಲ', 'ಯಾರೂ ಇದನ್ನು ಸಾಧಿಸಿಲ್ಲ' ಎಂದೆಲ್ಲ ನಮ್ಮೊಳಗೆ ಮತ್ತು ಹೊರಗೆ ದನಿಗಳು ಬರುತ್ತವೆ. ಹೇಗೆ ಚುಚ್ಚುಮದ್ದಿನಿಂದ ಅಥವಾ ಲಸಿಕೆಯಿಂದ ನಮ್ಮ ದೇಹದ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತೇವೋ ಹಾಗೆ ಸಕಾರಾತ್ಮಕ ಜನಗಳು ನಮ್ಮ ಸುತ್ತ ಇರುವಂತೆ ನೋಡಿಕೊಳ್ಳಬೇಕು. ಜತೆಗೆ ಧೈರ್ಯ ನೀಡುವ ವಿಚಾರಗಳನ್ನು ಮನಸ್ಸಿನೊಳಗೆ ತುಂಬಿಕೊಳ್ಳಬೇಕು.

ಮೂರನೆಯದು ಉದ್ದೇಶ ಅಥವಾ ಗುರಿಯ ಕೊರತೆ. ಎಷ್ಟೋ ಬಾರಿ ಪ್ರೌಢ ವಯಸ್ಸಿನವರಲ್ಲೂ ಬದುಕಿನ ಉದ್ದೇಶದ ಕೊರತೆ ಕಾಡುವುದನ್ನು ಕಾಣಬಹುದು. ಮನುಷ್ಯನಿಗೆ ತಾನೇಕೆ ಬದುಕಿದ್ದೇನೆ, ತನ್ನ ಜೀವನದ ಗೊತ್ತು ಗುರಿಗಳೇನು ಎಂಬ ಅರಿವಿಲ್ಲದಿದ್ದರೆ ಅವನ ಜೀವನವು ದಿಕ್ಕು ತಪ್ಪಿದ ನಾವೆಯಂತಾಗುತ್ತದೆ. ಉದ್ದೇಶ ಹೊಂದಿರುವ ವ್ಯಕ್ತಿಯ ಜೀವನ ಖಂಡಿತವಾಗಿಯೂ ಉತ್ಸಾಹ ಭರಿತವಾಗಿ ಇರುತ್ತದೆ. ಹಾಗಾಗಿ ಆದಷ್ಟು ಬೇಗ ನಾವು ನಮ್ಮ ಜೀವನದ ಉದ್ದೇಶವನ್ನು ಕಂಡುಕೊಳ್ಳಬೇಕು.

ಉತ್ಸಾಹವನ್ನು ಹತ್ತಿಕ್ಕುವ ನಾಲ್ಕನೆಯ ಅಂಶವಿದ್ದರೆ ತೀವ್ರವಾದ ಸುಸ್ತು ಅಥವಾ ದಣಿವು. ಇದು ಏಕಾಗುತ್ತದೆಂದರೆ, ಗುರಿ ಇದ್ದು, ಸಕಾರಾತ್ಮಕ ಚಿಂತನೆಗಳಲ್ಲಿ ಅತಿಯಾಗಿ ಮುಳುಗಿಕೊಂಡಾಗ ಅದು ದೇಹ ಮತ್ತು ಮನಸ್ಸುಗಳನ್ನು ದಣಿಸಿ ಬಿಡುತ್ತದೆ. ಅಂದರೆ ನಾವು ಕೆಲಸ ಮಾಡಬೇಕೆ ಹೊರತು ಕೆಲಸಗಳು ನಮ್ಮನ್ನು ಆಳುವಂತಾಗಬಾರದು. ಹೀಗಾಗದಿರಬೇಕಾದರೆ ಸಮಯದ ಸದುಪಯೋಗ ಮಾಡಿಕೊಳ್ಳಬೇಕು. ಮತ್ತು ಸರಿಯಾದ ಯೋಜನೆಗಳನ್ನು ರೂಪಿಸಿಕೊಂಡು ಮುಂದುವರಿಯಬೇಕು.

ಸ್ಫೂರ್ತಿ ಅಥವಾ ಉತ್ಸಾಹದ ಕೊರತೆಗೆ ಕಾರಣವಾಗುವ ಕೊನೆಯ ಹಾಗೂ ಮುಖ್ಯ ಅಂಶವೆಂದರೆ ಬೇರೆಯವರೊಂದಿಗೆ ನಮ್ಮನ್ನು ನಾವು ಹೋಲಿಸಿಕೊಳ್ಳುವುದು ಮತ್ತು ಜೀವನವನ್ನು ಸ್ಪರ್ಧೆ ಎಂದು ಭಾವಿಸುವುದು. ನಾವು ಪ್ರತಿಯೊಬ್ಬರೂ ವಿಶೇಷ ವ್ಯಕ್ತಿಗಳೇ, ವಿಶೇಷ ಕಾರಣಕ್ಕಾಗಿಯೇ ಈ ಜಗತ್ತಿನಲ್ಲಿ ಜನಿಸಿದವರು ಎಂದೇ ಭಾವಿಸಬೇಕು. ಏಕೆಂದರೆ ಒಬ್ಬರಂತೆ ಮತ್ತೊಬ್ಬರಿಲ್ಲ. ಒಬ್ಬರಲ್ಲಿರುವ ಸಾಮರ್ಥ್ಯ ಅವರಿಗೆ ಮಾತ್ರವೇ ಗೊತ್ತಿರುವಂಥದ್ದು ಮತ್ತು ಆ ಸಾಮರ್ಥ್ಯದ ಪ್ರಕಾಶಕ್ಕಾಗಿಯೇ ಅವರು ಈ ಜಗತ್ತಿನಲ್ಲಿರುವುದು. ಹೀಗಾಗಿ ಬೇರೆಯವರೊಂದಿಗೆ ನಮ್ಮನ್ನು ಹೋಲಿಸಿಕೊಳ್ಳುವುದಾಗಲಿ ಅಥವಾ ಅವರನ್ನು ಸ್ಪರ್ಧಿಗಳೆಂದು ಭಾವಿಸುವುದಾಗಲಿ ತಪ್ಪಾಗುತ್ತದೆ.

ನಮ್ಮ ನಮ್ಮ ಗುರಿ, ಸಮಸ್ಯೆ ಮತ್ತು ದಾರಿಯ ಮೇಲೆ ಗಮನವಿದ್ದಾಗ ನಿರಂತರ ಉತ್ಸಾಹ, ಚಲನೆ ನಮ್ಮದಾಗುತ್ತದೆ. ಇಷ್ಟೆಲ್ಲಾ ತಿಳಿದರೂ, ಓದಿಕೊಂಡರೂ ಒಮ್ಮೊಮ್ಮೆ ನಮ್ಮೊಳಗೆ ಉತ್ಸಾಹದ ಚಿಲುಮೆ ಬತ್ತಿ ಹೋಗುತ್ತದೆ. ಬಹಳ ದಿನಗಳಿಂದ ನಾನೊಂದು ಗುಟ್ಟನ್ನು ಕಾಪಾಡಿಕೊಂಡು ಬಂದಿದ್ದೇನೆ. ನನಗೆ ಉತ್ಸಾಹ ಕಡಿಮೆಯಾಯಿತು ಎನಿಸಿದಾಗ ನಾನು ಸ್ವಾಮಿ ವಿವೇಕಾನಂದರ ಕೆಲವು ಮಾತುಗಳನ್ನು ಗಟ್ಟಿಯಾಗಿ ನನಗೆ ನಾನೇ ಹೇಳಿಕೊಳ್ಳುತ್ತೇನೆ ಮತ್ತು ಕೊಠಡಿಯಲ್ಲಿ ಬಾಗಿಲು ಹಾಕಿಕೊಂಡು ಈ ಉಕ್ತಿಯನ್ನು ಮತ್ತೆ ಮತ್ತೆ ಉಚ್ಚರಿಸುತ್ತೇನೆ. ನನ್ನೊಳಗೆ ಮತ್ತೆ ಶಕ್ತಿಯ ಪ್ರವಾಹವನ್ನು ಕಾಣುವವರೆಗೂ ಇದನ್ನು ಪಠಿಸುತ್ತಿರುತ್ತೇನೆ.

ಅದು ಹೀಗಿದೆ: 'ನನ್ನವರಾದ ನೀವೆಲ್ಲ ಜಗತ್ತಿನಲ್ಲಿ ಮಹಾಸಾಧನೆಗಾಗಿ ಹುಟ್ಟಿರುವ ಧೀರರೆಂದು ತಿಳಿದುಕೊಳ್ಳಿ. ನಾಯಿ ಕುನ್ನಿಗಳ ಬೊಗಳಿಕೆಗೆ ಹೆದರದಿರಿ. ಆಗಸದ ಸಿಡಿಲುಗಳೂ ನಿಮ್ಮನ್ನು ಅಲುಕಿಸದಿರಲಿ. ಧೈರ್ಯವಾಗಿರಿ, ಎದ್ದೇಳಿ, ಕಾರ್ಯಶೀಲರಾಗಿ!' (Have faith that you are all my brave lads born to do great things. Let not the barks of puppies frighten you, nay, not even the thunderbolts from heaven. Be bold stand up and work!) ಈ ಶಕ್ತಿಮಂತ್ರ ಪವಾಡದಂತೆ ಕೆಲಸ ಮಾಡಬಲ್ಲದು. ಹೀಗೆ ನಾವು ನಂಬುವ ಯಾವುದಾದರೂ ಒಂದು ಸೂತ್ರವನ್ನು ಬಾಳಿಗೆ ಪೋಣಿಸಿಕೊಳ್ಳುವುದರ ಮೂಲಕ ಉತ್ಸಾಹದ ಎಳೆಯನ್ನು ಜೀವನದುದ್ದಕ್ಕೂ ಉಳಿಸಿಕೊಳ್ಳೋಣ ಮತ್ತು ಒಳ್ಳೆಯ ಬೆಳೆಯನ್ನು ಜಗತ್ತಿಗೆ ಸಮರ್ಪಿಸೋಣ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

9) ಈ ಕೆಳಗಿನವುಗಳಲ್ಲಿ ಯಾವುದು ಸಮಾಂತರ ಶ್ರೇಢಿಯಾಗಿದೆ?

(A) 1, –1, –2, ...
(B) 1, 5, 9, ...
(C) 2, –2, 2, –2, ...
(D) 1, 2, 4, 8, ...

ಉತ್ತರ:– (ಬಿ) 1, 5, 9 (ಮಾರ್ಚ್ 2021)

10) $2x^2 + ax + 6 = 0$ ವರ್ಗ ಸಮೀಕರಣದ ಒಂದು ಮೂಲವು 2 ಆದಾಗ a ಯ ಬೆಲೆ .... (ಮಾರ್ಚ್ 2021)

(A) 7 (B) 2 7
(C) –7 (D) 2

ಉತ್ತರ:– (ಸಿ) –7

11) ಈ ಕೆಳಗಿನ ದತ್ತಾಂಶಗಳ ಸರಾಸರಿಯು..........

ಅಂಕಗಳು	1	3	5	7

A) 16 B) 5
C) 1.6 D) 4

ಉತ್ತರ:– (ಡಿ)4

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

12) 6762 ನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ನಿರೂಪಿಸಿ.

ಉತ್ತರ : $6762 = 2 \times 3 \times 7^2 \times 23$

2	6762
3	3381
7	1127
7	161
	23

13) ಒಂದು ಸಂಸ್ಥೆಯು ಆರಂಭದ ವರ್ಷದಲ್ಲಿ 400 ಉದ್ಯೋಗಿಗಳನ್ನು ನೇಮಿಸಿಕೊಂಡಿತು ಮತ್ತು ಪ್ರತಿ ವರ್ಷವು ಉದ್ಯೋಗಿಗಳ ಸಂಖ್ಯೆಯನ್ನು 35 ಹೆಚ್ಚಿಸಿತು. ಯಾವ ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿರುತ್ತದೆ.

ಉತ್ತರ:– ಮೊದಲ ವರ್ಷ 400 ಜನಗಳನ್ನು ನೇಮಿಸಿತು. ಒಂದೊಂದು ವರ್ಷವು 35 ಉದ್ಯೋಗಿಗಳ ಹೆಚ್ಚಳವಾಗಿದೆ. ಇದು ಸಮಾಂತರ ಶ್ರೇಢಿಯಲ್ಲಿದೆ.

$\therefore$ 400, 435,.............. 785

$a = 400,\ d = 35 \quad n = ?$

$T_n = a + (n-1)\,d$

$785 = 400 + (n-1)\,35$

$785 = 400 + 35n - 35$

$785 = 365 + 35n$

$35n = 785 - 365$

$35n = 420$

$n = \frac{420}{35},\ n = 12$

$\therefore$ 12 ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿದೆ.

14) ಒಂದು ಕ್ರೀಡಾಂಗಣದ ಸುತ್ತಲೂ ವೃತ್ತಾಕಾರದ ಮಾರ್ಗವಿದೆ ಸೋನಿಯಾಳು ಆ ಕ್ರೀಡಾಂಗಣದ ಒಂದು ಸುತ್ತನ್ನು ಪೂರ್ಣಗೊಳಿಸಲು 18 ನಿಮಿಷಗಳನ್ನು ತೆಗೆದುಕೊಂಡರೆ, ರವಿಯು ಅದೇ ಸುತ್ತನ್ನು ಪೂರ್ಣಗೊಳಿಸಲು 12 ನಿಮಿಷಗಳನ್ನು ತೆಗೆದುಕೊಳ್ಳುತ್ತಾನೆ, ಒಂದೊಮ್ಮೆ ಅವರಿಬ್ಬರೂ ಒಂದೇ ಬಿಂದುವಿನಿಂದ ಏಕಕಾಲದಲ್ಲಿ ಆರಂಭಿಸಿ, ಏಕಮುಖವಾಗಿ ಚಲಿಸಿದರೆ, ಎಷ್ಟು ನಿಮಿಷಗಳ ನಂತರ ಅವರು ಪುನಃ ಆರಂಭಿಕ ಬಿಂದುವಿನಲ್ಲಿ ಸಂಧಿಸುತ್ತಾರೆ?

ಉತ್ತರ:– ಸೋನಿಯಾಳಿಗೆ ಕ್ರೀಡಾಂಗಣ 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ = 18 ನಿಮಿಷ

ರವಿ ಅದೇ ಕ್ರೀಡಾಂಗಣವನ್ನು 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ = 12 ನಿಮಿಷ

ಏಕಕಾಲದಲ್ಲಿ ಚಲಿಸಿದರೆ ಅವರು ಸಂಧಿಸುವ ಸಮಯ = ?

$LCM(18,12) = 2\times3\times3\times2\times1 = 36$

ಅವರಿಬ್ಬರೂ 36 ನಿಮಿಷಗಳ ತರುವಾಯ ಒಂದು ಸ್ಥಳದಲ್ಲಿ ಸಂಧಿಸುತ್ತಾರೆ

15) 15 m ಬಾಹುವಿರುವ ಚೌಕಾಕಾರದ ಒಂದು ಹುಲ್ಲಿನ ಮೈದಾನದ ಮೂಲೆಯಲ್ಲಿರುವ ಒಂದು ಗೂಟಕ್ಕೆ ಕುದುರೆಯೊಂದನ್ನು 5 m ಉದ್ದದ ಹಗ್ಗದಿಂದ ಕಟ್ಟಿದೆ. (ಚಿತ್ರವನ್ನು ನೋಡಿ)



i) ಕುದುರೆಯು ಹುಲ್ಲನ್ನು ಮೇಯಬಹುದಾದ ಮೈದಾನದ ಭಾಗದ ವಿಸ್ತೀರ್ಣ,

ii) 5 m ಹಗ್ಗದ ಬದಲಾಗಿ 10 m ಹಗ್ಗ ಉಪಯೋಗಿಸಿದಲ್ಲಿ ಹೆಚ್ಚಾಗಿ ಮೇಯಬಹುದಾದ ಮೈದಾನದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಪರಿಹಾರ: ಚೌಕಾಕಾರದ ಒಂದು ಹುಲ್ಲಿನ ಮೈದಾನದ ಮೂಲೆಯಲ್ಲಿರುವ ಒಂದು ಗೂಟಕ್ಕೆ ಕುದುರೆಯೊಂದನ್ನು 5 ಆ ಉದ್ದದ ಹಗ್ಗದಿಂದ ಕಟ್ಟಿದೆ ಅದೂ ಪ್ರದೇಶದಲ್ಲಿ ಮಾತ್ರ ಹುಲ್ಲು ತಿನ್ನಲಿದೆ. (i.e. sector with $\theta = 90°$)

ಉದ್ದದ ಹಗ್ಗದ ಉದ್ದ= 5 m i.e. $r = 5$ m

i) ಕುದುರೆಯು ಹುಲ್ಲನ್ನು ಮೇಯಬಹುದಾದ ಮೈದಾನದ ಭಾಗದ ವಿಸ್ತೀರ್ಣ= ?

ವೃತ್ತದ ವಿಸ್ತೀರ್ಣ= $\pi r^2 = 22/7 \times 5^2 = 78.5\ m^2$

ಈಗ ಕುದುರೆಯು ಹುಲ್ಲನ್ನು ಮೇಯಬಹುದಾದ ಮೈದಾನದ ಭಾಗದ ವಿಸ್ತೀರ್ಣ = ¼ (the area of the circle) = 78.5/4

$= 19.625\ m^2$.......(1)

(ii) 5 m ಹಗ್ಗದ ಬದಲಾಗಿ 10 m ಹಗ್ಗ ಉಪಯೋಗಿಸಿದಲ್ಲಿ ಹೆಚ್ಚಾಗಿ ಮೇಯಬಹುದಾದ ಮೈದಾನದ ವಿಸ್ತೀರ್ಣ = ?

ಹಗ್ಗದ ಉದ್ದ = $r = 10$ m, $\theta = 90°$

ವೃತ್ತ ಖಂಡದ ವಿಸ್ತೀರ್ಣ=?

ವೃತ್ತದ ವಿಸ್ತೀರ್ಣ= $\pi r^2 = 22/7\times10^2 = 314\ m^2$

ವೃತ್ತ ಖಂಡದ ವಿಸ್ತೀರ್ಣ = ¼ (the area of the circle)

$= 314/4 = 78.5\ m^2$..... ....(2)

$\therefore$ 5 m ಹಗ್ಗದ ಬದಲಾಗಿ 10 m ಹಗ್ಗ ಉಪಯೋಗಿಸಿದಲ್ಲಿ ಹೆಚ್ಚಾಗಿ ಮೇಯಬಹುದಾದ ಮೈದಾನದ ವಿಸ್ತೀರ್ಣ =

= ಸಮೀಕರಣ(2) – ಸಮೀಕರಣ(1)

$= 78.5\ m^2 - 19.625\ m^2$

$= 58.875\ m^2$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC PHYSICS

REVISION: MODEL QUESTIONS

PART– A

I. Pick the correct option among the four given options for ALL of the following questions:

1. A glass rod is rubbed with silk cloth. The charge acquired by glass rod is __________ .

(A) negative (B) positive
(C) zero
(D) positive on one end and negative on the opposite end

Ans:- (B) positive

2. A spherical conductor of radius R is carrying a charge of +Q. The ratio of the electric potentials corresponding to a point on the surface of the conductor and a point at a distance $\frac{R}{2}$ from the centre of the conductor are in the ratio

(A) 1: 2 (B) 2: 1
(C) 1:1 (D) 4:1

Ans:- (C) 1:1

3. **The resistivity of a metallic conductor ______________ with decrease in temperature.**

(A) increases (B) decreases
(C) first increases and then decreases
(D) first decreases and then increases

Ans:- (B) decreases

4. The Lorentz force is the force on a charged particle moving in a region containing _____________.

(A) only electric field
(B) only magnetic field
(C) both electric and magnetic fields
(D) only crossed electric and magnetic fields

Ans:- (C) both electric and magnetic fields

5. Below are the two statements related to magnetic field lines:

Statement-I : The magnetic field lines do not intersect.

Statement-II: The direction of magnetic field at a point is unique.

(A) Both the statements I and II are correct and II is the correct explanation for I
(B) Both the statements I and II are correct and II is not the correct explanation for I
(C) Statement I is wrong but the statement II is correct
(D) Statement I is correct but the statement II is wrong

Ans:- (A) Both the statements I and II are correct and II is the correct explanation for I

6. A straight conductor of length 'l' is moving with a velocity 'v' in the direction of uniform magnetic field of strength 'B'. The magnitude of emf induced between the ends of the conductor is

(A) Blv (B) $\frac{B/v}{2}$
(C) 0 (D) 2Blv

Ans:- (C) 0

7. The SI unit of magnetic flux is: __________ .

(A) Wb m^{-1} (B) T m^{-2}
(C) weber (D) Wb m^{-2}

Ans:- (C) weber

8. The average power dissipated in an ac circuit is maximum if the ac source is connected :

(A) only to pure resistor
(B) only to pure inductor
(C) only to pure capacitor
(D) to a series combination of capacitor and Inductor

Ans:- (A) only to pure resistor

9. The electromagnetic waves with lowest frequency among the following are : __________ .

(A) gamma rays (B) UV rays
(C) microwaves (D) radio waves

Ans:- (D) radio waves

10. A ray of light coming from an object which is incident parallel to the principal axis of a convex lens placed in air after refraction ___________.

(A) appears to diverge from first principal focus
(B) emerges without any deviation
(C) appears to diverge from second principal focus
(D) passes through second principal focus

Ans:- (D) passes through second principal focus

11. If unpolarised light of intensity 'I0' is passed through a polaroid, the intensity of emergent light is ___________ .

(A) $\frac{I_0}{4}$ (B) $\frac{2I_0}{3}$
(C) $\frac{I_0}{3}$ (D) $\frac{I_0}{2}$

Ans:- (D) $\frac{I_0}{2}$

12. The following are the statements related to photo emission: ___________ .

(i) Photoelectric current is independent of intensity of incident radiation.
(ii) Stopping potential is different for different photosensitive metal surfaces for a radiation of particular frequency ($\nu > \nu_0$).
(iii) Maximum speed of photoelectrons is independent of frequency of incident radiation.
(iv) Saturation current is different for radiations of different intensities having same frequency.

(A) Only (i) and (iii) are correct
(B) Only (i) and (ii) are correct
(C) Only (iii) and (iv) are correct
(D) Only (ii) and (iv) are correct

Ans:- (D) Only (ii) and (iv) are correct

ಯತ್ನಾಳಗೆ ಮತ್ತೆ ಶೋಕಾಸ್ ನೋಟಿಸ್

ಒಂದನೇ ಪುಟದಿಂದ...

ನಾಯಕರ ವಿರುದ್ಧ ಬಹಿರಂಗ ಹೇಳಿಕೆ ನೀಡಿ ಪಕ್ಷದ ಶಿಸ್ತನ್ನು ಧಿಕ್ಕರಿಸಿದ ಕಾರಣಕ್ಕೆ ಯತ್ನಾಳ ಅವರಿಗೆ ಎರಡು ತಿಂಗಳ ಹಿಂದೆ ಕೇಂದ್ರ ಶಿಸ್ತು ಸಮಿತಿ ಶೋಕಾಸ್ ನೋಟಿಸ್ ನೀಡಿತ್ತು. ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್ ಅವರಿಗೆ ಯತ್ನಾಳ ವಿವರಣೆ ನೀಡಿದ್ದರು. ನಾಯಕರ ವಿರುದ್ಧ ಹೇಳಿಕೆ ನೀಡದಂತೆ ಪಾಠಕ್ ಸೂಚಿಸಿದ್ದರು. ಆ ಬಳಿಕ, ಯತ್ನಾಳ ಅವರು ನಾಲ್ಕು ದಿನ ಮೌನವಾಗಿದ್ದರು. ಇತ್ತೀಚೆಗೆ ಶಾಸಕ ರಮೇಶ ಜಾರಕಿಹೊಳಿ ಅವರು ಪಕ್ಷದ ವಿಚಾರಗಳ ಬಗ್ಗೆ ಮಾತನಾಡಬೇಡಿದ್ದಾರೆ ಎಂದೂ ಹೇಳಿದ್ದರು. ಅ ನಂತರ, ವಿಜಯೇಂದ್ರ ವಿರುದ್ಧ ವಾಗ್ದಾಳಿ ತೀವ್ರಗೊಳಿಸಿದ್ದರು. ವಿಜಯೇಂದ್ರರನ್ನು ಹುದ್ದೆಯಲ್ಲಿ ಮುಂದುವರಿಸಬಾರದು ಎಂದು ತಾಕೀತು ಹೇಳಲು ಹಾಗೂ 'ಹೊಂದಾಣಿಕೆ ರಾಜಕಾರಣ'ದ ವಿರುದ್ಧ ದೂರು ನೀಡಲು ಯತ್ನಾಳ ಬಣದ ನಾಯಕರು ದೆಹಲಿಗೆ ಎರಡು ಬಾರಿ ಬಂದಿದ್ದರೂ ವರಿಷ್ಠರ ಭೇಟಿ ಸಾಧ್ಯವಾಗಿರಲಿಲ್ಲ.

'ನೀವು ಪಕ್ಷದ ಶಿಸ್ತನ್ನು ಪದೇ ಪದೇ ಉಲ್ಲಂಘಿಸುತ್ತಿದ್ದೀರಿ. ಇಂತಹ ನಡವಳಿಕೆ ನಿಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಬಾರದು. ಇದಕ್ಕೆ 3 ದಿನಗಳಲ್ಲಿ ವಿವರಣೆ ನೀಡಬೇಕು' ಎಂದು ಓಂ ಪಾಠಕ್ ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

ಚುಟುಚುಕೆ ಕೇಂದ್ರದ ಸೋಮಣ್ಣ ನಿವಾಸ: ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರ ಸಂಸದರ ನಿವಾಸಕ್ಕೆ ಸೋಮವಾರ ಸ್ವಾಗತಗೊಂಡರು. ಈ ಶಿಸ್ತೆಲ್ಲಿಯ ಮನೆಯಲ್ಲಿ ಪೂಜೆ ಹಮ್ಮಿಕೊಂಡಿದ್ದರು. ಈ ವೇಳೆ, ರಾಜ್ಯ ಬಿಜೆಪಿ ನಾಯಕರು ಭೇಟಿ ನೀಡಿ ಶುಭ ಕೋರಿದರು ಹಾಗೂ ರಾಜ್ಯ ಘಟಕದಲ್ಲಿನ ಬಿಕ್ಕಟ್ಟು ಸರಿಪಡಿಸುವ ಕುರಿತು ಚರ್ಚಿಸಿದರು.

ಬಸನಗೌಡ ಪಾಟೀಲ ಯತ್ನಾಳ, ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ, ಮಹೇಶ ಕುಮಟಳ್ಳಿ, ಮುಖಂಡ ಎನ್.ಆರ್.ಸಂತೋಷ್ ಅವರು ಸೋಮಣ್ಣ ಅವರಿಗೆ ಶುಭ ಕೋರಿದರು. ಈ ನಾಯಕರು ತುಸು ಹೊತ್ತು ಚರ್ಚಿಸಿದರು. ನಂತರ, ತುರ್ತು ಕೆಲಸದ 'ನೆಪ' ಹೇಳಿ ಸೋಮಣ್ಣ ಮನೆಯಿಂದ ನಿರ್ಗಮಿಸಿದರು. ಯತ್ನಾಳ ಬಣದ ನಾಯಕರು ಸಚಿವರ ಮನೆಯಲ್ಲಿ ಸುಮಾರು 15 ನಿಮಿಷ ಚರ್ಚಿಸಿದರು. ಹೊರಬಂದ ನಾಯಕರು, 'ಸೋಮಣ್ಣ ಮೂಲಕ ವರಿಷ್ಠರ ಮನವೊಲಿಸುವ ರವಾನಿಸಿದ್ದೇವೆ. ತಾರತಮ್ಯ ಮಾಡಬೇಡಿ ಎಂದು ಸೂಚಿಸಿದ್ದೇವೆ' ಎಂದು ಹೇಳಿಕೊಂಡರು. ಯತ್ನಾಳ, ಲಿಂಬಾವಳಿ, ಕುಮಾರ ಬಂಗಾರಪ್ಪ ಅವರು ಕರ್ನಾಟಕ ಭವನಕ್ಕೆ ತೆರಳಿದರು.

ಬಳಿಕ, ಸಚಿವರ ಮನೆಗೆ ಸಂಸದ ಬಸವರಾಜ ಬೊಮ್ಮಾಯಿ, ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಮಾಜಿ ಸಚಿವ ಮುರುಗೇಶ ನಿರಾಣಿ ಬಂದರು. ಯತ್ನಾಳ ಬಣದ ನಾಯಕರು, 'ತಟಸ್ಥ' ನಾಯಕರ ಜತೆಗೆ ಸೋಮಣ್ಣ ಸುದೀರ್ಘವಾಗಿ ಚರ್ಚಿಸಿದರು. 'ರಾಜ್ಯದಲ್ಲಿ ಬಣ ರಾಜಕಾರಣ ವಿಕೋಪಕ್ಕೆ ಹೋಗಿದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ರಾಜ್ಯ ಘಟಕದ ಅಧ್ಯಕ್ಷರ ನೇಮಕ ಆಗಬೇಕಿದೆ. ಇಲ್ಲದಿದ್ದರೆ, ಬಿಕ್ಕಟ್ಟು ತೀವ್ರವಾಗಲಿದೆ. ಈ ವಿಷಯವನ್ನು ವರಿಷ್ಠರ ಗಮನಕ್ಕೆ ತರಬೇಕು' ಎಂದು ನಾಯಕರು ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಸಚಿವರ ಮನೆ ಪೂಜಾ ಕಾರ್ಯಕ್ರಮದಲ್ಲಿ ಹಾಜರಾಗಲು ದೆಹಲಿಗೆ ತೆರಳುತ್ತಿದ್ದೇನೆ ಎಂದು ವಿಜಯೇಂದ್ರ ಬೆಂಗಳೂರಿನಲ್ಲಿ ಭಾನುವಾರ ಹೇಳಿಕೆ ನೀಡಿದ್ದರು. ಆದರೆ, ಅವರು ಸಚಿವರ ಮನೆಗೆ ಸೋಮವಾರ ಬರಲಿಲ್ಲ. 'ಕೇಂದ್ರ ಸಚಿವರು, ರಾಜ್ಯದ ಸಂಸದರು ಹಾಗೂ ಎರಡು ಇಲಾಖೆಗಳ ಅಧಿಕಾರಿಗಳಿಗೆ ಮಾತ್ರ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಗಿತ್ತು. ಉಳಿದಂತೆ, ರಾಜ್ಯದ ನಾಯಕರನ್ನು ಕರೆದಿರಲಿಲ್ಲ' ಎಂದು ಸೋಮಣ್ಣ ಆಪ್ತರು ಸ್ಪಷ್ಟಪಡಿಸಿದರು.

ಸಂದೀಪ್ ರೆಡ್ಡಿ ನೇಮಕಕ್ಕೆ ತಡೆ

ಒಂದನೇ ಪುಟದಿಂದ...

ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್ ಅವರು ಸಂದೀಪ್ ರೆಡ್ಡಿ ನೇಮಕಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ವಿಜಯೇಂದ್ರ ವಿರುದ್ಧ ಬಹಿರಂಗವಾಗಿ ವಾಗ್ದಾಳಿ ನಡೆಸಿದ್ದರು. ಬಿಜೆಪಿ ಕೇಂದ್ರ ನಾಯಕರಿಗೆ ದೂರು ನೀಡಿದ್ದರು.

ಸಂದೀಪ್ ರೆಡ್ಡಿ ನೇಮಕ ಚಿಕ್ಕಬಳ್ಳಾಪುರ ಜಿಲ್ಲೆಯ ಬಿಜೆಪಿಯಲ್ಲಿ ಬಣ ರಾಜಕಾರಣಕ್ಕೆ ಕಾರಣವಾಗಿತ್ತು. ಜಿಲ್ಲಾಧ್ಯಕ್ಷರ ಆಯ್ಕೆಗೆ ತಡೆ ನೀಡಿದ ಆದೇಶದ ಪ್ರತಿಯನ್ನು ಸುಧಾಕರ್ ಬೆಂಬಲಿಗರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ವಿಜಯೇಂದ್ರ ವಿರುದ್ಧ ಸುಧಾಕರ್ ಅವರಿಗೆ ದೊರೆತ ಮೊದಲ ಹಂತದ ಜಯ ಎಂಬಂತೆ ಬಿಂಬಿಸಿ, ಸಂಭ್ರಮಿಸಿದ್ದಾರೆ.

ವರಿಷ್ಠರಿಂದ ಸಂದೇಶ

'ನಾವು ಬಂದ ಕೆಲಸ ಯಶಸ್ವಿ ಆಗಿದೆ. ಸಚಿವ ಸೋಮಣ್ಣ ಮೂಲಕ ವರಿಷ್ಠರು ನಮಗೆ ಸಂದೇಶ ರವಾನಿಸಿದ್ದಾರೆ. ಎಲ್ಲ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿನ ತೀರ್ಮಾನ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ' ಎಂದು ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_MAHINDRA_BOLERO _MAXXCITY_PICKUP YOM – - Reg No – KA20AB9494
2) CB_ TATA INTRA V30 _COMMERCIAL VEHICLE YOM – 2022 Reg No – KA42B4324
3) CB_MAH_JEETO YOM – 2022 Reg No – KA11C3040
4) CB_AL_BADA_DOST YOM – 2022 Reg No – KA05AL7194
5) CB_EICHER_PRO_3019 _FULLY_BULT_VEHICLE YOM – 2023 Reg No – KA14C4876
6) CB_MARUTI SUPER CARRY YOM – 2021 Reg No – KA04AC5963
7) CB_MARUTI SUPER CARRY YOM – 2021 Reg No – KA04AC5962
8) CB_MAH_JEETO YOM – 2024 Engine No UGR3D45879 Chassis No. MAKP2UGER3D58889
9) CB_SUPRO_MINI_TRUCK YOM – - Reg No – KA663976
10) CB_TATALPT_4825_CHASIS _GOODS. YOM – 2022 Reg No – KA35D3525
11) CB_V_EICHER_PRO_3015 _EICHER. YOM – 2023 Reg No – KA53AB0052
12) CB_AL1615_HE4750_BS_6 YOM – 2022 Reg No – KA26B4392
13) CB_MAHINDRA_BOLERO _MAXXCITY_PICKUP YOM – - Reg No – KA20AB9495
14) CB_MAHINDRA_BOLERO _MAXXCITY_PICKUP YOM – - Reg No – KA20AB9501
15) CB_AL_BOSS_1215_NB_LS _HITECH_BODY YOM – 2021 Reg No – KA01AM3332
16) CB_Ashok Leyland Dost GOODS YOM – - Reg No – KA02AJ7556
17) CB_TATA_LPT_1916_FBT YOM – 2023 Reg No – KA28AB0253
18) CB_AL_BADA_DOST YOM – 2022 Reg No – KA13D4582
19) CB_MARUTI SUPER CARRY YOM – 2022 Reg No –KA19AD6098
20) CB_KOMATSU_HYDRAULIC _EXCAVATOR_MODEL_PC _130_7. YOM – 2021 Chassis No 522465
21) CB_KOMATSU_HYDRAULIC _EXCAVATOR_MODEL_PC _130_7. YOM – 2021 Engine No. 522459
22) CB_AL_BADA_DOST YOM – 2023 Reg No – KA671986
23) CB_Ashok Leyland Dost GOODS YOM – 2022 Reg No – KA11C3058
24) CB_MAHINDRA_BOLERO _MAXXCITY_PICKUP YOM – - Reg No – KA32AA8064
25) AL_DOST_GOODS YOM – 2024 Reg No – KA38A6622

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 11.02.2025 (Please note that closing Auction date would not be a Weekly off / Holiday)

BRANCH ADDRESS: KOTAK MAHINDRA BANK LTD., 22, MG ROAD, BANGALORE KARNATAKA – 560001 OR Contact: Arunlaxman Kokare Kotak Mahindra Bank Ltd. Contact / 080 - 61564249

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ: ಕೇಂದ್ರ ಕಚೇರಿ ಹುಬ್ಬಳ್ಳಿ

ಅಲ್ಪ ಕಾಲಾವಧಿ ಟೆಂಡರ್ ಪ್ರಕಟಣೆ ಸಂ.12/2024-25 ದಿನಾಂಕ: 10-02-2025
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿ) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ವಾಹನ ಸಂಸ್ಥೆಯ ವಿಭಾಗಗಳಿಗೆ ಈ ಕೆಳಗಿನ ಕಾಣಿಸಿರುವ ಸಾಮಗ್ರಿಗಳ ಸರಬರಾಜಿಗಾಗಿ ಮತ್ತು ಸೇವೆಗಾಗಿ ಟೆಂಡರ್ ಮೂಲಕ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂ.	ಟೆಂಡರ್ ವಿವರಣೆ	ಅಂದಾಜು ಮೌಲ್ಯ
1	NWKRTC/2024-25/IND0098 Call-3	NRC ಇಂಜಿನ್ ಬಿಡಿ ಭಾಗಗಳನ್ನು ಸರಬರಾಜು	538 Lakh
2	NWKRTC/2024-25/IND0102	Non-Amino ಆಧಾರಿತ ಇಂಜಿನ್ ಕೂಲೆಂಟ್ ಸರಬರಾಜು	80 Lakh
3	NWKRTC/2024-25/IND0104	ಲೈಲ್ಯಾಂಡ್ ಬಿ.ಎಸ್.-VI ವಾಹನಗಳ ಮೃದುಚಾಲಕ ಹಾಗೂ ಆಡ್-ಬ್ಲೂಲಿಕ್ವಿಡ್ ಸರಬರಾಜು	199 Lakh
4	NWKRTC/2024-25/IND0107	ಡ್ಯಾಶ್-ಬೋರ್ಡ್ ಇನ್ಸಟ್ರೂಮೆಂಟ್ ಸರಬರಾಜು	140 Lakh
5	NWKRTC/2024-25/IND0110	ಆಟೋಮೋಟಿವ್ ಲ್ಯುಬ್ರಿಕಂಟ್ ಸರಬರಾಜು	309 Lakh
6	NWKRTC/2024-25/IND0111	ಆಟೋಮೋಟಿವ್ ಗ್ರೀಸ್ ಸರಬರಾಜು	156 Lakh
7	NWKRTC/2024-25/SE1462	CCTV ಆಧಾರಿತ ಸರ್ವೆಲನ್ಸ ಸಿಸ್ಟಮ್‌ನ್ನು ಸಂಸ್ಥೆಯ ವಿವಿಧ ಬಸ್-ನಿಲ್ದಾಣ, ಘಟಕ ಮತ್ತು ಕಚೇರಿಗಳಲ್ಲಿ ಒದಗಿಸುವುದಕ್ಕಾಗಿ ಸರ್ವೆ, ಡಿಸೈನ್ ಮಾಡಿ, ಸರಬರಾಜು ಮಾಡುವುದು ಹಾಗೂ ಅಳವಡಿಸುವುದು.	135 Lakh

ಕ್ರಮ ಸಂ.1 ರಿಂದ 6 ವರೆಗಿನ ಟೆಂಡರ್ ಗಳಿಗೆ ಬಿಡ್ ಸಲ್ಲಿಕೆಯ ಕೊನೆಯ **ದಿನಾಂಕ: 03–03–2025**. ಹಾಗೂ ಕ್ರಮ ಸಂ.7 ರಲ್ಲಿನ ಟೆಂಡರ್‌ಗೆ ಬಿಡ್ ಸಲ್ಲಿಕೆಯ ಕೊನೆಯ **ದಿನಾಂಕ : 25–02–2025**. ಸಮಯ: 17:30 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗಾಗಿ ವೆಬ್ ಸೈಟ್: http://kppp.karnataka.gov.in. ಅಥವಾ ಮೊಬೈಲ್ ಫೋನ್ **ಸಂ.7022009113/7760988557** ಗಳಿಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು, (ಟೆಂಡರ್ ಕರೆಯುವ ಪ್ರಾಧಿಕಾರ).

ವಾ.ಸಾ.ಇ/ಧಾರವಾಡ/950/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW– 3&4:ಟೆಂ:2024–25:3890 ದಿನಾಂಕ: 10–02–2025.

ಅಲ್ಪಾವಧಿ ಟೆಂಡರ್ ಪ್ರಕಟಣೆ

2024–25ನೇ ಸಾಲಿನ ಲೆಕ್ಕ ಶೀರ್ಷಿಕೆ : 5054 (ಯೋಜನೆ) ರಾಜ್ಯ ಹೆದ್ದಾರಿ ರಸ್ತೆ ಸುಧಾರಣೆ, 5054 (ಯೋಜನೆ) ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ, 5054 (ಯೋಜನೆ) ಜಿಲ್ಲಾ ಮುಖ್ಯ ರಸ್ತೆಗಳ ನವೀಕರಣ, 5054 (ಯೋಜನೆ) ಜಿಲ್ಲಾ ಮುಖ್ಯ ರಸ್ತೆ ಸೇತುವೆ ಸುಧಾರಣೆ, 8443–ಠೇವಣಿ ವಂತಿಕೆ, 2022–23ನೇ ಸಾಲಿನ ಕೆಕೆಆರ್‌ಡಿಬಿ ಮ್ಯಾಕ್ರೋ ಸಾಮಾಜಿಕ–ಸಾಮಾನ್ಯ ಮತ್ತು 2024–25ನೇ ಸಾಲಿನ ಕೆಕೆಆರ್‌ಡಿಬಿ ಮ್ಯಾಕ್ರೋ ಸಾಂಸ್ಥಿಕ–ಸಾಮಾನ್ಯ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW–3&4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 26 ಕಾಮಗಾರಿಗಳಿಗೆ **(ವರ್ಕ ಇಂಡೆಂಟ್ ಸಂಖ್ಯೆ: 19082, 19072, 18655, 18867, 18765, 18751, 18859, 18863, 18686, 18858, 19077, 19084, 18724, 18731, 18171, 18964, 18853, 19270, 18855, 19220, 18965, 18316, 16741/Call-2, 17597, 17324 & 18722) (ಕ್ರಮ ಸಂಖ್ಯೆ: 3 ರಿಂದ 6, 9, 13, 14 ಮತ್ತು 22 ರಿಂದ 26)** ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 24–02–2025 ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25–02–2025 ಸಮಯ 16.30 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 28–02–2025 ಸಮಯ 16.00 ಗಂಟೆ ಹಾಗೂ (ಕ್ರಮ ಸಂಖ್ಯೆ: 1, 2, 7, 8, 10 ರಿಂದ 12 ಮತ್ತು 15 ರಿಂದ 21) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 01–03–2025 ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 03–03–2025 ಸಮಯ 16.30 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 06–03–2025 ಸಮಯ 16.00 ಗಂಟೆ ಕನಿಷ್ಠ ಅಂದಾಜು ಮೊತ್ತ ರೂ. 100.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. 800.00 ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ವಿಶೇಷ ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಮೀಸಲಾತಿಗಳಿಗಾಗಿ ಹಾಗೂ ಇತ್ಯಾದಿಗಳಿಗಾಗಿ ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/747/ಕೆಎಸ್‌ಎಂಸಿಎ/2024–25

POLICE PUBLIC SCHOOL

Affiliated to CBSE New Delhi/Aff No: 830255
KSRP Campus, Koramangala, Bengaluru-34 Phone No: 080-25506765/6362598124

The Police Public School, KSRP Campus Koramangala, Bengaluru is an institution established for providing quality education to the children of the Police force and managed by Senior Police Officers of the Department. The school invites applications from highly qualified, dynamic and experienced candidates for the following Posts:

Sl.No.	Post & Subject	Qualification Required
01	PGT: English	Post graduate in the subject and B.Ed with minimum 50% marks in each
02	PRT: Mathematics, English, Hindi, Social Science, Science (PCM combination)	Post graduate in the subject and B.Ed with minimum 50% marks in each
03	PRT: Kannada	Post graduate in the subject and B.Ed with minimum 50% marks in each
04	PRT: Physical Education PRT: Yoga	Graduate in physical education/ B.P.Ed. or D.P.Ed, with minimum 50% marks. Bachelor degree or diploma in yoga training.
05	Pre School Teacher: (Nursery/LKG/UKG)	PUC/Class XII with National Teacher Training course/ 2 year Diploma in Elementary Education (DEEd) with minimum 50%, marks in each
06	PRT: Computer Science	Graduate in the subject (B.Tech/BSc in Computer) with minimum 50% marks
07	PRT: Music (Classical/ Hindustani / Western Folk)	Graduate in the subject with 50% marks
08	PRT: Dance	Bachelor Degree/ Master Degree in the related field or Diploma/Certificate in Dance.
09	Office Clerk	B.Com/M.Com degree with 50% marks and Tally knowledge.

For all the above mentioned posts the candidate's age should not be above 50 yrs.
(a) Computer Literacy is mandatory for all the posts. **(b)** Candidates having experience in teaching CBSE/ICSE syllabus will be preferred. **(c)** Candidates possessing the educational qualification in the concerned subjects only need to apply. **(d)** Candidates having multiple skills in Sports/NCC/Scouts & Guides/Extra/Co-curricular activities. will be given due weightage. **(e)** Candidates must be fluent in spoken & written English. **(f)** Salary will be paid as per Structured Pay Scales of concerned Police Public Schools. **(g)** Mere fulfilling the minimum qualification will not be a binding on the part of PPS to call for interview. **(h)** Eligible candidates will be shortlisted for interview after qualifying in the written examination **(i)** If selected and given order, the candidates should be ready to relocate and join the institution immediately. **(j) Other Benefits:** Provident Fund, Career Growth, Conducive Working Environment. **(k)** Qualified & interested Candidates may apply to the school e-mail id E-MAIL: **ppsk.bssc@gmail.com** within one week of this advertisement.

Sd/- Secretary, PPS.

ಕುಲಪತಿ ಎಂ.ಕೆ. ರಮೇಶ್ ಅವಧಿ ವಿಸ್ತರಣೆ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಂ.ಕೆ.ರಮೇಶ್ ಅವರ ಅವಧಿಯನ್ನು ಆರು ತಿಂಗಳು ವಿಸ್ತರಿಸಿ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದಾರೆ.

2022 ರ ಫೆಬ್ರುವರಿ 11 ರಂದು ಕುಲಪತಿಯಾಗಿ ನೇಮಕವಾಗಿದ್ದ ರಮೇಶ್ ಅವರ ಅವಧಿ ಇದೇ ಫೆ. 10ಕ್ಕೆ ಕೊನೆಗೊಳ್ಳಬೇಕಿತ್ತು. ಹೊಸ ಕುಲಪತಿ ನೇಮಕಕ್ಕೆ ಸರ್ಕಾರ ಈಗಾಗಲೇ ಶೋಧನಾ ಸಮಿತಿ ರಚಿಸಿದೆ.

ಕರ್ನಾಟಕ ಗೃಹ ಮಂಡಳಿ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.

ಸಂಖ್ಯೆ:ಕಗೃಮಂ/ಕಾ/ಹಂಚಿಕೆ/ಸತ್ತೂರು–ಹುಬ್ಬಳ್ಳಿ/2024–25 ದಿನಾಂಕ: 10–02–2025

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಧಾರವಾಡ ಜಿಲ್ಲೆ ಸತ್ತೂರು 3ನೇ ಹಂತ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ವಿವಿಧ ವರ್ಗದ ನಿವೇಶನಗಳನ್ನು ಹಂಚಿಕೆ ಮಾಡಲು ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ವಿವಿಧ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು,ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯನ್ನು ಪಾವತಿಸಿ ಅರ್ಜಿ ಸಲ್ಲಿಸಲು, ಕೊನೆಯ ದಿನಾಂಕ: 07–02–2025 ರಂದು ನಿಗಧಿಪಡಿಸಲಾಗಿತ್ತು. ಸಾರ್ವಜನಿಕರ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 12–02–2025 ರವರೆಗೆ ವಿಸ್ತರಿಸಲಾಗಿರುತ್ತದೆ. ಉಳಿದಂತೆ ದಿನಾಂಕ: 22–01–2024ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/4951/Zen/2024-25

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನ್ಯಾಕ 'ಎ' ಶ್ರೇಣಿ ಮಾನ್ಯತೆ
ನವನಗರ, ಹುಬ್ಬಳ್ಳಿ – 580 025, ದೂರವಾಣಿ : 0836 – 2222901, ಇ–ಮೇಲ್ : kslulibrary@gmail.com ವೆಬ್‌ಸೈಟ್ : www.kslu.karnataka.gov.in

ಸಂಖ್ಯೆ : ಕ.ರಾ.ಕಾ.ವಿ./ಗ್ರಂಥಾಲಯ/2024–25/2681 ದಿನಾಂಕ : 10–02–2025

ದರಪಟ್ಟಿ ಆಹ್ವಾನ ಪ್ರಕಟಣೆ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಸನ್ 2025 ಸಾಲಿಗೆ 27 ಕಾನೂನು ನಿಯತಕಾಲಿಕೆಗಳು ಮತ್ತು ರಿಪೋರ್ಟ್‌ಗಳನ್ನು ಚಂದಾದಾರಿಕೆಯನ್ನು ಮಾಡಲು ವಿವಿಧ ಪುಸ್ತಕ ವಿತರಕರಿಂದ ಒಂದು ವರ್ಷದ ಅವಧಿಗೆ ದರಪಟ್ಟಿಯನ್ನು ಆಹ್ವಾನಿಸಿದ್ದು, ಅಂದಾಜು ಮೊತ್ತ ಒಂದು ವರ್ಷಕ್ಕೆ ರೂ. 2,50,000.00 ಗಳಾಗಿರುತ್ತದೆ. ದರಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿ **"The Registrar, Karnataka State Law University, Navanagar, Hubballi"** ಕಛೇರಿಗೆ ಕೊನೆಯ ದಿನಾಂಕ : 17–02–2025 ರ ಒಳಗೆ ಸಲ್ಲಿಸಲು ಈ ಮೂಲಕ ಸೂಚಿಸಿದೆ.

ಸದರಿ ವಿಷಯದ ಕುರಿತು ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಜಾಲತಾಣ : www.kslu.karnataka.gov.in ವನ್ನು ವೀಕ್ಷಿಸಲು ಕೋರಿದೆ.

ಸಹಿ/– ಕುಲಸಚಿವರು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ.

ಡಿಐಪಿಆರ್/ಧಾರವಾಡ/948/ಮಣಿಪಾಲ್/2024–25

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ದೂರವಾಣಿ: +91–8431186388, ಇ–ಮೇಲ್: sabvmcri@gmail.com

ಸಂಖ್ಯೆ: SABVMCRI/E-TENDER/ETP&STP/GG/29/2024-25 ದಿನಾಂಕ: 10–02–2025
TENDER No: DME/2024-25/SE0402

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಸರ್ಕಾರಿ ಹೆಚ್.ಎಸ್.ಐ.ಎಸ್ ಘೋಷಾ ಆಸ್ಪತ್ರೆ ಮತ್ತು ಹುಡುಗಿಯ ವಸತಿ ನಿಲಯ ಕಟ್ಟಡಗಳಿಗೆ ಇ.ಟಿ.ಪಿ ಮತ್ತು ಎಸ್.ಟಿ.ಪಿ. ಯ ವಾರ್ಷಿಕ ನಿರ್ವಹಣೆಗಾಗಿ ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ: **07–02–2025** ರಿಂದ. 2) ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: **12–02–2025 ರ ಸಂಜೆ 5.30 ಗಂಟೆವರೆಗೆ.** 3) ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **17–02–2025 ರ ಸಂಜೆ 5.30 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **19–02–2025 ರಂದು ಬೆಳಿಗ್ಗೆ 10.30 ಗಂಟೆಗೆ.** ವಿವರವಾದ ಮಾಹಿತಿಗಾಗಿ ವೆಬ್‌ಸೈಟ್: **https://kppp.karnataka.gov.in** ಗೆ ಭೇಟಿನೀಡಿ. ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್ ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.

ವಾಸಾಸಂಇ/ವಾ.ಪ್ರ/4942/ಅಡ್ವರ್ಟೋರ್/2024–25

ಅಟಲ್ ಭೂಜಲ ಯೋಜನೆ

(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಯೋಜನಾ ನಿರ್ದೇಶಕರ ಕಛೇರಿ, ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ (SPMU), ಅಟಲ್ ಭೂಜಲ್ ಯೋಜನೆ,ನಂ1/1, 2ನೇ ಮಹಡಿ, ಕೆಎಸ್ಎಫ್‌ಸಿ ಭವನ, ತಿಮ್ಮಯ್ಯ ರಸ್ತೆ, ಬೆಂಗಳೂರು 560052.

No: ABHY/SPMU/PROC/21/2024-25 Date: 07.02.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಎಸ್.ಪಿ.ಎಂ.ಯು, ಅಟಲ್ ಭೂಜಲ್ ಯೋಜನೆ, ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಬಿಡ್‌ದಾರರಿಂದ **"Supply, Installation and Maintenance of Digital dashboard and dissemination systems in Atal Bhujal Yojana, Karnataka"** ಇಲ್ಲಿಗೆ ಸೇವೆಯನ್ನು ಒದಗಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಅರ್ಹತೆ ಮತ್ತು ಇತರ ವಿವರಗಳಿಗೆ ಸಂಬಂಧಿಸಿದ ವಿವರವಾದ ಅಧಿಸೂಚನೆಯನ್ನು **https://kppp.karnataka.gov.in** ಗೆ ಲಾಗ್ ಇನ್ ಮಾಡುವ ಮೂಲಕ ಪಡೆಯಬಹುದು. ಟೆಂಡರ್ ಡಾಕ್ಯುಮೆಂಟ್ ಅನ್ನು **ದಿನಾಂಕ: 10.02.2025** ರಿಂದ ಕೆಪಿಪಿ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಬಹುದು ಮತ್ತು ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ 17.02.2025 ರ 17.00 ಗಂಟೆಗಳು ಆಗಿರುತ್ತದೆ.**

ಹೆಚ್ಚಿನ ವಿವರಗಳನ್ನು ಕಚೇರಿ **ಸಮಯದಿಂದ 10:00 ಗಂಟೆಯಿಂದ 17:30 ಗಂಟೆಗಳವರೆಗೆ ಪಡೆಯಬಹುದು.**

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಎಸ್.ಪಿ.ಎಂ.ಯು, ಅಟಲ್ ಜಲ್, ಕರ್ನಾಟಕ

DIPR/CP/AAPL/RO4936/24-25

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ

ಬೆಂಗಳೂರು ನಗರ ವಿಭಾಗ, ಅರಣ್ಯ ಭವನ ಸಂಕೀರ್ಣ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂರವಾಣಿ/ಫ್ಯಾಕ್ಸ್ – 080–23343464 Email ID: dcfurban82@yahoo.co.in

ಸಂಖ್ಯೆ: ಎ9/ಮರ ಕತ್ತಾವಣೆ/ಸಿ.ಆರ್–52/2024–25 ದಿನಾಂಕ: 06.02.2025

ಪತ್ರಿಕಾ ಪ್ರಕಟಣೆ

ಈ ಮೂಲಕ ಬೆಂಗಳೂರು ಮಹಾನಗರ ಮತ್ತು ಸುತ್ತಮುತ್ತಲಿನ ಸಮಸ್ತ ನಾಗರಿಕರ ಗಮನಕ್ಕೆ ತರುವುದೇನೆಂದರೆ, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರು ಬೆಂಗಳೂರು ಪೂರ್ವ ತಾಲ್ಲೂಕು, ವ್ಯಾಪ್ತಿಯ ಬೆಂಗಳೂರು–ದೊಮ್ಮಸಂದ್ರ ಸೇರುವ ರಸ್ತೆ ಅಗಲೀಕರಣ (ಕಾರ್ಮೆಲರಾಮ್ ಸೇತುವೆಯಿಂದ ಮುತ್ತಾನಲ್ಲೂರು ಕ್ರಾಸ್ ವರೆಗೆ) ಕಾಮಗಾರಿಗೆ ಅಡ್ಡಿಬರುತ್ತಿರುವ ಮರಗಳನ್ನು ತೆರವುಗೊಳಿಸಲು ಈ ಕೆಳಸಹಿದಾರರ ಕಚೇರಿಗೆ ಮನವಿ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.

ಯೋಜನೆಯ ಹೆಸರು: ಬೆಂಗಳೂರು–ದೊಮ್ಮಸಂದ್ರ ಸೇರುವ ರಸ್ತೆ ಅಗಲೀಕರಣ (ಕಾರ್ಮೆಲರಾಮ್ ಸೇತುವೆಯಿಂದ ಮುತ್ತಾನಲ್ಲೂರು ಕ್ರಾಸ್ ವರೆಗೆ) ಕಾಮಗಾರಿ. ಏಜೆನ್ಸಿಯ ಹೆಸರು : ಲೋಕೋಪಯೋಗಿ ಇಲಾಖೆ, ಬೆಂಗಳೂರು. ಮರ ತೆರವುಗೊಳಿಸುವ ಉದ್ದೇಶ: ಬೆಂಗಳೂರು–ದೊಮ್ಮಸಂದ್ರ ಸೇರುವ ರಸ್ತೆ ಅಗಲೀಕರಣ ಕಾಮಗಾರಿಗೆ ಅಡ್ಡಿಬರುತ್ತಿರುವುದರಿಂದ.

<table>
<tr><td>ಯೋಜನೆಯು ಬರುತ್ತಿರುವ ಪ್ರದೇಶದ ಜಿ.ಪಿ.ಎಸ್. ರೀಡಿಂಗ್ಸ್.</td><td colspan="2">GPS details
Carmelaram Bridge | E-77.7079684" | N-12. 9015389"
Mutthanallur cross | E-77.7382496" | N-12.8874688"</td></tr>
<tr><td>ಯೋಜನಾ ಪ್ರದೇಶದಲ್ಲಿ ಪ್ರಸ್ತುತ ಇರುವ ಮರಗಳು</td><td>214 (ಅನುಬಂಧ–1)</td><td rowspan="2">ಮರಗಳ ವಿವರ, ಜಾತಿ, ಮರಗಳಿರುವ ಜಾಗ, ನಕಾಶೆಗಳ ವಿವರಗಳನ್ನು ಅರಣ್ಯ ಇಲಾಖಾ ವೆಬ್‌ಸೈಟ್‌ನಲ್ಲಿ ಮಾಹಿತಿಗಾಗಿ ಒದಗಿಸಲಾಗಿದೆ. (www.aranya.gov.com)</td></tr>
<tr><td>ಯೋಜನಾ ಪ್ರದೇಶದಲ್ಲಿ ತೆರವುಗೊಳಿಸಬೇಕಾದ ಮರಗಳು</td><td>214 (ಅನುಬಂಧ–1)</td></tr>
</table>

ಆಕ್ಷೇಪಣೆಗಳನ್ನು ಸಲ್ಲಿಸುವ ವಿಧಾನ (ಸಾರ್ವಜನಿಕರು ನೇರವಾಗಿ/ಇ–ಮೇಲ್/ಅಂಚೆ ಮುಖಾಂತರ ಈ ಕೆಳಸಹಿದಾರರ ಕಛೇರಿಗೆ ಸಲ್ಲಿಸಬಹುದು) : ವಿಳಾಸ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಬೆಂಗಳೂರು ಅರಣ್ಯ ಭವನ ಸಂಕೀರ್ಣ, ಮಲ್ಲೇಶ್ವರಂ 18ನೇ ಅಡ್ಡರಸ್ತೆ, ಬೆಂಗಳೂರು–560003. ಇ–ಮೇಲ್ ವಿಳಾಸ: **dcfurban82@yahoo.co.in.** ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ಅವಧಿ: ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗಾಗಿ. ಸೂಚನೆ: ಆಕ್ಷೇಪಣೆಗಳು ಪ್ರಸ್ತಾವಿತ ಯೋಜನೆಗೆ ಮಾತ್ರ ಸಂಬಂಧಿಸಿರಬೇಕು.

ಮೇಲ್ಕಂಡ ಪ್ರದೇಶದಲ್ಲಿನ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳಿದ್ದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಸೆಕ್ಷನ್8(3)(vii) ಪ್ರಕಾರ ಸಲಹೆ–ಸೂಚನೆಗಳನ್ನು ನೀಡಲು ಆಹ್ವಾನಿಸಲಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು.

DIPR/CP/4952/Zen/2024-25

ಮಂಗಳೂರು ಮಹಾನಗರ ಪಾಲಿಕೆ

ಲಾಲ್‌ಬಾಗ್, ಎಂ.ಜಿ ರಸ್ತೆ, ಮಂಗಳೂರು–575 003, ಕರ್ನಾಟಕ, ಭಾರತ.
ಫೋನ್: 0824–2220313–18, ಫ್ಯಾಕ್ಸ್: 0824–2220310 ವೆಬ್‌ಸೈಟ್: www.mangalorecity.mrc.gov.in

ಮನಪಾ/ಆರೋವಿ/ಸಿಆರ್:54/2024–25/ಜೆ10 ದಿ: 07.02.2025

ದರಪಟ್ಟಿ ಕರೆಯೋಲೆ

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಅಳವಡಿಸಲಾದ ಸಿ.ಸಿ.ಟಿವಿಯ ದುರಸ್ತಿ ಮತ್ತು ನಿರ್ವಹಣೆಯ ಕುರಿತು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ. ದರಪಟ್ಟಿ ಸಲ್ಲಿಸಲು ಕೊನೆಯ **ದಿನಾಂಕ: 13/02/2025 ಪೂರ್ವಾಹ್ನ 11:00** ಗಂಟೆಗೆ ನಿಗದಿಪಡಿಸಲಾಗಿದೆ. ಸದರಿ ದಿನದಂದು ಮಧ್ಯಾಹ್ನ 5:00 ಗಂಟೆಗೆ ಬಿಡ್ ತೆರೆಯಲಾಗುವುದು.

ಸಹಿ/– ಆಯುಕ್ತರು ಮಹಾನಗರಪಾಲಿಕೆ, ಮಂಗಳೂರು

DIPR/MNG/KSMCA/1355/24-25 dt.10.02.2025

ತೋಟಗಾರಿಕೆ ಇಲಾಖೆ

ತೋಟಗಾರಿಕೆ ನಿರ್ದೇಶನಾಲಯ, ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು – 560 076. ದೂರವಾಣಿ ಸಂಖ್ಯೆ: 080–26582775, ಇ–ಮೇಲ್: ddhbiotech3@gmail.com

ಟೆಂಡರ್ ಅಧಿಸೂಚನೆ

ತೋಟಗಾರಿಕೆ ಇಲಾಖೆ, ಜೈವಿಕ ಕೇಂದ್ರ, ಹುಳಿಮಾವು ಇಲ್ಲಿನ ತೋಟಗಾರಿಕೆ ಕ್ಷೇತ್ರ ಮತ್ತು ವಿವಿಧ ಪ್ರಯೋಗಶಾಲೆಗಳಲ್ಲಿ ತುಂಡು ಕಾಮಗಾರಿಗೆ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸುವ ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು http://www.kppp.karnataka.gov.in ವೆಬ್‌ಸೈಟ್ ನ ಟೆಂಡರ್ ಸಂಖ್ಯೆ: **KSHD/2024-25/SE0350** ರಲ್ಲಿ ಪಡೆಯಬಹುದಾಗಿರುತ್ತದೆ. ಬಿಡ್ ಸಲ್ಲಿಸಬಹುದಾದ ಅವಧಿ ದಿನಾಂಕ: **01.02.2025** ರಿಂದ **03.03.2025 ರ ಸಂಜೆ 5.30 ಘಂಟೆ**. ಈ ಕಛೇರಿಯಲ್ಲಿ ಪ್ರೀ–ಬಿಡ್ (Prebid) ಸಭೆಯ ದಿನಾಂಕ: **15.02.2025 ರಂದು ಬೆಳಿಗ್ಗೆ 11–30 ಘಂಟೆಗೆ** ನಡೆಯಲಿದೆ.

ಸಹಿ/– ತೋಟಗಾರಿಕೆ ಉಪ ನಿರ್ದೇಶಕರು (ಅಂಗಾಂಶ ಕೃಷಿ),

ವಾಸಾಸಂಇ/ವಾ.ಪ್ರ/4795/ಎಂಎಎ/24–25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,

ಬಟವಾಡಿ, ತುಮಕೂರು–572103
E-mail:apmctumkur@gmail.com Ph:2281362, 2280713

ಸಂಖ್ಯೆ: ಕೃಉಮಾಸ/ತು/1461/2024–25 ದಿನಾಂಕ: 06.02.2025

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ:ಕೃಮಾಇ/ಮುಂಪ/ಬೆಂ/ನಿಠೇ/40/2024–25 ದಿ:25.09.2024ರ ಅನುಮತಿಯಂತೆ ತುಮಕೂರು ಎ.ಪಿ.ಎಂ.ಸಿ.ಯ ವಿವಿಧ ಬ್ಯಾಂಕುಗಳ ಉಳಿತಾಯ ಖಾತೆಯಲ್ಲಿರುವ ರೂ.7.00 ಕೋಟಿ ಹೆಚ್ಚುವರಿ ಹಣವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಅರ್ಹ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಇ–ಪೋರ್ಟಲ್ ಮೂಲಕ ಆಹ್ವಾನಿಸಿ, ಇ–ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ದಿನಾಂಕ: 25.02.2025 ರಂದು ಸಾಯಂಕಾಲ 04–00 ಗಂಟೆಯವರೆಗೆ ಇ–ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಛೇರಿ ವೇಳೆಯಲ್ಲಿ ತುಮಕೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಛೇರಿಯಲ್ಲಿ ಪಡೆಯಬಹುದಾಗಿದೆ. Indent No:- APMC/2024-25/550.

ಸಹಿ/–ಡಿ.ಆರ್.ಪುಷ್ಪ ಕಾರ್ಯದರ್ಶಿ, ಕೃ.ಉ.ಮಾ.ಸ ತುಮಕೂರು
ಸಹಿ/–ಎಸ್.ನಿ.ನ್ಯಾಮಗೌಡ ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ ತುಮಕೂರು

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಹಾವೇರಿ

ದೂರವಾಣಿ : 08375–249049, ಫ್ಯಾಕ್ಸ್ : 08375–249049 ಇ–ಮೇಲ್: dhohaveri@gmail.com

ಸಂ/ಜಿಆಕುಕಅಕಹಾ/ಅಭಿವೃದ್ಧಿ/68/2024–25 ದಿನಾಂಕ: 07/02/2025

ಇ-ಟೆಂಡರ್ ಪ್ರಕಟಣೆ

ವಿಷಯ: ಹೊರ ಗುತ್ತಿಗೆ ಆಧಾರದ ಮೇಲೆ ಶುಶ್ರೂಷಾಧಿಕಾರಿಗಳು, ಗಣಕಯಂತ್ರ ನಿರ್ವಾಹಕರು, ಗ್ರೂಪ್-ಡಿ ಸಿಬ್ಬಂದಿಗಳ ಸೇವೆ ಪಡೆಯಲು ಕೆ.ಪಿ.ಪಿ.ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸುವ ಕುರಿತು.
ಉಲ್ಲೇಖ: ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ ಇವರ ಅನುಮೋದನೆ ದಿನಾಂಕ: 06/02/2025

ಸನ್ 2025–26ನೇ ಸಾಲಿಗೆ ಹಾವೇರಿ ಜಿಲ್ಲೆಯ ಜಿಲ್ಲಾಮಟ್ಟದ ಕಛೇರಿಗಳಿಗೆ, ತಾಲೂಕಾ ಮಟ್ಟದ ಆಸ್ಪತ್ರೆಗಳಿಗೆ, ಸಮುದಾಯ ಆರೋಗ್ಯ ಸಂಸ್ಥೆಗಳಿಗೆ ಹಾಗೂ ಆರೋಗ್ಯ ವಿಸ್ತೀರಣಾ ಕೇಂದ್ರಗಳಿಗೆ ಮಾನವ ಹೊರ ಸಂಪನ್ಮೂಲ ಸಂಸ್ಥೆ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಅವಶ್ಯವಿರುವ ಶುಶ್ರೂಷಾಧಿಕಾರಿಗಳು, ಗಣಕಯಂತ್ರ ನಿರ್ವಾಹಕರು, ಗ್ರೂಪ್-ಡಿ ನೌಕರರ ಸೇವೆಯನ್ನು ಪಡೆದುಕೊಳ್ಳಲು ನೊಂದಾಯಿತ ಮಾನವ ಹೊರಸಂಪನ್ಮೂಲ ಸಂಸ್ಥೆಯವರಿಂದ ಇ-ಪ್ರೋಕ್ಯೂರಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡಂತೆ ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ (www.kppp.karanataka.gov.in) ನಿಂದ ಪಡೆಯಬಹುದು.

ಇ-ಟೆಂಡರಿನ ಪ್ರಮುಖ ಘಟನಾವಳಿಗಳು. Schedule of Events:-

1	ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ	11/02/2025
2	ಟೆಂಡರ್‌ನ ಅಂದಾಜು ಮೌಲ್ಯ	ರೂ. 183.00 ಲಕ್ಷ
3	ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ	25/02/2025 ಸಾಯಂಕಾಲ 4.30 ಗಂಟೆಯವರೆಗೆ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ	ದಿನಾಂಕ: 27/02/2025 ರಂದು ಬೆಳಿಗ್ಗೆ 11.00 ಗಂಟೆ
5	ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ	ತಿಳಿಸಲಾಗುವುದು
6	ಪಾವತಿಸಬೇಕಾದ ಇ.ಎಂ.ಡಿ ಮೊತ್ತ 2.5%	ರೂ. 4.58 ಲಕ್ಷ
7	ಪ್ರಿ-ಬಿಡ್ ಸಭೆ ದಿನಾಂಕ / ಸ್ಥಳ ಮತ್ತು ವ್ಯವಹರಿಸಬೇಕಾದ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ	ದಿನಾಂಕ: 15/02/2025 ರಂದು ಬೆಳಿಗ್ಗೆ 11.00 ಘಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ 08375–249049/249066

ಟೆಂಡರಿನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ

dipr/hvr/dipo/535/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಎಪಿಸಿಸಿ&ಪ್ರೊ)/ಕಾನಿಇಂ/ಸ.ಕಾ.ನಿ.ಇಂ/002-019 ದಿನಾಂಕ: 10.02.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಯೋಜಿತ ಪ್ಯಾಕೇಜ್** ಅಡಿಯಲ್ಲಿ, ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ / ಕಾಮಗಾರಿಯ ವಿವರ
ಕವಿಪ್ರನಿನಿ/2024-25/ಎಸ್‌ಎಸ್/ವರ್ಕ್_ಇಂಡೆಂಟ್1970
ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ, **ಕಾಮಗಾರಿ-ಎ:** ಚಾಮರಾಜನಗರ ಜಿಲ್ಲೆಯ ಮತ್ತು ತಾಲ್ಲೂಕಿನ **66/11ಕೆವಿ ಅತ್ತಿಗುಳಿಪುರ ಉಪಕೇಂದ್ರದಲ್ಲಿ** 1x8ಎಂವಿಎ, 66/11ಕೆವಿ ವಿದ್ಯುತ್ **ಪರಿವರ್ತಕ-1ನ್ನು** 1x12.5 ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಬಿ:** ಚಾಮರಾಜನಗರ ಜಿಲ್ಲೆಯ ಮತ್ತು ತಾಲ್ಲೂಕಿನ **66/11ಕೆವಿ ಅತ್ತಿಗುಳಿಪುರ ಉಪಕೇಂದ್ರದಲ್ಲಿ** 1x8ಎಂವಿಎ, 66/11ಕೆವಿ ವಿದ್ಯುತ್ **ಪರಿವರ್ತಕ-2ನ್ನು** 1x12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಸಿ:** ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ **66/11ಕೆವಿ ರಾಮಾಪುರ ಉಪಕೇಂದ್ರದಲ್ಲಿ** 2x8ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 2x12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಡಿ:** ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ **66/11ಕೆವಿ ಬೊಮ್ಮಲಾಪುರ ಉಪಕೇಂದ್ರದಲ್ಲಿ** 1x6.3ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 1x12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಇ:** ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ **66/11ಕೆವಿ ಸಾತೇಗಾಲ ಉಪಕೇಂದ್ರದಲ್ಲಿ** 1x8ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 1x12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿಗಳನ್ನು ಭಾಗಶಃ ಟರ್ನ್‌ಕೀ ಆಧಾರದ ಮೇಲೆ ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು (11ಕೆವಿ ಸ್ವಿಚ್‌ಗೇರ್ ಪೂರೈಕೆಯನ್ನು ಹೊರತುಪಡಿಸಿ) ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ) ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **13.02.2025 ರಂದು ಅಪರಾಹ್ನ 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **01.03.2025 ರಂದು ಅಪರಾಹ್ನ 15.00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– **ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಕ.ವಿ.ಪ್ರ.ನಿ.ನಿ, ನಿಗಮ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560009. ಫೋನ್: 080-22243926.**

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸೂರ್ಯನ ಕಿರಣ ಕೊಳಕಿರುವ ಜಾಗಕ್ಕೆ ಹೋದರೂ ಕೊಳಕಾಗದು. ಹಾಗೆಯೇ ನಾವು ಸಹ ಯಾವ ಜಾಗಕ್ಕೆ ಹೋದರೂ ಯಾರ ಜೊತೆ ಇದ್ದರೂ ನಾವಾಗಿಯೇ ಇರಬೇಕು, ಕೊಳಕಾಗಬಾರದು. –ಸಿದ್ಧೇಶ್ವರ ಸ್ವಾಮೀಜಿ

ಮಣಿಪುರ: ಬಿರೇನ್ ಸಿಂಗ್ ರಾಜೀನಾಮೆ ಸಂಘರ್ಷ ಶಮನಕ್ಕೆ ಬೇಕಿದೆ ದೃಢ ಹೆಜ್ಜೆ

ಎಂಟು ವರ್ಷಗಳಿಂದ ಮಣಿಪುರ ಮುಖ್ಯಮಂತ್ರಿ ಸ್ಥಾನದಲ್ಲಿದ್ದ ಎನ್. ಬಿರೇನ್ ಸಿಂಗ್ ಅವರು ಭಾನುವಾರ ಸ್ಥಾನ ತೊರೆದಿದ್ದಾರೆ. ದೀರ್ಘಕಾಲದಿಂದ ಮುಖ್ಯಮಂತ್ರಿ ಆಗಿದ್ದರೂ ರಾಜ್ಯದೊಳಗೆ ಉದ್ಭವಿಸಿರುವ ಜನಾಂಗೀಯ ಸಂಘರ್ಷವನ್ನು ನಿಯಂತ್ರಿಸುವುದರಲ್ಲಿ ವಿಫಲರಾದದ್ದಷ್ಟೇ ಅಲ್ಲದೆ, ಸಂಘರ್ಷ ಉಲ್ಬಣಿಸಲು ಕಾರಣರಾಗಿದ್ದಕ್ಕಾಗಿ ಬಿರೇನ್ ಸಿಂಗ್ ಅವರು 2023ರ ಮೇ ತಿಂಗಳಿನಿಂದ ಈಚೆಗೆ ಹೆಚ್ಚಾಗಿ ಚರ್ಚೆಯ ಕೇಂದ್ರಬಿಂದುವಾಗಿದ್ದರು. ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕು ಎಂಬ ಆಗ್ರಹವೂ ಬಲವಾಗಿತ್ತು. ಆದರೂ ವಿರೋಧದ ಮಧ್ಯೆಯೇ ಎರಡು ವರ್ಷ ಮುಂದುವರಿದಿದ್ದರು. ಸೋಮವಾರ ಆರಂಭವಾಗಬೇಕಿದ್ದ ವಿಧಾನಮಂಡಲದ ಅಧಿವೇಶನದಲ್ಲಿ ಮುಖ್ಯಮಂತ್ರಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿತ್ತು. ಇದೇ ಕಾರಣಕ್ಕಾಗಿ ಒಂದು ದಿನ ಮುಂಚಿತವಾಗಿ ಬಿರೇನ್ ಸಿಂಗ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮಣಿಪುರದಲ್ಲಿ ಎರಡು ವರ್ಷಗಳಿಂದ ಪರಸ್ಪರ ಸಂಘರ್ಷದಲ್ಲಿ ತೊಡಗಿರುವ ಮೈತೇಯಿ ಮತ್ತು ಕುಕಿ ಈ ಎರಡೂ ಸಮುದಾಯಗಳ ಜನರ ವಿಶ್ವಾಸವನ್ನೂ ಬಿರೇನ್ ಕಳೆದುಕೊಂಡಿದ್ದರು. ಆಡಳಿತಾರೂಢ ಬಿಜೆಪಿಯಲ್ಲೇ ಮುಖ್ಯಮಂತ್ರಿ ವಿರುದ್ಧ ಅಪಸ್ವರ ಎದ್ದಿದ್ದು, ತನ್ನದೇ ಪಕ್ಷದ ಹಲವು ಶಾಸಕರಿಂದ ಅವರು ವಿರೋಧ ಎದುರಿಸುತ್ತಿದ್ದರು. ಒಂದು ಅಂದಾಜಿನ ಪ್ರಕಾರ, 60 ಸದಸ್ಯಬಲದ ವಿಧಾನಸಭೆಯಲ್ಲಿ 21 ಮಂದಿ ಶಾಸಕರಷ್ಟೇ ಬಿರೇನ್ ಅವರನ್ನು ಬೆಂಬಲಿಸುತ್ತಿದ್ದರು.

ಮಣಿಪುರದಲ್ಲಿ ಸಂಘರ್ಷ ಶಮನಕ್ಕೆ ಬಹಳಷ್ಟು ಕೆಲಸ ಆಗಬೇಕಿದೆ. ಆಡಳಿತ ವ್ಯವಸ್ಥೆಯನ್ನು ಹಳಿಗೆ ತರುವಲ್ಲಿ ಸವಾಲುಗಳಿವೆ

ಮಣಿಪುರದಲ್ಲಿ ನಡೆದಿರುವ ಜನಾಂಗೀಯ ಸಂಘರ್ಷದಲ್ಲಿ ಬಿರೇನ್ ಸಿಂಗ್ ಪಾತ್ರವೂ ಇದೆ ಎಂಬುದನ್ನು ಸಾಬೀತುಪಡಿಸುವಂತಹದ್ದು ಎನ್ನಲಾದ ಆಡಿಯೊ ರೆಕಾರ್ಡಿಂಗ್ ತುಣುಕೊಂದು ಇತ್ತೀಚೆಗೆ ಬಹಿರಂಗವಾಗಿತ್ತು. ಅದರ ಬೆನ್ನಲ್ಲೇ ಬಿರೇನ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪ್ರಕರಣವು ಈಗ ಸುಪ್ರೀಂ ಕೋರ್ಟ್ ಮುಂದಿದೆ. ತನ್ನ ಮುಂದೆ ಬೇರೆ ಯಾವುದೇ ಆಯ್ಕೆಗಳು ಇಲ್ಲದ ಕಾರಣದಿಂದ ಬಿರೇನ್ ಸಿಂಗ್ ಅವರು ರಾಜೀನಾಮೆ ನೀಡಿದ್ದಾರೆ ಎಂಬುದು ಸ್ಪಷ್ಟ. ವಿಧಾನಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡನೆಯ ವೇಳೆ ತಮಗೆ ಹಿನ್ನಡೆ ಆಗಬಹುದಾದ ಸಾಧ್ಯತೆಯಿಂದ ತಪ್ಪಿಸಿಕೊಳ್ಳಲು ಅಥವಾ ಜನಾಂಗೀಯ ಸಂಘರ್ಷದಲ್ಲಿ ಹಸ್ತಕ್ಷೇಪ ನಡೆಸಿರುವ ಆರೋಪ ನ್ಯಾಯಾಲಯದಲ್ಲಿ ಸಾಬೀತಾಗಿ, ತಪ್ಪಿತಸ್ಥ ಎಂಬ ಹಣೆಪಟ್ಟಿ ಕಟ್ಟಿಕೊಳ್ಳುವುದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಈ ನಿರ್ಧಾರ ಕೈಗೊಂಡಿರುವ ಸಾಧ್ಯತೆ ಇದೆ. ದೀರ್ಘಕಾಲದಿಂದ ತಮ್ಮನ್ನು ಬೆಂಬಲಿಸಿಕೊಂಡು ಬಂದಿದ್ದ ಬಿಜೆಪಿಯ ವರಿಷ್ಠರ ಬೆಂಬಲವನ್ನು ಕಳೆದುಕೊಂಡಿದ್ದೂ ರಾಜೀನಾಮೆಗೆ ಕಾರಣವಾಗಿರಬಹುದು. ಬಿರೇನ್ ಅವರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಲಾಗದ ಸ್ಥಿತಿಯನ್ನು ತಲುಪಿದ್ದ ಹಂತದಲ್ಲಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕಿಳಿಸುವ ತೀರ್ಮಾನವನ್ನು ಬಿಜೆಪಿ ತೆಗೆದುಕೊಂಡಿದೆ ಎಂಬುದು ಗಮನಾರ್ಹವಾದುದು. ಬಿಜೆಪಿಯು ಈ ನಿರ್ಧಾರವನ್ನು ಮೊದಲೇ ಕೈಗೊಂಡಿದ್ದರೆ ಮಣಿಪುರದಲ್ಲಿನ ಪರಿಸ್ಥಿತಿ ಇಷ್ಟೊಂದು ಹದಗೆಡುತ್ತಿರಲಿಲ್ಲ. ನಾಯಕತ್ವ ಬದಲಾವಣೆಯಿಂದ ಸಮಸ್ಯೆ ಪರಿಹಾರಕ್ಕೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಅವಕಾಶ ಸೃಷ್ಟಿಯಾಗಿದೆ.

ಬಿರೇನ್ ಸಿಂಗ್ ಪದತ್ಯಾಗದ ನಂತರದಲ್ಲಿ ಆಡಳಿತ ವ್ಯವಸ್ಥೆಯನ್ನು ಪುನರ್ ರಚಿಸುವಲ್ಲಿ ದೊಡ್ಡ ಸವಾಲುಗಳಿವೆ. ಮೈತೇಯಿ ಮತ್ತು ಕುಕಿ ಸಮುದಾಯಗಳು ಪರಸ್ಪರ ಸಂಘರ್ಷದಿಂದ ಭೌತಿಕವಾಗಿ ಮತ್ತು ಮಾನಸಿಕವಾಗಿಯೂ ವಿಭಜನೆಯಾಗಿವೆ. ಇದರ ಪರಿಣಾಮವಾಗಿ ಮಣಿಪುರದಲ್ಲಿ ಜನಾಂಗೀಯ ಧ್ರುವೀಕರಣ ದೊಡ್ಡ ಪ್ರಮಾಣದಲ್ಲಿ ನಡೆದಿದೆ. ಅಲ್ಲಿನ ಪೊಲೀಸರು ಮೈತೇಯಿ ಸಮುದಾಯದ ಹಿಡಿತಕ್ಕೆ ಸಿಲುಕಿದ್ದು, ಅವರ ಪರವಾಗಿ ಪಕ್ಷಪಾತದಿಂದ ವರ್ತಿಸುತ್ತಿದ್ದಾರೆ ಎಂಬ ಆರೋಪಗಳಿವೆ. ಕುಕಿ ಸಮುದಾಯದ ಜನರು ಪ್ರತ್ಯೇಕ ರಾಜ್ಯ ಅಥವಾ ಸ್ವಾಯತ್ತ ಪ್ರಾದೇಶಿಕ ಸ್ಥಾನಮಾನದ ಬೇಡಿಕೆ ಮುಂದಿಟ್ಟಿದ್ದಾರೆ. ಆದರೆ, ಮೈತೇಯಿ ಸಮುದಾಯವು ರಾಜ್ಯ ವಿಭಜನೆಯ ಬೇಡಿಕೆಯ ವಿರುದ್ಧವಾಗಿದೆ. ಎಲ್ಲ ಭಾಗೀದಾರರ ಮಧ್ಯೆ ವಿಶ್ವಾಸದ ಕೊರತೆಯು ದಟ್ಟವಾಗಿದೆ. ಪರಿಸ್ಥಿತಿಯನ್ನು ಸುಧಾರಿಸಿ, ಅಭಿವೃದ್ಧಿ ಹಾದಿಗೆ ರಾಜ್ಯವನ್ನು ಮರಳಿ ತರಬೇಕಾದರೆ ಈ ಎಲ್ಲ ಸಮಸ್ಯೆಗಳನ್ನೂ ಪರಿಶೀಲಿಸಿ, ಪರಿಹಾರ ಒದಗಿಸಬೇಕಿದೆ. ಬಿರೇನ್ ಸಿಂಗ್ ಪದತ್ಯಾಗವು ಒಂದು ಸಕಾರಾತ್ಮಕ ಹೆಜ್ಜೆ ಆಗಿದ್ದರೂ ಈ ದಿಸೆಯಲ್ಲಿ ಇನ್ನೂ ಬಹಳಷ್ಟು ಕೆಲಸ ಆಗಬೇಕಿದೆ. ಕೇಂದ್ರ ಸರ್ಕಾರದ ಕಡೆಯಿಂದಲೇ ಆ ಕೆಲಸ ಮೊದಲು ಆರಂಭವಾಗಬೇಕಿದೆ.

ದಿನದ ಟ್ವೀಟ್

ಮಂಗಗಳ ಹಾವಳಿ: ಬೇಕು ಪರಿಹಾರ

ಮಲೆನಾಡಿನಲ್ಲಿ ಮಂಗಗಳ ಹಾವಳಿಯಿಂದ ಎಷ್ಟೋ ಕುಟುಂಬಗಳು ದೈನಂದಿನ ಮನೆಬಳಕೆಗೆ ತರಕಾರಿ ಬೆಳೆದುಕೊಳ್ಳುವುದನ್ನೇ ಬಿಟ್ಟುಬಿಟ್ಟಿವೆ.

ಅಮೃತ್ ಬಾಳ್‌ಬೈಲ್

ಕಿಡಿನುಡಿ

ಬೆಂಗಳೂರು ಮೆಟ್ರೊ ಪ್ರಯಾಣ ದರ ಏರಿಕೆ ಅನ್ಯಾಯದ ಪರಮಾವಧಿಯಂತಿದೆ! ನನ್ನ ದೈನಂದಿನ ಕೆಲಸದ ಪ್ರಯಾಣ ವೆಚ್ಚ ಈ ಮೊದಲು ₹84 ಇದ್ದದ್ದು ಈಗ ₹160 ಆಗಿದೆ. ಅಂದರೆ ದುಪ್ಪಟ್ಟಾಗಿದೆ. ಶೇ 100ರಷ್ಟು ದರ ಏರಿಸುವುದು ಭಯಾನಕ. ಇದು, ದರ ಪರಿಷ್ಕರಣೆಯ ಹೆಸರಿನಲ್ಲಿ ಮಾಡುವ ಸಾರ್ವಜನಿಕ ಹಣದ ಲೂಟಿ ಮತ್ತು ಹಗಲು ದರೋಡೆ. ಯಾರನ್ನು ದೂರಬೇಕೆಂದು ತಿಳಿಯುತ್ತಿಲ್ಲ...

ಸೋಫಿಯಾ ವಿಜಯ್, ಅಕೌಂಟೆಂಟ್

25 ವರ್ಷಗಳ ಹಿಂದೆ

ಶುಕ್ರವಾರ, 11-2-2000

• ವಿಮಾನ ನಿಲ್ದಾಣ ಯೋಜನೆ ಅತಂತ್ರ ಪರಿಸ್ಥಿತಿಯಲ್ಲಿ ರೈತರು

ಬೆಂಗಳೂರು, ಫೆ. 10– ದೇವನಹಳ್ಳಿ ತಾಲ್ಲೂಕಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಯೋಜನೆ ಪದೇಪದೇ ಮುಂದೆ ಹೋಗುತ್ತಿರುವುದರಿಂದ, ಆ ಭಾಗದ ಸುಮಾರು ಹತ್ತು ಹಳ್ಳಿಗಳ ರೈತರು ತಮ್ಮ ಜಮೀನನ್ನು ಅಭಿವೃದ್ಧಿಪಡಿಸಲಾಗದೆ, ಸಾಗುವಳಿಗೆ ಸಾಲ ಸಿಗದೆ ತೀವ್ರ ತೊಂದರೆಯಲ್ಲಿರುವುದು ಬೆಳಕಿಗೆ ಬಂದಿದೆ.

ವಿಮಾನ ನಿಲ್ದಾಣದ ಯೋಜನೆ ಏಳು ವರ್ಷಗಳ ಹಿಂದೆ ರೂಪುಗೊಂಡಾಗಲೇ ಇಲ್ಲಿಯ ರೈತರ ಬವಣೆಯೂ ಪ್ರಾರಂಭವಾಯಿತು. ಹಣದ ಅಗತ್ಯ ಬಿದ್ದಾಗ ತುಂಡು ಜಮೀನನ್ನು ಮಾರುವ ಹಾಗಿಲ್ಲ, ಇತ್ತ ಸರ್ಕಾರದಿಂದ ಪರಿಹಾರವೂ ಎಂದು ಸಿಗಬಹುದೆಂಬ ಸೂಚನೆಯಿಲ್ಲ.

ಯೋಜನೆಯ ವ್ಯಾಪ್ತಿಯಲ್ಲಿರುವ ಜಮೀನುಗಳ ಮಾಲೀಕರಿಗೆ ಜಮೀನಿನ ಮೇಲೆ ಯಾವುದೇ ಸಾಲವನ್ನೂ ತೆಗೆದುಕೊಳ್ಳಲಾಗುತ್ತಿಲ್ಲ. ಯಾವುದೇ ಬ್ಯಾಂಕ್ ಸಾಲ ನೀಡುತ್ತಿಲ್ಲ.

• ವೇಣೂರು ಬಾಹುಬಲಿಗೆ ಮಹಾಮಜ್ಜನ ಆರಂಭ

ವೇಣೂರು, ಫೆ. 10– ತ್ಯಾಗ, ಅಹಿಂಸೆಯನ್ನು ಜಗತ್ತಿಗೆ ಬೋಧಿಸಿದ ಭಗವಾನ್ ಬಾಹುಬಲಿಯ ಮಹಾಮಸ್ತಕಾಭಿಷೇಕ ಮಹೋತ್ಸವದ ಧಾರ್ಮಿಕ ವಿಧಿಗಳು ಬಾಹುಬಲಿ ಪ್ರತಿಮೆ ಸ್ಥಾಪಕ ವಂಶಸ್ಥರ ಪೂಜಾ ಕಾರ್ಯಗಳೊಂದಿಗೆ ಇಂದು ಇಲ್ಲಿ ಆರಂಭವಾದವು.

ಬಾಹುಬಲಿ ಪ್ರತಿಮೆಯ ಪದತಲದಲ್ಲಿ ನಿರ್ಮಿಸಿದ ವಿಶಾಲ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕರ್ನಾಟಕದ ರಾಜ್ಯಪಾಲೆ ವಿ.ಎಸ್.ರಮಾದೇವಿ ಅವರು ಉದ್ಘಾಟಿಸಿದರು. ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಹೊರತರಲಾದ ‘ಮಾನತುಂಗ’ ಸ್ಮರಣಸಂಚಿಕೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಮತ್ತು ಮಹಾಮಸ್ತಕಾಭಿಷೇಕ ಸಮಿತಿಯ ಗೌರವಾಧ್ಯಕ್ಷ ಡಿ.ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 11-2-1975

• ‘ಬೆಂಗಳೂರು ಬಂದ್’ ಭಾಗಶಃ ಯಶಸ್ವಿ

ಬೆಂಗಳೂರು, ಫೆ. 10– ಮಹಿಳೆಯರ ಕ್ರಿಯಾ ಸಮಿತಿಯೊಂದು ಪ್ರಥಮ ಬಾರಿ ‘ಬೆಂಗಳೂರು ಬಂದ್’ಗೆ ನಡೆಸಿದ ಪ್ರಯತ್ನಕ್ಕೆ ಇಂದು ಭಾಗಶಃ ಯಶಸ್ಸು ದೊರಕಿದೆ.

ಕೆಂಪೇಗೌಡ ಸರ್ಕಲ್ ಸುತ್ತಮುತ್ತ ಸುಬೇದಾರ್ ಛತ್ರ ರಸ್ತೆ, ಬಳೇಪೇಟೆ, ಚಿಕ್ಕಪೇಟೆ ಮತ್ತು ರಾಜಾಜಿನಗರ ಬಿಟ್ಟಲ್ಲಿ ಬೇರೆ ಕಡೆಗಳಲ್ಲಿ ‘ಬಂದ್’ ಅಷ್ಟಾಗಿ ಕಾಣಲಿಲ್ಲ.

ಬಂದ್‌ಗೆ ಕರೆ ನೀಡಿದ ಮಹಿಳಾ ಭೂ ರಕ್ಷಣಾ ಕ್ರಿಯಾ ಸಮಿತಿಯ ಸಂಚಾಲಕಿ ಎಸ್.ಪ್ರಮೀಳಾ ಅವರು ಸೇರಿ ನಗರದ ನಾನಾ ಕಡೆಗಳಲ್ಲಿ ಪೊಲೀಸರು ಒಟ್ಟು 33 ಮಂದಿಯನ್ನು ಬಂಧಿಸಿದರು.

ಭೂ ಸುಧಾರಣೆ ಶಾಸನದಲ್ಲಿ ಮಹಿಳೆಯರಿಗೆ ಆಗಿದೆ ಎನ್ನಲಾದ ಅನ್ಯಾಯದ ವಿರುದ್ಧ ಪ್ರತಿಭಟಿಸಲು ಭೂರಕ್ಷಣಾ ಕ್ರಿಯಾ ಸಮಿತಿ ನೀಡಿದ ‘ಬೆಂಗಳೂರು ಬಂದ್’ ಕರೆಗೆ ಬಹುತೇಕ ವಿರೋಧ ಪಕ್ಷಗಳು ಮತ್ತು ಬೆಂಗಳೂರು ವಿಶ್ವವಿದ್ಯಾಲಯ ವಿದ್ಯಾರ್ಥಿ ಮಂಡಳಿ ಬೆಂಬಲ ನೀಡಿದ್ದವು.

ಬಿ.ಟಿ.ಎಸ್. ಬಸ್ಸು ಮತ್ತು ಆಟೊ ರಿಕ್ಷಾಗಳು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಅವುಗಳ ಸಂಚಾರಕ್ಕೆ ಅಡ್ಡಿಯಾಗಲಿಲ್ಲ. ಬಹುಮಟ್ಟಿನ ಹೋಟೆಲು ಮತ್ತು ಸಿನಿಮಾ ಮಂದಿರಗಳೂ ತೆರೆದಿದ್ದು, ಜನಜೀವನ ಮಾಮೂಲಾಗಿತ್ತು.

ಪಕ್ಷದಲ್ಲಿ ಅನಿಶ್ಚಿತತೆ ಮನೆಮಾಡಿದ್ದರೂ ರಾಜಧಾನಿಯಲ್ಲಿ ಅದು ಪೂರ್ತಿ ಕುಸಿದುಬಿದ್ದಿಲ್ಲ

ದೆಹಲಿಯಲ್ಲಿ ಎಎಪಿ ಸೋತಿದ್ದೇಕೆ?

ವಿಶ್ಲೇಷಣೆ

ಬಿ.ಎಸ್. ಅರುಣ್

ಆಮ್ ಆದ್ಮಿ ಪಕ್ಷದ (ಎಎಪಿ) ಪಾಲಿನ ಬಲಿಷ್ಠ ಕೋಟೆ ಎನ್ನಲಾಗಿದ್ದ ದೆಹಲಿಯಲ್ಲಿ ಆ ಪಕ್ಷದ 10 ವರ್ಷಗಳ ಆಡಳಿತ ಕೊನೆಗೊಂಡಿದೆ. ಅಲ್ಲಿ ಅದು ಬಿಜೆಪಿಗೆ ಅಧಿಕಾರ ಬಿಟ್ಟುಕೊಟ್ಟಿದೆ, ಬಿಜೆಪಿಯು ದೆಹಲಿಯಲ್ಲಿ 27 ವರ್ಷಗಳ ನಂತರದಲ್ಲಿ ಅಧಿಕಾರಕ್ಕೆ ಮರಳಿದೆ. ದೇಶದ ರಾಜಧಾನಿಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಸತತ ಮೂರನೆಯ ಬಾರಿಗೆ ಶೂನ್ಯ ಸಂಪಾದಿಸಿದೆ. ಬಿಜೆಪಿಯು ದೆಹಲಿಯಲ್ಲಿ ಎಎಪಿಗೆ ಮಾತ್ರ ಭಾರಿ ಏಟು ಕೊಟ್ಟಿಲ್ಲ, ಆ ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ಅವರಿಗೂ ಪೆಟ್ಟು ಕೊಟ್ಟಿದೆ.

ದೆಹಲಿಯು ಬಿಜೆಪಿಯ ಪಾಲಿಗೆ ಬಹುಕಾಲದಿಂದ ಮರೀಚಿಕೆಯಾಗಿತ್ತು. ಅಲ್ಲಿ ಬಿಜೆಪಿ ಯಶಸ್ಸು ಸಾಧಿಸಿದ್ದು ಹೇಗೆ? ಹಿಂದುತ್ವವಾದಿ ಪಕ್ಷ ಎಂದೇ ಹೆಸರಾಗಿರುವ ಬಿಜೆಪಿಯು ಪ್ರತಿ ಚುನಾವಣೆಯನ್ನೂ ಬಹಳ ಗಂಭೀರವಾಗಿ ಪರಿಗಣಿಸುತ್ತದೆ, ಚುನಾವಣಾ ಯೋಜನೆಯನ್ನು ಬಹಳ ಸೂಕ್ಷ್ಮವಾಗಿ ಸಿದ್ಧಪಡಿಸುತ್ತದೆ, ವಿರೋಧ ಪಕ್ಷಗಳ ಶಕ್ತಿ ಮತ್ತು ದೌರ್ಬಲ್ಯವನ್ನು ಗುರುತಿಸುತ್ತದೆ, ಸ್ಪಷ್ಟ ಕಾರ್ಯತಂತ್ರ ಜಾರಿಗೆ ತರುತ್ತದೆ ಹಾಗೂ ತನ್ನ ಲೋಪಗಳನ್ನು ಸರಿಪಡಿಸಿಕೊಳ್ಳುತ್ತದೆ. ಈ ಬಾರಿ ದೆಹಲಿಯ ಆಡಳಿತವನ್ನು ಎಎಪಿಯಿಂದ ಕಿತ್ತುಕೊಳ್ಳಬೇಕು ಎಂದು ಬಿಜೆಪಿ ದೃಢ ನಿಶ್ಚಯ ಮಾಡಿತ್ತು.

ಇದಕ್ಕೆ ಬಿಜೆಪಿಯು ಬಹಳ ಪರಿಪೂರ್ಣ ಯೋಜನೆಯೊಂದಿಗೆ ಕೆಲಸ ಮಾಡಿತು ಎಂಬುದನ್ನು ಫಲಿತಾಂಶವು ಹೇಳುತ್ತಿದೆ. ಬೂತ್ ಮಟ್ಟದ ನಿರ್ವಹಣೆ, ಜನಸಂಪರ್ಕ ಕಾರ್ಯಕ್ರಮಗಳು, ಅಭ್ಯರ್ಥಿಗಳ ಬಗ್ಗೆ ಅಭಿಪ್ರಾಯ ಸಂಗ್ರಹವು ಚುನಾವಣೆಗೂ ಆರು ತಿಂಗಳು ಮೊದಲು ಆರಂಭವಾದವು. ಬಿಜೆಪಿಯ ಸೈದ್ಧಾಂತಿಕ ಮಾತೃ ಸಂಘಟನೆ ಆರ್‌ಎಸ್‌ಎಸ್ ತಳಮಟ್ಟದಲ್ಲಿ ಕೆಲಸ ಆರಂಭಿಸಿತು. ಬಿಜೆಪಿಯು ಅಭ್ಯರ್ಥಿಗಳನ್ನು ಬಹಳ ಜಾಗರೂಕವಾಗಿ ಆಯ್ಕೆ ಮಾಡಿತು. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಬಿಜೆಪಿಯು ಎಎಪಿಯ ವಿರುದ್ಧ ಇರುವ ಭ್ರಷ್ಟಾಚಾರ ಆರೋಪಗಳ ಬಗ್ಗೆ ಗಮನ ನೀಡಿತು. ಅದರ ನಾಯಕ ಕೇಜ್ರಿವಾಲ್ ವಿರುದ್ಧದ ಆರೋಪಗಳ ಬಗ್ಗೆಯೂ ಗಮನಹರಿಸಿತು.

ಅಬಕಾರಿ ಹಗರಣದ ಆರೋಪವು ಎಎಪಿಗೆ ಅದಾಗಲೇ ಪೆಟ್ಟು ಕೊಟ್ಟಿತ್ತು, ಕೇಜ್ರಿವಾಲ್ ಸೇರಿದಂತೆ ಆ ಪಕ್ಷದ ನಾಲ್ವರು ನಾಯಕರು ಜೈಲಿಗೆ ಹೋಗಿಬಂದಿದ್ದರು. ಮೂಲಸೌಕರ್ಯ ಕೊರತೆ, ತ್ಯಾಜ್ಯ ವಿಲೇವಾರಿ ಸಮಸ್ಯೆ, ಮುಂಗಾರು ಸಂದರ್ಭದಲ್ಲಿ ಸೃಷ್ಟಿಯಾಗುವ ಸಮಸ್ಯೆಗಳು, ವಾಯುಮಾಲಿನ್ಯಕ್ಕೆ ಕೊನೆಯೇ ಇಲ್ಲದಿರುವುದು... ಇಂತಹ ಸಮಸ್ಯೆಗಳನ್ನೂ ಬಿಜೆಪಿಯು ಪ್ರಧಾನವಾಗಿ ಉಲ್ಲೇಖಿಸಿತು. ಮೂರು ವಿಷಯಗಳನ್ನು ಬಹಳ ಮುಖ್ಯವಾಗಿ ಪ್ರಸ್ತಾಪಿಸಿತು: ಯಮುನಾ ನದಿಯನ್ನು ಸ್ವಚ್ಛಗೊಳಿಸುವುದಾಗಿ ಕೇಜ್ರಿವಾಲ್ ಅವರು 10 ವರ್ಷಗಳ ಹಿಂದೆಯೇ ಹೇಳಿದ್ದರೂ ಅದು ಇನ್ನೂ ಸ್ವಚ್ಛಗೊಂಡಿಲ್ಲ; ಸರ್ಕಾರಿ ಬಂಗಲೆಯನ್ನು ಕೇಜ್ರಿವಾಲ್ ಅವರು ಐಷಾರಾಮಿ ನಿವಾಸವಾಗಿಸಿಕೊಂಡಿದ್ದಾರೆ ಎಂಬ ಆರೋಪ ಮತ್ತು ಅಬಕಾರಿ ಹಗರಣ.

ಭ್ರಷ್ಟಾಚಾರ ವಿರೋಧಿ ಹೋರಾಟವೊಂದರ ಮೂಲಕ ಜನಿಸಿದ ಪಕ್ಷವು ರಾಜಕೀಯದಿಂದ ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸುವುದಾಗಿ ಶಪಥ ಮಾಡಿರುವ ಪಕ್ಷವು ಐಷಾರಾಮಿ ಸೌಲಭ್ಯಗಳನ್ನು ನಿರಾಕರಿಸುವುದಾಗಿ ಹೇಳುವ ಪಕ್ಷವು ಭ್ರಷ್ಟಾಚಾರದಲ್ಲಿ ತೊಡಗಿದೆ, ಐಷಾರಾಮಿ ಸೌಲಭ್ಯಗಳನ್ನು ಅನುಭವಿಸುತ್ತಿದೆ ಎಂದು ಬಿಜೆಪಿ ಮತ್ತೆ ಮತ್ತೆ ಹೇಳಿತು. ಕೇಜ್ರಿವಾಲ್ ಅವರು ಬಹಳ ಅಹಂಕಾರಿ ಆಗಿದ್ದಾರೆ ಎಂದು ದೂರಿತು. ಹೀಗಿದ್ದರೂ ಎಎಪಿಯನ್ನು ಸೋಲಿಸುವುದು ಸುಲಭವಾಗಿರಲಿಲ್ಲ. ಉಚಿತ ವಿದ್ಯುತ್, ಉಚಿತ ನೀರು, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಮತ್ತು ಮೆಟ್ರೊ ಸೌಲಭ್ಯದಂತಹ ಜನಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದು, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ತಂದು ಎಎಪಿಯು ದೆಹಲಿ ಜನರ ಮನಸ್ಸಿನಲ್ಲಿ 10 ವರ್ಷಗಳಿಂದ ಮನೆ ಮಾಡಿಕೊಂಡಿತ್ತು. ಬಿಜೆಪಿ-ಆರ್‌ಎಸ್‌ಎಸ್ ಕಾರ್ಯಕರ್ತರ ಮಾದರಿಯಲ್ಲೇ ಎಎಪಿ ಕೂಡ ತಳಮಟ್ಟದಲ್ಲಿ ಬದ್ಧತೆಯ ಕಾರ್ಯಕರ್ತರ ಪಡೆಯನ್ನು ಹೊಂದಿದೆ.

ಚುನಾವಣಾ ಪ್ರಚಾರ ಅಭಿಯಾನವನ್ನು ಬಹಳ ಜಾಗರೂಕತೆಯಿಂದ ರೂಪಿಸಿದ ಬಿಜೆಪಿಯು ಎಎಪಿಯ ಜನಕಲ್ಯಾಣ ಕಾರ್ಯಕ್ರಮಗಳನ್ನು ಟೀಕಿಸಬಾರದು ಎಂದು ತೀರ್ಮಾನಿಸಿತು. ಈ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ, ಹಿಂದಿನ ಚುನಾವಣೆ ಸಂದರ್ಭದಲ್ಲಿ ‘ರೇವ್ಡಿ’ ಎಂದು ಕರೆದಿದ್ದರು. ಎಎಪಿ ಜಾರಿಗೆ ತಂದ ಎಲ್ಲ ಜನಪ್ರಿಯ ಯೋಜನೆಗಳು ತಾನು ಅಧಿಕಾರಕ್ಕೆ ಬಂದ ನಂತರವೂ ಜಾರಿಯಲ್ಲಿ ಇರುತ್ತವೆ ಎಂದು ಬಿಜೆಪಿ ಭರವಸೆ ನೀಡಿತು. ಇದನ್ನು ಜನ ನಂಬಿದರು. ತಾನು ಕೂಡ ಬಹಳಷ್ಟು ಯೋಜನೆಗಳನ್ನು ಜಾರಿಗೆ ತರುವ ಭರವಸೆ ಇತ್ತಿತು. ಮತದಾನಕ್ಕೆ ನಾಲ್ಕು ದಿನ ಇದೆ ಎಂದಾಗ, ಕೇಂದ್ರ ಬಜೆಟ್‌ನಲ್ಲಿ ಆದಾಯ ತೆರಿಗೆಗೆ ಸಂಬಂಧಿಸಿದ ಕೆಲವು ಘೋಷಣೆಗಳನ್ನು ಮಾಡಲಾಯಿತು. ಈ ಘೋಷಣೆಗಳು ದೆಹಲಿಯ ಮಧ್ಯಮ ವರ್ಗವು (ದೆಹಲಿಯ 1.55 ಕೋಟಿ ಮತದಾರರ ಪೈಕಿ ಶೇ 60ರಷ್ಟು ಮಂದಿ ಮಧ್ಯಮ ವರ್ಗದವರು ಎಂಬ ಅಂದಾಜು ಇದೆ) ಬಿಜೆಪಿಯ ಕಡೆ ವಾಲುವಂತೆ ಮಾಡಿದವು. ಈ ನಡುವೆ ಕೇಂದ್ರ ಸರ್ಕಾರವು 8ನೆಯ ವೇತನ ಆಯೋಗವನ್ನು ರಚಿಸುವುದಾಗಿ ಘೋಷಿಸಿತು. ಇದು ಕೇಂದ್ರ ಸರ್ಕಾರದ ನೌಕರರು ಬಿಜೆಪಿಯನ್ನು ಬೆಂಬಲಿಸುವಂತೆ ಮಾಡಿತು.

ಬೇರೆ ಬೇರೆ ಸಮುದಾಯಗಳು, ವಲಸಿಗರು, ಆರ್ಥಿಕವಾಗಿ ಭಿನ್ನ ನೆಲೆ ಹೊಂದಿರುವವರು ಸೇರಿದಂತೆ ಹಲವು ಸಮುದಾಯಗಳ ಜೊತೆ ಬಿಜೆಪಿ ಸಂವಾದ ನಡೆಸಿತು. ಹಿಂದಿನ ಎರಡು ಚುನಾವಣೆಗಳಲ್ಲಿ ಈ ಸಮುದಾಯಗಳು ಸಾರಾಸಗಟಾಗಿ ಎಎಪಿಗೆ ಮತ ಚಲಾಯಿಸಿದ್ದವು. 2020ರಲ್ಲಿ ನಡೆಸಿದಂತಹ ತೀರಾ ಧ್ರುವೀಕರಣಗೊಂಡ ಚುನಾವಣಾ ಪ್ರಚಾರದ ಬದಲು ಬಿಜೆಪಿಯು ಈ ಬಾರಿ ಕಡಿಮೆ ವಿಭಜನಕಾರಿ ಮಾರ್ಗವನ್ನು ತುಳಿಯಿತು. ಏಕೆಂದರೆ ಕೇಜ್ರಿವಾಲ್ ಅವರ ಮೃದು ಹಿಂದುತ್ವದ ಹಾದಿ ಬಿಜೆಪಿಗೆ ಗೊತ್ತಿತ್ತು.

ಎಎಪಿ ಹಾಗೂ ಕೇಜ್ರಿವಾಲ್ ಅವರ ಸೋಲು ಪಕ್ಷಕ್ಕೆ ಭಾರಿ ಸಮಸ್ಯೆ ಸೃಷ್ಟಿಸಿದೆ. ಎಎಪಿ ಸೋತಿದ್ದಕ್ಕೆ ಕಾರಣಗಳೇನು? ‘ಭ್ರಷ್ಟಾಚಾರದ ವಿರುದ್ಧ ಭಾರತ’ ಆಂದೋಲನದ ಮೂಲಕ ಜನಿಸಿದ, ಭ್ರಷ್ಟಾಚಾರದ ವಿಚಾರದಲ್ಲಿ ನೈತಿಕವಾಗಿ ಬಹಳ ಎತ್ತರದ ನಿಲುವು ಹೊಂದಿರುವುದಾಗಿ ಹೇಳಿಕೊಂಡ ಎಎಪಿ ಆರಂಭದಿಂದಲೂ ಈ ತತ್ವಗಳನ್ನು ಗಾಳಿಗೆ ತೂರಿದಂತೆ ಕಾಣುತ್ತಿತ್ತು. ಪಕ್ಷವು ಅಬಕಾರಿ ಹಗರಣದಲ್ಲಿ, ಶೀಷಮಹಲ್ ವಿವಾದದಲ್ಲಿ ಸಿಲುಕಿತು. ಕೇಜ್ರಿವಾಲ್ ಮತ್ತು ಕೇಂದ್ರ ಸರ್ಕಾರದ ನಡುವಿನ ನಿತ್ಯದ ದೋಷಾರೋಪಗಳು, ಜನಕಲ್ಯಾಣ ಕ್ರಮಗಳಿಗೆ ಅನುಮೋದನೆಯನ್ನು ಕೇಂದ್ರ ತಡೆಹಿಡಿಯುತ್ತಿದೆ ಎಂದು ಆರೋಪಿಸುವುದು ಬಹುಶಃ ಜನರಿಗೆ ಇಷ್ಟವಾಗಲಿಲ್ಲ. ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಸರ್ಕಾರದಿಂದ ನಿರಂತರವಾಗಿ ಸ್ಪಷ್ಟನೆಗಳನ್ನು ಕೇಳುವ ಮೂಲಕ, ಸರ್ಕಾರ ಕಳುಹಿಸಿದ ಪ್ರಸ್ತಾವಗಳಿಗೆ ಅಡ್ಡಿಗಳನ್ನು ಸೃಷ್ಟಿಸುವ ಮೂಲಕ ವಿವಾದ ಉಂಟುಮಾಡಿದರು. ಇದು ಜನರ ತಾಳ್ಮೆಯನ್ನು ಪರೀಕ್ಷಿಸಿತು.

ಹೀಗಿದ್ದರೂ ಕಳೆದ ವರ್ಷ ಮಹಾರಾಷ್ಟ್ರದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ‘ಇಂಡಿಯಾ’ ಮೈತ್ರಿಕೂಟದ ಕಾಂಗ್ರೆಸ್, ಎನ್‌ಸಿಪಿ (ಎಸ್‌ಪಿ) ಮತ್ತು ಶಿವಸೇನಾ (ಯುಬಿಟಿ) ಪಕ್ಷಗಳು ಕುಸಿದುಬಿದ್ದಂತೆ, ಎಎಪಿಯು ದೆಹಲಿಯಲ್ಲಿ ಪೂರ್ತಿ ಕುಸಿದುಬಿದ್ದಿಲ್ಲ. ಅದು ದೆಹಲಿಯಲ್ಲಿ ಶೇ 43.6ರಷ್ಟು ಮತಗಳನ್ನು ಪಡೆದಿದೆ. ಇದು ಬಹುಮತ ಪಡೆದಿರುವ ಬಿಜೆಪಿಗೆ ಸಿಕ್ಕ ಶೇಕಡಾವಾರು ಮತಗಳಿಗೆ ಹೋಲಿಸಿದರೆ ಶೇ 2ರಷ್ಟು ಮಾತ್ರ ಕಡಿಮೆ. ಅಂದರೆ ದೆಹಲಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಮತದಾರರು ಈಗಲೂ ಎಎಪಿ ಜೊತೆ ಇದ್ದಾರೆ.

ಎಎಪಿ ಪಾಲಿಗೆ ಕಾಂಗ್ರೆಸ್ ಮುಳುವಾಯಿತೇ? ಹೌದು. ಕಾಂಗ್ರೆಸ್ ಪಕ್ಷವು ಒಂದು ಸ್ಥಾನ ಕೂಡ ಗೆಲ್ಲದಿದ್ದರೂ ಶೇ 6.3ರಷ್ಟು ಮತಗಳನ್ನು ಪಡೆಯಿತು. 14 ಸ್ಥಾನಗಳಲ್ಲಿ ಎಎಪಿ ಸೋಲಿಗೆ ಕಾರಣವಾಯಿತು. ಇಷ್ಟು ಸ್ಥಾನಗಳನ್ನು ಗೆದ್ದಿದ್ದರೆ ಎಎಪಿ ಬಹುಮತ ಪಡೆದುಕೊಳ್ಳುತ್ತಿತ್ತು. ಈ ಎಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪಡೆದಿರುವ ಮತಗಳು ಬಿಜೆಪಿಯ ಗೆಲುವಿನ ಅಂತರಕ್ಕಿಂತ ಹೆಚ್ಚಿವೆ. ಅಂದರೆ, ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನಡುವೆ ಹೊಂದಾಣಿಕೆ ಇದ್ದಿದ್ದರೆ ಎಎಪಿ ದೆಹಲಿಯಲ್ಲಿ ಸೋಲುತ್ತಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತಿದೆ.

ಆದರೆ ಈಗ ಎಎಪಿ ಎದುರು ಅನಿಶ್ಚಿತತೆ ಮನೆಮಾಡಿದೆ. ಕೇಂದ್ರ ಸರ್ಕಾರವು ಈಗ ಕೇಜ್ರಿವಾಲ್ ಹಾಗೂ ಅವರ ಪಕ್ಷದ ಪ್ರಮುಖರ ಬೆನ್ನುಬಿಡುವ ಸೂಚನೆಗಳಿಲ್ಲ. ಎಎಪಿಯು ಹೋಳಾಗುವ ಅಪಾಯ ಇದೆ. ದೆಹಲಿಯ ಫಲಿತಾಂಶವು ಎಎಪಿ ನೇತೃತ್ವದ ಪಂಜಾಬ್ ಸರ್ಕಾರದ ಮೇಲೆ ಯಾವ ಬಗೆಯ ಪರಿಣಾಮ ಉಂಟುಮಾಡುತ್ತದೆ ಎಂಬುದನ್ನು ಗಮನಿಸಬೇಕಿದೆ.

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ

ಡೀಪ್‌ಸೀಕು

• ಡಿ.ಎಸ್.ಲಿಂಗರಾಜು

‘ಸಾ, ಬೆಂಗಳೂರಿನಲ್ಲಿ ಚೀಟರ್ಸ್ ಸಂಘ ಗೌರವ ಡಾಕ್ಟರೇಟು ಖರೀದಿಗೆ ಕೊಡ್ತದೆ ಅಂತ ಪೇಪರಿನಗೆ ಬಂದುತ್ತು. ಕಾಸು ಕೊಟ್ಟು ಗೌ.ಡಾ. ತಗಂಡು ಡಾಕ್ಟರ್ ತುರೇಮಣೆ ಆಗಿಬುಡಿ’ ಸಜೆಶನ್ ಕೊಟ್ಟೆ.

‘ಚೀನುದ್ದು ಡೀಪ್‌ಸೀಕ್ ಅಂತ ಬಂದದಂತಲ್ಲ, ಅದನ್ನ ತಕ್ಕಂದ್ರಾಗಕುಲವೇ?’ ಯಂಟಪ್ಪಣ್ಣ ಐಡಿಯಾ ಕೊಟ್ಟಿತು.

‘ದಿಟ ಕನಣ್ಣೈ, ಚೀನಾದ ಡೀಪ್‌ಸೀಕ್ ಚಾಟ್‌ಬಾಟಲ್ಲಿ ವಿ-ಥ್ರೀ ಅಂತ ಮಾಡೆಲ್ ಅದೆ. ಕರ್ನಾಟಕದ ಮೂರೂ ಪಕ್ಷಗಳ ಕಚ್ಚಾಟದ ಎಪಿಸೋಡನ್ನ ಅದಕ್ಕೆ ಪ್ರೊಗ್ರಾಮಿಂಗ್ ಮಾಡಿದ್ರೆ ಅತೃಪ್ತರ ಕಾಟಕ್ಕೆ, ಕುರ್ಚಿ ಕೊಕ್ಕೋ ಆಟಕ್ಕೆ ಪರಿಹಾರ ಕಂಡ್ಕಬೈದು’ ಅಂತ ಒಂದು ಐಡಿಯಾ ತೂಗಿಬುಟ್ರು.

‘ಡೆಲ್ಲಿ ಸಿಎಂ ಯಾರಾದಾರು ಅಂತೂ ಹೇಳಾದೆ?’ ಯಂಟಪ್ಪಣ್ಣ ಕೊಂಕು ನುಡಿಯಿತು.

‘ಡೀಪ್‌ಸೀಕ್ ಅಂದ್ರೆ ಸೀಕ್ ಕಬಾಬ್ ಥರಾ ಡೀಪಾಗಿ ಕೆಂಡದ ಮ್ಯಾಲೆ ಸುಡೋ ಸಂಶ್ಲೇಷಿತ ಚಾಕಣವಾ?’ ಅಂತ ಕೇಳಿದೆ.

‘ನಮ್ಮವ್ವ ದಿನಾ ವತ್ತರೇಗೆ ನಮ್ಮಪ್ಪನ್ನ ಬೈಕಂದು ಚಾಕಣದ ಥರ ಹುರುಕ ತಿನ್ನೋಳು. ‘ನಿನ್ನ ಅಬ್ಬರ ಅಡಗಾ, ನಿನ್ನ ಸೊಲ್ಲಡಗ, ಸನ್ನೇಸಿನನ ಆಟುಗಳ್ಳ, ತ್ವಾಟಕೋಗಿ ಒಂದು ಕಡ್ಡಿ ಎತ್ತಾಕಕುಲ್ಲ, ದನೀನ ಸಗಣಿ ಗಂಜು ಬಾಚಕುಲ್ಲ’ ಅಂತ ತಿವಿಯೋಳು. ಇದನ್ನ ಕೇಳನಾರದೇ ನಮ್ಮಪ್ಪ ಕಡದು ಹೊಂಟೋಯ್ತಿದ್ದ. ಈ ಬೋಗುಳದ ಚೀನಿ ರೂಪವ ಡೀಪುಸೀಕಿಗೆ ಕೊಟ್ಟರೆ ರಾಜಕಾರಣಿಗಳನ್ನ ಹಂಗೇ ಮಂಡ್ಯಾದ ಕ್ಲಾಸಿಕ್ ಸ್ಟೈಲಲ್ಲಿ ಬೋದು ಕೆಡಗ್ತದೆ ಕಯ್ಯಾ’ ಅಂತ ವಿದ್ವತ್‌ಪೂರ್ಣ ಮಾಹಿತಿ ಕೊಟ್ಟರು.

‘ಅಂದ್ರೆ ಮಂಡ್ಯ- ಚೀನೀ ಭಾಷೆ ಭಟ್ಟಿ ಇಳಿಸಿದ ಮಂಚೀ ಭಾಷೇಲಿ ತಾರಾಮಾರ ಚಾಟಿ ಬೀಸಿ ಕೆಡಗ್ತದೆ. ಬೋಗುಳ ಅರ್ಥಾಗದೆ ಎಲ್ಲಾರೂ ಅಮಿಕ್ಕಂದು ಸುಮ್ಮಗಾಯ್ತರೆ ಅಂತೀರಾ?’ ಅಂತಂದೆ. ತುರೇಮಣೆ ಹೂಕಂದರು.

‘ಡೀಪ್‌ಸೀಕಿಗೆ ಕನ್ನಡದಗೇನು ಹೇಳಬೈದ್ಲಾ?’ ಯಂಟಪ್ಪಣ್ಣ ಕೇಳಿತು.

‘ಡೀಪ್‌ಸೀಕು ತಳದಗಂಟಾ ಅಳ್ಳಾಡಿಸಿ ಸೋಸೋದ್ರಿಂದ ಪಾತಾಳಜರಡಿ ಅನ್ನಬೋದು’ ಅಂತ ಎಐ ಜ್ಞಾನೋದಯ ಮಾಡಿಸಿದರು.

ಸಂಗತ

ಗುರುವಿನ ಪ್ರೀತಿ ಪಡೆಯುವ ತನಕ...

ಶಿಕ್ಷಕ– ವಿದ್ಯಾರ್ಥಿಯ ನಡುವಿನ ಉತ್ತಮ ಬಾಂಧವ್ಯವು ವಿದ್ಯಾರ್ಥಿ ಶೈಕ್ಷಣಿಕವಾಗಿ ಸಕ್ರಿಯವಾಗುವಂತೆ ಮಾಡಿ, ಶೈಕ್ಷಣಿಕ ಸಾಧನೆ ಉತ್ತಮಗೊಳ್ಳಲು ನೆರವಾಗುತ್ತದೆ

• ಎಚ್.ಬಿ.ಚಂದ್ರಶೇಖರ್

ವಿವಿಧ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಶಿಕ್ಷಕರು ಸಂಗ್ರಹಿಸಿ ಆನ್‌ಲೈನ್‌ನಲ್ಲಿ ಅಳವಡಿಸುವುದು, ಮಕ್ಕಳಿಗೆ ವಿವಿಧ ಸೌಲಭ್ಯಗಳನ್ನು ಕಲ್ಪಿಸುವಂತಹ ಆಡಳಿತಾತ್ಮಕ ಕಾರ್ಯಗಳ ಭರಾಟೆ ಶಾಲೆಗಳಲ್ಲಿ ಸ್ವಲ್ಪ ಹೆಚ್ಚೇ ಎನಿಸುವಂತೆ ಇರುತ್ತದೆ. ಇದರ ನಡುವೆ ಶಿಕ್ಷಕರು ತಮ್ಮ ದೈನಂದಿನ ಬೋಧನೆ- ಕಲಿಕಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೈಗೊಂಡ ನವೀನ ಪ್ರಯತ್ನ, ಬೋಧನಾ ಅನುಭವಗಳನ್ನು ಹಂಚಿಕೊಳ್ಳಲು ಹೆಚ್ಚಿನ ವೇದಿಕೆಗಳು ಇರುವುದಿಲ್ಲ. ಅವರ ಬೋಧನಾ ಅನುಭವಗಳಿಗೆ ಕಿವಿಯಾಗುವವರು ದೊರೆತಾಗ ಹೆಚ್ಚಿನ ಶಿಕ್ಷಕರು ಬಹಳ ಸಂತಸದಿಂದ ವಿವರಿಸಲು ಮುಂದಾಗುತ್ತಾರೆ.

ಇತ್ತೀಚಿನ ನನ್ನ ಶಾಲಾ ಭೇಟಿಯಲ್ಲಿ ಕೆಲವು ಶಿಕ್ಷಕರು ಹಂಚಿಕೊಂಡ ಅನುಭವಗಳು ವಿಶೇಷ ಎನಿಸಿದವು. ಒಬ್ಬ ಶಿಕ್ಷಕಿ ತಮ್ಮ ಅನುಭವ ಹಂಚಿಕೊಳ್ಳಲು ಮುಂದಾಗುತ್ತಿದ್ದಂತೆ, ಅವರ ಹಿಂದಿನ ಸಾಲಿನಲ್ಲಿ ಕುಳಿತಿದ್ದ ಮೂರ್ನಾಲ್ಕು ಮಂದಿ ಶಿಕ್ಷಕಿಯರು ಪೈಪೋಟಿಗೆ ಬಿದ್ದವರಂತೆ ಅವರ ಸಹೋದ್ಯೋಗಿ ಕೈಗೊಂಡ ಶೈಕ್ಷಣಿಕ ಪ್ರಯತ್ನಗಳ ಕುರಿತು ಉತ್ಸಾಹದಿಂದ ವಿವರಿಸಿದರು. ಅಷ್ಟೇ ಅಲ್ಲ, ಅವರ ಕುರಿತಾಗಿ ಮೆಚ್ಚುಗೆಯ ಮಳೆಯನ್ನೇ ಸುರಿಸಿದರು.

ಈ ಶಿಕ್ಷಕಿ ಅವರ ತರಗತಿಯ ಎಲ್ಲಾ ಮಕ್ಕಳನ್ನು ಚಿನ್ನ, ರನ್ನ, ಮುದ್ದು, ಬಂಗಾರ ಎಂದೆಲ್ಲ ಬಹಳ ಪ್ರೀತಿ, ಅಕ್ಕರೆಯಿಂದ ಮಾತನಾಡಿಸುತ್ತಾರೆ. ಇದರ ಜೊತೆಗೆ ಮಕ್ಕಳಿಗೆ ಕನ್ನಡ, ಇಂಗ್ಲಿಷ್ ಭಾಷೆಯಲ್ಲಿ ಅಕ್ಷರ, ಪದಗಳನ್ನು ಓದಲು, ಬರೆಯಲು ತಾಳ್ಮೆಯಿಂದ ಹಾಗೂ ಸಂತೋಷದಿಂದ ಕಲಿಸುತ್ತಿದ್ದಾರೆ. ಅವರ ತರಗತಿಯ 25 ಮಕ್ಕಳಲ್ಲಿ 10 ಮಕ್ಕಳು ಅಕ್ಷರಗಳನ್ನು ಬಹಳ ಅಂದವಾಗಿ, ತಪ್ಪಿಲ್ಲದೇ ಬರೆಯುತ್ತಾರೆ. ವಿದ್ಯಾರ್ಥಿಗಳು ಅಂದವಾಗಿ ಬರೆದಾಗ ಬರೀ ‘ಗುಡ್’ ಎಂದು ಬರೆಯುವುದು ಅಥವಾ ಸ್ಟಾರ್ ಕೊಡುವುದನ್ನಷ್ಟೇ ಅವರು ಮಾಡುವುದಿಲ್ಲ. ಜಾಣೆ, ಜಾಣಮರಿ ಎಂದೆಲ್ಲ ಬರೆದು ಸಹಿ ಹಾಕುತ್ತಾರೆ. ಕಷ್ಟಪಟ್ಟು ಓದುವುದನ್ನು ಕಲಿಯುತ್ತಿರುವ ಮಕ್ಕಳು ತಮ್ಮ ಬಗ್ಗೆ ಬರೆದ ಈ ಮೆಚ್ಚುಗೆಯ ಬರಹವನ್ನು ಆಸಕ್ತಿಯಿಂದ ಓದುವ ಪ್ರಯತ್ನ ಮಾಡಿ, ಸಂತಸಗೊಳ್ಳುತ್ತಾರೆ. ಲಿಖಿತವಾಗಿ ಪ್ರಶಂಸಿಸುವುದನ್ನು ಓದುವ ಚಟುವಟಿಕೆಯಾಗಿಯೂ ಶಿಕ್ಷಕಿ ಮಾರ್ಪಡಿಸಿದ್ದಾರೆ.

ಶಿಕ್ಷಕಿಯು ಮಕ್ಕಳೆಡೆಗೆ ತೋರುತ್ತಿರುವ ಪ್ರೀತಿ ಹಾಗೂ ಆತ್ಮೀಯತೆ ಬೆರೆತ ಒಡನಾಟವು ತರಗತಿಯ ಎಲ್ಲಾ ಮಕ್ಕಳಿಗೆ ಆಪ್ಯಾಯಮಾನವಾಗಿವೆ. ನಿವೃತ್ತಿಗೆ ಬರೀ ಮೂರು ವರ್ಷ ಬಾಕಿ ಇರುವ ಶಿಕ್ಷಕಿಯು ಉತ್ಸಾಹದ ಕಾರಂಜಿಯಂತೆ ತರಗತಿಯಲ್ಲಿ ತೊಡಗಿಕೊಳ್ಳುತ್ತಾರೆ. ಈ ಬಗ್ಗೆ ಸಹ ಅವರ ಸಹೋದ್ಯೋಗಿಗಳು ಮೆಚ್ಚುಗೆಯ ಮಾತನಾಡಿದರು.

ಈ ಶಾಲೆಯಲ್ಲಿ ರಾಜ್ಯದ ವಿವಿಧೆಡೆಗಳಿಂದ ವಲಸೆ ಬಂದ ಕುಟುಂಬಗಳ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮಕ್ಕಳು ಊರಿನಲ್ಲಿ ಜಾತ್ರೆ, ಅನಾರೋಗ್ಯದಂತಹ ಕಾರಣಗಳಿಂದ ಶಾಲೆಗೆ ಆಗಾಗ್ಗೆ ಗೈರುಹಾಜರಾಗುವುದು ಸಹಜ. ಆದರೆ ಶಾಲೆಯ ಕೆಲವು ಆಸಕ್ತ ಶಿಕ್ಷಕರು ತೋರುವ ಪ್ರೀತಿಯ ಕಾರಣದಿಂದ, ಮಕ್ಕಳು ತಮಗೆ ಅನಾರೋಗ್ಯ ಇದ್ದಾಗಲೂ ಶಾಲೆಗೆ ಹೋಗುವುದಾಗಿ ಪೋಷಕರ ಬಳಿ ಹಟ ಹಿಡಿಯುತ್ತಾರೆ.

ಶಿಕ್ಷಕರು ಶಾಲೆಯಲ್ಲಿ ತನ್ನ ಇರವನ್ನು ಪ್ರೀತಿ, ಒತ್ತಾಸೆಯಿಂದ ಬಯಸುತ್ತಾರೆ ಹಾಗೂ ತಾನು ಕಲಿಯಲು ಅವರು ತಾಳ್ಮೆಯಿಂದ ಸಹಾಯ ಮಾಡುತ್ತಾರೆ ಎಂಬ ಎರಡು ಅಂಶಗಳು ಶಾಲೆಗೆ ತಪ್ಪದೇ ಬರಲು ಹಾಗೂ ಕಲಿಕೆಯಲ್ಲಿ ತೊಡಗಲು ವಿದ್ಯಾರ್ಥಿಗೆ ಸಹಾಯ ಮಾಡುತ್ತವೆ. ಪೋಷಕರ ಒತ್ತಾಯದಿಂದ ಶಾಲೆಗೆ ಬರುವ ಮಕ್ಕಳ ಮನಃಸ್ಥಿತಿಯನ್ನು ಶಿಕ್ಷಕರು ತಮ್ಮ ಪ್ರೀತಿ, ಉತ್ಸಾಹ, ಆಸಕ್ತಿಯಿಂದ ಬದಲಿಸಿದಲ್ಲಿ ತರಗತಿಯಲ್ಲೊಂದು ಚೇತೋಹಾರಿ ವಾತಾವರಣ ಸೃಷ್ಟಿಯಾಗುತ್ತದೆ. ‘ಬೋಧಿಸುವುದು ನನ್ನ ಕಾಯಕ, ನಾನು ನನ್ನ ಕೆಲಸ ಮಾಡುತ್ತೇನೆ’ ಎಂಬ ನಿರ್ಭಾವುಕ ಧೋರಣೆಯುಳ್ಳ ಶಿಕ್ಷಕರ ತರಗತಿಗಳು ನೀರಸವಾಗಿ ಇರುತ್ತವೆ.

ತಮ್ಮ ವೃತ್ತಿಯ ಬಗ್ಗೆ ಪ್ರೀತಿ, ಆಸಕ್ತಿಯುಳ್ಳ ಶಿಕ್ಷಕರು ಉತ್ಸಾಹ, ಶಕ್ತಿ, ಲವಲವಿಕೆಯನ್ನು ತಮ್ಮೊಳಗೆ ತುಂಬಿಕೊಂಡಿರುತ್ತಾರೆ. ಆತ್ಮೀಯತೆಯಿಂದ ಮಕ್ಕಳೊಂದಿಗೆ ಒಡನಾಡುವುದು ಹಾಗೂ ತಾಳ್ಮೆಯಿಂದ ಕಲಿಸುವ ಗುಣದಿಂದ ತಮ್ಮ ತರಗತಿಯಲ್ಲೊಂದು ಚೈತನ್ಯದಾಯಕ ವಾತಾವರಣವನ್ನು ಸೃಷ್ಟಿಸುತ್ತಾರೆ.

ಒಂದು ತರಗತಿಯಲ್ಲಿ ಇರುವ ವಾತಾವರಣ ಹಾಗೂ ಮಕ್ಕಳಲ್ಲಿ ನೆಲೆಯಾಗಿರುವ ಆಸಕ್ತಿ, ಉತ್ಸಾಹವನ್ನು ಗಮನಿಸಿದರೆ, ಆ ತರಗತಿಯ ಶಿಕ್ಷಕರು ಹೇಗಿದ್ದಾರೆ ಮತ್ತು ಅವರು ಕಲಿಕೆಯ ಪ್ರಕ್ರಿಯೆಯಲ್ಲಿ ತಮ್ಮ ವಿದ್ಯಾರ್ಥಿಗಳನ್ನು ಹೇಗೆ ತೊಡಗಿಸಿಕೊಂಡಿದ್ದಾರೆ ಎಂಬುದನ್ನು ನಾವು ಖಚಿತವಾಗಿ ಊಹಿಸಬಹುದು.

ಅನೇಕ ಸಂಶೋಧನಾ ಅಧ್ಯಯನಗಳು ಕಂಡುಕೊಂಡಂತೆ, ಶಿಕ್ಷಕ-ವಿದ್ಯಾರ್ಥಿಗಳ ನಡುವಿನ ಉತ್ತಮ ಬಾಂಧವ್ಯವು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಮಾಡುತ್ತದೆ. ಜೊತೆಗೆ ಅವರ ಶೈಕ್ಷಣಿಕ ಸಾಧನೆಯನ್ನು ಉತ್ತಮಪಡಿಸಿಕೊಳ್ಳಲು ನೆರವಾಗುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯುವುದನ್ನು ತಪ್ಪಿಸುವುದಲ್ಲದೆ ಅವರಲ್ಲಿನ ಅಶಿಸ್ತಿನ ಸಮಸ್ಯೆಯನ್ನು ಕಡಿಮೆ ಮಾಡುತ್ತದೆ. ಈ ಕಾರಣದಿಂದ, ಶಿಕ್ಷಕರು ಮಕ್ಕಳೊಂದಿಗೆ ಉತ್ತಮ ಬಾಂಧವ್ಯ ಹೊಂದುವುದರ ಜೊತೆಗೆ ತಾಳ್ಮೆಯಿಂದ ಕಲಿಸಿದಲ್ಲಿ ಶೈಕ್ಷಣಿಕ ಗುಣಮಟ್ಟದ ಹೆಚ್ಚಳ ಖಾತರಿಯಾಗುತ್ತದೆ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಚಿನ್ನ, ಬೆಳ್ಳಿ ದರ ಏರಿಕೆಗೆ ಕಡಿವಾಣವಿರಲಿ

ಭಾರತವು ಜಗತ್ತಿನಲ್ಲಿ ಅತಿಹೆಚ್ಚು ಚಿನ್ನ ಹೊಂದಿರುವ ದೇಶಗಳಲ್ಲಿ ಒಂದು. ಎಲ್ಲಾ ವರ್ಗದ ಜನ ಆಸೆಪಟ್ಟು ಖರೀದಿಸುವ ವಸ್ತುಗಳಲ್ಲಿ ಬಂಗಾರ ಪ್ರಮುಖವಾಗಿದೆ. ಮಧ್ಯಮ ವರ್ಗದ ಜನ ಪೈಸೆ ಪೈಸೆ ಕೂಡಿಟ್ಟು ಚಿನ್ನ ಕೊಳ್ಳುವುದಕ್ಕೆ ಆದ್ಯತೆ ನೀಡುತ್ತಾರೆ. ಹಣದ ಸಮಸ್ಯೆ ಬಂದಾಗ ಚಿನ್ನ ಅಡವಿಟ್ಟು ಅಥವಾ ಅದನ್ನು ಮಾರಿಯಾದರೂ ಹಣ ಪಡೆದುಕೊಳ್ಳಬಹುದು ಎಂಬುದು ಮಧ್ಯಮ ವರ್ಗದವರ ಉದ್ದೇಶವಾಗಿರುತ್ತದೆ. ಹೀಗಾಗಿಯೇ ಇಂದು ಚಿನ್ನ ಪ್ರಮುಖ ಲೋಹವಷ್ಟೇ ಅಲ್ಲ ಆಪತ್ಕಾಲದ ಬಂಧುವಿನಂತೆಯೂ ಗುರುತಿಸಿಕೊಂಡಿದೆ.

ಆದರೆ ಚಿನ್ನ ಇತ್ತೀಚಿನ ದಿನಗಳಲ್ಲಿ ಯಾರೂ ಊಹಿಸದ ರೀತಿಯಲ್ಲಿ ತನ್ನ ಬೆಲೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಬಂಗಾರಪ್ರಿಯರಿಗೆ ಆಘಾತದ ಮೇಲೆ ಆಘಾತ ನೀಡುತ್ತಿದೆ. ಅದರಲ್ಲೂ ಈ ಜನವರಿಯಿಂದ ಮೇವರೆಗೂ ಮದುವೆ ಸಮಾರಂಭಗಳು ಇದ್ದು, ಈ ಸಂದರ್ಭದಲ್ಲಿ ಚಿನ್ನಾಭರಣಗಳ ಬೆಲೆ ಹೆಚ್ಚಾಗುತ್ತಿರುವುದು ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಬೆಳ್ಳಿ ಕೂಡ ಪೂಜನೀಯ ಲೋಹವಾಗಿ ಬಳಕೆಯಲ್ಲಿದೆ. ಕಾಲ್ಗೆಜ್ಜೆ, ಆಭರಣಗಳು, ಪೂಜಾ ಸಾಮಗ್ರಿಯಂತಹ ಬೆಳ್ಳಿಯ ವಸ್ತುಗಳನ್ನು ಗ್ರಾಹಕರು ದಿನನಿತ್ಯದ ಬಳಕೆಗಾಗಿ ಖರೀದಿಸುತ್ತಾರೆ. ಇಂತಹ ಬೆಳ್ಳಿ ಕೂಡ ಚಿನ್ನದ ಹಿಂದೆಯೇ ತನ್ನ ಬೆಲೆಯನ್ನು ಭರ್ಜರಿಯಾಗಿಯೇ ಏರಿಸಿಕೊಂಡಿದ್ದು, ಅದು ಸಹ ನಾಗಾಲೋಟದಿಂದ ಓಡುತ್ತಿದೆ. ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಚಿನ್ನ ಮತ್ತು ಬೆಳ್ಳಿಯ ದರಗಳಿಗೆ ಕಡಿವಾಣ ಹಾಕಿ, ಬಡ ಹಾಗೂ ಮಧ್ಯಮ ವರ್ಗದ ಜನರ ಕೈಗೆಟಕುವ ರೀತಿಯಲ್ಲಿ ದರಗಳಲ್ಲಿ ಸ್ಥಿರತೆಯನ್ನು ಕಾಪಾಡುವುದು ಅವಶ್ಯ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಕುಂಭಮೇಳ: ದ್ವಂದ್ವ ನಿಲುವು

‘ಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಿದರೆ ಈ ದೇಶದ ಬಡತನ ನಿವಾರಣೆಯಾಗುವುದೇ?’ ಎಂದು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇತ್ತೀಚೆಗೆ ಎತ್ತಿದ ಪ್ರಶ್ನೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಸಿ ಹೇಳಿಕೆ ನೀಡಿದರು. ಆದರೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇದೇ ಕುಂಭಮೇಳದಲ್ಲಿ ಪುಣ್ಯಸ್ನಾನ ಮಾಡಿಬಂದಿದ್ದಾರೆ. ಈಗ ಅವರದೇ ಪಕ್ಷದ ನೇತೃತ್ವದ ಆಡಳಿತವಿರುವ ಕರ್ನಾಟಕ ಸರ್ಕಾರದಿಂದ ಟಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಸೋಮವಾರದಿಂದ ಮೂರು ದಿನಗಳ ಕುಂಭಮೇಳ ಆರಂಭವಾಗಿದೆ. ಈ ಪ್ರಕ್ರಿಯೆಗಳಿಂದ, ಆ ಪಕ್ಷದ ನಾಯಕರಲ್ಲಿ ಇಂತಹ ವಿಚಾರಗಳ ಬಗ್ಗೆ ಇರುವ ದ್ವಂದ್ವ ಸ್ಪಷ್ಟವಾಗುತ್ತದೆ.

ಧಾರ್ಮಿಕ ಆಚರಣೆ ಮತ್ತು ನಂಬಿಕೆ ಅವರವರ ವೈಯಕ್ತಿಕ ವಿಚಾರ. ಒಬ್ಬರ ಧಾರ್ಮಿಕ ನಂಬಿಕೆಯು ಮೂಢನಂಬಿಕೆಯಾಗಿಲ್ಲದೆ, ಇನ್ನೊಬ್ಬರಿಗೆ ಮಾನಸಿಕವಾಗಿಯಾಗಲೀ ದೈಹಿಕವಾಗಿಯಾಗಲೀ ತೊಂದರೆಯನ್ನು ಉಂಟು ಮಾಡದಿದ್ದಲ್ಲಿ ಅಂತಹ ಆಚರಣೆಯನ್ನು ನಿಂದಿಸುವುದು ಸರಿಯಲ್ಲ. ಜನರ ಮನಸ್ಸಿಗೆ ಇಂತಹ ಆಚರಣೆಗಳಿಂದ ನೆಮ್ಮದಿ ಸಿಗುವಂತಿದ್ದರೆ ಅದನ್ನು ವಿರೋಧಿಸುವುದೇಕೆ?

ಕೆ.ಎಂ.ನಾಗರಾಜು, ಮೈಸೂರು

ಪ್ಯಾರಾಚೂಟ್ ತರಬೇತಿ: ಮುನ್ನೆಚ್ಚರಿಕೆ ಅಗತ್ಯ

ಉತ್ತರಪ್ರದೇಶದ ಆಗ್ರಾದಲ್ಲಿ ಅಧಿಕಾರಿಗಳಿಗೆ ಪ್ಯಾರಾಚೂಟ್ ತರಬೇತಿ ಕೊಡುವ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಪ್ಯಾರಾಚೂಟ್ ತೆರೆದುಕೊಳ್ಳದೆ ಹೊಸನಗರ ಮೂಲದ ವಾಯುಪಡೆ ಅಧಿಕಾರಿ ಜಿ.ಎಸ್.ಮಂಜುನಾಥ್ ಅವರು ಸಾವಿಗೀಡಾಗಿರುವುದು ದುರದೃಷ್ಟಕರ. ವಿಮಾನ ಅಥವಾ ಹೆಲಿಕಾಪ್ಟರ್ ಹೊರಡುವ ಮುನ್ನ ಪ್ಯಾರಾಚೂಟ್ ಅನ್ನು ಬಿಚ್ಚಿ, ಅದು ಸರಿಯಾಗಿ ಇದೆಯೇ ಎಂದು ಪರಿಶೀಲಿಸಿ ನಂತರ ಹೊರಡುವ ವ್ಯವಸ್ಥೆ ಇರಬೇಕು. ಅನ್ಯಾಯವಾಗಿ ಒಬ್ಬ ಪರಿಣತ ಅಧಿಕಾರಿಯನ್ನು ಕಳೆದುಕೊಂಡಿದ್ದೇವೆ. ಇನ್ನು ಮುಂದಾದರೂ ಇಂತಹ ತಿಳಿಗೇಡಿತನವನ್ನು ತೋರದೆ, ಪ್ರತಿ ಬಾರಿಯೂ ಪ್ಯಾರಾಚೂಟ್‌ಗಳನ್ನು ಸರಿಯಾಗಿ ಪರಿಶೀಲಿಸಿಯೇ ಅಧಿಕಾರಿಗಳನ್ನು ಹೆಲಿಕಾಪ್ಟರ್‌ಗೆ ಹತ್ತಿಸಬೇಕು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಅನ್ಯಾರ್ಥ ಧ್ವನಿಸುವ ರಾಜಕೀಯಪ್ರೇರಿತ ಹೇಳಿಕೆ

‘ಕಾವಿ ಧರಿಸಿದ ಸನ್ಯಾಸಿಗಳು ಪ್ರಸಂಗ ಬಂದರೆ ಧರ್ಮ ಮತ್ತು ದೇಶದ ರಕ್ಷಣೆಗಾಗಿ ಸೈನಿಕರಾಗಲು ಸಿದ್ಧರಾಗಬೇಕು’ ಎಂದು ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿರುವುದು (ಪ್ರ.ವಾ., ಫೆ. 7) ಅಸ್ಪಷ್ಟವೂ ಗೊಂದಲಕಾರಿಯೂ ಅನಗತ್ಯವೂ ಅನ್ಯಾರ್ಥವನ್ನು ಧ್ವನಿಸುವ ಮತ್ತು ರಾಜಕೀಯ ಪ್ರೇರಿತವೂ ಆದ ಮಾತುಗಳಾಗಿ ಕಂಡುಬರುತ್ತಿದೆ. ಇಂದು ನಮ್ಮ ಧರ್ಮ ಮತ್ತು ದೇಶಕ್ಕೆ ಅಂತಹ ಯಾವ ಪ್ರಸಂಗ ಬಂದಿದೆ ಮತ್ತು ಕಾವಿಧಾರಿ ಸನ್ಯಾಸಿಗಳು ಎಂತಹ ಸೈನಿಕರಾಗಬೇಕಾಗಿದೆ ಎಂದು ಸೂಕ್ಷ್ಮವಾಗಿ ಯೋಚಿಸತೊಡಗಿದಾಗ ಮತ್ತಷ್ಟು ಗೊಂದಲಗಳು ಕಾಣಿಸಿಕೊಳ್ಳುತ್ತಾ ಹೋಗುತ್ತವೆ. ಏಕೆಂದರೆ ವಾಸ್ತವದಲ್ಲಿ ಇಂದು ನಮ್ಮ ಧರ್ಮಗಳು ತಮ್ಮ ಆರಂಭದ ಉದ್ದೇಶಗಳಾದ ಸಾಮೂಹಿಕ ಕಾಳಜಿಯುಳ್ಳ ನೈಜ ಮಾನವೀಯ ಸಂವೇದನೆಗಳಿಗಿಂತ ಭಿನ್ನವಾಗಿ ಧಾಂಬಿಕ ಆಚರಣೆಗಳೇ ಪ್ರಧಾನವಾಗುತ್ತಾ ಮೂಲತತ್ವಗಳೇ ಮಸುಕಾಗುವಂತಹ ಸ್ಥಿತಿಗೆ ತಲುಪಿವೆ. ದಯಾಮೂಲ, ಸಮಷ್ಟಿ ಹಿತವನ್ನು ಕಾಪಾಡುವ, ಸೌಹಾರ್ದ ಸಂಸ್ಕೃತಿಯ ಚಿಂತನೆಗಳಿಗೆ ಬದಲಾಗಿ ದ್ವೇಷೋತ್ಪಾದನೆ, ಪ್ರಚೋದನಾತ್ಮಕ ಭಾವೋನ್ಮಾದ ವಿಜೃಂಭಿಸುತ್ತಿವೆ.

‘ದೇಶ ಉಳಿದರೆ ಮಾತ್ರ ನಮ್ಮ ಧರ್ಮಗಳು ಮತ್ತು ಸಂಸ್ಕೃತಿ ಉಳಿಯುತ್ತವೆ’ ಎಂಬ ಸ್ವಾಮೀಜಿ ಮಾತಿನಲ್ಲಿ ಧರ್ಮಕ್ಕಾಗಿ ದೇಶ ಉಳಿಯಬೇಕಾಗಿದೆ, ಧರ್ಮ ಮೊದಲು ನಂತರ ದೇಶ, ಧರ್ಮ ಮತ್ತು ಸಂಸ್ಕೃತಿಯ ‘ಜೊತೆಗೆ’ ದೇಶ ಎಂಬ ಅಂತರಾರ್ಥವು ಹೊರಹೊಮ್ಮುವುದು ಕಂಡುಬರುತ್ತಿದೆ. ಅಂದರೆ ನಮ್ಮಲ್ಲಿ ಇನ್ನೂ ಸಂವಿಧಾನಾತ್ಮಕ ‘ರಾಷ್ಟ್ರೀಯ ಪರಿಕಲ್ಪನೆ’ಯೇ ಮೂಡಿಲ್ಲವೇನೊ ಎಂಬ ಸಂದೇಹ ಬರುತ್ತದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಘನತೆಯ ಸಾವಿನ ಹಕ್ಕು

ಕರ್ನಾಟಕದ ದಿಟ್ಟ ಹೆಜ್ಜೆ

ಘನತೆಯಿಂದ ಸಾಯುವ ರೋಗಿಗಳ ಹಕ್ಕಿನ ಬಗ್ಗೆ 'ಸುಪ್ರೀಂ' ನೀಡಿರುವ ತೀರ್ಪಿನ ಅನುಸಾರ, ಗುಣಪಡಿಸಲಾಗದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಘನತೆಯಿಂದ ಸಾಯುವ ಅವಕಾಶ ನೀಡಿ ಕರ್ನಾಟಕ ಆರೋಗ್ಯ ಇಲಾಖೆ ಆದೇಶಿಸಿದೆ. ಮಾರಣಾಂತಿಕ ಕಾಯಿಲೆಗಳಿಂದ ನರಳುತ್ತಿರುವವರಿಗೆ ಇದರಿಂದ ಅನುಕೂಲವಾಗಲಿದೆ ಎಂದು ಸರ್ಕಾರ ಹೇಳಿದೆ. ಭವಿಷ್ಯದಲ್ಲಿ ತನಗೆ ಎಂಥ ಚಿಕಿತ್ಸೆ ಸಿಗಬೇಕು ಎಂದು ರೋಗಿ ದಾಖಲಿಸುವ ಮರಣ ಇಚ್ಛೆಯ ಉಯಿಲನ್ನೂ ರಾಜ್ಯದಲ್ಲಿ ಜಾರಿಗೆ ತರಲು ಇಲಾಖೆ ಮುಂದಾಗಿದೆ. ಮಾನವ ಹಕ್ಕುಗಳ ದೃಷ್ಟಿಯಿಂದಲೂ ಈ ಆದೇಶ ಮುಖ್ಯವೆನಿಸಿದೆ

• ಬಿ.ವಿ.ಶ್ರೀನಾಥ್



ಸಂವಿಧಾನದ 21ನೇ ವಿಧಿಯು ಘನತೆಯಿಂದ ಜೀವಿಸುವ ಹಕ್ಕನ್ನು ನೀಡಿರುವಂತೆಯೇ ಘನತೆಯಿಂದ ಸಾಯುವ ಹಕ್ಕನ್ನೂ ಒಳಗೊಂಡಿದೆ ಎಂದು ಸುಪ್ರೀಂ ಕೋರ್ಟ್ 2023ರ ಜನವರಿ 24ರಂದು ನೀಡಿದ ತೀರ್ಪಿನಲ್ಲಿ ಸ್ಪಷ್ಟಪಡಿಸಿತ್ತು. ಬದುಕುವ ಸಾಧ್ಯತೆಯೇ ಇಲ್ಲದೆ ಗುಣಪಡಿಸಲಾಗದ ಕಾಯಿಲೆಯಿಂದ ನರಳುತ್ತಿರುವವರಿಗೆ, ನಿರಂತರ ಕೋಮಾದಲ್ಲಿ ಇರುವವರಿಗೆ, ಜೀವರಕ್ಷಕ ಉಪಕರಣಗಳ ನೆರವಿನಿಂದ ಉಸಿರಾಡುತ್ತಿರುವವರಿಗೆ ಜೀವರಕ್ಷಕ ಉಪಕರಣಗಳ ನೆರವು ನಿಲ್ಲಿಸುವ ಅಥವಾ ನೀಡಲಾಗುತ್ತಿರುವ ಔಷಧಗಳನ್ನು ನಿಲ್ಲಿಸುವ (ವಿತ್‌ಡ್ರಾವಲ್ ಆಫ್ ಲೈಫ್ ಸಸ್ಟೈನಿಂಗ್ ಥೆರಪಿ– ಡಬ್ಲ್ಯುಎಲ್ಎಸ್‌ಟಿ) ಮೂಲಕ ಘನತೆಯಿಂದ ಸಾಯುವ ಹಕ್ಕನ್ನು ಸಾಧ್ಯವಾಗಿಸುವ ಬಗ್ಗೆ ನಿರ್ದೇಶನ ನೀಡಿತ್ತು. ಜತೆಗೆ, ಸುಪ್ರೀಂ ಕೋರ್ಟ್ ಅದಕ್ಕಾಗಿ ಮರಣ ಇಚ್ಛೆಯ ಉಯಿಲು (ಅಡ್ವಾನ್ಸ್ ಮೆಡಿಕಲ್ ಡೈರೆಕ್ಟಿವ್– ಎಎಂಡಿ) ಅನ್ನು ಕೂಡ ರೂಪಿಸಿತ್ತು.

ಪ್ರಕ್ರಿಯೆ ಹೇಗೆ?: ಸುಪ್ರೀಂ ಕೋರ್ಟ್‌ನ ನಿರ್ದೇಶನದ ಪ್ರಕಾರ, ಡಬ್ಲ್ಯುಎಲ್ಎಸ್‌ಟಿಗೆ ರೋಗಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಅನುಮತಿ ಬೇಕು. ಜತೆಗೆ, ರೋಗಿಗೆ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಯು ಪ್ರಾಥಮಿಕ ಮತ್ತು ದ್ವಿತೀಯ ವೈದ್ಯಕೀಯ ಮಂಡಳಿಗಳನ್ನು ರಚಿಸಬೇಕು. ಎರಡೂ ಮಂಡಳಿಗಳಲ್ಲಿ ತಲಾ ಮೂವರು ನೋಂದಾಯಿತ ವೈದ್ಯಕೀಯ ವೃತ್ತಿಪರರು (ವೈದ್ಯರು) ಇರಬೇಕು. ದ್ವಿತೀಯ ವೈದ್ಯಕೀಯ ಮಂಡಳಿಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ನಾಮ ನಿರ್ದೇಶನ ಮಾಡಿರುವ ಒಬ್ಬ ವೈದ್ಯರು ಇರಬೇಕು.

ನಿರ್ದಿಷ್ಟ ಪ್ರಾಧಿಕಾರದಿಂದ ಅನುಮತಿ ಪಡೆದಿರುವ ನರಶಾಸ್ತ್ರಜ್ಞ, ನರಚಿಕಿತ್ಸಾತಜ್ಞ, ಶಸ್ತ್ರಚಿಕಿತ್ಸಕ, ಅರವಳಿಕೆ ತಜ್ಞ, ತುರ್ತು ಚಿಕಿತ್ಸಾತಜ್ಞರಲ್ಲಿ ಯಾರಾದರೂ ಒಬ್ಬರನ್ನು ರೋಗಿಯ ಮಿದುಳು ನಿಷ್ಕ್ರಿಯ ಎಂದು ನಿರ್ಧರಿಸುವ ವೈದ್ಯಕೀಯ ಪರಿಣತರ ಮಂಡಳಿಗೆ ನೇಮಿಸುವ ಸಂಬಂಧ ಆರೋಗ್ಯ ಇಲಾಖೆಯು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಪತ್ರ ಬರೆದಿದೆ. ನೇಮಕಗೊಂಡವರು ದ್ವಿತೀಯ ವೈದ್ಯಕೀಯ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾರೆ. ರೋಗಿಯ ಹತ್ತಿರದ ಸಂಬಂಧಿ ಅಥವಾ ಮರಣ ಇಚ್ಛೆಯ ಉಯಿಲಿನಲ್ಲಿ ಹೆಸರಿಸಿರುವ ವ್ಯಕ್ತಿಯ ಅನುಮತಿ ಪಡೆದ ನಂತರ ಎರಡು ವೈದ್ಯಕೀಯ ಮಂಡಳಿಗಳು ಡಬ್ಲ್ಯುಎಲ್ಎಸ್‌ಟಿ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತವೆ.

ಗುಣಪಡಿಸಲಾಗದ ಕಾಯಿಲೆಯಿಂದ ನರಳುತ್ತಿದ್ದು, ಬದುಕುವ ಸಾಧ್ಯತೆಯೇ ಇಲ್ಲದವರು, ನಿರಂತರ ಕೋಮಾದಲ್ಲಿ ಇರುವವರು, ಸಾಯುವ ಸ್ಥಿತಿಯಲ್ಲಿರುವ ಅಥವಾ ಜೀವಚ್ಛವದಂತೆ ಇರುವ ವ್ಯಕ್ತಿಗೆ ನೀಡುವ ಚಿಕಿತ್ಸೆಯನ್ನು ನಿಲ್ಲಿಸುವ ಅಥವಾ ಜೀವರಕ್ಷಕ ಉಪಕರಣಗಳ ನೆರವಿನಿಂದ ಉಸಿರಾಡುತ್ತಿರುವವರಿಗೆ ಅಳವಡಿಸಿರುವ ಉಪಕರಣಗಳನ್ನು ತೆಗೆಯುವ ಬಗ್ಗೆ ತೀರ್ಮಾನಿಸುವ ಜವಾಬ್ದಾರಿ ಎರಡೂ ವೈದ್ಯಕೀಯ ಮಂಡಳಿಗಳದ್ದು.

ರೋಗಿಯ ಕಾಯಿಲೆಯ ಸ್ಥಿತಿ, ಲಭ್ಯವಿರುವ ವೈದ್ಯಕೀಯ ಚಿಕಿತ್ಸೆ, ಪರ್ಯಾಯ ಚಿಕಿತ್ಸಾ ಕ್ರಮಗಳು, ಉಳಿದ ಅವಧಿಗೆ ನೀಡಬಹುದಾದ ಅಥವಾ ನೀಡಲಾಗದ ಚಿಕಿತ್ಸೆಯ ಪರಿಣಾಮಗಳನ್ನು ಪ್ರಾಥಮಿಕ ವೈದ್ಯಕೀಯ ಮಂಡಳಿಯು ರೋಗಿ/ಅವರ ಪ್ರತಿನಿಧಿಗೆ ವಿವರಿಸಬೇಕು. ಪ್ರಾಥಮಿಕ ವೈದ್ಯಕೀಯ ಮಂಡಳಿಯ ನಿರ್ಧಾರವನ್ನು ದ್ವಿತೀಯ ವೈದ್ಯಕೀಯ ಮಂಡಳಿಯು ದೃಢೀಕರಿಸುತ್ತದೆ.

ಮಂಡಳಿಗಳ ನಿರ್ಧಾರದ ಪ್ರತಿಗಳನ್ನು, (ನಿರ್ಧಾರ ಕಾರ್ಯಗತಗೊಳಿಸುವ ಮುನ್ನವೇ) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯಕ್ಕೆ (ಜೆಎಂಎಫ್‌ಸಿ) ಸಲ್ಲಿಸಬೇಕು. ಜೆಎಂಎಫ್‌ಸಿಯು ಆ ಪ್ರತಿಗಳನ್ನು ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಕಳಿಸುತ್ತದೆ. ಅಲ್ಲಿ ದಾಖಲೆಯನ್ನು ಸಂಗ್ರಹಿಸಿಡಲಾಗುತ್ತದೆ.

ಆಧಾರ: ಪಿಟಿಐ, ಆರೋಗ್ಯ ಇಲಾಖೆಯ ಆದೇಶ, ಬಿಬಿಸಿ

ಮರಣ ಇಚ್ಛೆಯ ಉಯಿಲು ಎಂದರೇನು?

ಭವಿಷ್ಯದಲ್ಲಿ ತನಗೆ ಎಂಥ ವೈದ್ಯಕೀಯ ಚಿಕಿತ್ಸೆ ನೀಡಬೇಕು ಅಥವಾ ನೀಡಬಾರದು ಎನ್ನುವ ಬಗ್ಗೆ ರೋಗಿಯೊಬ್ಬರು ನೀಡುವ ನಿರ್ದೇಶನವೇ ಮರಣ ಇಚ್ಛೆಯ ಉಯಿಲು. ಭವಿಷ್ಯದಲ್ಲಿ ರೋಗಿಯು ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡರೆ, ಆತನ ಪರವಾಗಿ ನಿರ್ಧಾರ ತೆಗೆದುಕೊಳ್ಳಲು ಇಬ್ಬರು ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡಲೂ ಮರಣ ಇಚ್ಛೆಯ ಉಯಿಲಿನಲ್ಲಿ ಅವಕಾಶ ಇದೆ. ರೋಗಿಗೆ ಎಂಥ ಚಿಕಿತ್ಸೆ ನೀಡಬೇಕು ಅಥವಾ ನೀಡಬಾರದು ಎನ್ನುವುದನ್ನು ನಿರ್ಧರಿಸಲು ವೈದ್ಯರು, ರೋಗಿಗಳು ಮತ್ತು ಇತರ ಆರೋಗ್ಯ ರಕ್ಷಣಾ ಸಿಬ್ಬಂದಿಗೆ ಎಎಂಡಿ ನೆರವಾಗುತ್ತದೆ.

ಮಾನಸಿಕವಾಗಿ ಆರೋಗ್ಯವಂತನಾದ ಒಬ್ಬ ವಯಸ್ಕ ವ್ಯಕ್ತಿಯು ಮರಣ ಇಚ್ಛೆಯ ಉಯಿಲನ್ನು ದಾಖಲಿಸಬಹುದು. 18 ವರ್ಷ ತುಂಬಿದ ಯಾವುದೇ ವ್ಯಕ್ತಿ ಮರಣದ ಇಚ್ಛೆಯ ಉಯಿಲು ಸಿದ್ಧಪಡಿಸಿ, ಇಬ್ಬರು ಸಾಕ್ಷಿಗಳ ಸಮಕ್ಷಮದಲ್ಲಿ ಅದಕ್ಕೆ ಸಹಿ ಹಾಕಬೇಕು. ಅದನ್ನು ನೋಟರಿ ಇಲ್ಲವೇ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಣ ಮಾಡಬೇಕು. ನಂತರ ಅವರು ಅದನ್ನು ಸ್ಥಳೀಯ ಆಡಳಿತದಿಂದ ನೇಮಕವಾಗಿರುವ ಸಂಬಂಧಪಟ್ಟ (ಈ ಕಾರ್ಯಕ್ಕೆ ನಿಯೋಜಿತರಾಗಿರುವ) ಅಧಿಕಾರಿಗೆ ಕಳಿಸಬೇಕು. ವೈದ್ಯಕೀಯ ಸಂಸ್ಥೆಗಳಲ್ಲಿರುವ ಪುಸ್ತಕ/ಡಿಜಿಟಲ್ ರೂಪದಲ್ಲಿಯೂ ರೋಗಿಯ ಮರಣ ಇಚ್ಛೆಯ ಉಯಿಲನ್ನು ದಾಖಲಿಸಬಹುದು.

ಅರುಣಾ ಶಾನಭಾಗ್ ಪ್ರಕರಣ

ಘನತೆಯಿಂದ ಸಾಯುವ ಹಕ್ಕಿನ ಬಗ್ಗೆ ಭಾರತದಲ್ಲಿ ತೀವ್ರ ಚರ್ಚೆ ಏರ್ಪಟ್ಟು ಸುಪ್ರೀಂ ಕೋರ್ಟ್ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸುವಂತೆ ನಿರ್ದೇಶನ ನೀಡಲು ಕಾರಣವಾದದ್ದು ಅರುಣಾ ಶಾನಭಾಗ್ ಪ್ರಕರಣ.

ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಅರುಣಾ ಅವರು, ಮುಂಬೈನ ಕೆಇಎಂ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದರು. 1973ರ ನ.27ರಂದು ಅವರ ಮೇಲೆ ಆಸ್ಪತ್ರೆಯ ವಾರ್ಡ್ ಬಾಯ್ ಅತ್ಯಾಚಾರ ಎಸಗಿದ್ದ. ಈ ವೇಳೆ ಆತ ಅರುಣಾ ಅವರ ಕುತ್ತಿಗೆಗೆ ನಾಯಿ ಕಟ್ಟಿಹಾಕುವ ಚೈನ್ ಅನ್ನು ಬಿಗಿದಿದ್ದರಿಂದ ಅವರ ಮಿದುಳು ನಿಷ್ಕ್ರಿಯಗೊಂಡಿತ್ತು. ಮೂಗಿಗೆ ನಳಿಕೆ ಅಳವಡಿಸಿ ಅವರಿಗೆ ಆಹಾರ ಪೂರೈಸಲಾಗುತ್ತಿತ್ತು. ಜೀವಚ್ಛವದಂತೆ ಅವರು ಆಸ್ಪತ್ರೆಯಲ್ಲಿಯೇ 42 ವರ್ಷ ಕಳೆದರು.

ಅರುಣಾ ಅವರಿಗೆ ದಯಾಮರಣ ಕಲ್ಪಿಸುವಂತೆ ಅವರ ಪರವಾಗಿ ಪತ್ರಕರ್ತೆ ಪಿಂಕಿ ವಿರಾನೀ 2009ರಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಭಾರತದಲ್ಲಿ ಉದ್ದೇಶಪೂರ್ವಕವಾಗಿ ಹತ್ಯೆ ಮಾಡುವುದು ಅಪರಾಧ ಆದ್ದರಿಂದ ನೇರ ದಯಾಮರಣಕ್ಕೆ (ಸಾಯುವಂಥ ಔಷಧ ನೀಡುವುದು) ಅವಕಾಶ ನೀಡಲು ಕೋರ್ಟ್ ಒಪ್ಪಲಿಲ್ಲ. ಆದರೆ, ಗುಣಪಡಿಸಲಾಗದ ಕಾಯಿಲೆಗಳನ್ನು ಎದುರಿಸುತ್ತಿರುವಂಥ ಕೆಲವರ ವಿಚಾರದಲ್ಲಿ ಪರೋಕ್ಷ ದಯಾಮರಣ (ಔಷಧೋಪಚಾರ ನಿಲ್ಲಿಸುವುದು) ಪರಿಗಣಿಸಬಹುದು ಎಂದಿತ್ತು. ಕೊನೆಗೆ, ಅರುಣಾ ಅವರು 2015ರಲ್ಲಿ ಮೃತಪಟ್ಟಿದ್ದರು.

'ಗಾಯಗೊಂಡು ಜರ್ಜರಿತವಾದ ನನ್ನ ಹಕ್ಕಿ ಮರಿ ಕೊನೆಗೂ ಇಂದು ಹಾರಿಹೋಯಿತು. ಹಾರುವ ಮುನ್ನ ಅದು ಭಾರತಕ್ಕೆ ಪರೋಕ್ಷ ದಯಾಮರಣದ ಕಾನೂನು ನೀಡಿತು' ಎಂದು ಪಿಂಕಿ ವಿರಾನೀ ಅವರು ಅರುಣಾ ಸಾವಿಗೆ ಮಿಡಿದಿದ್ದರು.

ದುರುಪಯೋಗದ ಆತಂಕ

ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಕರ್ನಾಟಕ ಸರ್ಕಾರವು ಘನತೆಯಿಂದ ಸಾಯುವ ಹಕ್ಕನ್ನು ಕಲ್ಪಿಸಿರುವ ಬಗ್ಗೆ ಕೆಲವು ವಲಯಗಳಿಂದ ಆತಂಕವೂ ವ್ಯಕ್ತವಾಗಿದೆ. ಗಂಭೀರವಾದ ಕಾಯಿಲೆ ಇರುವವರು, ಹಲವು ರೀತಿಯ ಕಾಯಿಲೆಗಳಿಂದ ನೊಂದವರು ಅಥವಾ ಅವರ ಕುಟುಂಬಸ್ಥರು ದುರ್ಬಲ ಗಳಿಗೆಗಳಲ್ಲಿ ಕೆಟ್ಟ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿದೆ. ವೈದ್ಯರು ಅಥವಾ ಸಂಬಂಧಪಟ್ಟವರು ಹಣ ಮತ್ತು ಇತರೆ ಆಮಿಷಕ್ಕೊಳಗಾಗಿ ಸುಳ್ಳು ಪ್ರಮಾಣ ಪತ್ರ ನೀಡುವ ಸಾಧ್ಯತೆಯ ಬಗ್ಗೆಯೂ ಕೆಲವರು ಆತಂಕ ವ್ಯಕ್ತಪಡಿಸುತ್ತಾರೆ. ರೋಗಿ ಇನ್ನು ಬದುಕುವುದಿಲ್ಲ ಎಂದು ವೈದ್ಯರ ಹೇಳಿದ ನಂತರವೂ ಅನೇಕರು ಬದುಕುಳಿದಿರುವ ನಿದರ್ಶನಗಳಿರುವುದರಿಂದ ಎಷ್ಟೇ ಕಾಯಿಲೆ ಬಿದ್ದರೂ, ನೈಸರ್ಗಿಕವಾಗಿ ಸಾವು ಬರುವ ತನಕ ಮನುಷ್ಯ ಬದುಕಬೇಕು ಎನ್ನುವ ವಾದವೂ ಇದೆ.

ಉಯಿಲಿಗೆ ಕೇರಳ ಮಾದರಿ

ಜನರು ಮರಣದ ಇಚ್ಛೆಯ ಉಯಿಲನ್ನು ದಾಖಲಿಸಬಹುದು ಮತ್ತು ಕಠಿಣ ಮಾರ್ಗಸೂಚಿಗಳ ಅಡಿಯಲ್ಲಿ ಔಷಧೋಪಚಾರ ನಿಲ್ಲಿಸುವ ಮೂಲಕ ವ್ಯಕ್ತಿಯ ಸಾವಿಗೆ ಕಾರಣವಾಗುವಂಥ ಪರೋಕ್ಷ ದಯಾಮರಣವನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು 2018ರಲ್ಲಿ 'ಸುಪ್ರೀಂ' ತೀರ್ಪು ನೀಡಿತ್ತು.

ತೀರ್ಪಿನ ನಂತರವೂ ಮರಣ ಇಚ್ಛೆಯ ಉಯಿಲನ್ನು (ಎಎಂಡಿ) ಭಾರತೀಯರು ಗಂಭೀರವಾಗಿ ಪರಿಗಣಿಸಿಯೇ ಇಲ್ಲ.

ಈ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವೊಂದು ಕೇರಳದಲ್ಲಿ ಆರಂಭವಾಗಿದೆ. ಕೊಲ್ಲಂ ಜಿಲ್ಲೆಯ ಸರ್ಕಾರಿ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ.ಯಾದೇವ್ ಮತ್ತು ತಂಡವು ಮರಣ ಇಚ್ಛೆಯ ಉಯಿಲಿನ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ತ್ರಿಶ್ಶೂರ್‌ನ ನೋವು ಮತ್ತು ಉಪಶಾಮಕ ಆರೋಗ್ಯ ಕೇಂದ್ರದ 30 ಮಂದಿ ಮರಣ ಇಚ್ಛೆಯ ಉಯಿಲಿಗೆ ಸಹಿ ಮಾಡಿದ್ದಾರೆ.

ಮುಂಬೈನ ಸ್ತ್ರೀರೋಗ ತಜ್ಞರಾದ ಡಾ.ನಿಖಿಲ್ ದಾತಾರ್ ಎನ್ನುವವರು ಎರಡು ವರ್ಷಗಳ ಹಿಂದೆ ಮರಣ ಇಚ್ಛೆಯ ಉಯಿಲನ್ನು ಎಲ್ಲಿ ದಾಖಲಿಸಬೇಕು ಎಂದು ಹುಡುಕಿದಾಗ, ಮಹಾರಾಷ್ಟ್ರದಲ್ಲಿ ಅದಕ್ಕಾಗಿ ಒಬ್ಬ ಅಧಿಕಾರಿಯನ್ನೂ ನಿಯೋಜಿಸಲಾಗಿಲ್ಲ ಎನ್ನುವುದು ತಿಳಿಯಿತು. ದಾತಾರ್ ಅವರು ಕೋರ್ಟ್ ಮೆಟ್ಟಿಲೇರಿದರು. ಅದರ ಫಲವಾಗಿ ಮಹಾರಾಷ್ಟ್ರ ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ 400 ಅಧಿಕಾರಿಗಳನ್ನು ನೇಮಿಸಿತು. ಕಳೆದ ವರ್ಷ ಗೋವಾ ಸರ್ಕಾರವು ಮರಣ ಇಚ್ಛೆಯ ಉಯಿಲನ್ನು ಜಾರಿಗೊಳಿಸಿದೆ. ದೆಹಲಿಯ ಏಮ್ಸ್‌ನ ಡಾ.ಸುಷ್ಮಾ ಭಟ್ನಾಗರ್ ಅವರು ಇದರ ಬಗ್ಗೆ ಜಾಗೃತಿ ಮೂಡಿಸಲು ಸಂಸ್ಥೆಯಲ್ಲಿ ಒಂದು ಪ್ರತ್ಯೇಕ ವಿಭಾಗ ಆರಂಭಿಸುವುದಾಗಿ ತಿಳಿಸಿದ್ದಾರೆ.

ಈಗ ಕರ್ನಾಟಕದಲ್ಲಿಯೂ ಮರಣ ಇಚ್ಛೆಯ ಉಯಿಲು ದಾಖಲಿಸಲು ಸರ್ಕಾರ ಅವಕಾಶ ಕಲ್ಪಿಸಿದೆ.

ಯಾವ ದೇಶಗಳಲ್ಲಿ ಕಾನೂನುಬದ್ಧ?

ಘನತೆಯಿಂದ ಸಾಯುವ ಹಕ್ಕು, ನೇರ ಮತ್ತು ಪರೋಕ್ಷ ದಯಾಮರಣ ಇವುಗಳ ನಡುವೆ ಸೂಕ್ಷ್ಮ ವ್ಯತ್ಯಾಸಗಳಿವೆ. ಪ್ರಕ್ರಿಯೆಯಲ್ಲಿ ವ್ಯತ್ಯಾಸಗಳಿದ್ದರೂ ಇವುಗಳ ಅಂತಿಮ ಫಲಶ್ರುತಿ ಒಂದೇ. ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಇವು ಕಾನೂನುವಿರೋಧಿ ಆಗಿದ್ದರೂ, ಕೆಲವು ದೇಶಗಳಲ್ಲಿ ಇದನ್ನು ಕಾನೂನುಬದ್ಧಗೊಳಿಸಲಾಗಿದೆ. ಕೆನಡಾ, ಆಸ್ಟ್ರೇಲಿಯಾ, ಸ್ವಿಟ್ಜರ್ಲೆಂಡ್, ನೆದರ್ಲೆಂಡ್ಸ್, ಬೆಲ್ಜಿಯಂ, ನ್ಯೂಜಿಲೆಂಡ್, ಸ್ಪೇನ್, ಆಸ್ಟ್ರಿಯಾ, ಈಕ್ವೆಡಾರ್ ದೇಶಗಳಲ್ಲಿ ಇದು ಜಾರಿಯಲ್ಲಿದೆ. ಅಮೆರಿಕದ ಕ್ಯಾಲಿಫೋರ್ನಿಯಾ, ಕೊಲರಾಡೊ, ನ್ಯೂ ಮೆಕ್ಸಿಕೊ, ಮೊಂಟಾನಾ, ವಾಷಿಂಗ್ಟನ್, ಒರೆಗಾನ್ ಮುಂತಾದ ರಾಜ್ಯಗಳಲ್ಲಿಯೂ ಇದು ಕಾನೂನುಬದ್ಧವಾಗಿದೆ.

ಮಾರುತ ಡಬ್ಬಿಂಗ್ ಪೂರ್ಣ

ಎಸ್.ನಾರಾಯಣ್ ನಿರ್ದೇಶನದ, 'ದುನಿಯಾ' ವಿಜಯ್ ನಟನೆಯ 'ಮಾರುತ' ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿತ್ತು. ಇದೀಗ ಚಿತ್ರತಂಡ ಸಾಧುಕೋಕಿಲ ಅವರ ಲೂಪ್ ಸ್ಟುಡಿಯೊದಲ್ಲಿ ಚಿತ್ರದ ಡಬ್ಬಿಂಗ್ ಕೂಡಾ ಮುಗಿಸಿದೆ.

ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಈ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದು, 'ಪ್ರೇಮಂ ಪೂಜ್ಯಂ' ಸಿನಿಮಾ ಮೂಲಕ ನಾಯಕಿಯಾಗಿ ಚಂದನವನಕ್ಕೆ ಹೆಜ್ಜೆ ಇಟ್ಟ ನಟಿ ಬೃಂದಾ ಆಚಾರ್ಯ ನಾಯಕಿಯಾಗಿ ನಟಿಸಿದ್ದಾರೆ. 'ಮಾರುತ' ಚಿತ್ರವನ್ನು ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ಕೆ.ಮಂಜು ಹಾಗೂ ರಮೇಶ್ ಯಾದವ್ ನಿರ್ಮಾಣ ಮಾಡಿದ್ದಾರೆ. ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಧಾರವಾಡ, ಕೂಡಲ ಸಂಗಮ, ಸವದತ್ತಿ, ಬೆಳಗಾವಿ, ಗೋವಾ ಮುಂತಾದ ಕಡೆ ಚಿತ್ರದ ಚಿತ್ರೀಕರಣ ನಡೆದಿದ್ದು, ಪಿ.ಕೆ.ಎಚ್ ದಾಸ್ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಯಾದವ್ ಸಂಕಲನ, ವಿನೋದ್ ಹಾಗೂ ಅರ್ಜುನ್ ಸಾಹಸ ನಿರ್ದೇಶನ ಮತ್ತು ಮೋಹನ್ ಕುಮಾರ್, ಸಂತು ಅವರ ನೃತ್ಯ ನಿರ್ದೇಶನ ಚಿತ್ರಕ್ಕಿದೆ.

ಸಾಧುಕೋಕಿಲ, ನಿಶ್ವಿಕಾ ನಾಯ್ಡು, ರಂಗಾಯಣ ರಘು, ತಾರಾ ಅನುರಾಧ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಮಂಜು ಪಾವಗಡ, ಚಿತ್ರಾ ಶೆಣೈ ಮುಂತಾದವರು ತಾರಾಬಳಗದಲ್ಲಿದ್ದಾರೆ ಚಿತ್ರದ ವಿಶೇಷ ಪಾತ್ರದಲ್ಲಿ ನಟ ರವಿಚಂದ್ರನ್ ನಟಿಸಿದ್ದಾರೆ.



ದುನಿಯಾ ವಿಜಯ್

'ದೊಡ್ಮನೆ ಸೊಸೆ'ಯಾದ ರಾಗಶ್ರೀ

ಆಸ್ಕರ್ ಕೃಷ್ಣ ನಿರ್ದೇಶನದ, ತೇಜ್ ವಿನಯ್ ಎಸ್. ನಿರ್ಮಾಣದ 'ದೊಡ್ಮನೆ ಸೊಸೆ' ಸಿನಿಮಾದ ಮುಹೂರ್ತ ಇತ್ತೀಚೆಗೆ ನಡೆಯಿತು. ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರು ಚಿತ್ರಕ್ಕೆ ಕ್ಲ್ಯಾಪ್ ಮಾಡಿದರು.

ಮಾನ್ಯ ಸಿನಿ ಕ್ರಿಯೇಶನ್ಸ್ ಲಾಂಛನದಡಿಯಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ರಾಗಶ್ರೀ ನಟಿಸುತ್ತಿದ್ದಾರೆ. 'ಪ್ರಸ್ತುತ ಮಾರುಕಟ್ಟೆ ಉದ್ದೇಶದಿಂದಾಗಿ ಹಿಂಸೆ, ಕ್ರೌರ್ಯ ವಿಜೃಂಭಿಸುತ್ತಿರುವ ಕಾಲದಲ್ಲಿ ಸುಂದರವಾದ ಕುಟುಂಬ ಆಧಾರಿತ ಕಥೆ ತೆರೆಗೆ ಬರುವುದು ಅವಶ್ಯವಾಗಿದೆ. ಪುಟಣ್ಣ ಕಣಗಾಲ್, ದೊರೆ ಭಗವಾನ್, ರಾಜ್‌ಕುಮಾರ್ ಅವರ ಸಿನಿಮಾಗಳು ಯಾವ ಮೌಲ್ಯಗಳನ್ನು ಎತ್ತಿ ಹಿಡಿದಿತ್ತೋ ಅದೇ ಮೌಲ್ಯಗಳು ಈ ಸಿನಿಮಾದಲ್ಲಿ ಇವೆ' ಎಂದು ಗಿರೀಶ್ ಕಾಸರವಳ್ಳಿ ಹೇಳಿದರು.

'ಇದು ನನ್ನ ನಿರ್ದೇಶನದ ಏಳನೇ ಸಿನಿಮಾ. ನಮ್ಮ ಚಿತ್ರರಂಗಕ್ಕೆ ದೊಡ್ಮನೆ ಎಂದರೆ ಅಣ್ಣಾವ್ರ ಕುಟುಂಬ. ನಾನು ಅಣ್ಣಾವ್ರ ಕಟ್ಟಾ ಅಭಿಮಾನಿ. ಆದರೆ ಆ ಮನೆಗೂ ಚಿತ್ರದ ಕಥೆಗೂ ಯಾವುದೇ ಸಂಬಂಧ ಇಲ್ಲ. ಎಲ್ಲಾ ಊರಿನಲ್ಲಿ ದೊಡ್ಮನೆ ಇರುತ್ತದೆ. ಒಂದು ಊರಿನಲ್ಲಿ ನಡೆಯುವ ಕಾಲ್ಪನಿಕ ಕಥೆ ಇದಾಗಿದೆ' ಎಂದರು ಕೃಷ್ಣ. ಸುಂದರ್‌ರಾಜ್, ಸಚ್ಚಿನ್ ಪುರೋಹಿತ್, ವಂಶಿ, ಶಂಕರಭಟ್, ಲಯಕೋಕಿಲ, ಮುರಳಿ ಕೊಟ್ಟೂರು, ಮಮತಾಶ್ರೀ ಮುಂತಾದವರು ತಾರಾಬಳಗದಲ್ಲಿದ್ದಾರೆ. ನಿತೀಶ್ ವಿ. ಸಂಗೀತ, ಮೈಸೂರು ಸೋಮು ಛಾಯಾಚಿತ್ರಗ್ರಹಣ, ಕೌಶಿಕ್ ಕಿರಣ್ ಸಂಕಲನ ಚಿತ್ರಕ್ಕಿದೆ. ಫೆಬ್ರುವರಿ ಮೂರನೇ ವಾರದಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಮೇ ತಿಂಗಳಲ್ಲಿ ಚಿತ್ರ ತೆರೆಗೆ ಬರಲಿದೆ.

ರಾಗಶ್ರೀ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

'ಹೋರಾಟಕ್ಕೆ ಸಂದ ಗೆಲುವು'

ಕರಿಬಸಮ್ಮ

ದಾವಣಗೆರೆ: 'ಗುಣಪಡಿಸಲಾಗದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಘನತೆಯಿಂದ ಮರಣ ಹೊಂದುವ ಹಕ್ಕು ಕರ್ನಾಟಕದಲ್ಲಿ ಜಾರಿಗೆ ಬಂದಿರುವುದು ದಯಾಮರಣದ ಅನುಷ್ಠಾನ ಕೋರಿ ನಿರಂತರವಾಗಿ ನಡೆಸಿದ ಹೋರಾಟದ ಫಲ' ಎಂದು ನಿವೃತ್ತ ಶಿಕ್ಷಕಿ, 85 ವರ್ಷ ವಯಸ್ಸಿನ ಎಚ್.ಬಿ. ಕರಿಬಸಮ್ಮ ಹೇಳಿದರು.

'ಕರುಳು ಕ್ಯಾನ್ಸರ್‌ನಿಂದ ಬಳಲುತ್ತಿದ್ದ ನಾನು 24 ವರ್ಷಗಳಿಂದ ದಯಾಮರಣ ಅಥವಾ ಇಚ್ಛಾಮರಣ ಕೋರಿ ಹೋರಾಟ ನಡೆಸುತ್ತಿದ್ದೇನೆ. ಕೋರ್ಟ್ ಮೆಟ್ಟಿಲು ಏರಿ ಕಾನೂನಾತ್ಮಕ ಹಕ್ಕು ಪಡೆಯಲು ಪ್ರಯತ್ನಿಸಿದ್ದೇನೆ. ದಯಾಮರಣಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿರುವುದು ಹರ್ಷವುಂಟು ಮಾಡಿದೆ. ಕಾನೂನಾತ್ಮಕವಾಗಿ ದಯಾ ಮರಣ ಪಡೆದ ಮೊದಲ ವ್ಯಕ್ತಿ ನಾನಾಗಬೇಕು ಎಂಬ ಬಯಕೆ ಇದೆ. ಈ ಅವಕಾಶಕ್ಕೆ ಕಾಯುತ್ತಿದ್ದೇನೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಹಲವು ಬಾರಿ ಸಾವಿನ ಮನೆಯ ಬಾಗಿಲು ಬಡಿದಿದ್ದೇನೆ. ಆತ್ಮಹತ್ಯೆ ಮಾಡಿಕೊಳ್ಳಲು ಮನಸು ಒಪ್ಪಲಿಲ್ಲ. ಮರಣವೂ ಘನತೆಯಿಂದ ಇರಬೇಕು ಎಂಬುದು ನನ್ನ ಬಲವಾದ ನಂಬಿಕೆ. ಹಲವು ದೇಶಗಳಲ್ಲಿರುವ ದಯಾಮರಣದ ಅವಕಾಶ ಭಾರತದಲ್ಲಿ ಏಕಿಲ್ಲ ಎಂಬ ಪ್ರಶ್ನೆ ಕಾಡಿತ್ತು' ಎಂದರು.

'ದೇಶದಲ್ಲಿ ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ವೃದ್ಧರ ಸಂಖ್ಯೆ ದೊಡ್ಡದಾಗಿದೆ. ಘನತೆಯಿಂದ ಸಾಯುವ ಅವಕಾಶ ಸಿಗದೇ ಅವರೂ ನನ್ನಂತೆ ನರಳುತ್ತಿದ್ದಾರೆ. ದಯಾಮರಣ ಕಾನೂನು ಜಾರಿಗಾಗಿ ಹೋರಾಟ ಆರಂಭಿಸಿದಾಗ ಎಲ್ಲರೂ ಮೂದಲಿಸಿದ್ದರು. ಕುಟುಂಬದವರು, ಸಂಬಂಧಿಕರು ದೂರವಾದರು. 16 ವರ್ಷಗಳಿಂದ ವೃದ್ಧಾಶ್ರಮದಲ್ಲಿ ನೆಲಸಿ ಹೋರಾಟ ಮುಂದುವರಿಸಿದೆ' ಎಂದು ನೆನಪಿಸಿಕೊಂಡರು.

ಗುಂಡಣ್ಣ

ಕಟ್ಟಬೇಕು ಕರುಣೆಯ ಗೋಡೆ

ನುಡಿ ಬೆಳಗು 129

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಾವು ಹಂಪಿಗೆ ಹೋಗ್ತೀವಿ. ಅಲ್ಲಿ ಕಲ್ಲಿನಿಂದ ಸಂಗೀತ ಹೊರಡಿಸುವ ಮಂಟಪ ಮಾಡಿದ್ದಾರೆ. ಕಲ್ಲಿನ ರಥ ಮಾಡಿದ್ದಾರೆ. ನಮ್ಮ ಕೆಲಸ ಏನು? ಅವುಗಳನ್ನು ನೋಡಿ ಸಂತೋಷ ಪಡೋದು ಅಷ್ಟೆ. ಯಾಕೆಂದರೆ ನಮಗೆ ಕಲ್ಲಿನ ರಥ ಮಾಡಲು ಆಗಲ್ಲ. ಸಂಗೀತದ ಮಂಟಪ ನಿರ್ಮಿಸಲೂ ಆಗುವುದಿಲ್ಲ. ನಾವು ಅಲ್ಲಿಗೆ ಹೋಗಿದ್ದು ಯಾತ್ರಿಕರಾಗಿ ಎನ್ನುವುದು ನಮಗೆ ನೆನಪಿರಬೇಕು. ಆದರೆ, ನಾವು ಏನು ಮಾಡುತ್ತೀವಿ? ಅಲ್ಲಿನ ಕಲ್ಲಿನ ಮೇಲೆ ನಮ್ಮ ಹೆಸರು ಬರೆದು ಬರ್ತೀವಿ. ಚಿತ್ರ ಬಿಡಿಸುತ್ತೀವಿ. ಅದಕ್ಕೆ ಆ ಕಲ್ಲು ಹೇಳತೈತಿ. 'ನಮ್ಮನ್ನು ಕೆತ್ತಿದ ಶಿಲ್ಪಿಯೇ ತನ್ನ ಹೆಸರು ಬರೆದುಕೊಂಡಿಲ್ಲ. ನೀವು ಬರೀತಿದ್ದೀರಲ್ಲ. ನೀವು ಹಂಪಿಯಲ್ಲಿ ಇರೋಕೆ ಯೋಗ್ಯರಲ್ಲ. ನಿಮ್ಮ ಕೊಂಪೆಯಲ್ಲಿಯೇ ಇರಲು ಯೋಗ್ಯರು' ಎಂದು. ಹಂಪಿ ಇರೋದು ಕೆಡಸಾಕಲ್ಲ, ನೋಡಿ ಸಂತೋಷಪಡೋಕೆ. ಅದನ್ನು ಅರಿಯಬೇಕು ಮನುಷ್ಯ. ಹಾಗೆಯೇ ಈ ಜಗತ್ತು ಎನ್ನುವುದು ಒಂದು ಯಾತ್ರಾ ಸ್ಥಳ. ನಾವು ಇಲ್ಲಿಗೆ ಯಾಕೆ ಬಂದೀವಿ ಅಂದರೆ ಇಲ್ಲಿರೋದನ್ನು ನೋಡಿ ಸಂತೋಷ ಪಡುವುದಕ್ಕೇ ಹೊರತು ಕೆಡಿಸುವುದಕ್ಕಲ್ಲ.

ಒಂದು ಗುಬ್ಬಿ ಇರತೈತಿ. ಅದು ಅಲ್ಲೊಂದು ಇಲ್ಲೊಂದು ಬಿದ್ದಿರುವ ಹುಲ್ಲಿನ ಕಡ್ಡಿ ತೆಗೆದುಕೊಂಡು ತನ್ನ ಮನೆ ಕಟ್ಟಿಕೊಳ್ಳುತೈತಿ. ಅದೇನು ಆರ್ಕಿಟೆಕ್ಟ್ ಎಂಜಿನಿಯರಿಂಗ್ ಓದ್ಯೆತೇನು? ನಾವು ಪಿಲ್ಲರ್ ಹಾಕಿ ಕಟ್ಟಿದ ಕಟ್ಟಡಗಳು ಬಿದ್ದು ಹೋಗ್ತವ. ಆದರೆ ಹುಲ್ಲಿನಿಂದ ಗುಬ್ಬಿ ಕಟ್ಟಿದ ಗೂಡು ಬೀಳೋದಿಲ್ಲ. ಈ ಜಗತ್ತಿನಲ್ಲಿ ಕಟ್ಟುವಿಕೆ ಬಹಳ ಮುಖ್ಯವಾದದ್ದು. ಮನೆಯಲ್ಲಿ ತಾಯಂದಿರು ಹರಿದ ಬಟ್ಟೆಗಳನ್ನು ತೆಗೆದುಕೊಂಡು ಕೌದಿ ಹೊಲಿಯುತ್ತಾರೆ. ಆ ಕೌದಿ ಹೊದ್ದು ಮಲಗಿದರೆ ಏನು ಸುಖವಾಗಿ ನಿದ್ದೆ ಬರತೈತಿ! ಯಾವುದು ವೇಸ್ಟ್ ಇತ್ತೋ ಅದರಲ್ಲಿ ಬೆಸ್ಟ್ ತೆಗೆದಾಳೆ ತಾಯಿ. ಈ ಜಗತ್ತಿನಲ್ಲಿ ಏನನ್ನೂ ಕೆಡಿಸಬೇಡಿ. ಏನಾದರೂ ಚೊಲೋ ಮಾಡೋದು ಸಾಧ್ಯವಿದ್ದರೆ ಅದನ್ನು ಮಾಡಿ.

ಒಂದು ಸರೋವರ ಐತಿ. ಅದರಲ್ಲಿ ಕುರಿ ನೀರು ಕುಡಿಯುವುದನ್ನು ನೋಡಿ. ಅದು ನೀರಿನಲ್ಲಿ ಕಾಲು ಹಾಕುವುದಿಲ್ಲ. ಕಾಲು ಮಡಚಿ ನೀರಿಗೆ ತಾಗದಂತೆ ಇಟ್ಟುಕೊಂಡು ನೀರು ಕುಡಿತೈತಿ. ಆಕಳು ಕೂಡಾ ನೀರನ್ನು ಹಾಳು ಮಾಡದೆ ಕುಡೀತೈತಿ. ಎಮ್ಮಿ ಬಂತು ನೋಡಿ ಕೆರೆಯೊಳಗೆ ಹೋಗಿ ಬಿದ್ದು ಗುದ್ದಾಡಿ ತಾನೂ ಕುಡಿಯಲಿಲ್ಲ. ಬೇರೆಯವರೂ ಕುಡಿಯದಂತೆ ಮಾಡಿಬಿಡತೈತಿ. ನಮ್ಮೂರು ಅನ್ನೋದು ಕೂಡಾ ಸ್ವಚ್ಛ ಸರೋವರ. ಅದನ್ನು ಕೆಡಿಸಬಾರದು. ನಾವೂ ಬದುಕ ಬೇಕು. ಬೇರೆಯವರಿಗೂ ಬದುಕಲು ಅನುಕೂಲ ಮಾಡಿಕೊಡಬೇಕು. ಇದು ಜೀವನ.

ಇರಾನ್ ದೇಶದೊಳಗೆ ಒಬ್ಬವ ಒಂದು ಸಣ್ಣ ಗೋಡೆ ಕಟ್ಟಿ ಅದಕ್ಕೆ 'ಕರುಣೆಯ ಗೋಡೆ' ಎಂದು ಹೆಸರಿಟ್ಟ. ಅದರ ಮೇಲೆ 'ನಿಮಗೆ ಬೇಡವಾದದ್ದನ್ನು ತಂದು ಇಲ್ಲಿಡಿ. ನಿಮಗೆ ಬೇಕಾದ್ದನ್ನು ತೆಗೆದುಕೊಂಡು ಹೋಗಿ' ಎಂದು ಬರೆದ. ಅದು ಕರುಣೆಯ ಗೋಡೆ. ನಾವು ಕಟ್ಟುವ ಗೋಡೆ ಅಣ್ಣತಮ್ಮಂದಿರನ್ನು ಬೇರೆ ಮಾಡುತ್ತದೆ. ಅವ ಕಟ್ಟಿದ ಗೋಡೆ ಇಡೀ ಜಗತ್ತಿನಲ್ಲಿ ಪಸರಿಸಿ ಎಲ್ಲ ಕಡೆ ಈಗ ಅದನ್ನು ಅನುಸರಿಸುತ್ತಿದ್ದಾರೆ. ಇದು ಕಟ್ಟುವಿಕೆ. ನಾವು ಬೇರ್ಪಡಿಸುವ ಗೋಡೆಗಳನ್ನು ಕಟ್ಟಬಾರದು. ಕರುಣೆಯ ಗೋಡೆಗಳನ್ನು ಕಟ್ಟಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 11, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಚತುರ್ದಶಿ ಗಂ. 18-56 ನಕ್ಷತ್ರ: ಪುಷ್ಯ ಗಂ. 18-34 ಯೋಗ: ಆಯುಷ್ಮಾನ್ ಗಂ. 09-06 ಕರಣ: ಗರ ಗಂ. 06-53, ಮಕರ ಮಾಸದ 28 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 2.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-58 ಸೂರ್ಯಾಸ್ತ: 06-31
ಮುಸ್ಲಿಂ ದಿನಾಂಕ: 12 ಶಬನ್
ಅದೃಷ್ಟ ಸಂಖ್ಯೆ: 11, 10

ಮೇಷ: ದೇಹಕ್ಕೆ ಅವಶ್ಯಕತೆ ಇರುವಷ್ಟು ನಿದ್ದೆಯನ್ನು, ವಿಶ್ರಾಂತಿಯನ್ನು ಮಾಡುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಬರಬೇಕಿದ್ದ ಹಣ ಹಿಂತಿರುಗಿ ಬಂದು ಕೈ ಸೇರಲಿದೆ. ಕುಲದೇವರ ಸೇವೆಯಿಂದ ಫಲ ಲಭಿಸಲಿದೆ.

ವೃಷಭ: ವಾದ ಮಾಡುವ ಅಭ್ಯಾಸದಿಂದಾಗಿ ಸಂಬಂಧಗಳನ್ನು ಹಾಳುಮಾಡಿಕೊಳ್ಳುವ ಲಕ್ಷಣಗಳು ಕಂಡುಬರಲಿವೆ. ವೈಯಕ್ತಿಕ ಜೀವನದ ಸಮಸ್ಯೆಗಳು ಬಗೆಹರಿದು ನೆಮ್ಮದಿ ಮೂಡಲಿದೆ. ಗುತ್ತಿಗೆದಾರರಿಗೆ ಸಂಪಾದನೆ ಕೈಸೇರಲಿದೆ.

ಮಿಥುನ: ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ಷೇರು ಖರೀದಿಯ ಯೋಜನೆಗೆ ಮುಂದಾಗಿ. ಅಪರೂಪದ ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ.

ಕರ್ಕಾಟಕ: ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ. ಮನೋಭಿಲಾಷೆ ಈಡೇರುವುದು. ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಬಹುಮಾನ ಪಡೆಯುವಿರಿ. ಪರಿಹಾರ ಧನ ಕೈ ಸೇರಲಿದೆ.

ಸಿಂಹ: ತಂದೆ–ತಾಯಿಯ ಆರೋಗ್ಯವು ಸುಧಾರಿಸಿ, ನೆಮ್ಮದಿಯ ವಾತಾವರಣ ಮೂಡಲಿದೆ. ಅದೃಷ್ಟವನ್ನು ಪರೀಕ್ಷಿಸಿಕೊಳ್ಳಬಹುದು. ಜಮೀನಿನ ಕೆಲಸಗಳು ಯಾವುದೇ ತೊಂದರೆ ಇಲ್ಲದೆ ನೆರವೇರಲಿವೆ.

ಕನ್ಯಾ: ಅಮೂಲ್ಯ ವಸ್ತುವಿನ ಕಣ್ಮರೆ ಮನಸ್ಸಿಗೆ ದೊಡ್ಡ ಗಾಯವನ್ನು ಉಂಟುಮಾಡುತ್ತದೆ. ಆಹಾರ ಪದಾರ್ಥದ ಬೆಳೆಯನ್ನು ಬೆಳೆದ ಕೃಷಿಕರಿಗೆ ಉತ್ತಮ ಲಾಭ ಸಿಗುವುದು.

ತುಲಾ: ಪ್ರೀತಿಯ ವಿಷಯವನ್ನು ಸಂಬಂಧಪಟ್ಟವರ ಮುಂದಿಡುವುದು ಲೇಸು, ನಾಳೆ ಎನ್ನುವುದು ಈ ವಿಷಯದಲ್ಲಿ ಸೂಕ್ತವಲ್ಲ. ಆತಂಕ ತುಂಬಿದ ಕೆಲಸ ಕಾರ್ಯದಲ್ಲಿರುವವರ ಮನೆಯಲ್ಲಿ ನೆಮ್ಮದಿ ತುಂಬುವುದು.

ವೃಶ್ಚಿಕ: ಅಭಿವೃದ್ಧಿಗೆ ಪೂರಕವಾದ ಹೊಸ ಅವಕಾಶಗಳ ಬಾಗಿಲು ತೆರೆಯಲಿದೆ. ನಿಯೋಜಿತ ಕೆಲಸಗಳನ್ನು ಅಕ್ಕರೆಯಿಂದ ಒಪ್ಪಿಕೊಳ್ಳಿ. ಹೊಸ ಕೆಲಸ ಸಿಗಲಿದೆ. ಮಕ್ಕಳ ವಿಷಯದಲ್ಲಿ ಅಸಡ್ಡೆ ತೋರಿಸಬೇಡಿ.

ಧನು: ರಾಜಕಾರಣಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ಸುದಿನ. ಮಗನ ಇಂದಿನ ಅನಿರೀಕ್ಷಿತ ಬದಲಾವಣೆ ಅಚ್ಚರಿ ತರುತ್ತದೆ. ಅನಗತ್ಯ ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ.

ಮಕರ: ಕಷ್ಟದ ದಿನ ಎನಿಸಬಹುದು. ಇದೇ ನಾಳಿನ ಸುಖಕ್ಕೆ ನಾಂದಿಯಾಗಲಿದೆ. ತಾಳ್ಮೆ ಈ ದಿನದ ಜಯದ ಮಂತ್ರವಾಗಿರುತ್ತದೆ. ಸ್ನೇಹ ಸಂಬಂಧಗಳು ಗಟ್ಟಿಯಾಗಿ ಸಹಕಾರಗಳು ನಿರೀಕ್ಷೆಗೆ ಮೀರಿ ಬರಲಿವೆ.

ಕುಂಭ: ಕೋರ್ಟಿನ ಕೆಲಸಗಳನ್ನು ತ್ವರಿತಗತಿಯಲ್ಲಿ ನಡೆಸಿ ಕೊಡುವಂತೆ ವಕೀಲರಲ್ಲಿ ಕೇಳಿಕೊಳ್ಳುವುದು ಉತ್ತಮ. ವಿದ್ಯಾಭ್ಯಾಸದಲ್ಲಿ ಉದಾಸೀನ ತೋರುತ್ತಿದ್ದ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಆಸಕ್ತಿ ಉಂಟಾಗಲಿದೆ.

ಮೀನ: ಹೊಸ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಯಾವಕಾಶವನ್ನು ತೆಗೆದುಕೊಂಡು ಯೋಚಿಸಿ ನಿರ್ಧರಿಸಿ. ಕುಟುಂಬದ ಸದಸ್ಯರಿಂದ ಒಂದು ಶುಭ ಸುದ್ದಿ ಕೇಳುವಿರಿ. ಹಣದ ಚಿಂತೆ ಇರುವುದಿಲ್ಲ.

ಪದಬಂಧ 5950

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಿಶ್ಚಿತವಾದ ಉದ್ದೇಶ (4)
3.ಈತ ಸಾಕ್ಷಾತ್ಕಾರ ಹೊಂದಿದವನು (4)
5.ಕಪಿ ಇಲ್ಲಿದೆ (4)
7.ನಕ್ಷೆ ಅಥವಾ ಚಿತ್ರವನ್ನು ಹೀಗೆ ಹೇಳುವರು (3)
8.ಬೇರೆ ಬೇರೆ ದೇಶಗಳಿಗೆ ಪರಸ್ಪರ ಸಂಬಂಧಿಸಿದ್ದು (5)
11.ಬಲಾಢ್ಯ ಇಲ್ಲಿದ್ದಾನೆ (3)
12.ನಿಸ್ಸಾರವಾದುದನ್ನು ಹೀಗೆನ್ನಿ (4)
15.ಪಾಂಡವರಿಗೂ ಕೌರವರಿಗೂ ಯುದ್ಧ ನಡೆದ ಸ್ಥಳ (4)
16.ಅನಿರೀಕ್ಷಿತವಾಗಿ ತಗಲಿದ ಪೆಟ್ಟು (4)

ಮೇಲಿಂದ ಕೆಳಕ್ಕೆ
1.ನಿರ್ಣಯ ಅಥವಾ ಠರಾವು (4)
2.ವಸ್ತುಗಳನ್ನು ಸಂಗ್ರಹಿಸುವ ಮಳಿಗೆ (3)
3.ಕಡಿಮೆ ಬೆಲೆ (2)
4.ಸರಸದ ವಿರುದ್ಧ ಪದ (3)
6.ಉಚಿತವೆಂದರೂ ಇದು ನಿಶ್ಚಿತ! (3)
7.ಗೆಲುವು ಈ ರೀತಿ ಬಂದಿದೆ (3)
8.ಹೆಬ್ಬೆರಳು ಇಲ್ಲಿದೆ (3)
9.ಕರವನ್ನು ಕೊನೆಗಿಟ್ಟು ಸಿಡಿಸಿದ ತುಂತುರು (3)
10.ಮಂದಿಯ ಒಳಿತು (4)
11.ಜಟಾಕಾ ಬಂಡಿಯಂತಹ ಜೀವನ (3)
13.ಸರಸದ ಮಾತುಕತೆ (3)
14.ತಾಪತ್ರಯದಲ್ಲಿ ಬರೆದ ಓಲೆ (2)



5949ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮರವು 4.ವಾಸನೆ
5.ಅಂಗಾರಕ 6.ವಾಚ್ಯಾತೀತ
7.ನರ 9.ಗವಿ
13.ಮನ್ವಂತರ 14.ಅಪವ್ಯಯ
15.ವಂಚನೆ 16.ಮಹಂತ

ಮೇಲಿಂದ ಕೆಳಕ್ಕೆ:
1.ಜವಾಹಿರಿ 2.ಮನೆವಾಳ್ತನ
3.ಬರಕತ್ತು 5.ಅಂತರಂಗ
8.ರಸಮಯ 10.ವಿಚಾರವಂತ
11.ಪರಂಪರೆ 12.ಕುಂಟುನೆಪ

ಸುಡೊಕು 6335

4				2		6		1
		2			5		9	
	4		3		1		7	
1	3	7		8		4	6	5
			4		7		1	
	2		5				3	
6		9				5		4
	5				2		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6334 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

‘ಜ್ಞಾನ, ಪರೀಕ್ಷೆ ಬೇರೆ ವಿಷಯಗಳು’

ನವದೆಹಲಿಯಲ್ಲಿ ‘ಪರೀಕ್ಷಾ ಪೇ ಚರ್ಚಾ’ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಸೋಮವಾರ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ‘ಜ್ಞಾನ ಮತ್ತು ಪರೀಕ್ಷೆಗಳು ಎರಡು ವಿಭಿನ್ನ ವಿಷಯಗಳು. ಜೀವನದಲ್ಲಿ ಪರೀಕ್ಷೆಯೇ ಎಲ್ಲ ಅಲ್ಲ; ಅದೇ ಅಂತ್ಯವಲ್ಲ. ಪರೀಕ್ಷೆಯನ್ನು ಒಂದು ಸವಾಲಾಗಿ ಸ್ವೀಕರಿಸಿ. ಸಮಯವನ್ನು ಸರಿಯಾಗಿ ಬಳಸಿಕೊಳ್ಳುವ ಮೂಲಕ ಜೀವನವನ್ನು ಉತ್ತಮಪಡಿಸಿಕೊಳ್ಳಿ, ಸಕಾರಾತ್ಮಕ ಚಿಂತನೆಗಳ ಮೂಲಕ ಯಶಸ್ಸು ಗಳಿಸಿ. ತಂತ್ರಜ್ಞಾನವನ್ನು ಜಾಣತನದಿಂದ ಉಪಯೋಗಿಸಿ’ ಎಂದು ಪ್ರಧಾನಿ ನರೇಂದ್ರ ಮೋದಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಅವರು 8ನೇ ಆವೃತ್ತಿಯ ‘ಪರೀಕ್ಷಾ ಪೆ ಚರ್ಚಾ’ ಕಾರ್ಯಕ್ರಮ-ದಲ್ಲಿ ಪರೀಕ್ಷೆಯನ್ನು ಎದುರಿಸುವುದು ಮತ್ತು ಒತ್ತಡವನ್ನು ನಿಯಂತ್ರಿಸುವುದು ಸೇರಿದಂತೆ ಹಲವು ವಿಷಯಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸೋಮವಾರ ಸಂವಾದ ನಡೆಸಿದರು.

‘ಪೋಷಕರು ಇತರ ಮಕ್ಕಳನ್ನು ತೋರಿಸಿ, ತಮ್ಮ ಮಕ್ಕಳನ್ನು ಅಲ್ಲಗಳೆಯ-ಬಾರದು. ಮಕ್ಕಳನ್ನು ಬೆಂಬಲಿಸಬೇಕು. ಅವರನ್ನು ಯಾವುದೋ ಒಂದೇ ವಿಷಯಕ್ಕೆ ಸೀಮಿತಗೊಳಿಸದೆ, ಕನಸನ್ನು ನನಸಾಗಿಸಿಕೊಳ್ಳಲು ಅವಕಾಶ ನೀಡಬೇಕು. ಹತ್ತು–ಹನ್ನೆರಡನೇ ತರಗತಿಯಲ್ಲಿ ಮಕ್ಕಳು ಹೆಚ್ಚು ಅಂಕ ತೆಗೆಯದೇ ಇದ್ದರೆ ಬದುಕೇ ನಾಶವಾದಂತೆ ಎಂಬ ಭಾವನೆ ಬಿತ್ತ-ಲಾಗುತ್ತಿದೆ. ಇದು ಸರಿಯಲ್ಲ. ಮಕ್ಕಳು ರೋಬಿಗಳಲ್ಲ’ ಎಂದು ಕಿವಿಮಾತು ಹೇಳಿದರು.

ಬೇರೆ ಬೇರೆ ರಾಜ್ಯಗಳ 35 ವಿದ್ಯಾರ್ಥಿ–ವಿದ್ಯಾರ್ಥಿನಿಯರ ಜೊತೆ ಸಂವಾದ ನಡೆಸಿದ ಪ್ರಧಾನಿ, ಈ ಬಾರಿ ‘ಪರೀಕ್ಷಾ ಪೆ ಚರ್ಚಾ’ಗೆ ಸುಂದರ್ ನರ್ಸರಿಯ ಹೊರ ಆವರಣವನ್ನು ಆಯ್ಕೆ ಮಾಡಿಕೊಂಡಿದ್ದರು. ಮಕ್ಕಳಿಗೆ ಎಳ್ಳಿನುಂಡೆ ನೀಡಿ, ಅದರ ಪೋಷಕಾಂಶದ ಕುರಿತೂ ವಿವರಿಸಿದರು.

ಗಿಡ ನೆಡುವ ಸಂಗತಿಯು ಶಾಲಾದಿನಗಳಲ್ಲಿ ಸಣ್ಣದೇ ಎನಿಸಿದರೂ ಆಮೇಲೆ ಅಭಿವೃದ್ಧಿಗೆ ಅದು ದೊಡ್ಡ ಕೊಡುಗೆಯಾಗಲಿದೆ ಎಂದು ಹೇಳಿದರು.

ಟಿ.ವಿ. ವಾಹಿನಿಗಳಲ್ಲದೆ ಅಮೆಜಾನ್ ಪ್ರೈಮ್ ಒಟಿಟಿ ವೇದಿಕೆಯಲ್ಲೂ ಈ ಕಾರ್ಯಕ್ರಮ ಪ್ರಸಾರವಾಯಿತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

23ನೇ ವರ್ಷದ ಸವಿನೆನಪು
ನನ್ನ ಹೆಸರು ಗೌತಮ್
ನನ್ನ ತಂದೆ ತಾಯಿಯ
ಮಡಿಲಲ್ಲಿ ಬೆಳೆಯುವ
ನನ್ನನ್ನು ದೇವರ ಮಡಿಲಿಗೆ
ಕಳಿಸಿದರು. ದೇವರಲ್ಲೂ
ಮತ್ತು ನಿಮ್ಮಲ್ಲಿಯೂ
ಸದಾ ಮಗುವಾಗಿರುವೆ
ಇಂತಿ: ಪಿ.ವಿ. ವೆಂಕಟಸ್ವಾಮಿರೆಡ್ಡಿ, ಪಾರ್ವತಮ್ಮ, ಚಂದನ್ ವಿ. ರೆಡ್ಡಿ, ಶ್ವೇತಾ ಪಿ.ಸಿ. ಅಬ್ಬಯ್ಯ ರೆಡ್ಡಿ, ಸುಶೀಲಮ್ಮ.
ಗೌತಮ್ ವಿ.ಪಣತೂರು
ಜನನ: 27-09-1993 ನಿಧನ:11-02-2002

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವೈಯಕ್ತಿಕ

Change of Name

ನಾನು ಡೇವಿನಾ ಡೇವಿಸ್ D/o ಡೇವಿಸ್ ಚಾಕುನ್ನಿ R/o ವರ್ತೂರು ಬೆಂಗಳೂರು ನನ್ನ ಹೆಸರನ್ನು ಎಲ್ಲಾ ಭವಿಷ್ಯದ ಉದ್ದೇಶಗಳಿಗಾಗಿ ಡೇವಿನಾದಿಂದ ಡೇವಿನಾ ಡೇವಿಸ್ ಎಂದು ಬದಲಾಯಿಸಿದ್ದೇನೆ

ಪ್ರವಾಸ

Travel

ಮಹಕುಂಭಮೇಳ 144 ವರ್ಷಕ್ಕೊಮ್ಮೆ ರಿಯಾಯಿತಿ ದರದಲ್ಲಿ 23/02/2025 6ದಿನ ವಿಮಾನದಲ್ಲಿ ಪ್ರಯೋಗರಾಜ್ ಕಾಶಿ ಗಯಾ ಅಯೋಧ್ಯಾ.(ಕೆಲವೇ ಸೀಟುಗಳಿವೆ) ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	23,559
ಇಂದಿನ ಅಂತ್ಯ	23,381
▼	178
ದಿನದ ಕನಿಷ್ಠ	23,316

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹385-686
ದ್ವಿತಳಿ (ಬಿ.ವಿ)	₹172-805

ಎನ್.ಆರ್.ಪುರ ರಬ್ಬರ್

ಆರ್ಎಸ್ಎಸ್-4	₹187.50
ಆರ್ಎಸ್ಎಸ್-5	₹182.50
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹177.50

ವಿನಿಮಯ ದರ

$	ಡಾಲರ್	87.45
£	ಪೌಂಡ್	108.55
€	ಯುರೊ	90.32
¥	ಯೆನ್ (100ಕ್ಕೆ)	58

ಫ್ರಾನ್ಸ್ ಪ್ರವಾಸದ ನಂತರ ಅಮೆರಿಕಕ್ಕೆ ತೆರಳಲಿರುವ ಪ್ರಧಾನಿ ಮೋದಿ

‘ಸಂಬಂಧ ವೃದ್ಧಿಗೆ ಅಮೆರಿಕ ಭೇಟಿ’

ನವದೆಹಲಿ (ಪಿಟಿಐ): ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಅಭಿವೃದ್ಧಿಪಡಿಸಲು ತಮ್ಮ ಅಮೆರಿಕ ಭೇಟಿ ಒಂದು ಉತ್ತಮ ಅವಕಾಶವಾಗಿದೆ ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ತಿಳಿಸಿದ್ದಾರೆ.

ಫ್ರಾನ್ಸ್ ಮತ್ತು ಅಮೆರಿಕ ಭೇಟಿಗೂ ಮುನ್ನ ತಮ್ಮ ಹೇಳಿಕೆಯಲ್ಲಿ, ‘ತಂತ್ರಜ್ಞಾನ, ವ್ಯಾಪಾರ, ರಕ್ಷಣೆ, ಇಂಧನ ಮತ್ತು ಪೂರೈಕೆ ಕ್ಷೇತ್ರಗಳನ್ನು ಒಳಗೊಂಡಂತೆ ಅಮೆರಿಕದೊಂದಿಗೆ ಭಾರತದ ಪಾಲುದಾರಿ-ಕೆಯನ್ನು ಮತ್ತಷ್ಟು ಹೆಚ್ಚಿಸಲು ಈ ಭೇಟಿಯು ಸಹಾಯ ಮಾಡುತ್ತದೆ’ ಎಂದಿದ್ದಾರೆ.

‘ಉಭಯ ದೇಶದ ಜನರ ಪರಸ್ಪರ ಯೋಗಕ್ಷೇಮಕ್ಕಾಗಿ ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ ಮತ್ತು ಜಗತ್ತಿಗೆ ಉತ್ತಮ ಭವಿಷ್ಯವನ್ನು ರೂಪಿಸುತ್ತೇವೆ ಎಂದು ಮೋದಿ ಹೇಳಿದ್ದಾರೆ.

‘ಸ್ನೇಹಿತ ಟ್ರಂಪ್ ಅವರ ಭೇಟಿಗೆ ಎದುರು ನೋಡುತ್ತಿದ್ದೇನೆ. ಭಾರತ ಮತ್ತು ಅಮೆರಿಕ ನಡುವೆ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ನಿರ್ಮಿಸಲು ಅವರ ಮೊದಲ ಅವಧಿಯಲ್ಲಿ ಒಟ್ಟಾಗಿ ಕೆಲಸ ಮಾಡಿರುವುದು ನನಗೆ ತುಂಬಾ ಸಂತೋಷವಾಗಿದೆ’ ಎಂದು ಅವರು ಹೇಳಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಆಹ್ವಾನದ ಮೇರೆಗೆ ಫ್ರಾನ್ಸ್‌ಗೆ ಫೆ. 10ರಿಂದ 12ರ ವರೆಗೆ ಎರಡು ದಿನ ಭೇಟಿ ಕೈಗೊಂಡಿದ್ದು, ಬಳಿಕ ಅಮೆರಿಕಕ್ಕೆ ಎರಡು ದಿನ ಪ್ರವಾಸ ಕೈಗೊಳ್ಳಲಿದ್ದಾರೆ.

‘ಫ್ರಾನ್ಸ್ ಭೇಟಿಯು ಭಾರತ ಮತ್ತು ಫ್ರಾನ್ಸ್ ಕಾರ್ಯತಂತ್ರದ ಪಾಲುದಾರಿಕೆ ಗಾಗಿ 2047ರ ಹಾರಿಜಾನ್ ಮಾರ್ಗ ಸೂಚಿಯ ಪ್ರಗತಿಯನ್ನು ಪರಿಶೀಲಿಸಲು ಅವಕಾಶವನ್ನು ಒದಗಿಸುತ್ತದೆ’ ಎಂದು ಮೋದಿ ಹೇಳಿದರು.

ಫ್ರಾನ್ಸ್ ತಲುಪಿದ ಪ್ರಧಾನಿ

ಪ್ಯಾರಿಸ್ (ಪಿಟಿಐ): ಮೂರು ದಿನಗಳ ಫ್ರಾನ್ಸ್ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಪ್ಯಾರಿಸ್‌ಗೆ ಬಂದಿಳಿದರು. ಅವರು ಮಂಗಳವಾರ ‘ಎ.ಐ ಆ್ಯಕ್ಷನ್’ ಶೃಂಗದಲ್ಲಿ ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಜತೆ ಸಹ–ಅಧ್ಯಕ್ಷತೆ ವಹಿಸಲಿದ್ದಾರೆ.

‘ಪ್ಯಾರಿಸ್‌ಗೆ ಬಂದ ಮೋದಿ ಅವರಿಗೆ ವಿಶೇಷ ಸ್ವಾಗತ ಲಭಿಸಿತು. ಫ್ರಾನ್ಸ್‌ನ ಸಶಸ್ತ್ರ ಪಡೆಗಳ ಸಚಿವ ಸೆಬಾಸ್ಟಿಯನ್ ಲುಕೋರ್ನು ಅವರು ವಿಮಾನ ನಿಲ್ದಾಣದಲ್ಲಿ ಪ್ರಧಾನಿ ಅವರನ್ನು ಬರಮಾಡಿಕೊಂಡರು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಹೋಟೆಲ್‌ಗೆ ಬಂದಾಗ ಪ್ರಧಾನಿ ಅವರಿಗೆ ಭಾರತೀಯ ಸಮುದಾಯದ ನೂರಾರು ಮಂದಿ ಅದ್ದೂರಿ ಸ್ವಾಗತ ಕೋರಿದರು. ಮ್ಯಾಕ್ರನ್ ಅವರು ಎಲಿಝಿ ಅರಮನೆಯಲ್ಲಿ ಆಯೋಜಿಸಿರುವ ಔತಣಕೂಟದಲ್ಲಿ ಪ್ರಧಾನಿ ಪಾಲ್ಗೊಳ್ಳಲಿದ್ದಾರೆ.

ಇಬ್ಬರೂ ನಾಯಕರು ಮಾರ್ಸೇಲ್ ನಗರದಲ್ಲಿನ ಯುದ್ಧ ಸ್ಮಾರಕಕ್ಕೆ ಬುಧವಾರ ಭೇಟಿ ನೀಡಲಿದ್ದಾರೆ.

ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸಲು ಅಮೆರಿಕ ನಿರ್ಧಾರ

ಉಕ್ಕಿನ ಸುಂಕ ಹೆಚ್ಚಳದ ಸೂಚನೆ

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): ಕೆನಡಾ, ಮೆಕ್ಸಿಕೊ ಸೇರಿದಂತೆ ವಿವಿಧ ದೇಶಗಳಿಂದ ಆಮದು ಮಾಡಿಕೊಳ್ಳುವ ಉಕ್ಕು ಮತ್ತು ಅಲ್ಯುಮಿನಿಯಂ ಮೇಲೆ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕವನ್ನು ಶೀಘ್ರವೇ ವಿಧಿಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದರು.

ಜತೆಗೆ, ಕೆಲವೇ ದಿನಗಳಲ್ಲಿ ಇನ್ನಷ್ಟು ಆಮದುಗಳ ಮೇಲೆ ಸುಂಕಗಳನ್ನು ವಿಧಿಸಲಾಗುವುದು ಎಂದು ಅವರು ಸುಳಿವು ನೀಡಿದರು.

‘ಸೂಪರ್ ಬೌಲ್’ ಪ್ರೀ ಶೋ ಕಾರ್ಯಕ್ರಮದಲ್ಲಿ ಭಾಗಿಯಾಗಲು ಫ್ಲಾರಿಡಾದಿಂದ ನ್ಯೂ ಓರ್ಲಿಯನ್ಸ್‌ಗೆ ತೆರಳುವ ಮುನ್ನ ಸುದ್ದಿಗಾರರರ ಜತೆ ಮಾತನಾಡಿದ ಅವರು, ‘ಅಮೆರಿಕಕ್ಕೆ ಬರುವ ಎಲ್ಲ ಬಗೆಯ ಉಕ್ಕು ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕವನ್ನು ಹೊಂದಿರುತ್ತವೆ. ಇದರಲ್ಲಿ ಅಲ್ಯುಮಿನಿಯಂ ಸಹ ಸೇರಿದೆ’ ಎಂದರು.

ಅಮೆರಿಕದ ಸರಕುಗಳ ಮೇಲೆ ಸುಂಕ ವಿಧಿಸುತ್ತಿರುವ ದೇಶಗಳಿಂದ ಅಮೆರಿಕಕ್ಕೆ ಬರುತ್ತಿರುವ ಸರಕುಗಳ ಮೇಲೂ ಆಮದು ಸುಂಕ ವಿಧಿಸಲಾಗುವುದು. ಮಂಗಳವಾರ ಅಥವಾ ಬುಧವಾರ ಇನ್ನಷ್ಟು ಆಮದು ಸುಂಕಗಳನ್ನು ಘೋಷಿಸುವುದಾಗಿ ಅವರು ಇದೇ ವೇಳೆ ತಿಳಿಸಿದರು.

‘ನಮ್ಮ ಸರಕುಗಳಿಗೆ ಕೆಲ ದೇಶಗಳು ಶೇ 130ರಷ್ಟು ಸುಂಕ ವಿಧಿಸುತ್ತಿರುವಾಗ, ನಾವು ಅವರ ಸರಕುಗಳಿಗೆ ಯಾವುದೇ ಸುಂಕ ವಿಧಿಸದಿದ್ದರೆ ಹೇಗೆ? ಇದು ಹಾಗೇ ಮುಂದುವರಿಯಬಾರದು’ ಎಂದು ಅವರು ಪ್ರತಿಕ್ರಿಯಿಸಿದರು.

ಕೆನಡಾ ಸೆಳೆಯಲು ಗಂಭೀರ ಯತ್ನ: ‘ಕೆನಡಾವು ಅಮೆರಿಕದ 51ನೇ ರಾಜ್ಯವಾಗಬೇಕು ಎಂದು ನಾನು ಗಂಭೀರವಾಗಿ ಬಯಸುತ್ತಿದ್ದೇನೆ’ ಎಂದು ಟ್ರಂಪ್ ಪುನರುಚ್ಚರಿಸಿದರು.

ಸೂಪರ್ ಬೌಲ್ ಪ್ರೀ ಶೋ ಸಂದರ್ಭದಲ್ಲಿ ಅವರು ‘ಫಾಕ್ಸ್ ನ್ಯೂಸ್’ಗೆ ನೀಡಿದ ಸಂದರ್ಶನದಲ್ಲಿ ಈ ಕುರಿತು ತಿಳಿಸಿದರು.

‘ಅಮೆರಿಕದ 51ನೇ ರಾಜ್ಯವಾಗಿ ಕೆನಡಾ ಸೇರ್ಪಡೆ ಆದರೆ, ಕೆನಡಾಕ್ಕೇ ಹೆಚ್ಚು ಅನುಕೂಲವಾಗುತ್ತದೆ ಎಂದು ನಾನು ಭಾವಿಸುತ್ತೇನೆ’ ಎಂದ ಅವರು, ‘ಕೆನಡಾದಿಂದ ನಮಗೆ ವರ್ಷಕ್ಕೆ 200 ಶತಕೋಟಿ ಡಾಲರ್ ನಷ್ಟವಾಗುತ್ತಿದೆ. ಇನ್ನು ಇದಕ್ಕೆಲ್ಲ ನಾನು ಅವಕಾಶ ನೀಡುವುದಿಲ್ಲ’ ಎಂದರು.

ಕೆನಡಾ ಅಮೆರಿಕದ ನಿಕಟ ಮಿತ್ರ ರಾಷ್ಟ್ರವಾಗಿದೆ. ಅಮೆರಿಕ ಜತೆಗಿನ ವ್ಯಾಪಾರ ಕೆನಡಾಕ್ಕೆ ಬಹು ಮುಖ್ಯ ಎಂದ ಅವರು, ನ್ಯಾಟೊ ಸ್ಥಾಪಕ ಸದಸ್ಯ ರಾಷ್ಟ್ರವಾಗಿರುವ ಅದು ತನ್ನ ಸೇನಾ ರಕ್ಷಣೆಗಾಗಿ ಅಮೆರಿಕವನ್ನು ಅವಲಂಬಿಸುವಂತಿಲ್ಲ ಎಂದು ಎಚ್ಚರಿಸಿದರು.

‘ಕೆನಡಾ ದೇಶವು ಮಿಲಿಟರಿಗೆ ಹೆಚ್ಚು ವೆಚ್ಚ ಮಾಡುತ್ತಿಲ್ಲ. ಏಕೆಂದರೆ ಅಮೆರಿಕ ಅದರ ರಕ್ಷಣೆಗೆ ಬರುತ್ತದೆ ಎಂದು ಅವರು ಭಾವಿಸಿದ್ದಾರೆ. ಆದರೆ ಇದು ಅವರ ಊಹೆಯಷ್ಟೆ. ಇನ್ನೊಂದು ದೇಶವನ್ನು ನಾವೇಕೆ ರಕ್ಷಿಸುತ್ತೇವೆ’ ಎಂದು ಅವರು ಪ್ರಶ್ನಿಸಿದರು.

‘ಭಾರತದ ಮೇಲೆ ಪರಿಣಾಮ ಬೀರದು’

ನವದೆಹಲಿ (ಪಿಟಿಐ): ‘ಅಮೆರಿಕವು ಉಕ್ಕಿನ ಆಮದು ಮೇಲೆ ಹೆಚ್ಚುವರಿ ಸುಂಕ ವಿಧಿಸುವುದಾಗಿ ಮಾಡಿರುವ ಘೋಷಣೆಯಿಂದ ಭಾರತೀಯ ಉದ್ಯಮದ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ’ ಎಂದು ಉಕ್ಕು ಸಚಿವಾಲಯದ ಕಾರ್ಯದರ್ಶಿ ಸಂದೀಪ್ ಪೌಂಡ್ರಿಕ್ ಸೋಮವಾರ ತಿಳಿಸಿದ್ದಾರೆ.

ದೇಶೀಯ ಉಕ್ಕು ಮಾರುಕಟ್ಟೆ ಪ್ರಬಲವಾಗಿದ್ದು, ಸಣ್ಣ ಪ್ರಮಾಣದಲ್ಲಿ ಅಮೆರಿಕಕ್ಕೆ ರಫ್ತಾಗುತ್ತಿದೆ. ಆದ್ದರಿಂದ ಗಂಭೀರ ಪರಿಣಾಮ ಉಂಟಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

‘ಭಾರತವು ಕಳೆದ ವರ್ಷ 14.5 ಕೋಟಿ ಟನ್‌ಗಳಷ್ಟು ಉಕ್ಕನ್ನು ಉತ್ಪಾದಿಸಿದ್ದು, ಅದರಲ್ಲಿ 95 ಸಾವಿರ ಟನ್ ಅನ್ನು ಅಮೆರಿಕಕ್ಕೆ ರಫ್ತು ಮಾಡಿದೆ. ಭಾರತದಲ್ಲಿ ದೇಶೀಯ ಮಾರುಕಟ್ಟೆಯಲ್ಲಿಯೇ ಉಕ್ಕಿಗೆ ತೀವ್ರ ಬೇಡಿಕೆಯಿದ್ದು, ಮುಂಬರುವ ವರ್ಷಗಳಲ್ಲಿ ಅದನ್ನು ಪೂರೈಸುವದೇ ಕಷ್ಟವಾಗುತ್ತದೆ’ ಎಂದು ಅವರು ಸಮಾವೇಶವೊಂದರಲ್ಲಿ ತಿಳಿಸಿದ್ದಾರೆ.

ಸವಾಲು: ಅಮೆರಿಕ ಎಲ್ಲ ಉಕ್ಕು ಮತ್ತು ಅಲ್ಯುಮಿನಿಯಂ ಆಮದುಗಳ ಮೇಲೆ ಹೆಚ್ಚುವರಿ ಶೇ 25ರಷ್ಟು ಸುಂಕ ವಿಧಿಸಿದರೆ, ಭಾರತೀಯ ಉಕ್ಕು ಉತ್ಪಾದಕರು ತಮ್ಮ ಉತ್ಪನ್ನಗಳನ್ನು ರಫ್ತು ಮಾಡುವುದಕ್ಕೆ ಹೆಚ್ಚಿನ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂದು ಮೂಡೀಸ್ ರೇಟಿಂಗ್ಸ್‌ನ ಸಹಾಯಕ ಉಪಾಧ್ಯಕ್ಷ ಹುಯಿ ಟಿಂಗ್ ಸಿಮ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

₹1.88 ಲಕ್ಷ ಕೋಟಿ ಮೊತ್ತದ ಜಿಎಸ್‌ಟಿ ವಂಚನೆ ಪತ್ತೆ: ಕೇಂದ್ರ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ಕೇಂದ್ರ ಜಿಎಸ್‌ಟಿ ಅಧಿಕಾರಿಗಳು ₹1.88 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಜಿಎಸ್‌ಟಿ ವಂಚನೆಯನ್ನು ಪತ್ತೆ ಹಚ್ಚಿದ್ದಾರೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ಸೋಮವಾರ ತಿಳಿಸಿದೆ.

ಈ ಅವಧಿಯಲ್ಲಿ ಒಟ್ಟು 72,393 ವಂಚನೆ ಪ್ರಕರಣಗಳು ನಡೆದಿವೆ. ಇದರ ಮೊತ್ತ ₹1.88 ಲಕ್ಷ ಕೋಟಿಯಷ್ಟಾಗಿದೆ. 132 ಜನರನ್ನು ಬಂಧಿಸಲಾಗಿದ್ದು, ₹20,128 ಕೋಟಿಯನ್ನು ವಸೂಲಿ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ.

2023–24ರ ಪೂರ್ಣ ಹಣಕಾಸು ವರ್ಷದಲ್ಲಿ ₹2.30 ಲಕ್ಷ ಕೋಟಿ ಮೊತ್ತದ 20,582 ವಂಚನೆ ಪ್ರಕರಣಗಳು ನಡೆದಿದ್ದವು. ₹31,758 ಕೋಟಿ ವಸೂಲಿ ಮಾಡಿದ್ದರೆ, 223 ಜನರನ್ನು ಬಂಧಿಸಲಾಗಿತ್ತು.

2022-23 ಮತ್ತು 2021-22ರಲ್ಲಿ ಕ್ರಮವಾಗಿ ₹1.32 ಲಕ್ಷ ಕೋಟಿ ಮತ್ತು ₹73,238 ಕೋಟಿ ಮೌಲ್ಯದ ಜಿಎಸ್‌ಟಿ ವಂಚನೆ ಪ್ರಕರಣಗಳನ್ನು ಅಧಿಕಾರಿಗಳು ಪತ್ತೆ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಸಿಬಿಐನಿಂದ 4 ಮಂದಿ ಬಂಧನ

ನವದೆಹಲಿ/ ತಿರುಪತಿ (ಪಿಟಿಐ): ತಿರುಪತಿ ಲಾಡು ತಯಾರಿಕೆಯಲ್ಲಿ ಪ್ರಾಣಿಗಳ ಕೊಬ್ಬು ಬಳಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ನೇತೃತ್ವದ ಸ್ವತಂತ್ರ ವಿಶೇಷ ತನಿಖಾ ತಂಡವು (ಎಸ್‌ಐಟಿ) ನಾಲ್ವರು ಆರೋಪಿಗಳನ್ನು ಬಂಧಿಸಿದೆ.

‘ಭೋಲೆ ಬಾಬಾ ಡೇರಿಯ ಮಾಜಿ ನಿರ್ದೇಶಕರಾದ ವಿಪಿನ್ ಜೈನ್, ಪೊಮಿಲ್ ಜೈನ್ ಜಾಗೂ ವೈಷ್ಣವಿ ಡೇರಿಯ ಅಪೂರ್ವ ಚಾವ್ಡಾ ಹಾಗೂ ಎ.ಆರ್. ಡೇರಿಯ ರಾಜು ರಾಜಶೇಖರನ್ ಅವರನ್ನು ಬಂಧಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ತಿರುಪತಿಯ ಲಾಡು ತಯಾರಿಕೆಗೆ ಬೇಕಾದ ತುಪ್ಪ ಪೂರೈಸುವ ವೇಳೆ ಪ್ರತಿ ಹಂತದಲ್ಲಿಯೂ ಗಂಭೀರ ಲೋಪ ಎಸಗಿರುವುದು ಎಸ್‌ಐಟಿ ತನಿಖೆಯಿಂದ ಗೊತ್ತಾದ ಬೆನ್ನಲ್ಲೇ ನಾಲ್ವರನ್ನು ಬಂಧಿಸಲಾಗಿದೆ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

‘ವೈಷ್ಣವಿ ಡೇರಿಯ ಅಧಿಕಾರಿಗಳು ಎ.ಆರ್. ಡೇರಿ ಹೆಸರಿನಲ್ಲಿ ತುಪ್ಪ ಪೂರೈಸುವ ಗುತ್ತಿಗೆ ಪಡೆದಿದ್ದರು. ಟೆಂಡರ್ ಪ್ರಕ್ರಿಯೆಯಲ್ಲಿ ನಕಲಿ ದಾಖಲೆಗಳನ್ನು ಸಲ್ಲಿಸಿದ್ದರು. ಭೋಲೆ ಬಾಬಾ ಡೇರಿಯಿಂದ ತುಪ್ಪ ಪಡೆದು ಪೂರೈಸಿರುವುದಾಗಿ ವೈಷ್ಣವಿ ಡೇರಿಯ ಅಧಿಕಾರಿಗಳು ದೇವಾಲಯದ ಆಡಳಿತ ಮಂಡಳಿಗೆ ಸುಳ್ಳು ದಾಖಲೆಗಳನ್ನು ನೀಡಿದ್ದರು. ವಾಸ್ತವದಲ್ಲಿ, ತಿರುಪತಿಯ ಬಾಲಾಜಿ ದೇವಾಲಯವು ಬೇಡಿಕೆಯಿಟ್ಟಷ್ಟು ತುಪ್ಪ ಪೂರೈಸುವ ಸಾಮರ್ಥ್ಯವನ್ನೇ ಅವರು ಹೊಂದಿರಲಿಲ್ಲ’ ಎಂದು ಮೂಲಗಳು ತಿಳಿಸಿವೆ.

10 ಗ್ರಾಂ ಚಿನ್ನದ ದರ ₹88,500

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ. ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹2,430 ಹೆಚ್ಚಳವಾಗಿ, ₹88,500ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹88,100ಕ್ಕೆ ಮುಟ್ಟಿದೆ. ಇದು ಇದು ವರೆಗಿನ ಸಾರ್ವಕಾಲಿಕ ಗರಿಷ್ಠ ಏರಿಕೆಯಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1,000 ಹೆಚ್ಚಳವಾಗಿ, ₹97,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ತ್ರಿವೇಣಿ ಸಂಗಮ: ಕುಂಭಮೇಳ ಆರಂಭ

ಒಂದನೇ ಪುಟದಿಂದ...

ಆದಿಚುಂಚನಗಿರಿ ಮಠದ ಮೈಸೂರು ಶಾಖೆಯ ಸೋಮೇಶ್ವರನಾಥ ಸ್ವಾಮೀಜಿ, ಕಾಗಿನೆಲೆ ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ, ಕೈಲಾಸಾನಂದ ಮಠದ ಜಯೇಂದ್ರಪುರಿ ಸ್ವಾಮೀಜಿ, ತಿರುಚ್ಚಿಯ ಶ್ರೀಬುದ್ಧ ಸ್ವಾಮೀಜಿ ಅವರು ಗಂಗೆ ಪೂಜೆ ಬಳಿಕ, ನೀರನ್ನು ಪ್ರೋಕ್ಷಣೆ ಮಾಡಿಕೊಂಡರು. ನಡುಹೊಳೆ ಬಸಪ್ಪ ವಿಗ್ರಹಕ್ಕೆ ನಮಿಸಿದರು. ಮಂಗಳವಾದ್ಯಗಳು ಮೊಳಗಿದವು.

ನಂತರ ಮಧ್ಯಾಹ್ನ 1 ಗಂಟೆಗೆ ಧ್ವಜಾರೋಹಣ ನೆರವೇರಿಸಿ, ಕುಂಭಮೇಳಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಸಂಜೆ ಧಾರ್ಮಿಕ ಸಭೆಗಳು ನಡೆದವು.

ಜನಪ್ರತಿನಿಧಿಗಳ ಗೈರು: ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸ್ಥಳೀಯ ಶಾಸಕರೂ ಆದ ಡಾ.ಎಚ್.ಸಿ.ಮಹದೇವಪ್ಪ ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳು ಗೈರಾಗಿದ್ದರು.

ಕಾವೇರಿ ಆರತಿ ಇಂದು: ಕುಂಭಮೇಳದ ಎರಡನೇ ದಿನ ಫೆ.11ರಂದು ಬೆಳಿಗ್ಗೆ 11ಕ್ಕೆ ಧರ್ಮಸಭೆ ನಡೆಯಲಿದ್ದು, ಸಂಜೆ 4ಕ್ಕೆ ಸಂತರ ತ್ರಿವೇಣಿ ಸಂಗಮ ಕ್ಷೇತ್ರ ಪ್ರವೇಶ ನಡೆಯಲಿದೆ. ಸಂಜೆ 6ರಿಂದ 7 ಗಂಟೆವರೆಗೆ ವಾರಾಣಸಿಯ ಗಂಗಾರತಿ ಮಾದರಿಯಲ್ಲಿ ‘ಕಾವೇರಿ ಆರತಿ’ಯನ್ನು ಸಾಧು– ಸಂತರು ಬೆಳಗಲಿದ್ದಾರೆ.

12ರಂದು ಪವಿತ್ರ ಕುಂಭಸ್ನಾನ ನಡೆಯಲಿದ್ದು, ಸಪ್ತ ನದಿಗಳಿಂದ ತಂದ ತೀರ್ಥಗಳನ್ನು ಸಂಗಮದಲ್ಲಿ ಸಂಯೋಜಿಸಲಾಗುತ್ತದೆ. ‘ಮಾಘ ಪೂರ್ಣಿಮೆ’ ಪ್ರಯುಕ್ತ ಅಂದು ಲಕ್ಷಾಂತರ ಭಕ್ತರು ಪುಣ್ಯ ಸ್ನಾನ ಮಾಡಲಿದ್ದಾರೆ.

ಕರ್ನಾಟಕ ಸರ್ಕಾರ
ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
ಟೆಂಡರ್ ಅಧಿಸೂಚನೆ ಸಂಖ್ಯೆ: ಆ.ಪು.ಸಂ.ಪ/ಸಂ.ವಿ:ಸೇ.ಟೆ–19/2024–25
ದಿನಾಂಕ: 30.01.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ Project Management Consultant for Upgradation, Conservation and Curation of Government Museum, Bengaluru ಸೇವಾ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸ್ತಕ/ಅರ್ಹ/ಸಂಸ್ಥೆ/ಏಜೆನ್ಸಿಗಳು ಈ ಸಲಹಾ ಸೇವೆಗಳ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಇಂಡೆಂಟ್ ನಂ:DAMH/2024-25/SE0019 ಟೆಂಡರ್ ಡಾಕ್ಯೂಮೆಂಟ್‌ಗಳ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http:www.kppp.karnataka. gov.inರಲ್ಲಿ ದಿ: 04.02.2025 ರಿಂದ ಪಡೆಯಬಹುದಾಗಿದೆ. ವಿವರ ಇಂತಿವೆ.
ಕಾಮಗಾರಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣಕ್ಕೆ ಕೊನೆಯ ದಿ: 12.02.2025, 17.00 ಗಂಟೆಗೆ. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿ: 17.02.2025, 16.00 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿ: 19.02.2025, 11.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿ: 20.02.2025, 11.30 ಗಂಟೆಗೆ
ಸಹಿ/– ಆಯುಕ್ತರು,
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
DIPR/DDMYS/1259/KSMCA/884/2024-25

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1390 (1385)
ಸೋಯಾ (ರಿಫೈನ್ಡ್)	₹1295 (1290)
ಸೂರ್ಯಕಾಂತಿ (ರಿಫೈನ್ಡ್)	₹1390 (1380)
ಪಾಮೋಲಿನ್	₹1340 (1335)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಕ್ರ. ಸಂ.	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	(ದಕ್ಷಿಣ–ಪಶ್ಚಿಮ–2)	ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/4025/2024–25 ದಿನಾಂಕ: 10–02–2025 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ)	1	ರೂ. 46,76,588/– / ರೂ. 46,800/–	25–02–2025 ರ ಸಂಜೆ 5.00 ಗಂಟೆಯವರೆಗೆ	27–02–2025 ರ ಬೆಳಿಗ್ಗೆ 10.30 ಗಂಟೆಯ ನಂತರ
		ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/4025/2024–25 ದಿನಾಂಕ: 10–02–2025	2	ರೂ. 41,87,808/– / ರೂ. 83,800/–		
		ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/4025/2024–25 ದಿನಾಂಕ: 10–02–2025 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	3	ರೂ. 45,67,377/– / ರೂ. 45,700/–		
		ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/4025/2024–25 ದಿನಾಂಕ: 10–02–2025 (ಪ್ರವರ್ಗ–1 ಕ್ಕೆ ಮೀಸಲಿರಿಸಿದೆ)	4	ರೂ. 50,70,705/– / ರೂ. 1,01,500/–		
		ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/4025/2024–25 ದಿನಾಂಕ: 10–02–2025	5	ರೂ. 91,51,911/– / ರೂ. 1,83,100/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–ಪಶ್ಚಿಮ–2)
ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್‌ಸೈಟ್: https://kppp.karnataka.gov.in. ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ವಾಸಾಸಂಇ/ವಾ.ಪ್ರ/ಅಡ್ವರ್ಟೋರ್/4941/2024–25

ಇಂದಿನಿಂದ ಹೂಡಿಕೆ ಸಮಾವೇಶ

ಒಂದನೇ ಪುಟದಿಂದ...

ವಿವಿಧ ಕ್ಷೇತ್ರಗಳ ದಿಗ್ಗಜರು ಕರ್ನಾಟಕದಲ್ಲಿನ ಬಂಡವಾಳ ಹೂಡಿಕೆ ಮತ್ತು ಕೈಗಾರಿಕಾ ಪ್ರಗತಿಯ ಭವಿಷ್ಯ ರೂಪಿಸುವ ಒಳನೋಟಗಳನ್ನು ನೀಡಲಿದ್ದಾರೆ.

‘ಸಮಾವೇಶದಿಂದಾಗಿ ರಾಜ್ಯದಲ್ಲಿ ಉದ್ಯಮದ ಮೇಲಿನ ಸಂಶೋಧನೆ ಹಾಗೂ ಸಹಯೋಗಗಳು ಹೆಚ್ಚಲಿವೆ. ರಾಜ್ಯದಲ್ಲಿ ತಯಾರಿಕಾ ಚಟುವಟಿಕೆಗಳು ಗಮನಾರ್ಹವಾಗಿ ವಿಸ್ತಾರಗೊಳ್ಳಲಿವೆ. ಈ ಸಮಾವೇಶದ ಮುಖ್ಯ ಧ್ಯೇಯವು ‘ಪ್ರಗತಿಯ ಮರುಪರಿಕಲ್ಪನೆ’ಯಾಗಿದೆ. ತಂತ್ರಜ್ಞಾನ ಆಧಾರಿತ, ಪರಿಸರಸ್ನೇಹಿ, ಸುಸ್ಥಿರ ಹಾಗೂ ಸಮತೋಲನದ ಬೆಳವಣಿಗೆ ಉತ್ತೇಜಿಸುವ ರಾಜ್ಯ ಸರ್ಕಾರದ ಬದ್ಧತೆ ಪ್ರತಿಬಿಂಬಿಸಲಿದೆ. ಸಮಾವೇಶದ ನಂತರ ಕರ್ನಾಟಕದ ಭವಿಷ್ಯ ಹೊಸ ದಿಕ್ಕಿನತ್ತ ಸಾಗಲಿದೆ’ ಎಂದು ಸಮಾವೇಶದ ಪ್ರಮುಖ ರೂವಾರಿ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಅಂತಿಮ ಸಿದ್ಧತೆಗಳ ಪರಿಶೀಲನೆ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ. ಬಿ.ಪಾಟೀಲ ಅವರು ಸಮಾವೇಶ ನಡೆಯುವ ಅರಮನೆ ಮೈದಾನಕ್ಕೆ ಸೋಮವಾರ ಭೇಟಿ ನೀಡಿ, ಅಂತಿಮ ಸುತ್ತಿನ ಸಿದ್ಧತೆಗಳ ಪರಿಶೀಲನೆ ನಡೆಸಿದರು.

ಪ್ರದರ್ಶನ ತಾಣಗಳು, ಗೋಷ್ಠಿಗಳು ನಡೆಯಲಿರುವ ಸ್ಥಳ, ಮಾತುಕತೆ ಮತ್ತು ಒಡಂಬಡಿಕೆ ನಡೆಯುವ ಸಭಾಂಗಣ, ಕಂಟ್ರಿ ಪೆವಿಲಿಯನ್, ಫುಡ್ ಕೋರ್ಟ್ ಮತ್ತಿತರ ಜಾಗಗಳನ್ನು ವೀಕ್ಷಿಸಿ, ಅಂತಿಮ ಕ್ಷಣಗಳ ಕೆಲ ಬದಲಾವಣೆಗಳನ್ನು ಸೂಚಿಸಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಹಾಜರಿದ್ದರು.

ಅರಮನೆ ಮೈದಾನದಲ್ಲಿ ಮಂಗಳವಾರದಿಂದ ಆರಂಭವಾಗುವ ಜಾಗತಿಕ ಹೂಡಿಕೆದಾರರ ಸಮಾವೇಶದ ಸಿದ್ಧತೆಗಳನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಕೊಪ್ಪಳದಲ್ಲಿ ಬಲ್ಡೋಟಾ ಉಕ್ಕು ಕಾರ್ಖಾನೆ

ಬೆಂಗಳೂರು: ಕೊಪ್ಪಳ ಜಿಲ್ಲೆಯಲ್ಲಿ ಬಲ್ಡೋಟಾ ಸಮೂಹ ಸಂಸ್ಥೆ ₹54 ಸಾವಿರ ಕೋಟಿ ವೆಚ್ಚದಲ್ಲಿ 1.50 ಕೋಟಿ ಟನ್ ಉತ್ಪಾದನಾ ಸಾಮರ್ಥ್ಯದ ಇಂಟಗ್ರೇಟೆಡ್ ಉಕ್ಕಿನ ಕಾರ್ಖಾನೆ ಸ್ಥಾಪನೆ ಮುಂದಾಗಿದೆ.

ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಬಲ್ಡೋಟಾ ಸಮೂಹ ಸಂಸ್ಥೆಯು ಒಪ್ಪಂದಕ್ಕೆ ಸಹಿ ಹಾಕಲಿದೆ ಎಂದು ಬಲ್ಡೋಟಾ ಸಮೂಹ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಕುಮಾರ್ ಬಲ್ಡೋಟಾ ಹೇಳಿದ್ದಾರೆ.

‘ಬಲ್ಡೋಟಾ ಸ್ಟೀಲ್ ಮತ್ತು ಪವರ್ ಲಿಮಿಟೆಡ್ (ಬಿಎಸ್‌ಪಿಎಲ್)’ ಹೆಸರಿನಲ್ಲಿ ಸ್ಥಾಪಿ-ಸಲಾಗುತ್ತಿದ್ದು, ಇದರಿಂದ ಕರ್ನಾಟಕದಲ್ಲಿ ಉಕ್ಕು ಉತ್ಪಾದನೆ ಹೆಚ್ಚಾಗಲಿದೆ ಮತ್ತು ಉದ್ಯೋಗ ಸೃಷ್ಟಿಯೂ ಆಗಲಿದೆ.

ಸಮಾವೇಶದ ಪ್ರಯೋಜನಗಳು

‘ಪರಿಸರಸ್ನೇಹಿ ವಿದ್ಯುತ್ ಚಾಲಿತ ವಾಹನಗಳು, ರಕ್ಷಣೆ, ಜೈವಿಕ ತಂತ್ರಜ್ಞಾನ, ಸಂಶೋಧನೆ ಹಾಗೂ ಅಭಿವೃದ್ಧಿ ಮತ್ತು ಗರಿಷ್ಠ ನಿಖರತೆಯ ಬಿಡಿಭಾಗ ತಯಾರಿಕಾ ವಲಯಗಳಲ್ಲಿನ ಬೆಳವಣಿಗೆಯ ಮೇಲೆ, ಆವಿಷ್ಕಾರದ ಭವಿಷ್ಯದ ಮೇಲೆ ಬೆಳಕು ಚೆಲ್ಲಲಿದೆ.

ರಾಜ್ಯದ ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಇ) ಹಾಗೂ ನವೋದ್ಯಮ ಬೆಳವಣಿಗೆಗೆ ವೇಗ ನೀಡಲಿದೆ. ಡಿಜಿಟಲೀಕರಣ ಅಳವಡಿಸಿಕೊ-ಳ್ಳಲು 2,000ಕ್ಕೂ ಹೆಚ್ಚು ಎಸ್‌ಎಂಇಗಳಿಗೆ ತರಬೇತಿ ನೀಡಲಾಗಿದೆ. ಡಿಜಿಟಲ್ ಪರಿವರ್ತನೆಗಾಗಿ 100 ಎಸ್‌ಎಂಇಗಳಿಗೆ ಅಗತ್ಯ ನೆರವು ದೊರೆಯಲಿದೆ.

ಹೂಡಿಕೆಯ ಪ್ರಮುಖ ವಲಯಗಳು

- ವೈಮಾಂತರಿಕ್ಷ ಮತ್ತು ರಕ್ಷಣೆ
- ಎಲೆಕ್ಟ್ರಾನಿಕ್ ಬಿಡಿಭಾಗಗಳು
- ವಿದ್ಯುನ್ಮಾನ ವ್ಯವಸ್ಥೆಯ ವಿನ್ಯಾಸ ಹಾಗೂ ತಯಾರಿಕೆ
- ಉಗ್ರಾಣ ಹಾಗೂ ಸರಕು ಸಾಗಣೆ
- ವಿದ್ಯುತ್ ಚಾಲಿತ ವಾಹನಗಳು
- ಸೆಮಿಕಂಡಕ್ಟರ್ ವಲಯ
- ವೈದ್ಯಕೀಯ ತಂತ್ರಜ್ಞಾನ, ಸಂಶೋಧನೆ ಹಾಗೂ ಅಭಿವೃದ್ಧಿ
- ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಸ್‌ಎಂಇ)

ಮೊದಲ ದಿನದ ಕಾರ್ಯಕ್ರಮ ವಿವರ

ಉದ್ಘಾಟನೆ: ರಕ್ಷಣಾ ಸಚಿವ ರಾಜನಾಥ್ ಸಿಂಗ್ (ಸಂಜೆ 4ಕ್ಕೆ)
ಅಧ್ಯಕ್ಷತೆ: ಮುಖ್ಯಮಂತ್ರಿ ಸಿದ್ದರಾಮಯ್ಯ. ಉಪಸ್ಥಿತಿ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಲ್ಹಾದ ಜೋಶಿ, ಎಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಪೀಯೂಷ್ ಗೋಯಲ್, ಅಶ್ವಿನಿ ವೈಷ್ಣವ್, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ

ಭಾಗವಹಿಸುತ್ತಿರುವ ದೇಶಗಳು

ಫ್ರಾನ್ಸ್, ನೆದರ್ಲೆಂಡ್ಸ್, ಜಪಾನ್, ಥಾಯ್ಲೆಂಡ್, ಮಲೇಷ್ಯಾ, ದಕ್ಷಿಣ ಕೊರಿಯಾ, ಇಸ್ರೇಲ್, ನಾರ್ವೆ, ಸ್ವಿಟ್ಜರ್ಲೆಂಡ್, ತೈವಾನ್, ಜರ್ಮನಿ, ಆಸ್ಟ್ರೇಲಿಯಾ, ಡೆನ್ಮಾರ್ಕ್, ಪೋಲೆಂಡ್, ಇಟಲಿ, ಬ್ರಿಟನ್, ಸ್ಲೊವೆನಿಯಾ, ಬಹರೇನ್ ಮತ್ತು ಸಿಂಗಪುರ

ಮಹಾಕುಂಭ: 300 ಕಿ.ಮೀ. ಸಂಚಾರ ದಟ್ಟಣೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಪ್ರಯಾಗ್‌ರಾಜ್, ಭೋಪಾಲ್ : ಮಹಾಕುಂಭ ಮೇಳದಲ್ಲಿ ಪುಣ್ಯಸ್ನಾನ ಮಾಡಲು ಪ್ರಯಾಗ್‌ರಾಜ್‌ನತ್ತ ಕೋಟ್ಯಂತರ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದರಿಂದ ಸೋಮವಾರ 300 ಕಿ.ಮೀ.ವರೆಗೂ ಸಂಚಾರ ದಟ್ಟಣೆ ಉಂಟಾಗಿತ್ತು.

'ಮೂರನೇ 'ಅಮೃತ ಸ್ನಾನ'ವಾದ ವಸಂತ ಪಂಚಮಿ ಬಳಿಕ ಭಕ್ತರ ಸಂಖ್ಯೆ ಇಳಿಮುಖ ಆಗಲಿದೆ ಎಂದು ಉತ್ತರ ಪ್ರದೇಶ ಸರ್ಕಾರ ಅಂದಾಜಿಸಿತ್ತು. ಶನಿವಾರ, ಭಾನುವಾರ ದೊಡ್ಡ ಸಂಖ್ಯೆಯಲ್ಲಿ ಭಕ್ತರು ಪ್ರಯಾಗರಾಜ್‌ನತ್ತ ಹೊರಟಿದ್ದರಿಂದ ನಗರಕ್ಕೆ ಸಂಪರ್ಕಿಸುವ ಹೆದ್ದಾರಿಗಳಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತು. ಸೋಮವಾರವೂ ಹೆದ್ದಾರಿಗಳಲ್ಲಿ ನೂರಾರು ಕಿ.ಮೀ. ದೂರದವರೆಗೆ ವಾಹನಗಳು ನಿಂತಿದ್ದವು. ಸಂಚಾರ ದಟ್ಟಣೆ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ' ಪೊಲೀಸ್ ಅಧಿಕಾರಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

'48 ಗಂಟೆಗಳಿಂದ ಹೆದ್ದಾರಿಯಲ್ಲಿ ಸಿಲುಕಿದ್ದೇವೆ. 50 ಕಿ.ಮೀ. ಅಂತರ ಕ್ರಮಿಸಲು 10ರಿಂದ 12 ಗಂಟೆ ಸಮಯ ಕಳೆಯಿತು' ಎಂದು ಪ್ರಯಾಣಿಕರೊಬ್ಬರು ತಿಳಿಸಿದರು.

ವಾರಾಣಸಿ, ಅಯೋಧ್ಯೆ, ಲಖನೌ, ಕಾನ್ಪುರ ಸಂಪರ್ಕಿಸುವ ಹೆದ್ದಾರಿಗಳಲ್ಲಿ 10ರಿಂದ 12 ಕಿ.ಮೀ. ತನಕವೂ ವಾಹನಗಳು ನಿಂತಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಪ್ರಯಾಣ ಮುಂದೂಡಿ–ಸಿ.ಎಂ ಮನವಿ: 'ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ಪ್ರಯಾಗರಾಜ್ ನತ್ತ ತೆರಳುತ್ತಿರುವ ಕಾರಣ, ನೆರೆ ರಾಜ್ಯ ಮಧ್ಯಪ್ರದೇಶದ ಹಲವು ಜಿಲ್ಲೆಗಳಲ್ಲಿಯೂ ಸಂಚಾರ ದಟ್ಟಣೆ ಉಂಟಾಗಿದೆ. ಅಲ್ಲಿಗೆ ತೆರಳುವುದನ್ನು ಕೆಲವು ದಿನಗಳ ಕಾಲ ಮುಂದೂಡಬೇಕು' ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಮನವಿ ಮಾಡಿದ್ದಾರೆ.

'ಕೆಲ ದಿನಗಳಿಂದ ಜಬಲ್‌ಪುರ, ಸಿವಾನಿ, ಕಟನಿ, ಮೈಹರ್, ಸತ್‌ನಾ ಹಾಗೂ ರೇವಾ ಜಿಲ್ಲೆಗಳ ಮೂಲಕ ಸಾಕಷ್ಟು ಸಂಖ್ಯೆಯಲ್ಲಿ ವಾಹನಗಳು ಪ್ರಯಾಗರಾಜ್‌ನತ್ತ ತೆರಳುತ್ತಿವೆ. ಹೀಗಾಗಿ ಕೆಲವು ದಿನಗಳ ಕಾಲ ಪ್ರವಾಸ ಮುಂದೂಡಬೇಕು' ಎಂದು ಮನವಿ ಮಾಡಿದ್ದಾರೆ.

'ಪ್ರಯಾಗರಾಜ್ ಆಡಳಿತದ ಜೊತೆಗೆ ಮಧ್ಯಪ್ರದೇಶ ಸರ್ಕಾರವು ಸಂಪರ್ಕದಲ್ಲಿದೆ. ಸಂಚಾರ ಸ್ಥಗಿತಗೊಂಡಿದ್ದರೆ, ವಾಹನಗಳನ್ನು ರಸ್ತೆ ಬದಿಗೆ ನಿಲ್ಲಿಸಿ. ಗೂಗಲ್‌ಮ್ಯಾಪ್ ನೋಡಿಕೊಂಡು, ಸಂಚಾರ ಸುಗಮವಾಗಿದ್ದರೆ ಮಾತ್ರ ಪ್ರಯಾಣ ಮುಂದುವರಿಸಬೇಕು' ಎಂದು ಮನವಿ ಮಾಡಿದ್ದಾರೆ. 'ಭಕ್ತರಿಗೆ ಕುಡಿಯುವ ನೀರು, ಆಹಾರದ ವ್ಯವಸ್ಥೆ ಕಲ್ಪಿಸಲಾಗಿದೆ. ಸುರಕ್ಷತೆಗೆ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ' ಎಂದು ವಿವರಿಸಿದರು.

ರೇವಾ ಜಿಲ್ಲೆಯ ಅಂತರ ರಾಜ್ಯ ಗಡಿಭಾಗದಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುವ ಹಲವು ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ವಸಂತ ಪಂಚಮಿಯ ನಂತರ ಹೆಚ್ಚಿದ ಭಕ್ತರ ಸಂಖ್ಯೆ

ಎಲ್ಲೆಲ್ಲಿ ಸಂಚಾರ ದಟ್ಟಣೆ?



ಪ್ರಯಾಗರಾಜ್‌ನಲ್ಲಿ ಸೋಮವಾರ ಕಂಡುಬಂದ ವಾಹನ ದಟ್ಟಣೆ –ಪಿಟಿಐ ಚಿತ್ರ

ಮಹಾಕುಂಭ ಮೇಳದ ಸಂಗಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಪುಣ್ಯಸ್ನಾನ ಮಾಡಿದರು –ಪಿಟಿಐ ಚಿತ್ರ

ಪ್ರಯಾಗರಾಜ್‌ನ ಮಹಾಕುಂಭ ಮೇಳಕ್ಕೆ ಭೇಟಿ ನೀಡುವ ಹೆದ್ದಾರಿಗಳಲ್ಲಿ ಹೆಚ್ಚಿನ ವಾಹನದಟ್ಟಣೆ ಹಾಗೂ ಅಗತ್ಯ ವಸ್ತುಗಳ ಕೊರತೆ ಉಂಟಾಗಲು ಸರ್ಕಾರದ ನಿರ್ಲಕ್ಷ್ಯವೇ ಕಾರಣ

ಅಖಿಲೇಶ್ ಯಾದವ್
ಸಮಾಜವಾದಿ ಪಕ್ಷದ ಮುಖ್ಯಸ್ಥ

ಕುಂಭ, ಗಂಗಾ, ಜಮುನಾ, ಬಸಂತಿ ನಾಮಕರಣ

ಮಹಾಕುಂಭನಗರ (ಪಿಟಿಐ): ಮಹಾಕುಂಭಮೇಳದ ಪ್ರದೇಶದಲ್ಲಿರುವ ಇಲ್ಲಿನ ಸೆಂಟ್ರಲ್ ಆಸ್ಪತ್ರೆಯಲ್ಲಿ ಹುಟ್ಟಿದ 12 ಮಕ್ಕಳಿಗೆ ಕುಂಭ್, ಗಂಗಾ, ಜಮುನಾ, ಬಸಂತಿ ಎಂದು ಅವರ ಪೋಷಕರು ನಾಮಕರಣ ಮಾಡಿದ್ದಾರೆ.

'12ನೇ ಗಂಡುಮಗು ಭಾನುವಾರ ರಾತ್ರಿ ಹುಟ್ಟಿದೆ. 12 ಮಕ್ಕಳು ಸಹಜ ಹೆರಿಗೆಯ ಮೂಲಕ ಜನಿಸಿವೆ' ಎಂದು ಆಸ್ಪತ್ರೆಯ ಮುಖ್ಯ ಅಧೀಕ್ಷಕ ಡಾ.ಮನೋಜ್ ಕೌಶಿಕ್ ತಿಳಿಸಿದರು.

'ಆಸ್ಪತ್ರೆಯವರು ನನ್ನ ಮಗನಿಗೆ 'ಕುಂಭ್' ಎಂದು ಕರೆಯದಿದ್ದರೂ, ನಾನೇ ಆತನಿಗೆ ಆ ಹೆಸರು ಇಡುತ್ತಿದ್ದೆ. ಏಕೆಂದರೆ, ಆತ ಮಹಾಕುಂಭದಲ್ಲೇ ಜನಿಸಿದ್ದಾನೆ' ಎಂದು ಮಗುವಿನ ತಂದೆ ದೀಪಕ್ ಸಂತಸ ವ್ಯಕ್ತಪಡಿಸಿದರು.

ಉಳಿದಂತೆ ತಮ್ಮ ನಂಬಿಕೆಗೆ ಅನುಸಾರವಾಗಿ 'ಭೋಲೆನಾಥ್', 'ಭಜರಂಗಿ', 'ನಂದಿ', 'ಜಮುನಾ' ಎಂದು ನಾಮಕರಣ ಮಾಡಿದ್ದಾರೆ.

ಫೆ. 3ರಂದು ಬಸಂತ್ (ವಸಂತ) ಪಂಚಮಿಯಂದು ಒಂದು ಗಂಡು, ಹೆಣ್ಣು ಮಗು ಜನಿಸಿತ್ತು. ಅದಕ್ಕೆ ಬಸಂತ್, ಬಸಂತಿ ಎಂದು ನಾಮಕರಣ ಮಾಡಲಾಗಿದೆ. ಮಹಾಕುಂಭಮೇಳದ ಜಾಗದಲ್ಲೇ ಮಗು ಹೆರಬೇಕು ಎಂದು ಜಾರ್ಖಂಡ್, ಮಧ್ಯಪ್ರದೇಶದ ಗರ್ಭಿಣಿಯರು ಇಲ್ಲಿನ ಆಸ್ಪತ್ರೆಗೆ ಬಂದು ದಾಖಲಾಗಿದ್ದಾರೆ.

ಮಧ್ಯಪ್ರದೇಶದ ಗ್ವಾಲಿಯರ್‌ನಿಂದ ಬಂದಿದ್ದ ಗರ್ಭಿಣಿಯೊಬ್ಬರಿಗೆ ಪುಣ್ಯಸ್ನಾನದ ವೇಳೆ ಹೊಟ್ಟೆನೋವು ಕಾಣಿಸಿಕೊಂಡಿತು. ತಕ್ಷಣವೇ ಅವರನ್ನು ಆ್ಯಂಬುಲೆನ್ಸ್ ಮೂಲಕ ಆಸ್ಪತ್ರೆಗೆ ದಾಖಲಿಸಿದ ನಂತರ, ಹೆಣ್ಣು ಮಗು ಜನಿಸಿತು. ಕುಟುಂಬಸ್ಥರು ಮಗುವಿಗೆ 'ಸರಸ್ವತಿ' ಎಂದು ಹೆಸರಿಟ್ಟಿದ್ದಾರೆ.

ಮಹಾಕುಂಭ ಮೇಳಕ್ಕೆ ತೆರಳಲು ಪಟ್ನಾ ರೈಲು ನಿಲ್ದಾಣದಲ್ಲಿ ರೈಲು ಏರಲು ಪ್ರಯಾಣಿಕರು ಹರಸಾಹಸಪಟ್ಟರು ಪಿಟಿಐ ಚಿತ್ರ

ಜನಗಣತಿ ವಿಳಂಬ: ಕೇಂದ್ರದ ವಿರುದ್ಧ ಸೋನಿಯಾ ಕಿಡಿ

ನವದೆಹಲಿ (ಪಿಟಿಐ): ಜನಗಣತಿ ತಡವಾಗಿರುವ ಕಾರಣದಿಂದಾಗಿ, ಸುಮಾರು 14 ಕೋಟಿ ಜನ 'ಆಹಾರ ಭದ್ರತೆಯ ಕಾಯ್ದೆ'ಯಡಿ ನೀಡಲಾಗುವ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹಾಗಾಗಿ, ಕೇಂದ್ರ ಸರ್ಕಾರವು ಜನಗಣತಿಯನ್ನು ಆದಷ್ಟು ಬೇಗ ನಡೆಸಬೇಕು ಎಂದು ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ಸೋಮವಾರ ಒತ್ತಾಯಿಸಿದ್ದಾರೆ.

ರಾಜ್ಯಸಭೆಯಲ್ಲಿ ಶೂನ್ಯವೇಳೆಯಲ್ಲಿ ಮಾತನಾಡಿದ ಅವರು, 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ'ಯ ಫಲಾನುಭವಿಗಳನ್ನು ದಶಕಕ್ಕೂ ಹಳೆಯದಾಗಿರುವ 2011ರ ಜಾತಿಗಣತಿಯ ದತ್ತಾಂಶಗಳನ್ನು ಆಧರಿಸಿ ಗುರುತಿಸಲಾಗುತ್ತಿದೆ. ಇದರಿಂದಾಗಿ, ಸುಮಾರು 14 ಕೋಟಿ ಜನ ಅರ್ಹತೆಯಿದ್ದರೂ ಯೋಜನೆಯಿಂದ ಹೊರಗುಳಿಯುವಂತಾಗಿದೆ ಎಂದು ಆರೋಪಿಸಿದ್ದಾರೆ.

'ಪ್ರತಿ ಹತ್ತು ವರ್ಷಗಳಿಗೊಮ್ಮೆ ನಡೆಯುತ್ತಿದ್ದ ಜನಗಣತಿಯು, ಸ್ವಾತಂತ್ರ್ಯ ನಂತರ ಇದೇ ಮೊದಲ ಬಾರಿಗೆ ನಾಲ್ಕು ವರ್ಷಗಳಷ್ಟು ವಿಳಂಬವಾಗಿದೆ. ನಿಗದಿಯಂತೆ 2021ರಲ್ಲೇ ಜನಗಣತಿ ನಡೆಯಬೇಕಿತ್ತಾದರೂ, ಕೇಂದ್ರ ಸರ್ಕಾರವು ಈ ಬಗ್ಗೆ ಯಾವಾಗ ಕಾರ್ಯಪ್ರವೃತ್ತವಾಗಲಿದೆ ಎಂಬ ಸ್ಪಷ್ಟನೆ ಇಲ್ಲ. ಈ ವರ್ಷದ ಕೇಂದ್ರ ಬಜೆಟ್ ಅನ್ನು ಪರಿಶೀಲಿಸಿದರೆ ಈ ವರ್ಷವೂ ಜನಗಣತಿ ನಡೆಯುವುದು ಅನುಮಾನ' ಎಂದು ಸೋನಿಯಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಸಿಂಗ್‌ಗೆ 'ಭಾರತ ರತ್ನ' ಏಕಿಲ್ಲ?

ನವದೆಹಲಿ (ಪಿಟಿಐ): ದೇಶಕ್ಕೆ ಅಪಾರ ಕೊಡುಗೆ ನೀಡಿರುವ ಮಾಜಿ ಪ್ರಧಾನಿ, ದಿವಂಗತ ಮನಮೋಹನ ಸಿಂಗ್ ಅವರಿಗೆ 'ಭಾರತ ರತ್ನ'ವನ್ನು ಏಕೆ ಕೊಟ್ಟಿಲ್ಲ ಎಂದು ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಅವರು ಸೋಮವಾರ ರಾಜ್ಯಸಭೆಯಲ್ಲಿ ಪ್ರಶ್ನಿಸಿದರು.

ಚಿದಂಬರಂ ಹೇಳಿಕೆಗೆ ತಿರುಗೇಟು ನೀಡಿದ ಬಿಜೆಪಿ ಸಂಸದ ದಿನೇಶ್ ಶರ್ಮಾ, 'ಕಾಂಗ್ರೆಸ್, ಸಿಂಗ್ ಅವರಿಗೆ ಅಪಮಾನ ಮಾಡುವುದನ್ನು ಬಿಟ್ಟು ಬೇರೆ ಇನ್ನೇನು ನೀಡಿದೆ' ಎಂದರು.

ಮಣಿಪುರ: 7 ಉಗ್ರರು ಸೆರೆ

ಇಂಫಾಲ್ (ಪಿಟಿಐ): ನಿಷೇಧಿತ ನ್ಯಾಷನಲ್ ರೆವಲ್ಯೂಷನರಿ ಫ್ರಂಟ್ ಆಫ್ ಮಣಿಪುರ್ (ಎನ್‌ಆರ್‌ಎಫ್‌ಎಂ) ಸಂಘಟನೆಯ ಅಡಗುದಾಣವೊಂದನ್ನು ಇಂಫಾಲ ಪೂರ್ವ ಜಿಲ್ಲೆಯಲ್ಲಿ ಪತ್ತೆ ಮಾಡಿರುವ ಭದ್ರತಾ ಪಡೆಗಳು, ಏಳು ಮಂದಿ ಉಗ್ರರನ್ನು ಬಂಧಿಸಿವೆ.

ಖಚಿತ ಸುಳಿವು ಆಧರಿಸಿ ಕಾರ್ಯಾಚರಣೆ ನಡೆಸಿ ಏಳು ಉಗ್ರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಬಂಧಿತರಿಂದ ಶಸ್ತ್ರಾಸ್ತ್ರ, ಗುಂಡು ನಿರೋಧಕ ಜಾಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಶಸ್ತ್ರಾಸ್ತ್ರ ಮರುವಶ: ಐಆರ್‌ಬಿ (ಇಂಡಿಯಾ ರಿಸರ್ವ್ ಬಟಾಲಿಯನ್) ಹೊರಠಾಣೆಯಿಂದ ಲೂಟಿ ಮಾಡಲಾಗಿದ್ದ ಒಂಬತ್ತು ಶಸ್ತ್ರಾಸ್ತ್ರಗಳ ಪೈಕಿ ಎಂಟನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿವೆ ಎಂದು ಪೊಲೀಸರು ಸೋಮವಾರ ಹೇಳಿದ್ದಾರೆ.

ಮಣಿಪುರದ ತೌಬಾಲ್ ಜಿಲ್ಲೆಯ ಗಾಮುಖೊಂಗ್ ಬೆಟ್ಟದ ತಪ್ಪಲಿನ ಗುಡ್ಡದಲ್ಲಿ ಶೋಧ ನಡೆಸುವ ಸಂದರ್ಭದಲ್ಲಿ ಈ ಶಸ್ತ್ರಾಸ್ತ್ರಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ನಿಷೇಧಿತ ಕಾಂಗ್ಲೈಪಾಕ್ ಕಮ್ಯುನಿಸ್ಟ್ ಪಕ್ಷದ (ಕೆಸಿಪಿ) ಅಡಗುತಾಣವೊಂದನ್ನು ನಂತರದ ಕಾರ್ಯಾಚರಣೆಯಲ್ಲಿ ಪತ್ತೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಅರ್ಚಕರ ಮೇಲೆ 'ಹಿಂದೂ ಸೇನೆ' ಕಾರ್ಯಕರ್ತರಿಂದ ಹಲ್ಲೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಹೈದರಾಬಾದ್: 'ಹಿಂದೂ ಸೇನೆ' ಸಂಘಟನೆಯ ಕಾರ್ಯಕರ್ತರು ತೆಲಂಗಾಣದಲ್ಲಿ ಅರ್ಚಕರೊಬ್ಬರ ಮೇಲೆ ಹಲ್ಲೆ ನಡೆಸಿ ವಿವಾದ ಹುಟ್ಟುಹಾಕಿದ್ದು, ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಆರು ಮಂದಿಯನ್ನು ಬಂಧಿಸಿದ್ದಾರೆ.

ಸಂಘಟನೆಯ ಮುಖ್ಯಸ್ಥ ವೀರ ರಾಘವ ರೆಡ್ಡಿ ನೇತೃತ್ವದಲ್ಲಿ ಕಾರ್ಯಕರ್ತರು ಕೆಲ ದಿನಗಳ ಹಿಂದೆ ಚಿಲುಕೂರು ಬಾಲಾಜಿ ದೇವಸ್ಥಾನದ ಪ್ರಧಾನ ಅರ್ಚಕ ಸಿ.ಎಸ್.ರಂಗರಾಜನ್ ಮೇಲೆ ಹಲ್ಲೆ ನಡೆಸಿದ್ದಾರೆ.

ಕಪ್ಪು ಬಣ್ಣದ ಉಡುಪು ಹಾಗೂ ಕೇಸರಿ ಶಾಲು ತೊಟ್ಟಿದ್ದ ಕೆಲವರು ದೇವಸ್ಥಾನದ ಸಮೀಪದಲ್ಲೇ ಇರುವ ರಂಗರಾಜನ್ ಅವರ ನಿವಾಸಕ್ಕೆ ತೆರಳಿ ಅವರಿಗೆ ಥಳಿಸಿದ್ದಾರೆ ಎಂದು ಆರೋಪಿಸಲಾಗಿದೆ. ತಮ್ಮ ಸಂಘಟನೆಗೆ ಸ್ವಯಂಸೇವಕರನ್ನು ನೇಮಿಸಿಕೊಳ್ಳಲು ಮತ್ತು ಹಣಕಾಸಿನ ನೆರವು ನೀಡಲು ನಿರಾಕರಿಸಿದ್ದಕ್ಕೆ ಹಲ್ಲೆ ನಡೆಸಲಾಗಿದೆ ಎಂದು ವರದಿಯಾಗಿದೆ. 'ರಾಮರಾಜ್ಯ' ಸ್ಥಾಪನೆಯೇ ನಮ್ಮ ಗುರಿ ಎಂದು 'ಹಿಂದೂ ಸೇನೆ' ಈ ಹಿಂದೆ ಹೇಳಿಕೊಂಡಿತ್ತು.

ರಂಗರಾಜನ್ ನೀಡಿದ ದೂರಿನಂತೆ ರಾಘವ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅವರನ್ನು ಭಾನುವಾರ ಬಂಧಿಸಿದ್ದಾರೆ. ಸೋಮವಾರ ಬೆಳಿಗ್ಗೆ ಇಬ್ಬರು ಮಹಿಳೆಯರು ಸೇರಿದಂತೆ ಮತ್ತೆ ಐವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹಲ್ಲೆ ಪ್ರಕರಣ ಕಳೆದ ಶುಕ್ರವಾರ ನಡೆದಿದ್ದು, ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾನುವಾರ ಹರಿದಾಡಿದೆ. ರಾಘವ ರೆಡ್ಡಿ ಅವರು ನೆಲದ ಮೇಲೆ ಕುಳಿತಿದ್ದ ಅರ್ಚಕರ ಮೇಲೆ ತಮ್ಮ ಆಕ್ರೋಶ ಹೊರಹಾಕುವ ಮತ್ತು ಅವರನ್ನು ನಿಂದಿಸುವ ದೃಶ್ಯ ವಿಡಿಯೊದಲ್ಲಿದೆ.

ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ.ರಾಮ ರಾವ್ ಅವರು ಸೋಮವಾರ ರಂಗರಾಜನ್ ಅವರ ನಿವಾಸಕ್ಕೆ ಭೇಟಿ ನೀಡಿದರಲ್ಲದೆ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಆಗ್ರಹಿಸಿದರು. ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಅವರು ರಂಗರಾಜನ್ ಅವರಿಗೆ ಕರೆ ಮಾಡಿ ಘಟನೆಯ ಮಾಹಿತಿ ಪಡೆದುಕೊಂಡರು.

ಮುಂಬೈ, ಅಸ್ಸಾಂನಲ್ಲಿ ಪ್ರಕರಣ ದಾಖಲು • ಕ್ಷಮೆಯಾಚಿಸಿದ ಪಾಡ್‌ಕಾಸ್ಟರ್

ಅಶ್ಲೀಲ ಮಾತು: ರಣವೀರ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಸ್ಟ್ಯಾಂಡ್ ಅಪ್ ಕಾಮಿಡಿಯನ್ ಸಮಯ್ ರೈನಾ ಅವರ ರಿಯಾಲಿಟಿ ಶೋ 'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಕಾರ್ಯಕ್ರಮದಲ್ಲಿ ಪಾಡ್‌ಕಾಸ್ಟರ್ ರಣವೀರ್ ಇಲಾಹಾಬಾದಿಯಾ ಅವರು ಅಭಿರುಚಿಹೀನವಾಗಿ, ಅಶ್ಲೀಲವಾಗಿ ಮಾತನಾಡಿದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹರಿದಾಡುತ್ತಿದ್ದು, ದೇಶದಾದ್ಯಂತ ಭಾರಿ ವಿರೋಧ ವ್ಯಕ್ತವಾಗಿದೆ.

ರಣವೀರ್

ಮುಂಬೈನ ಇಬ್ಬರು ವಕೀಲರು ರಣವೀರ್ ಅವರ ವಿರುದ್ಧ ದೂರು ದಾಖಲಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಐವರ ವಿರುದ್ಧ ಅಸ್ಸಾಂನಲ್ಲಿಯೂ ಪ್ರಕರಣ ದಾಖಲಾಗಿದೆ. ಜನರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಆಕ್ರೋಶ ಹೊರಹಾಕುತ್ತಿದ್ದಾರೆ. ಈ ಬಳಿಕ ರಣವೀರ್ ಅವರು ವಿಡಿಯೊ ಮಾಡಿ, ಕ್ಷಮೆಯಾಚಿಸಿದ್ದಾರೆ. 'ಬಿಯರ್‌ಬೈಸೆಪ್ಸ್' ಹೆಸರಿನ ಯೂಟ್ಯೂಬ್ ಚಾನೆಲ್ ಮೂಲಕ ರಣವೀರ್ ಅವರು ಖ್ಯಾತಿಗಳಿಸಿದ್ದಾರೆ.

'ನಾನು ವಿಡಿಯೊ ನೋಡಿಲ್ಲ. ಆದರೆ, ಮಾತುಗಳು ಬಹಳ ಅಶ್ಲೀಲವಾಗಿದ್ದವು ಎಂದು ತಿಳಿಯಿತು. ಮಿತಿ ಮೀರಿದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

'ನನ್ನ ಮಾತುಗಳು ಸರಿಯಿರಲಿಲ್ಲ. ಅದರಲ್ಲಿ ಹಾಸ್ಯವೂ ಇರಲಿಲ್ಲ. ಹಾಸ್ಯ ನನ್ನ ಕ್ಷೇತ್ರವಲ್ಲ. ಕಾರ್ಯಕ್ರಮದಲ್ಲಿ ನಾನು ಹಾಗೆ ಮಾತನಾಡಬಾರದಿತ್ತು. ನನ್ನನ್ನು ಕ್ಷಮಿಸಿ' ಎಂದು ರಣವೀರ್ ಕೇಳಿಕೊಂಡಿದ್ದಾರೆ. ವಿವಿಧ ಕ್ಷೇತ್ರದ ಸೆಲೆಬ್ರಿಟಿಗಳು, ರಾಜಕಾರಣಿಗಳೂ ರಣವೀರ್ ಅವರ ಪಾಡ್‌ಕಾಸ್ಟ್‌ನಲ್ಲಿ ಭಾಗವಹಿಸಿದ್ದಾರೆ. 'ಡಿಸ್‌ರಪ್ಟರ್ ಆಫ್ ದಿ ಇಯರ್' ವಿಭಾಗದಲ್ಲಿ ರಣವೀರ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು 'ನ್ಯಾಷನಲ್ ಕ್ರಿಯೇಟರ್' ಪ್ರಶಸ್ತಿಯನ್ನು ಕಳೆದ ವರ್ಷ ನೀಡಿದ್ದರು.

ಎಪಿಸೋಡ್ ಅಳಿಸಿ: ಆಯೋಗ ಆಗ್ರಹ

ರಣವೀರ್ ಅವರು ಅಶ್ಲೀಲವಾಗಿ ಮಾತನಾಡಿದ ಎಪಿಸೋಡ್ ಅನ್ನು ಎಲ್ಲ ಸಾಮಾಜಿಕ ವೇದಿಕೆಗಳಿಂದ ತೆಗೆದು ಹಾಕಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸೋಮವಾರ ಯ್ಯೂಟ್ಯೂಬ್ ಅನ್ನು ಆಗ್ರಹಿಸಿದೆ. ಈ ಸಂಬಂಧ ಆಯೋಗದ ಸದಸ್ಯ ಪ್ರಿಯಾಂಕ್ ಕಾನೂಂಗೋ ಅವರು ಯ್ಯೂಟ್ಯೂಬ್‌ಗೆ ಪತ್ರ ಬರೆದಿದ್ದಾರೆ.

'ಇಂಡಿಯಾಸ್ ಗಾಟ್ ಟ್ಯಾಲೆಂಟ್' ಕಾರ್ಯಕ್ರಮದಲ್ಲಿ ಆಕ್ಷೇಪಾರ್ಹ ಮತ್ತು ಅಶ್ಲೀಲ ಮಾತುಗಳನ್ನು ಆಡಲಾಗುತ್ತದೆ ಎಂಬ ಬಗ್ಗೆ ನಮಗೆ ಹಲವು ದೂರುಗಳು ಬಂದಿವೆ. ಕಾರ್ಯಕ್ರಮದ ಕಂಟೆಂಟ್‌ಗಳು ಪೋಕ್ಸೊ, ಐಟಿ ಕಾಯ್ದೆಗಳು ಸೇರಿದಂತೆ ಹಲವು ಕಾಯ್ದೆಗಳನ್ನು ಉಲ್ಲಂಘಿಸುತ್ತವೆ. ಮಹಿಳೆಯರ ಹಾಗೂ ಮಕ್ಕಳ ಸುರಕ್ಷತೆ ಮತ್ತು ಗೌರವಯುತವಾಗಿ ಬದುಕುವ ಹಕ್ಕನ್ನೂ ಈ ಕಾರ್ಯಕ್ರಮವು ಉಲ್ಲಂಘಿಸುತ್ತದೆ' ಎಂದು ಪ್ರಿಯಾಂಕ್ ಹೇಳಿದ್ದಾರೆ.

ಬೀಫ್ ಬಿರಿಯಾನಿ ಪ್ರಕರಣ: ಮೂವರ ವಿರುದ್ಧ ಎಫ್‌ಐಆರ್

ಅಲಿಗಢ (ಪಿಟಿಐ): ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಸರ್ ಶಾ ಸುಲೈಮಾನ್ ಹಾಲ್‌ನಲ್ಲಿ 'ಊಟಕ್ಕೆ ದನದ ಮಾಂಸದ (ಬೀಫ್) ಬಿರಿಯಾನಿ ಲಭ್ಯವಿದೆ' ಎಂಬುದಾಗಿ ಸೂಚನಾಪತ್ರ ಅಂಟಿಸಿದ್ದ ಪ್ರಕರಣ ಸಂಬಂಧ, ಪೊಲೀಸರು ಮೂವರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾದ ಮೊಹಮ್ಮದ್ ಫಯಾಜುಲ್ಲಾ, ಮುಜಾಸ್ಸಿಮ್ ಅಹ್ಮದ್ ಹಾಗೂ ಸುಲೈಮಾನ್ ಹಾಲ್‌ನ ಪ್ರಧಾನ ಅಧಿಕಾರಿ ಎಫ್.ಆರ್. ಗೌಹರ್ ವಿರುದ್ಧ ಸಿವಿಲ್ ಲೈನ್ಸ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿದೆ. 'ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ತನಿಖೆ ಕೈಗೊಳ್ಳಲಾಗಿದೆ' ಎಂದು ಸರ್ಕಲ್ ಆಫೀಸರ್ ಅಭಯ್ ಪಾಂಡೆ ತಿಳಿಸಿದ್ದಾರೆ.

'ಅಪರಾಧ ಎಸಗಿದವ ಸಂಸತ್ ಪ್ರವೇಶಿಸುವುದು ಎಷ್ಟು ಸರಿ?'

ನವದೆಹಲಿ (ಪಿಟಿಐ): ರಾಜಕೀಯದ ಅಪರಾಧೀಕರಣವು ಬಹಳ ಗಂಭೀರವಾದ ವಿಚಾರ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಕ್ರಿಮಿನಲ್ ಪ್ರಕರಣದಲ್ಲಿ ಅಪರಾಧಿ ಎಂದು ಘೋಷಿತನಾದ ವ್ಯಕ್ತಿಯು ಸಂಸತ್ತಿಗೆ ಮರಳುವುದು ಹೇಗೆ ಸರಿ ಎಂದು ಪ್ರಶ್ನಿಸಿದೆ.

ಈ ವಿಚಾರದಲ್ಲಿ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರ ನೆರವು ಬೇಕು ಎಂದು ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತ ಮತ್ತು ಮನಮೋಹನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ವಕೀಲರಾದ ಅಶ್ವಿನಿ ಉಪಾಧ್ಯಾಯ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ಪೀಠವು ನಡೆಸಿತು. ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8 ಮತ್ತು 9ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿರುವುದಕ್ಕೆ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಚುನಾವಣಾ ಆಯೋಗವು ಮೂರು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಪೀಠ ಸೂಚಿಸಿದೆ.

'ವ್ಯಕ್ತಿಯು ಅಪರಾಧಿ ಎಂದು ಘೋಷಣೆಯಾಗಿ, ಅದನ್ನು ಮೇಲಿನ ಹಂತದ ನ್ಯಾಯಾಲಯ ಪುರಸ್ಕರಿಸಿದ ನಂತರ ಅಂತಹ ವ್ಯಕ್ತಿ ಸದನಕ್ಕೆ ಮರಳುವುದು ಹೇಗೆ ಸರಿ' ಎಂದು ಪೀಠ ಕೇಳಿತು.

ಪರೇಡ್

ರಾಂಚಿಯಲ್ಲಿ ನಡೆದ 68ನೇ ಅಖಿಲ ಭಾರತ ಪೊಲೀಸ್ ಕೂಟದಲ್ಲಿ ಶ್ವಾನದಳ ತಂಡದ ಸದಸ್ಯರು ಪರೇಡ್‌ನಲ್ಲಿ ಪಾಲ್ಗೊಂಡರು ಪಿಟಿಐ ಚಿತ್ರ

ಭಾರತದ 'ಶಕ್ತಿ'ಯ ದರ್ಶನ

ಒಂದನೇ ಪುಟದಿಂದ...

ಯಲಹಂಕದ ವಾಯುನೆಲೆಯಲ್ಲಿ ಇದೇ 14ರವರೆಗೆ ಐದು ದಿನ ನಡೆಯುವ 'ಏರೊ ಇಂಡಿಯಾ 2025' ವೈಮಾನಿಕ ಪ್ರದರ್ಶನಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸೋಮವಾರ ಚಾಲನೆ ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಅವರಿಗೆ ಜತೆಯಾದರು.

ನಾಗಾಲ್ಯಾಂಡ್ ಮುಖ್ಯಮಂತ್ರಿ ನೆಫಿಯು ರಿಯೊ, ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ, ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ಸಿಂಗ್ ದ್ವಿವೇದಿ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ರಕ್ಷಣಾ ಕಾರ್ಯದರ್ಶಿ ಸಂಜೀವ್ ಕುಮಾರ್ ಮತ್ತು ವಾಯುಪಡೆಯ ವೈಸ್ ಚೀಫ್ ಏರ್ ಮಾರ್ಷಲ್ ಎಸ್.ಪಿ. ಧಾರ್ಕರ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಯುವ ಏರೋ ಇಂಡಿಯಾದ 15ನೇ ಆವೃತ್ತಿಗೆ ಚಾಲನೆ ಸಿಕ್ಕಿದೆ. ವೈಮಾನಿಕ ಪ್ರದರ್ಶನ ನೋಡುಗರಿಗೆ ಸಾಹಸ, ರೋಮಾಂಚನ ಹಾಗೂ ಮನರಂಜನೆಯಷ್ಟೇ. ಆದರೆ ಅದನ್ನೂ ಮೀರಿ ಇಲ್ಲಿ ಆಯಾ ದೇಶಗಳು ತಮ್ಮಲ್ಲಿ ತಯಾರಾದ ಯುದ್ಧ ವಿಮಾನಗಳ ಮಾರಾಟಕ್ಕೆ ಇದು ಏಷ್ಯಾದ ಒಂದು ಪ್ರಮುಖ ಮಾರಾಟ ಸಂತೆ.

ಉದ್ಘಾಟನೆ ಸಮಾರಂಭ ಮುಗಿಯುತ್ತಿದ್ದಂತೆ 'ತೇಜಸ್ ಮಾರ್ಕ್–1' ಆಕಾಶದಲ್ಲಿ ಪ್ರತ್ಯಕ್ಷವಾಯಿತು. ಬಾನೆತ್ತರದಲ್ಲೇ ಪಲ್ಟಿ ಹೊಡೆಯುತ್ತಾ ವಿವಿಧ ಕಸರತ್ತು ಪ್ರದರ್ಶಿಸಿತು. ಆನಂತರ 'ಹಿಂದೂಸ್ತಾನ್ ಟರ್ಬೊ ಟ್ರೈನರ್–40' ವಿಮಾನವು ಹಕ್ಕಿಯಂತೆ ಹಾರಾಡಿತು. ಭಾರಿ ಸದ್ದು ಮಾಡಿಕೊಂಡು ಬಂದ 'ಜೆವಿ–26' ಯುದ್ಧ ವಿಮಾನವು ವಿವಿಧ ಕಸರತ್ತುಗಳನ್ನು ತೋರಿತು.

ಗಂಟೆಗೆ 900 ಕಿಲೋಮೀಟರ್ ವೇಗದಲ್ಲಿ ಚಲಿಸಬಲ್ಲ, ಅತ್ಯುತ್ತಮ 'ಫೈಟರ್ ಜೆಟ್' ಎಂದು ಹೆಸರು ಪಡೆದಿರುವ ಸುಖೋಯ್ ಎಂಕೆ30–ಐ ನೆಲದಿಂದ ಕೆಲವೇ ಅಡಿಗಳ ಮೇಲೆ ಹಾರಿಹೋಗಿ ವೀಕ್ಷಕರ ಎದೆಬಡಿತ ಅರೆಕ್ಷಣ ಸ್ತಬ್ದಗೊಳ್ಳುವಂತೆ ಮಾಡಿತು.

ಎಚ್‌ಎಎಲ್ ತುಮಕೂರಿನಲ್ಲಿ ತಯಾರು ಮಾಡಿದ ಏಷ್ಯಾದ ಅತಿದೊಡ್ಡ ಹೆಲಿಕಾಪ್ಟರ್ ಹೊಗೆ ಉಗುಳುತ್ತಾ ಆಕಾಶದಲ್ಲಿ ನಲಿಯಿತು. ಒಂಬತ್ತು ಸೂರ್ಯಕಿರಣ್ ವಿಮಾನಗಳು ಜತೆಯಾಗಿ ಹಾರಿದ್ದಲ್ಲದೇ ಕೇಸರಿ, ಬಿಳಿ, ಹಸಿರು ಬಣ್ಣದ ಹೊಗೆಯಲ್ಲಿ ಚಿತ್ತಾರ ಮೂಡಿಸಿದವು. ಆಕಾಶದಲ್ಲಿಯೇ ಪ್ರೀತಿಯ ಸಂಕೇತದ (ಹೃದಯದ ಚಿತ್ರ) ಚಿತ್ತಾರ ಮೂಡಿಸಿ ನೋಡುಗರ ಎದೆಯಲ್ಲಿಯೂ ಪ್ರೀತಿ ಉಕ್ಕಿಸಿದವು. ಎದುರಾಬದುರು ಡಿಕ್ಕಿ ಹೊಡೆಯುವ ರೀತಿಯಲ್ಲಿ ಚಲಿಸಿ ರೋಮಾಂಚನಗೊಳಿಸಿದವು. 5 ಮೀಟರ್ ಅಂತರದಲ್ಲಿ 9 ವಿಮಾನಗಳು ಕಸರತ್ತು ಪ್ರದರ್ಶಿಸಿ ಹೃದಯಬಡಿತ ಹೆಚ್ಚಿಸಿದವು.

98 ದೇಶಗಳು ಭಾಗಿ: ರಕ್ಷಣಾ ಸಾಧನಗಳ ಈ ಬೃಹತ್ ಪ್ರದರ್ಶನದಲ್ಲಿ 98 ದೇಶಗಳ ಗಣ್ಯರು, ಉದ್ಯಮಿಗಳು ಹಾಗೂ ಹೂಡಿಕೆದಾರರು ಪಾಲ್ಗೊಂಡಿದ್ದಾರೆ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಇಸ್ರೇಲ್, ಜರ್ಮನಿ ಸೇರಿದಂತೆ ವೈಮಾನಿಕ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ದೇಶಗಳು ಈಗಾಗಲೇ ಅಂಗಡಿ ತೆರೆದುಕೊಂಡು ಕುಳಿತಿವೆ. ತಾವು ಅಭಿವೃದ್ಧಿಪಡಿಸಿರುವ ತಂತ್ರಜ್ಞಾನವನ್ನು ಇಲ್ಲಿ ಬಿಕರಿಗೆ ಇಟ್ಟಿವೆ. ಎಂಜಿನ್‌ಗಳು, ಟರ್ಬೈನ್ ರೋಟರ್‌ಗಳು, ಬ್ಲೇಡ್‌ಗಳು, ಸ್ವಿಚ್ಚುಗಳು, ಆಕ್ಸಿಜನ್ ಸಿಲಿಂಡರ್‌ಗಳು, ಕ್ಷಿಪಣಿಗಳು ಪ್ರದರ್ಶನದಲ್ಲಿ ಮಾರಾಟಕ್ಕೆ ಲಭ್ಯವಿವೆ.

ಬಿರೇನ್ ಸಿಂಗ್ ರಾಜೀನಾಮೆ ನಂತರ ಸ್ಪೀಕರ್ ಭೇಟಿ ಮಾಡಿದ ಬಿಜೆಪಿ ಉಸ್ತುವಾರಿ

ಮಣಿಪುರ: ಸಭೆ ನಡೆಸಿದ ಸಂಬಿತ್ ಪಾತ್ರಾ

ಇಂಫಾಲ್ (ಪಿಟಿಐ): ಬಿಜೆಪಿ ಮಣಿಪುರ ಉಸ್ತುವಾರಿ ಸಂಬಿತ್ ಪಾತ್ರಾ ಅವರು ಪಕ್ಷದ ಕೆಲವು ಶಾಸಕರ ಜೊತೆ ಇಲ್ಲಿನ ಹೋಟೆಲ್ ಒಂದರಲ್ಲಿ ಸೋಮವಾರ ಸಭೆ ನಡೆಸಿ, ಪಕ್ಷದ ಮುಂದಿನ ನಡೆ ಬಗ್ಗೆ ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಎನ್. ಬಿರೇನ್ ಸಿಂಗ್ ಅವರು ಮಣಿಪುರ ಮುಖ್ಯಮಂತ್ರಿ ಸ್ಥಾನಕ್ಕೆ ಭಾನುವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಪಾತ್ರಾ ಅವರು ಸ್ಪೀಕರ್ ಥೊಕ್ಚೊಮ್ ಸತ್ಯಬ್ರತ ಅವರನ್ನು ಕೂಡ ಭೇಟಿ ಮಾಡಿದರು ಎಂದು ಮೂಲಗಳು ಹೇಳಿವೆ. ಬಿಜೆಪಿಯ ಶಾಸಕರು ರಾಜ್ಯದಲ್ಲಿ ಅಥವಾ ಹೊರಗಡೆ ಮುಂದಿನ 48 ಗಂಟೆಗಳಲ್ಲಿ ಇನ್ನಷ್ಟು ಸಭೆಗಳನ್ನು ನಡೆಸುವ ಸಾಧ್ಯತೆ ಇದೆ.

ಸಂಬಿತ್ ಪಾತ್ರಾ

ರಾಜಧಾನಿ ಇಂಫಾಲ್‌ನ ಎಲ್ಲೆಡೆ ಭದ್ರತೆ ಬಿಗಿಗೊಳಿಸಲಾಗಿದೆ. ಅದರಲ್ಲೂ, ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಬಿರೇನ್ ಸಿಂಗ್ ಅವರ ರಾಜೀನಾಮೆಯನ್ನು ಸ್ವಾಗತಿಸಿರುವ ಮಣಿಪುರ ಕಾಂಗ್ರೆಸ್ ಅಧ್ಯಕ್ಷ ಕೆ. ಮೇಘಚಂದ್ರ ಅವರು, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ನಡೆಯನ್ನು ವಿರೋಧಿಸುವುದಾಗಿ ತಿಳಿಸಿದ್ದಾರೆ.

'ಹೊಸ ನಾಯಕ ಹಾಗೂ ಹೊಸ ಸರ್ಕಾರವನ್ನು ಕಾಂಗ್ರೆಸ್ ಬಯಸುತ್ತದೆ. ರಾಷ್ಟ್ರಪತಿ ಆಡಳಿತವನ್ನು ನಾವು ವಿರೋಧಿಸುತ್ತೇವೆ. ಏಕೆಂದರೆ ಕೇಂದ್ರ ಸರ್ಕಾರವು ಜನರ ಆದೇಶವನ್ನು ಗೌರವಿಸಬೇಕು' ಎಂದು ಅವರು ಸುದ್ದಿಗಾರರ ಬಳಿ ಹೇಳಿದರು.

ರಾಜ್ಯದ ಬಜೆಟ್ ಅಧಿವೇಶನವು ಸೋಮವಾರದಿಂದ ಆರಂಭವಾಗಬೇಕಿತ್ತು. ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ವಿರೋಧ ಪಕ್ಷಗಳು ಮುಂದಾಗಿದ್ದವು. ಆದರೆ ಸಿಂಗ್ ರಾಜೀನಾಮೆಯ ನಂತರ ಅಧಿವೇಶನವನ್ನು ರದ್ದುಪಡಿಸಲಾಗಿದೆ.

ಸಿಂಗ್ ರಾಜೀನಾಮೆಯನ್ನು ಸ್ವಾಗತಿಸಿರುವ ಎನ್‌ಪಿಪಿ, ರಾಜ್ಯದಲ್ಲಿ ಶಾಂತಿ ನೆಲಸಲು ಬಿಜೆಪಿ ಜೊತೆ ಸಹಕರಿಸುವ ಬದ್ಧತೆಯನ್ನು ವ್ಯಕ್ತಪಡಿಸಿದೆ. ಈ ಪಕ್ಷಕ್ಕೆ ಏಳು ಶಾಸಕರ ಬಲ ಇದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಮರಳಿದ ನಂತರ ಬಿರೇನ್ ಸಿಂಗ್ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

ರಾಜ್ಯದ ಕುಕಿ ಹಾಗೂ ಮೈತೇಯಿ ಸಮುದಾಯಗಳ ನಡುವೆ ಶಾಂತಿ ಸ್ಥಾಪಿಸಲು ಕೇಂದ್ರ ಸರ್ಕಾರ ನಡೆಸುತ್ತಿರುವ ಯತ್ನಗಳಿಗೆ ಸಿಂಗ್ ರಾಜೀನಾಮೆಯಿಂದ ಬಲ ಸಿಗಲಿದೆ ಎಂದು ಬಿಜೆಪಿ ಮೂಲಗಳು ವಿಶ್ವಾಸ ವ್ಯಕ್ತಪಡಿಸಿವೆ.

ವಿಳಂಬವಾಗಿ ರಾಜೀನಾಮೆ: ಪ್ರತಿಪಕ್ಷಗಳು

ನವದೆಹಲಿ (ಪಿಟಿಐ): ಮಣಿಪುರ ಮುಖ್ಯಮಂತ್ರಿ ಬಿರೇನ್ ಸಿಂಗ್ ಈ ಹಿಂದೆಯೇ ರಾಜೀನಾಮೆ ನೀಡಬೇಕಿತ್ತು. ಅವರ ರಾಜೀನಾಮೆಯು ತುಂಬಾ ವಿಳಂಬವಾಗಿದೆ. ಜೊತೆಗೆ, ಮಣಿಪುರ ವಿಧಾನಸಭೆಯಲ್ಲಿ ಕಾಂಗ್ರೆಸ್ ಮಂಡಿಸಲು ಮುಂದಾಗಿದ್ದ ಅವಿಶ್ವಾಸ ನಿರ್ಣಯದಿಂದ ಪಾರಾಗಲು ಅವರ ರಾಜೀನಾಮೆ ಪಡೆಯಲಾಗಿದೆ ಎಂದು ವಿರೋಧ ಪಕ್ಷಗಳ ಮುಖಂಡರು ಆರೋಪಿಸಿದ್ದಾರೆ.

ಕೇರಳದ ಮಲಪ್ಪುರಂನಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ವಯನಾಡ್ ಕ್ಷೇತ್ರದ ಸಂಸದೆ ಪ್ರಿಯಾಂಕಾ ಗಾಂಧಿ, 'ಬಿರೇನ್ ಅವರು ಹಿಂದೆಯೇ ರಾಜೀನಾಮೆ ನೀಡಬೇಕಿತ್ತು. ಎರಡು ವರ್ಷಗಳು ಕಳೆದರೂ ಮಣಿಪುರದಲ್ಲಿ ಹಿಂಸಾಚಾರ ನಿಂತಿಲ್ಲ. ಅವರ ರಾಜೀನಾಮೆಯು ಅವಧಿ ಮೀರಿದ್ದಾಗಿದೆ' ಎಂದು ಹೇಳಿದ್ದಾರೆ.

ಶಿವಸೇನಾ (ಉದ್ಧವ್ ಠಾಕ್ರೆ ಬಣ) ರಾಜ್ಯಸಭಾ ಸದಸ್ಯೆ ಪ್ರಿಯಾಂಕಾ ಚತುರ್ವೇದಿ, 'ಇದು ತುಂಬಾ ತಡವಾಯಿತು... ಮಣಿಪುರದ ಜನರು, ಅವರದ್ದೇ ಪಕ್ಷದ ಮುಖಂಡರು ಮತ್ತು ಪ್ರತಿಪಕ್ಷಗಳ ನಾಯಕರು ಬಿರೇನ್ ಸಿಂಗ್ ರಾಜೀನಾಮೆಗೆ ಎರಡು ವರ್ಷಗಳಿಂದ ಒತ್ತಾಯಿಸುತ್ತಿದ್ದರು' ಎಂದಿದ್ದಾರೆ.

ಹಿಂಸಾಚಾರ ಆರಂಭವಾದಾಗ ನೈತಿಕ ಹೊಣೆ ಹೊತ್ತು ರಾಜೀನಾಮೆ ಸಲ್ಲಿಸದ ಸಿಂಗ್, ಇದೀಗ ಅವಿಶ್ವಾಸ ನಿರ್ಣಯವನ್ನು ಎದುರಿಸಲಾಗದೆ ರಾಜೀನಾಮೆ ನೀಡಿದ್ದಾರೆ.

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

ಅವಿಶ್ವಾಸ ನಿರ್ಣಯದ ವೇಳೆ ತಮಗೆ ಸೋಲಾಗಲಿದೆ ಎಂಬುದು ಬಿರೇನ್ ಅವರಿಗೆ ಗೊತ್ತಿತ್ತು. ಅವರ ಆಡಳಿತದ ವೈಫಲ್ಯದಿಂದಾಗಿ ರಾಜ್ಯ ಸಂಘರ್ಷಕ್ಕೆ ಸಿಲುಕಿದೆ.

ಕೆ. ಮೇಘಚಂದ್ರ
ಮಣಿಪುರ ಕಾಂಗ್ರೆಸ್ ಅಧ್ಯಕ್ಷ

ಬಿರೇನ್ ಸಿಂಗ್ ಅವರು ಉದ್ದೇಶಿತ ಅವಿಶ್ವಾಸ ನಿರ್ಣಯಕ್ಕೆ ಬೆದರಿದ್ದರು. ಸರ್ಕಾರ ಉರುಳುವುದು ಖಚಿತವಾಗಿತ್ತು.

ಎಂ. ತೆಂಗಿನ್‌ಮಾಂಗ್ ಹಾವೊಕಿಪ್
ಕುಕಿ ವಿದ್ಯಾರ್ಥಿ ನಾಯಕ

ಬಿರೇನ್ ನಾಯಕತ್ವ ದಲ್ಲಿ ವಿಶ್ವಾಸ ಕಳೆದುಕೊಂಡಿದ್ದೆವು. ಆದರೆ ಎನ್‌ಡಿಎ ಮಿತ್ರಕೂಟದ ಪಕ್ಷವಾಗಿ ರಾಜ್ಯದಲ್ಲಿ ಸಹಜ ಸ್ಥಿತಿ ಮರಳಲು ಕೆಲಸ ಮಾಡುತ್ತೇವೆ.

ಶೇಖ್ ನೂರುಲ್ ಹಸನ್,
ಎನ್‌ಪಿಪಿ ಶಾಸಕಾಂಗ ಪಕ್ಷದ ನಾಯಕ

ಇಸ್ಲಾಂಗೆ ಮತಾಂತರ ಐವರ ಬಂಧನ

ಬಿಜ್ನೋರ್ (ಪಿಟಿಐ): ಉತ್ತರ ಪ್ರದೇಶದಲ್ಲಿ ಹಿಂದೂ ವ್ಯಕ್ತಿಯನ್ನು ಇಸ್ಲಾಂಗೆ ಮತಾಂತರ ಮಾಡಿ, ಇಸ್ಲಾಂ ಸಂಪ್ರದಾಯದಂತೆ ಮದುವೆ ಮಾಡಿಸಿದ ಆರೋಪದಡಿಯಲ್ಲಿ ಮೌಲ್ವಿ ಮತ್ತು ಮಹಿಳೆ ಸೇರಿದಂತೆ ಐವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಪುರಾನಾ ಧಾಮಪುರ ನಿವಾಸಿಯಾದ ಜಸ್ವಂತ್ ಸಿಂಗ್ ಈ ಸಂಬಂಧ ಭಾನುವಾರ ದೂರು ನೀಡಿದ್ದರು.

'ನನ್ನ ಮಗ ಮುಕುಲ್ ಮುಸ್ಲಿಂ ಮಹಿಳೆ ಜೊತೆ ಸಂಬಂಧ ಹೊಂದಿದ್ದ. ಆ ಮಹಿಳೆಯು ತನ್ನ ತಂದೆ, ತಾಯಿ, ಮೌಲ್ವಿಯೊಂದಿಗೆ ಮುಕುಲ್‌ನನ್ನು ಶನಿವಾರ ರಾತ್ರಿ ಮದರಸಾಕ್ಕೆ ಕರೆದೊಯ್ದು, ಆತನನ್ನು ಇಸ್ಲಾಂಗೆ ಮತಾಂತರ ಮಾಡಿದ್ದಾರೆ. ಜೊತೆಗೆ ಇಸ್ಲಾಂ ಸಂಪ್ರದಾಯದಂತೆ ಮದುವೆ ಮಾಡಿದ್ದಾರೆ' ಎಂದು ಮುಕುಲ್ ಅವರ ತಂದೆ ದೂರಿನಲ್ಲಿ ತಿಳಿಸಿದ್ದಾರೆ.

ಕಿವೀಸ್ ಗೆಲುವಿನಲ್ಲಿ ಮಿಂಚಿದ ಕೇನ್

ಲಾಹೋರ್ (ಎಎಫ್‌ಪಿ): ಪದಾರ್ಪಣೆ ಪಂದ್ಯದಲ್ಲೇ ದಕ್ಷಿಣ ಆಫ್ರಿಕಾ ಆರಂಭ ಆಟಗಾರ ಮ್ಯಾಥ್ಯೂ ಬ್ರೀಟ್ಜ್‌ಕೆ ಅವರ ದಾಖಲೆಯ ಆಟವಾಡಿದರು. ಆದರೆ ಅವರ ಶತಕದಾಟ, ಅನುಭವಿ ಕ್ರಿಕೆಟಿಗ ಕೇನ್ ವಿಲಿಯಮ್ಸನ್ ಅವರ ಅಮೋಘ ಶತಕದ ಎದುರು ಕಳೆಗುಂದಿತು. ವಿಲಿಯಮ್ಸನ್ ಅವರ ಅಜೇಯ 133 (113ಎ, 4x13, 6x2) ಶತಕದ ನೆರವಿನಿದ ನ್ಯೂಜಿಲೆಂಡ್ ತಂಡ ತ್ರಿಕೋನ ಸರಣಿ ಏಕದಿನ ಪಂದ್ಯದಲ್ಲಿ ಸೋಮವಾರ ದಕ್ಷಿಣ ಆಫ್ರಿಕಾ ತಂಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿತು.

ಬ್ರೀಟ್ಜ್‌ಕೆ 148 ಎಸೆತಗಳಲ್ಲಿ 150 ರನ್ ಬಾರಿಸಿದರು. ಇದು ಏಕದಿನ ಅಂತರರಾಷ್ಟ್ರೀಯ ಪಂದ್ಯದಲ್ಲಿ ಆಟಗಾರನೊಬ್ಬ ಪದಾರ್ಪಣೆ ಪಂದ್ಯದಲ್ಲಿ ಗಳಿಸಿದ ಅತ್ಯಧಿಕ ಮೊತ್ತ ಎನಿಸಿತು. 1978ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಪದಾರ್ಪಣೆ ಪಂದ್ಯದಲ್ಲಿ ಡೆಸ್ಮಂಡ್ ಹೇನ್ಸ್ 148 ರನ್ ಗಳಿಸಿದ್ದು ಇದುವರೆಗಿನ ದಾಖಲೆ ಆಗಿತ್ತು. ಆದರೆ ಬ್ರೀಟ್ಜ್‌ಕೆ ಅವರು ಚಾಂಪಿಯನ್ಸ್ ಟ್ರೋಫಿ ತಂಡದಲ್ಲಿ ಸ್ಥಾನ ಪಡೆದಿಲ್ಲ.

ಮ್ಯಾಥ್ಯೂ ಬ್ರೀಟ್ಜ್‌ಕೆ ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 50 ಓವರುಗಳಲ್ಲಿ 6 ವಿಕೆಟ್‌ಗೆ 304 (ಮ್ಯಾಥ್ಯೂ ಬ್ರೀಟ್ಜ್‌ಕೆ 150, ವಿಯಾನ್ ಮುಲ್ಡರ್ 64, ಮ್ಯಾಟ್ ಹೆನ್ರಿ 59ಕ್ಕೆ2, ವಿಲಿಯಂ ಓ ರೂರ್ಕಿ 72ಕ್ಕೆ2); ನ್ಯೂಜಿಲೆಂಡ್: 48.4 ಓವರುಗಳಲ್ಲಿ 4 ವಿಕೆಟ್‌ಗೆ 308 (ಕೇನ್ ವಿಲಿಯಮ್ಸನ್ ಔಟಾಗದೇ 133, ಡೆವಾನ್ ಕಾನ್ವೆ 97, ಗ್ಲೆನ್ ಫಿಲಿಪ್ಸ್ ಔಟಾಗದೇ 28; ಸೆನುರಾನ್ ಮುತ್ತುಸಾಮಿ 50ಕ್ಕೆ2). ಪಂದ್ಯದ ಆಟಗಾರ: ಕೇನ್ ವಿಲಿಯಮ್ಸನ್.

38ನೇ ರಾಷ್ಟ್ರೀಯ ಕ್ರೀಡಾಕೂಟ: ಟೆನಿಸ್‌ನಲ್ಲಿ ಕರ್ನಾಟಕಕ್ಕೆ ಮತ್ತಷ್ಟು ಪದಕ

ಪ್ರಜ್ವಲ್–ಪೂಣಚ್ಚ ಜೋಡಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎಸ್.ಡಿ. ಪ್ರಜ್ವಲ್ ದೇವ್ ಮತ್ತು ನಿಕಿ ಪೂಣಚ್ಚ ಜೋಡಿ ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದ ಟೆನಿಸ್‌ನ ಪುರುಷರ ಡಬಲ್ಸ್‌ನಲ್ಲಿ ಚಿನ್ನದ ಸಾಧನೆ ಮಾಡಿದೆ.

ಪ್ರಜ್ವಲ್– ಪೂಣಚ್ಚ ಜೋಡಿಯು ಸೋಮವಾರ ನಡೆದ ಫೈನಲ್ ಹಣಾಹಣಿಯಲ್ಲಿ 6-3, 6-1ರಿಂದ ಅಗ್ರ ಶ್ರೇಯಾಂಕದ ಸರ್ವಿಸಸ್‌ನ ಇಶಾಕ್ ಇಕ್ಬಾಲ್ ಮತ್ತು ಫೈಸಲ್ ಕಮರ್ ಅವರನ್ನು ಮಣಿಸಿ, ರಾಷ್ಟ್ರೀಯ ಕ್ರೀಡಾಕೂಟದ ಇತಿಹಾಸದಲ್ಲಿ ಈ ವಿಭಾಗದಲ್ಲಿ ಕರ್ನಾಟಕಕ್ಕೆ ಮೊದಲ ಚಿನ್ನ ತಂದುಕೊಟ್ಟಿತು.

ಗೋವಾದಲ್ಲಿ ನಡೆದಿದ್ದ 36ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪ್ರಜ್ವಲ್ ಅವರು ಆದಿಲ್ ಕಲ್ಯಾಣಪುರ್ ಅವರೊಂದಿಗೆ ಬೆಳ್ಳಿ ಪದಕ ಗೆದ್ದಿದ್ದರು. ಆದರೆ, ಈ ಬಾರಿ ಪೂಣಚ್ಚ ಅವರೊಂದಿಗೆ ಪದಕದ ಬಣ್ಣವನ್ನು ಬದಲಾಯಿಸಿದ್ದಾರೆ.

ಡಬಲ್ ಕಂಚು: ಸಿಂಗಲ್ಸ್ ಸ್ಪರ್ಧೆಯಲ್ಲಿ ಕರ್ನಾಟಕ ಆಟಗಾರರು ಡಬಲ್ ಕಂಚಿನ ಸಾಧನೆ ಮಾಡಿದರು. ಪ್ರಜ್ವಲ್ ದೇವ್ ಅವರು ಪುರುಷರ ವಿಭಾಗದ ಸೆಮಿಫೈನಲ್ ಹಣಾಹಣಿಯಲ್ಲಿ 7-5, 4-6, 1-6ರಿಂದ ಸರ್ವಿಸಸ್‌ನ ಇಶಾಕ್ ಇಕ್ಬಾಲ್ ಅವರಿಗೆ ಮಣಿದು, ಕಂಚಿನ ಪದಕಕ್ಕೆ ತೃಪ್ತಿಪಟ್ಟರು. ಮೊದಲ ಸೆಟ್‌ನಲ್ಲಿ ಮುನ್ನಡೆ ಸಾಧಿಸಿದ್ದ ಮೈಸೂರಿನ ಆಟಗಾರ ನಂತರದ ಸೆಟ್‌ಗಳಲ್ಲಿ ಹಿಡಿತ ಕಳೆದುಕೊಂಡರು.

ಫೈನಲ್‌ನಲ್ಲಿ ಇಶಾಕ್ ಅವರು ಗುಜರಾತ್‌ನ ದೇವ್ ಜಾವಿಯಾ ಅವರನ್ನು ಎದುರಿಸಲಿದ್ದಾರೆ. ಜಾವಿಯಾ ಅವರು ಮತ್ತೊಂದು ಸೆಮಿಫೈನಲ್‌ನಲ್ಲಿ 6-2, 3-6, 6-4ರಿಂದ ತಮಿಳುನಾಡಿನ ಮನೀಷ್ ಸುರೇಶ್ ಕುಮಾರ್ ಅವರನ್ನು ಸೋಲಿಸಿದರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಸರ್ವಿಸಸ್	45	18	17	80
ಮಹಾರಾಷ್ಟ್ರ	33	48	48	129
ಕರ್ನಾಟಕ	32	15	19	66
ಹರಿಯಾಣ	24	33	36	93
ಮಧ್ಯಪ್ರದೇಶ	24	16	18	58
ತಮಿಳುನಾಡು	19	23	24	66
ಉತ್ತರಾಖಂಡ	17	27	33	77

ಕರ್ನಾಟಕದ ಉದಯೋನ್ಮುಖ ಆಟಗಾರ್ತಿ ಅಮೋದಿನಿ ವಿ. ನಾಯ್ಕ್ ಅವರು ಮಹಿಳೆಯರ ಸಿಂಗಲ್ಸ್‌ನ ಸೆಮಿಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ವೈಷ್ಣವಿ ಅಡ್ಕರ್ ಅವರಿಗೆ ಶರಣಾಗಿ, ಕಂಚು ತಮ್ಮದಾಗಿಸಿಕೊಂಡರು. ಕ್ವಾರ್ಟರ್ ಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಅದಿತಿ ರಾವತ್ ಅವರಿಗೆ ಆಘಾತ ನೀಡಿದ್ದ ಕರ್ನಾಟಕದ ಆಟಗಾರ್ತಿ ಮೊದಲ ಸೆಟ್ ಅನ್ನು 0–6ರಿಂದ ಕಳೆದುಕೊಂಡ ಬಳಿಕ ಸ್ಪರ್ಧೆಯಿಂದ ಹಿಂದೆ ಸರಿದರು.

ಫೈನಲ್‌ನಲ್ಲಿ ವೈಷ್ಣವಿ ಅವರು ಗುಜರಾತ್‌ನ ವೈದೇಹಿ ಚೌಧರಿ ಅವರನ್ನು ಎದುರಿಸುವರು. ವೈದೇಹಿ ಮತ್ತೊಂದು ಸೆಮಿಫೈನಲ್ ನಲ್ಲಿ 6-2, 6-0ಯಿಂದ ಮಹಾರಾಷ್ಟ್ರದ ಆಕಾಂಕ್ಷಾ ನಿಟ್ಟೂರ್ ಅವರನ್ನು ಸೋಲಿಸಿದರು.

ಚಿನ್ನ ಗೆದ್ದ ಕರ್ನಾಟಕದ ಪ್ರಜ್ವಲ್ ದೇವ್ ಮತ್ತು ನಿಕಿ ಪೂಣಚ್ಚ

ಕರ್ನಾಟಕ ವನಿತೆಯರ ರಿಲೆ ತಂಡ ಬೆಳ್ಳಿ ಸಾಧನೆ

ರಾಷ್ಟ್ರೀಯ ಕ್ರೀಡಾಕೂಟದ 4x400 ಮೀಟರ್ ಮಹಿಳೆಯರ ರಿಲೆ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದ ಕರ್ನಾಟಕದ ಪ್ರಾಂಜಾ ಕೆ, ಜ್ಯೋತಿಕಾ, ಅಯ್ಯಪ್ಪ (ಕೋಚ್), ಉದಯ ಕುಮಾರ್ (ಕೋಚ್), ಅರ್ಪಿತಾ ಇ.ಬಿ. ಮತ್ತು ದೀಕ್ಷಿತಾ ಗೌಡ

ಡೆಹ್ರಾಡೂನ್ (ಪಿಟಿಐ): ಕರ್ನಾಟಕದ 4x400 ಮೀಟರ್ ಮಹಿಳೆಯರ ರಿಲೆ ತಂಡವು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಬೆಳ್ಳಿ ಪದಕ ಗೆದ್ದಿದೆ. ಅಥ್ಲೆಟಿಕ್ಸ್ ಸ್ಪರ್ಧೆಯ ಮೂರನೇ ದಿನವಾದ ಸೋಮವಾರ ರಾಜ್ಯಕ್ಕೆ ದಕ್ಕಿದ ಏಕೈಕ ಪದಕ ಇದಾಗಿದೆ.

ದೀಕ್ಷಿತಾ ಗೌಡ, ಅರ್ಪಿತಾ ಇ.ಬಿ, ಜ್ಯೋತಿಕಾ ಮತ್ತು ಪ್ರಾಂಜಾ ಕೆ. ಅವರನ್ನು ಒಳಗೊಂಡ ಕರ್ನಾಟಕ ತಂಡವು 3 ನಿಮಿಷ 43.89ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. ಪಂಜಾಬ್ ವನಿತೆಯರು (3 ನಿಮಿಷ 41.77ಸೆ) ಚಿನ್ನ ಗೆದ್ದರೆ, ಹರಿಯಾಣ ತಂಡ (3 ನಿ.45.83ಸೆ) ಕಂಚು ತಮ್ಮದಾಗಿಸಿಕೊಂಡರು.

ಒಂದೇ ದಿನ ನಡೆದ ಎಂಟು ವಿಭಾಗಗಳ ಸ್ಪರ್ಧೆಗಳಲ್ಲಿ ಪಂಜಾಬ್ ಅಥ್ಲೀಟ್‌ಗಳು ಮೂರು ಚಿನ್ನ ಬಾಚಿಕೊಂಡರೆ, ಮಧ್ಯಪ್ರದೇಶ, ಉತ್ತರ ಪ್ರದೇಶ, ಸರ್ವಿಸಸ್, ತಮಿಳುನಾಡು ಮತ್ತು ಆತಿಥೇಯ ಉತ್ತರಾಖಂಡದ ಸ್ಪರ್ಧಿಗಳು ತಲಾ ಒಂದು ಸ್ವರ್ಣ ಜಯಿಸಿದರು.

ಮೀನಾ ರಾಷ್ಟ್ರೀಯ ದಾಖಲೆ: ಮಧ್ಯಪ್ರದೇಶದ ದೇವ್ ಕುಮಾರ್ ಮೀನಾ ಅವರು ಪುರುಷರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದರು. ಹಾಲಿ ಚಾಂಪಿಯನ್ ಆಗಿದ್ದ 19 ವರ್ಷ ವಯಸ್ಸಿನ ಮೀನಾ 5.32 ಮೀಟರ್ ಎತ್ತರ ಜಿಗಿದು, 2022ರಲ್ಲಿ ಸುಬ್ರಹ್ಮಣಿ ಶಿವ (5.31ಮೀ) ಅವರು ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ತಮಿಳುನಾಡಿನ ಜಿ.ರೀಗನ್ ಮತ್ತು ಉತ್ತರಪ್ರದೇಶದ ಕುಲದೀಪ್ ಕುಮಾರ್ (ತಲಾ 5 ಮೀಟರ್) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಕಳೆದ ವರ್ಷ ಏಷ್ಯನ್ 20 ವರ್ಷದೊಳಗಿನ ಚಾಂಪಿಯನ್‌ಷಿಪ್‌ನಲ್ಲಿ 5.10 ಮೀಟರ್ ಪ್ರಯತ್ನ ದೊಂದಿಗೆ ಕಂಚು ಗೆದ್ದಿದ್ದ ಮೀನಾ, ಭುವನೇಶ್ವರದಲ್ಲಿ ನಡೆದ ಫೆಡರೇಷನ್ ಕಪ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಲ್ಲೂ ಚಿನ್ನದ ಸಾಧನೆ ಮಾಡಿದ್ದರು. 5.20 ಮೀಟರ್ ಅವರ ಹಿಂದಿನ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿತ್ತು. ಪಟ್ನಾದಲ್ಲಿ ನಡೆದಿದ್ದ ಇಂಡಿಯನ್ ಓಪನ್ 23 ವರ್ಷದೊಳಗಿನ ಕೂಟದಲ್ಲಿ ಈ ಸಾಧನೆ ಮೂಡಿಬಂದಿತ್ತು.

ಮಹಿಳೆಯರ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಉತ್ತರ ಪ್ರದೇಶದ ಅನುಷ್ಕಾ ಯಾದವ್ ಅವರು 62.89 ಮೀಟರ್ ಸಾಧನೆ ತೋರಿ, ಕೂಟ ದಾಖಲೆಯೊಂದಿಗೆ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. 2023ರಲ್ಲಿ ತಮ್ಮದೇ ರಾಜ್ಯದ ತಾನ್ಯಾ ಚೌಧರಿ (62.47ಮೀ) ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ಈ ಬಾರಿ ತಾನ್ಯಾ (59.74ಮೀ) ಬೆಳ್ಳಿ ಗೆದ್ದರೆ, ಅದೇ ರಾಜ್ಯದ ನಂದಿನಿ (58.89ಮೀ) ಕಂಚು ಜಯಿಸಿದರು.

ರಾಷ್ಟ್ರೀಯ ದಾಖಲೆವೀರ ತಜಿಂದರ್‌ಪಾಲ್ ಸಿಂಗ್ ತೂರ್ ಅವರು ನಿರೀಕ್ಷೆಯಿಂತೆ ಪುರುಷರ ಶಾಟ್‌ಪಟ್ ಸ್ಪರ್ಧೆಯಲ್ಲಿ 19.74 ಮೀ. ಸಾಧನೆಯೊಂದಿಗೆ ಚಿನ್ನ ಗೆದ್ದರು. ಮಧ್ಯಪ್ರದೇಶದ ಸಮರ್‌ದೀಪ್ ಸಿಂಗ್ ಗಿಲ್ ಮತ್ತು ಪಂಜಾಬ್‌ನ ಪ್ರಭಕಿರ್ಪಾಲ್ ಸಿಂಗ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಮುಂಬೈ ನೆರವಿಗೆ ಸೂರ್ಯ, ಅಜಿಂಕ್ಯ

ರಣಜಿ ಟ್ರೋಫಿ: ಶಾರ್ದೂಲ್ ದಾಳಿಗೆ ಕುಸಿದ ಹರಿಯಾಣ

ಕೋಲ್ಕತ್ತ (ಪಿಟಿಐ): ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಆಕರ್ಷಕ 70 ರನ್ ಗಳಿಸುವ ಮೂಲಕ ಲಯಕ್ಕೆ ಮರಳಿದರು. ನಾಯಕ ಅಜಿಂಕ್ಯ ರಹಾನೆ (ಬ್ಯಾಟಿಂಗ್ 88) ಜೊತೆ ಅವರ ಶತಕದ ಜೊತೆಯಾಟದಿಂದ, ಹಾಲಿ ಚಾಂಪಿಯನ್ ಮುಂಬೈ ತಂಡ ರಣಜಿ ಟ್ರೋಫಿ ಕ್ರಿಕೆಟ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಹರಿಯಾಣ ವಿರುದ್ಧ ಹಿಡಿತ ಬಿಗಿಗೊಳಿಸಿದೆ.

ಪಂದ್ಯದ ಮೂರನೇ ದಿನವಾದ ಸೋಮವಾರ ಮುಂಬೈ ಎರಡನೇ ಇನಿಂಗ್ಸ್‌ನಲ್ಲಿ 4 ವಿಕೆಟ್‌ಗೆ 278 ರನ್‌ಗಳ ಉತ್ತಮ ಮೊತ್ತ ಗಳಿಸಿ ದಿನದಾಟ ಪೂರೈಸಿತು. ಮೊದಲ ಇನಿಂಗ್ಸ್‌ನಲ್ಲಿ 14 ರನ್ ಮುನ್ನಡೆ ಸೇರಿದಂತೆ ಮುಂಬೈ ತಂಡ ಒಟ್ಟಾರೆ 292 ರನ್‌ಗಳಿಂದ ಮುಂದಿದೆ.

ಎಂದಿನಂತೆ ಎಚ್ಚರಿಕೆಯಿಂದ ಆಡಿದ ಅಜಿಂಕ್ಯ 142 ಎಸೆತಗಳಲ್ಲಿ ಅಜೇಯ 88 ರನ್ (4x10) ಗಳಿಸಿದ್ದಾರೆ. ವೈವಿಧ್ಯಮಯ ಹೊಡೆತಗಳನ್ನು ಆಡಿದ ಸೂರ್ಯ ಜೊತೆ ಅವರು ನಾಲ್ಕನೇ ವಿಕೆಟ್‌ಗೆ 129 ರನ್ ಸೇರಿಸಿದ್ದರಿಂದ ಮುಂಬೈ ಉತ್ತಮ ಸ್ಥಿತಿಗೆ ತಲುಪಿತು. ಸೂರ್ಯ 86 ಎಸೆತಗಳ ಇನಿಂಗ್ಸ್‌ನಲ್ಲಿ ಎರಡು ಸಿಕ್ಸರ್‌ಗಳ ಜೊತೆ ಎಂಟು ಬೌಂಡರಿಗಳನ್ನು ಬಾರಿಸಿದರು. ಇವರಿಬ್ಬರ ಆಟ ಪಂದ್ಯವನ್ನು ಮುಂಬೈ ಕಡೆ ವಾಲಿಸಿತು. ಒಂದು ಹಂತದಲ್ಲಿ ಮುಂಬೈ 100 ರನ್‌ಗಳಾಗುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡಿತ್ತು.

ಲಯಕ್ಕೆ ಪರದಾಡುತ್ತಿದ್ದ ಸೂರ್ಯಕುಮಾರ್ 14 ಇನಿಂಗ್ಸ್‌ಗಳ ನಂತರ ಮೊದಲ ಬಾರಿ ಅರ್ಧ ಶತಕ ಗಳಿಸಿದರು. ಇತ್ತೀಚಿನ ಭಾರತ– ಇಂಗ್ಲೆಂಡ್ ಟಿ20 ಸರಣಿಯ ಐದು ಪಂದ್ಯಗಳಲ್ಲಿ ಅವರು ಬರೇ 28 ರನ್ ಗಳಿಸಿದ್ದರು.

ಮಿಂಚಿದ ಶಾರ್ದೂಲ್: ಇದಕ್ಕೆ ಮೊದಲು ಮುಂಬೈನ 315 ರನ್‌ಗಳಿಗೆ ಉತ್ತರವಾಗಿ ಭಾನುವಾರ 5 ವಿಕೆಟ್‌ಗೆ 263 ರನ್ ಗಳಿಸಿ ಹೋರಾಟ ತೋರಿದ್ದ ಹರಿಯಾಣ, ಸೋಮವಾರ ಬೆಳಿಗ್ಗೆ ವೇಗದ ಬೌಲರ್ ಶಾರ್ದೂಲ್ ಠಾಕೂರ್ (58ಕ್ಕೆ6) ದಾಳಿಗೆ ಸಿಲುಕಿ ಕುಸಿದು 301 ರನ್‌ಗಳಿಗೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತದಲ್ಲಿ: ಮೊದಲ ಇನಿಂಗ್ಸ್: ಮುಂಬೈ: 315; ಹರಿಯಾಣ: 84.5 ಓವರುಗಳಲ್ಲಿ 301 (ಅಂಕಿತ್ ಕುಮಾರ್ 136, ಯಶವರ್ಧನ್ ದಲಾಲ್ 36; ಶಾರ್ದೂಲ್ ಠಾಕೂರ್ 58ಕ್ಕೆ6); ಎರಡನೇ ಇನಿಂಗ್ಸ್: ಮುಂಬೈ: 67 ಓವರುಗಳಲ್ಲಿ 4 ವಿಕೆಟ್‌ಗೆ 278 (ಸಿದ್ದೇಶ್ ಲಾಡ್ 43, ಅಜಿಂಕ್ಯ ರಹಾನೆ ಬ್ಯಾಟಿಂಗ್ 88, ಸೂರ್ಯಕುಮಾರ್ ಯಾದವ್ 70, ಶಿವಂ ದುಬೆ ಬ್ಯಾಟಿಂಗ್ 30; ಅನುಜ್ ಟಕ್ರಾಲ್ 61ಕ್ಕೆ2).

ರಾಜಕೋಟ್‌ನಲ್ಲಿ: ಮೊದಲ ಇನಿಂಗ್ಸ್: ಸೌರಾಷ್ಟ್ರ: 216, ಗುಜರಾತ್: 159.1 ಓವರುಗಳಲ್ಲಿ 511 (ಜಯಮೀತ್ ಪಟೇಲ್ 103, ಉರ್ವಿಲ್ ಪಟೇಲ್ 140, ಚಿಂತನ್ ಗಜ 39, ರವಿ ಬಿಷ್ಣೋಯಿ 45; ಚಿರಾಗ್ ಜಾನಿ 67ಕ್ಕೆ4, ಧರ್ಮೇಂದ್ರಸಿನ್ಹ ಜಡೇಜ 120ಕ್ಕೆ5), ಎರಡನೇ ಇನಿಂಗ್ಸ್: ಸೌರಾಷ್ಟ್ರ: 16 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 33.

ನಾಗ್ಪುರದಲ್ಲಿ: ಮೊದಲ ಇನಿಂಗ್ಸ್: ವಿದರ್ಭ: 353; ತಮಿಳುನಾಡು: 64.3 ಓವರುಗಳಲ್ಲಿ 225 (ಪ್ರದೋಷ್ ರಂಜನ್ ಪಾಲ್ 48, ಸೋನು ಯಾದವ್ 32; ಯಶ್ ಠಾಕೂರ್ 78ಕ್ಕೆ2, ಆದಿತ್ಯ ಠಾಕ್ರೆ 34ಕ್ಕೆ5, ನಚಿಕೇತ್ ಭೂತೆ 54ಕ್ಕೆ2); ಎರಡನೇ ಇನಿಂಗ್ಸ್: ವಿದರ್ಭ: 62 ಓವರುಗಳಲ್ಲಿ 5 ವಿಕೆಟ್‌ಗೆ 169 (ಕರುಣ್ ನಾಯರ್ 29, ಯಶ್ ರಾಥೋಡ್ ಔಟಾಗದೇ 55, ಹರ್ಷ ದುಬೆ ಔಟಾಗದೇ 29; ಸಾಯಿ ಕಿಶೋರ್ 47ಕ್ಕೆ2).

ಸೂರ್ಯಕುಮಾರ್ ಯಾದವ್ ಪಿಟಿಐ ಚಿತ್ರ

ಹೋರಾಡಿದ ಕೇರಳ

ಪುಣೆಯಲ್ಲಿ ನಡೆಯುತ್ತಿರುವ ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜಮ್ಮು ಮತ್ತು ಕಾಶ್ಮೀರ ತಂಡದ 280 ರನ್‌ಗಳ (ಭಾನುವಾರ: 8 ವಿಕೆಟ್‌ಗೆ 228) ಮೊದಲ ಇನಿಂಗ್ಸ್‌ಗೆ ಉತ್ತರವಾಗಿ ಕೇರಳ 281 ರನ್ ಗಳಿಸಿತು. ಒಂದು ಹಂತದಲ್ಲಿ 11 ರನ್ನಿಗೆ 3 ವಿಕೆಟ್ ಕಳೆದುಕೊಂಡಿದ್ದ ಕೇರಳಕ್ಕೆ ಜಲಜ್ ಸಕ್ಸೇನಾ (66) ಮತ್ತು ಶತಕ ಬಾರಿಸಿದ ಸಲ್ಮಾನ್ ನಝೀರ್ (112, 172ಎ) ಆಸರೆಯಾದರು.

ಪುಣೆಯಲ್ಲಿ: ಮೊದಲ ಇನಿಂಗ್ಸ್: ಜಮ್ಮು ಮತ್ತು ಕಾಶ್ಮೀರ: 95.1 ಓವರುಗಳಲ್ಲಿ 280 (ಎಂ.ಡಿ.ನಿಧೀಶ್ 75ಕ್ಕೆ6); ಕೇರಳ: 85 ಓವರುಗಳಲ್ಲಿ 281 (ಜಲಜ್ ಸಕ್ಸೇನಾ 67, ಸಲ್ಮಾನ್ ನಝೀರ್ 112; ಅಕಿಬ್ ನಬಿ 53ಕ್ಕೆ6, ಯುದ್ಧವೀರ ಸಿಂಗ್ 78ಕ್ಕೆ2, ಸಾಹಿಲ್ ಲೂತ್ರ 41ಕ್ಕೆ2); ಎರಡನೇ ಇನಿಂಗ್ಸ್: ಜಮ್ಮು ಮತ್ತು ಕಾಶ್ಮೀರ: 57 ಓವರುಗಳಲ್ಲಿ 3 ವಿಕೆಟ್‌ಗೆ 180 (ವಿವ್ರಾಂತ್ ಶರ್ಮಾ 37, ಪರಾಸ್ ಡೋಗ್ರಾ ಔಟಾಗದೇ 73, ಕನ್ಹಯ್ಯ ವಾಧ್ವಾನ್ ಔಟಾಗದೇ 42; ಎಂ.ಡಿ. ನಿಧೀಶ್ 45ಕ್ಕೆ2).

ಎಚ್‌ಎಎಲ್ ಎಫ್‌ಸಿ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಎಫ್‌ಸಿ ಸೋಮವಾರ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವನ್ನು 1–0 ಗೋಲಿನಿಂದ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಚ್‌ಎಎಲ್ ತಂಡದ ಮ್ಯಾಕ್ಸಿಮಿನಸ್ 79ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡ 2–1ರಿಂದ ಬಿಎಫ್‌ಸಿ ತಂಡವನ್ನು ಮಣಿಸಿತು.

ಅಗ್ನಿಪುತ್ರ ಪರ ಕಾರ್ತಿಕ್ ಗೋವಿಂದ್ ಸ್ವಾಮಿ (21ನೇ ನಿ.), ಅಫ್ಷಾರ್ ನೂರಾನಿ (45 + 3ನೇ ನಿ.) ಗೋಲುಗಳನ್ನು ಬಾರಿಸಿದರು. ಬಿಎಫ್‌ಸಿ ಪರ ಟಾಹೊರೆಮ್ ಜೆಕೆಲ್ವಿನ್ ಸಿಂಗ್ (22ನೇ ನಿ.) ಗೋಲು ಗಳಿಸಿದರು.

ಎಚ್‌ಎಎಲ್ ಎಫ್‌ಸಿ ತಂಡದ ಲಕ್ವಾ ನಾರ್ಬು ಶೆರ್ಪಾ (ಎಡ) ಮತ್ತು ಸ್ಪೋರ್ಟಿಂಗ್ ಕ್ಲಬ್ ತಂಡದ ವಿ. ವಿಘ್ನೇಶ್ ಚೆಂಡಿಗಾಗಿ ಪೈಪೋಟಿ ನಡೆಸಿದರು ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಬ್ಯಾಡ್ಮಿಂಟನ್ ಏಷ್ಯಾ ಮಿಶ್ರ ತಂಡ ಚಾಂಪಿಯನ್‌ಷಿಪ್

ಸಿಂಧು ಗೈರಿನಲ್ಲಿ ಭಾರತಕ್ಕೆ ಪದಕ ಸವಾಲು

ಕ್ವಿಂಗ್‌ದಾವೊ (ಚೀನಾ), (ಪಿಟಿಐ): ಗಾಯಾಳಾಗಿರುವ ಪ್ರಮುಖ ಆಟಗಾರ್ತಿ ಪಿ.ವಿ.ಸಿಂಧು ಅವರ ಗೈರುಹಾಜರಿ ನಡುವೆ ಭಾರತ ತಂಡವು ಮಂಗಳವಾರ ಇಲ್ಲಿ ಆರಂಭವಾಗುವ ಬ್ಯಾಡ್ಮಿಂಟನ್ ಏಷ್ಯಾ ಮಿಶ್ರ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಕಠಿಣ ಸವಾಲಿಗೆ ಸಜ್ಜಾಗಬೇಕಿದೆ. ಭಾರತಕ್ಕೆ ಇದುವರೆಗೆ ಈ ಕೂಟದಲ್ಲಿ ಚಿನ್ನದ ಪದಕ ಎಟುಕಿಲ್ಲ.

ದುಬೈನಲ್ಲಿ ಎರಡು ವರ್ಷ ಹಿಂದೆ ನಡೆದ ಈ ಹಿಂದಿನ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಕಂಚಿನ ಪದಕ ಗೆದ್ದು ಕೊಂಡಿದ್ದು, ಆಗ ಸಿಂಧು ಪದಕ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹೀಗಾಗಿ ಅವರ ಗೈರು ಭಾರತಕ್ಕೆ ಹಿನ್ನಡೆ ಎನಿಸಿದೆ. ಎರಡು ವರ್ಷಕ್ಕೊಮ್ಮೆ ನಡೆಯುವ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಈಗ ಪದಕ ಗೆಲ್ಲಲು ಹೆಚ್ಚಿನ ಶ್ರಮ ಹಾಕಬೇಕಾಗಿದೆ.

ಗುವಾಹಟಿಯಲ್ಲಿ, ಟೂರ್ನಿಯ ಪೂರ್ವ ಸಿದ್ಧತಾ ಶಿಬಿರದ ಸಂದರ್ಭದಲ್ಲಿ ಫೆ. 4ರಂದು ಸಿಂಧು ಮೊಣಕಾಲ ಸ್ನಾಯುರಜ್ಜು ನೋವಿಗೆ ಒಳಗಾಗಿದ್ದರು.

ಲಕ್ಷ್ಯ ಸೇನ್

ಟೂರ್ನಿಯಿಂದ ಅವರು ಹಿಂದೆ ಸರಿದಿದ್ದು, ವಿಶ್ವ ಕ್ರಮಾಂಕದಲ್ಲಿ 29ನೇ ಸ್ಥಾನದಲ್ಲಿರುವ ಮಾಳವಿಕಾ ಬನ್ಸೋಡ್ ಈಗ ಸಿಂಗಲ್ಸ್‌ನಲ್ಲಿ ಆಡಬೇಕಾಗಿದೆ.

‘ಡಿ’ ಗುಂಪಿನಲ್ಲಿರುವ ಭಾರತ ಬುಧವಾರ ಮಕಾವು ತಂಡವನ್ನು ಎದುರಿಸುವ ಮೂಲಕ ಅಭಿಯಾನ ಆರಂಭಿಸಲಿದೆ. ಇದರ ನಂತರ ಗುರುವಾರ ಪ್ರಬಲ ದಕ್ಷಿಣ ಕೊರಿಯಾ ಸವಾಲು ಎದುರಿಸಬೇಕಾಗುತ್ತದೆ. ಭಾರತ ಎಂಟರ ಘಟ್ಟ ತಲುಪುವ ನಿರೀಕ್ಷೆಯಿದ್ದು, ಅದಕ್ಕಿಂತ ಮೇಲೇರಲು ಅತ್ಯುತ್ತಮ ಪ್ರದರ್ಶನ ನೀಡಬೇಕಾಗುತ್ತದೆ.

ಭಾರತ ಏಷ್ಯಾ ಮಿಶ್ರ ತಂಡ ವಿಭಾಗದಲ್ಲಿ ಎಂದೂ ಚಿನ್ನ ಗೆದ್ದಿಲ್ಲ. ಆದರೆ 2018 ಮತ್ತು 2022ರ ಕಾಮನ್ವೆಲ್ತ್ ಕ್ರೀಡೆಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದುಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ತಂಡ ವಿಭಾಗದಲ್ಲಿ ಭಾರತ ಗಮನಾರ್ಹ ಸಾಧನೆ ದಾಖಲಿಸಿದೆ. 2022ರಲ್ಲಿ ಮೊದಲ ಬಾರಿ ಥಾಮಸ್ ಕಪ್ ಚಿನ್ನ ಗೆದ್ದುಕೊಂಡಿತ್ತು.

2024ರ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿತ್ತು. ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ತಂಡ ಮೊದಲ ಬಾರಿ ಬೆಳ್ಳಿ ಗೆದ್ದು ಗಮನ ಸೆಳೆದಿತ್ತು. ಆ ವಿಜಯದ ವೇಳೆ ತಂಡದಲ್ಲಿದ್ದ ಆಟಗಾರರು ಇಲ್ಲೂ ಕಣಕ್ಕಿಳಿಯಲಿದ್ದಾರೆ. ಎಚ್.ಎಸ್. ಪ್ರಣಯ್, ಲಕ್ಷ್ಯ ಸೇನ್, ಅಶ್ವಿನಿ ಪೊನ್ನಪ್ಪ, ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರಿಂದ ಸ್ಫೂರ್ತಿಯುತ ಪ್ರದರ್ಶನ ನಿರೀಕ್ಷಿಸಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಬೃಹತ್ ಮೊತ್ತದತ್ತ ಪಂಜಾಬ್

ಬೆಂಗಳೂರು: ನಾಲ್ಕು ಬ್ಯಾಟರ್‌ಗಳ ಅರ್ಧಶತಕಗಳ ನೆರವಿನಿಂದ ಪಂಜಾಬ್ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕ ವಿರುದ್ಧ ಬೃಹತ್ ಮೊತ್ತದತ್ತ ಹೆಜ್ಜೆಯಿಟ್ಟಿದೆ.

ಮೊಹಾಲಿಯ ಮುಲ್ಲನ್‌ಪುರದಲ್ಲಿ ಪಿಸಿಎ ಮೈದಾನದಲ್ಲಿ ನಡೆಯುತ್ತಿರುವ ನಾಲ್ಕು ದಿನಗಳ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡ ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್ ನಡೆಸಿದ ಪಂಜಾಬ್ ತಂಡ ಆರಂಭದ ದಿನವಾದ ಸೋಮವಾರ 89 ಓವರ್‌ಗಳಲ್ಲಿ 4 ವಿಕೆಟ್‌ಗೆ 296 ರನ್ ಕಲೆಹಾಕಿದೆ. ಜಸ್ಕರಣ್‌ವೀರ್ ಸಿಂಗ್ ಪಾಲ್ (61, 150ಎ) ಉದಯ್ ಸಹಾರನ್ (75, 160ಎ) ಸಲೀಲ್ ಅರೋರಾ (52, 104ಎ), ರಾಹುಲ್ ಕುಮಾರ್ (ಔಟಾಗದೇ 79, 95ಎ) ತಂಡಕ್ಕೆ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್: ಪಂಜಾಬ್: 89 ಓವರ್‌ಗಳಲ್ಲಿ 4 ವಿಕೆಟ್‌ಗೆ 296 (ಜಸ್ಕರಣ್‌ವೀರ್ ಸಿಂಗ್ ಪಾಲ್ 61, ಉದಯ್ ಸಹಾರನ್ 75, ಸಲೀಲ್ ಅರೋರಾ 52, ರಾಹುಲ್ ಕುಮಾರ್ ಔಟಾಗದೇ 79, ಕಾರ್ತಿಕೇಯ ಕೆ.ಪಿ. 74ಕ್ಕೆ 2) ಕರ್ನಾಟಕ ವಿರುದ್ಧ.

ಫ್ರೀಸ್ಟೈಲ್ ಚೆಸ್: ಹೊರಬಿದ್ದ ಗುಕೇಶ್

ಹ್ಯಾಂಬರ್ಗ್ (ಪಿಟಿಐ): ಅಮೆರಿಕದ ಫ್ಯಾಬಿಯಾನೊ ಕರುವಾನಾ ಎದುರು ಕ್ವಾರ್ಟರ್ ಫೈನಲ್‌ನಲ್ಲಿ ಸತತ ಎರಡನೇ ಪಂದ್ಯವನ್ನು ಸೋತ ವಿಶ್ವ ಚಾಂಪಿಯನ್ ಡಿ.ಗುಕೇಶ್ ಫ್ರೀಸ್ಟೈಲ್ ಗ್ರ್ಯಾನ್‌ಸ್ಲಾಮ್ ಚೆಸ್ ಟೂರ್ನಿಯಿಂದ ಸೋಮವಾರ ಹೊರಬಿದ್ದಿದ್ದಾರೆ.

ಭಾನುವಾರ ಅವರು ಬಿಳಿ ಕಾಯಿಗಳಲ್ಲಿ ಮೊದಲ ಪಂದ್ಯ ಸೋತಿದ್ದರು. ಮರುದಿನ ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಅವರು 18 ನಡೆಗಳಲ್ಲಿ ಸೋತರು.

ಸತತ 3ನೇ ಟೆಸ್ಟ್ ಗೆದ್ದ ಐರ್ಲೆಂಡ್

ಬುಲಾವಯೊ (ಎಪಿ): ಐರ್ಲೆಂಡ್ ತಂಡ ಬುಲಾವಯೊದಲ್ಲಿ ನಡೆದ ಏಕೈಕ ಕ್ರಿಕೆಟ್ ಟೆಸ್ಟ್ ಪಂದ್ಯದ ಐದನೇ ದಿನವಾದ ಸೋಮವಾರ ಜಿಂಬಾಬ್ವೆಯನ್ನು 63 ರನ್‌ಗಳಿಂದ ಸೋಲಿಸಿತು. ಇದು ಐರ್ಲೆಂಡ್ ತಂಡಕ್ಕೆ ಸತತ ಮೂರನೇ ಟೆಸ್ಟ್ ಜಯವಾಗಿದೆ.

2017ರಲ್ಲಿ ಐಸಿಸಿ ಪೂರ್ಣಪ್ರಮಾಣದ ಸದಸ್ಯತ್ವ ಪಡೆದ ನಂತರ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ ಐರ್ಲೆಂಡ್ ಮೊದಲ ಏಳು ಪಂದ್ಯಗಳನ್ನು ಸೋತಿತ್ತು. ಆದರೆ ಕಳೆದ ವರ್ಷದ ಮಾರ್ಚ್‌ನಲ್ಲಿ ಅಫ್ಗಾನಿಸ್ತಾನವನ್ನು ಸೋಲಿಸಿದ್ದ ದ್ವೀಪರಾಷ್ಟ್ರ, ನಂತರ ಎರಡು ಬಾರಿ ಜಿಂಬಾಬ್ವೆ ತಂಡವನ್ನು ಮಣಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಐರ್ಲೆಂಡ್: 260, ಜಿಂಬಾಬ್ವೆ: 267; ಎರಡನೇ ಇನಿಂಗ್ಸ್: ಐರ್ಲೆಂಡ್: 298; ಜಿಂಬಾಬ್ವೆ: 86.3 ಓವರುಗಳಲ್ಲಿ 228 (ಬ್ರಿಯಾನ್ ಬೆನೆಟ್ 45, ವೆಸ್ಲಿ ಮೆದೆವರೆ 84, ಜೊನಾಥನ್ ಕ್ಯಾಂಪ್‌ಬೆಲ್ 33; ಬ್ರಿಯಾನ್ ಮೆಕಾರ್ತಿ 22ಕ್ಕೆ2, ಮ್ಯಾಥ್ಯೂ ಹಂಫ್ರಿಸ್ 57ಕ್ಕೆ6). ಪಂದ್ಯದ ಆಟಗಾರ: ಆ್ಯಂಡಿ ಮೆಕ್‌ಬ್ರೈನ್.

ಕ್ರೀಡಾಪಟು ಬೃಂದಾ ಪ್ರಭು ಇನ್ನಿಲ್ಲ

ಮಂಗಳೂರು: ಮಾಜಿ ಅಂತರರಾಷ್ಟ್ರೀಯ ಅಥ್ಲೀಟ್ ಉದಯ ಪ್ರಭು ಅವರ ಪತ್ನಿ, ಮಾಜಿ ಕ್ರೀಡಾಪಟು ಬೃಂದಾ ಪ್ರಭು (68) ಅವರು ವಾರಾಣಸಿಯಲ್ಲಿ ಸೋಮವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ರಾಷ್ಟ್ರೀಯ ಅಥ್ಲೆಟಿಕ್ಸ್‌ಗಳಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದ ಬೃಂದಾ ಪ್ರಭು, ಬೆಂಗಳೂರು ವಿಶ್ವವಿದ್ಯಾಲಯದ ವಾಲಿಬಾಲ್ ತಂಡದ ಉಪ ನಾಯಕಿಯೂ ಆಗಿದ್ದರು.

ಮೂರೂವರೆ ದಶಕಗಳ ಹಿಂದೆ ಅಂತರರಾಷ್ಟ್ರೀಯ ಮಹಿಳಾ ಫುಟ್‌ಬಾಲ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಅಂಚೆ ಮತ್ತು ತಂತಿ ಇಲಾಖೆಯ ಅಖಿಲ ಭಾರತ ಕ್ರೀಡಾಕೂಟದಲ್ಲಿ ಬ್ಯಾಡ್ಮಿಂಟನ್ ಚಾಂಪಿಯನ್ ಆಗಿದ್ದರು. ಬೃಂದಾ ಅವರಿಗೆ ಪತಿ, ಮತ್ತು ಪುತ್ರ ಇದ್ದಾರೆ.

‘ಬೃಂದಾ ಪ್ರಭು ಅವರು ಕೆಲವು ದಿನಗಳ ಹಿಂದೆ ಪ್ರಯಾಗ್‌ರಾಜ್‌ಗೆ ತೆರಳಿ ಕುಂಭಮೇಳದಲ್ಲಿ ಭಾಗಿಯಾಗಿದ್ದರು. ಭಾನುವಾರ ವಾರಾಣಸಿಗೆ ತಲುಪಿ ಕಾಶಿ ವಿಶ್ವನಾಥನ ದರ್ಶನ ಪಡೆದಿದ್ದರು. ರಾತ್ರಿ ಮಲಗಿದ್ದಲ್ಲೇ ಅವರು ಕೊನೆಯುಸಿರೆಳೆದಿದ್ದಾರೆ. ಅವರ ಅಂತ್ಯಕ್ರಿಯೆಯನ್ನು ವಾರಾಣಸಿಯಲ್ಲೇ ಮಂಗಳವಾರ ನೆರವೇರಿಸಲಾಗುವುದು. ಅವರ ಪತಿ ಸೋಮವಾರ ಬೆಳಿಗ್ಗೆ ವಾರಾಣಸಿಗೆ ತೆರಳಿದ್ದಾರೆ’ ಎಂದು ಕುಟುಂಬದ ಮೂಲಗಳು ತಿಳಿಸಿವೆ.